
ಗುರುವಾರ, ನವೆಂಬರ್ 18, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 319 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ಗ್ರೂಪ್ ಸಿ ವೃಂದದ ತಾಂತ್ರಿಕೇತರ ಹುದ್ದೆಗಳಿಗಾಗಿ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗೆ ಸಾಮಾನ್ಯ ಜ್ಞಾನ ವಿಷಯದಲ್ಲಿ 'ಕರ್ನಾಟಕದ ಸಾಂಸ್ಕೃತಿಕ ಇತಿಹಾಸ' ವಿಷಯದ ಕುರಿತ ಬಹುಆಯ್ಕೆ ಪ್ರಶ್ನೆಗಳು



ಅಭ್ಯರ್ಥಿಗಾಗಿ ಜೆಡಿಎಸ್ ಪರದಾಟ! 9
ಸಂಖ್ಯೆ- ಸುದ್ದಿ
ಇ-ರಿಟೇಲ್ ಏರುಗತಿ
ಕನ್ನಡ ಪರಿಷತ್: ಪಟ್ಟಭದ್ರರ ಕೈಯಲ್ಲೇ ಉಳಿದ ಕಸಾಪ 8

ಸೆನ್ಸೆಕ್ಸ್	ನಿಫ್ಟಿ	₹/$
60,008 ▼	17,898 ▼	74.28 ▲

'ವಾಯುಮಾಲಿನ್ಯ: ಪಂಚತಾರಾ ಹೋಟೆಲ್‌ನಲ್ಲಿ ಕುಳಿತು ರೈತರ ದೂಷಣೆ'

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿಯಲ್ಲಿನ ವಾಯುಮಾಲಿನ್ಯವನ್ನು ನಿಯಂತ್ರಿಸಲು ತಕ್ಕ ಕ್ರಮಗಳನ್ನು ಕೈಗೊಳ್ಳುವಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಿಫಲವಾಗಿವೆ ಎಂದು ತರಾಟೆಗೆ ತೆಗೆದುಕೊಂಡಿರುವ ಸುಪ್ರೀಂ ಕೋರ್ಟ್, ಇದು ಪ್ರತಿವರ್ಷದ ಸಮಸ್ಯೆಯಾಗಿದ್ದರೂ ಈ ಬಗ್ಗೆ ಅಧಿಕಾರಶಾಹಿ ಜಡವಾಗಿದೆ ಎಂದು ಹೇಳಿದೆ.

'ದೆಹಲಿಯ ಪಂಚತಾರಾ ಹೋಟೆಲ್‌ಗಳಲ್ಲಿ ಕುಳಿತವರು ರೈತರನ್ನು ದೂಷಿಸುತ್ತಿದ್ದಾರೆ. ಈ ಸಮಸ್ಯೆಗೆ ರೈತರ ಕಡೆಗೆ ಬೆರಳು ತೋರಿಸುವುದನ್ನು ಬಿಟ್ಟು, ಇದಕ್ಕೆ ವೈಜ್ಞಾನಿಕವಾದ ಪರ್ಯಾಯ ಮಾರ್ಗವಿದ್ದಲ್ಲಿ ಆ ಬಗ್ಗೆ ಪರಿಶೀಲಿಸಬೇಕು' ಎಂದು ಮುಖ್ಯ



ನ್ಯಾಯಮೂರ್ತಿ ಎನ್.ವಿ. ರಮಣ ನೇತೃತ್ವದ ನ್ಯಾಯಪೀಠ ಹೇಳಿತು.

'ಚಳಿಗಾಲದ ಸಂದರ್ಭದಲ್ಲಿ ರೈತರು ಕೂಳೆ (ಜಮೀನಿನಲ್ಲಿ ಉಳಿವ ಕೃಷಿ ತ್ಯಾಜ್ಯ) ಸುಡುತ್ತಿರುವುದರಿಂದ ಹೆಚ್ಚಿನ ವಾಯುಮಾಲಿನ್ಯ ಆಗುತ್ತಿದೆ' ಎಂದು ದೆಹಲಿ ಸರ್ಕಾರವನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ನ್ಯಾಯಾಲಯಕ್ಕೆ ತಿಳಿಸಿದರು.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಹಾಗೂ ಸೂರ್ಯಕಾಂತ ಅವರೂ ಇದ್ದ ನ್ಯಾಯಪೀಠವು ಈ ವಾದವನ್ನು ಒಪ್ಪಲಿಲ್ಲ. 'ಯಾರೊಬ್ಬರಿಗೂ ರೈತರ ಪರಿಸ್ಥಿತಿ ಅರ್ಥವಾಗುತ್ತಿಲ್ಲ. ಕೂಳೆಯನ್ನು ಸುಡುವುದು ಅವರಿಗೆ ಅನಿವಾರ್ಯವಾಗಿರುವುದಕ್ಕೆ ಕಾರಣವೇನು ಎಂಬುದು ತಿಳಿಯುತ್ತಿಲ್ಲ. ಆದರೆ, ಕೈಗಾರಿಕೆಗಳು, ನಿರ್ಮಾಣ ಕಾಮಗಾರಿಗಳಿಂದ ಆಗುತ್ತಿರುವ ಮಾಲಿನ್ಯವನ್ನು ತಡೆಯಲು ಇಡೀ ವರ್ಷ ಯಾಕೆ ಯಾವುದೇ ಪ್ರಯತ್ನಗಳನ್ನು ಮಾಡಲಿಲ್ಲ' ಎಂದು ಕೇಳಿತು.

ಮಾಲಿನ್ಯದ ಕಾರಣಗಳ ಕುರಿತು ನಡೆದ ವಿವಿಧ ಅಧ್ಯಯನಗಳಲ್ಲಿನ ನ್ಯೂನತೆಗಳನ್ನು ನ್ಯಾಯಪೀಠವು ಎತ್ತಿ ತೋರಿಸಿತು. 'ಐಐಟಿ ಕಾನ್ಪುರ ನಡೆಸಿದ ಅಧ್ಯಯನದ ಪ್ರಕಾರ, ಕೂಳೆ ಹಾಗೂ ಪಟಾಕಿ ಸುಡುವುದು ವಾಯುಮಾಲಿನ್ಯಕ್ಕೆ ಪ್ರಮುಖ ಕಾರಣವಲ್ಲ. ಇದನ್ನು ನಂಬಬಹುದೇ' ಎಂದು ಪ್ರಶ್ನಿಸಿತು.

ಮಾಲಿನ್ಯದ ಸಮಸ್ಯೆಯನ್ನು ಬಗೆಹರಿಸಲು ಅಧಿಕಾರಶಾಹಿ ಕೂಡ ಅಗತ್ಯವಾದ ಪ್ರಯತ್ನಗಳನ್ನು ಮಾಡುತ್ತಿಲ್ಲ ಎಂದು ಕೋರ್ಟ್ ಛೀಮಾರಿ ಹಾಕಿತು. 'ನಿಷ್ಕ್ರಿಯತೆ, ಜಡತ್ವ, ಉದಾಸೀನವನ್ನು ಬೆಳೆಸಿಕೊಂಡಿರುವ ಅಧಿಕಾರಿಗಳು, ಎಲ್ಲವನ್ನೂ ನ್ಯಾಯಾಲಯವೇ ಹೇಳಬೇಕೆಂಬ ಮನಸ್ಥಿತಿಗೆ ಬಂದು ಮುಟ್ಟಿದ್ದಾರೆ. ಸ್ಪ್ರಿಂಕ್ಲರ್‌ಗಳನ್ನು ಹೇಗೆ ಬಳಸಬೇಕು, ವಾಹನಗಳನ್ನು ಹೇಗೆ ನಿಲ್ಲಿಸಬೇಕು ಎಂಬ ಬಗ್ಗೆಯೂ ಅವರು ಸ್ವಂತ ನಿರ್ಧಾರ ತೆಗೆದುಕೊಳ್ಳಲು ಮುಂದಾಗುವುದಿಲ್ಲ' ಎಂದಿತು.

'ಸರ್ಕಾರದ ವರದಿ ಪ್ರಕಾರ, ವಾಹನಗಳೇ ಮಾಲಿನ್ಯಕ್ಕೆ ಪ್ರಮುಖ ಕಾರಣ. ಆದರೂ, ದೆಹಲಿಯ ರಸ್ತೆಗಳಲ್ಲಿ ಅತಿ ಹೆಚ್ಚು ಇಂಧನ ಕುಡಿಯುವ ವಾಹನಗಳು, ಹೆಚ್ಚು ಶಬ್ದ ಮಾಡುವ ಕಾರುಗಳು ಸಂಚರಿಸುತ್ತವೆ. 10–15 ವರ್ಷಗಳಷ್ಟು ಹಳೆಯದಾದ ವಾಹನಗಳ ಸಂಚಾರ ನಿರ್ಬಂಧಿಸುವ ಯೋಜನೆಯ ಅನುಷ್ಠಾನ ಏನಾಯಿತು' ಎಂದು ಕೇಳಿತು.

'ಇದನ್ನೆಲ್ಲ ನಿಲ್ಲಿಸುವಂತೆ ಇವರಿಗೆ ಯಾರು ಹೇಳಬೇಕು? ನೆರೆಯ ರಾಜ್ಯಗಳೂ ಈ ಬಗ್ಗೆ ಕ್ರಮ ಕೈಗೊಳ್ಳದೇ ಇದ್ದರೆ, ವಾಹನಗಳನ್ನು ನಿರ್ಬಂಧಿಸುವುದರಲ್ಲಿ ಅಥವಾ ಮನೆಯಿಂದಲೇ ಕೆಲಸ ಮಾಡಿಸುವುದರಲ್ಲಿ ಅರ್ಥವಿಲ್ಲ ಎಂದು ದೆಹಲಿ ಸರ್ಕಾರ ಹೇಳುತ್ತಿದೆ. ಇದನ್ನು ತಡೆಯಲು, ರಾಷ್ಟ್ರ ರಾಜಧಾನಿ ವಲಯದಲ್ಲಿನ ವಾಯು ಗುಣಮಟ್ಟವನ್ನು ನಿರ್ವಹಣೆ ಮಾಡುವ ಆಯೋಗವೇ ನಮಗೆ ಕ್ರಮಗಳನ್ನು ಹೇಳಬೇಕು' ಎಂದು ನ್ಯಾಯಪೀಠ ಹೇಳಿತು.

ಎಲ್ಲರೂ ಮನೆಯಿಂದಲೇ ಕೆಲಸ ಮಾಡುವುದು ಅಖಿಲ ಭಾರತ ಮಟ್ಟದ ಕಾರ್ಯನಿರ್ವಹಣೆ ಮೇಲೆ ಪರಿಣಾಮ ಬೀರುತ್ತದೆ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹೇಳಿದರು. ಇದಕ್ಕೆ ಪ್ರತಿಕ್ರಿಯೆ ಕೊಟ್ಟ ಪೀಠವು, ಎಲ್ಲರನ್ನೂ ಕಚೇರಿಗೆ ಕರೆಯುವ ಬದಲು ಶೇಕಡಾ 50ರಷ್ಟು ಅಧಿಕಾರಿಗಳನ್ನು ಕರೆಯಿರಿ. ಕಚೇರಿಗೆ ಹತ್ತಿರದಲ್ಲಿ ನೆಲೆಸಿರುವ ಅಧಿಕಾರಿಗಳು ಸಾರ್ವಜನಿಕ ಸಾರಿಗೆಯನ್ನೇ ಬಳಸಲಿ ಎಂದಿತು.

'ವಾಹಿನಿಗಳ ಚರ್ಚೆಯಿಂದ ಹೆಚ್ಚು ಮಾಲಿನ್ಯ'

'ಸುದ್ದಿವಾಹಿನಿಗಳಲ್ಲಿ ನಡೆಯುವ ಚರ್ಚೆಗಳೇ ಹೆಚ್ಚು ಮಾಲಿನ್ಯ ಸೃಷ್ಟಿಸುತ್ತಿವೆ. ಅವರಿಗೆ ವಿಷಯವೇ (ವಾಯುಮಾಲಿನ್ಯ) ಅರ್ಥವಾಗುವುದಿಲ್ಲ. ಸಂದರ್ಭವನ್ನು ಮರೆಮಾಚಿ ಹೇಳಿಕೆಗಳನ್ನು ಉಲ್ಲೇಖಿಸಲಾಗುತ್ತದೆ. ಪ್ರತಿಯೊಬ್ಬರಿಗೂ ಅವರದ್ದೇ ಆದ ಕಾರ್ಯಸೂಚಿ ಇರುತ್ತದೆ' ಎಂದು ಪೀಠವು ಹೇಳಿತು.

ವಾಯುಮಾಲಿನ್ಯದ ಬಗ್ಗೆ ಸುದ್ದಿ ವಾಹಿನಿಗಳಲ್ಲಿ 'ಅಸಹ್ಯಕರವಾದ ಮತ್ತು ಹೊಣೆಗೇಡಿತನ'ದ ಚರ್ಚೆ ಆಗುತ್ತಿದೆ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹೇಳಿಕೆಗೆ ಪೀಠವು ಹೀಗೆ ಪ್ರತಿಕ್ರಿಯೆ ನೀಡಿತು.

ಬೆಂಗಳೂರಿನ ಆಚೆಗೂ ಉದ್ಯಮದ ಬೆಳವಣಿಗೆಗೆ ಪ್ರೋತ್ಸಾಹ

ಫಿನ್‌ಟೆಕ್ ಉದ್ಯಮಕ್ಕೆ ಉತ್ತೇಜನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಮಾರ್ಟ್‌ಫೋನ್ ಮೂಲಕ ಪಾವತಿ ಸೇವೆ ಸೇರಿದಂತೆ ಹಣಕಾಸಿಗೆ ಸಂಬಂಧಿಸಿದ ಹತ್ತು ಹಲವು ಸೇವೆಗಳನ್ನು ಒದಗಿಸುತ್ತಿರುವ ಹಣಕಾಸು ತಂತ್ರಜ್ಞಾನ (ಫಿನ್‌ಟೆಕ್) ಉದ್ಯಮವನ್ನು ಕರ್ನಾಟಕದಲ್ಲಿ ಇನ್ನಷ್ಟು ದೊಡ್ಡ ಪ್ರಮಾಣದಲ್ಲಿ ಬೆಳೆಸುವ ಉದ್ದೇಶದಿಂದ ರಾಜ್ಯ ಸರ್ಕಾರವು ಕಾರ್ಯಪಡೆಯೊಂದನ್ನು ರಚಿಸಿದೆ.

ಫಿನ್‌ಟೆಕ್ ಕಾರ್ಯಪಡೆ ಹೆಸರಿನ ಈ ತಂಡದಲ್ಲಿ ದೇಶದ ಕೆಲವು ಪ್ರಮುಖ ಫಿನ್‌ಟೆಕ್ ಕಂಪನಿಗಳ ಪ್ರತಿನಿಧಿಗಳು ಇದ್ದಾರೆ. ಬ್ಯಾಂಕಿಂಗ್ ಉದ್ಯಮದ ತೊಟ್ಟಿಲು ಎಂದು ಕರೆಸಿಕೊಂಡಿರುವ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ಫಿನ್‌ಟೆಕ್ ಉದ್ಯಮದ ಪಾಲಿನ ತೆರೆಯ ಹಿಂದಿನ ಕೆಲಸಗಳು ದೊಡ್ಡ ಪ್ರಮಾಣದಲ್ಲಿ ನಡೆಯುವಂತೆ ಮಾಡಲು ಕೈಗೊಳ್ಳಬೇಕಿರುವ ಕ್ರಮಗಳ ಬಗ್ಗೆಯೂ ಈ ಕಾರ್ಯಪಡೆಯು ಸಲಹೆಗಳನ್ನು ನೀಡಲಿದೆ.

ಬುಧವಾರ ಆರಂಭವಾದ ಬೆಂಗಳೂರು ತಂತ್ರಜ್ಞಾನ ಶೃಂಗದಲ್ಲಿ ನಡೆದ, ಫಿನ್‌ಟೆಕ್‌ಗಳಿಗೆ ಸಂಬಂಧಿಸಿದ ಗೋಷ್ಠಿಯಲ್ಲಿ ಈ ಕಾರ್ಯಪಡೆಯ ಬಗ್ಗೆ ಘೋಷಣೆ ಮಾಡಲಾಯಿತು.

'ರಾಜ್ಯವು ಫಿನ್‌ಟೆಕ್ ಕಂಪನಿಗಳ ಪಾಲಿನ ಪ್ರಮುಖ ಕೇಂದ್ರವಾಗಿ ಈಗಾಗಲೇ ಬೆಳೆದಿದೆ. ಈ ಉದ್ಯಮದಲ್ಲಿ ಕರ್ನಾಟಕ ಹೊಂದಿರುವ ನಾಯಕತ್ವವು ಮುಂದುವರಿಯಲು, ಬೆಂಗಳೂರಿನ ಆಚೆಯೂ ಉದ್ಯಮ ಬೆಳೆಯಲು ಏನು ಮಾಡಬೇಕು ಎಂಬುದನ್ನು ಕಾರ್ಯಪಡೆಯು ಹೇಳಲಿದೆ' ಎಂದು ಕರ್ನಾಟಕ ಡಿಜಿಟಲ್ ಅರ್ಥವ್ಯವಸ್ಥೆ ಯೋಜನೆಯ (ಕೆಡಿಇಎಂ) ಅಧ್ಯಕ್ಷ ಬಿ.ವಿ. ನಾಯ್ಡು 'ಪ್ರಜಾವಾಣಿ'ಗೆ ತಿಳಿಸಿದರು.

'ಫಿನ್‌ಟೆಕ್ ಉದ್ಯಮದ ಬೆಳವಣಿಗೆಗೆ ಅಗತ್ಯವಿರುವ ಕಾರ್ಯತಂತ್ರ ರೂಪಿಸುವ ಕೆಲಸವನ್ನು ಕಾರ್ಯಪಡೆಗೆ ವಹಿಸಲಾಗಿದೆ. ಕರ್ನಾಟಕವು ದೇಶದಲ್ಲಿ ಅತಿದೊಡ್ಡ ಫಿನ್‌ಟೆಕ್ ಕೇಂದ್ರವಾಗಬೇಕು ಎಂಬ ಬಯಕೆ ಇದೆ. ಈ ಉದ್ಯಮ ವಲಯದಲ್ಲಿನ ಉದ್ಯೋಗಿಗಳ ಸಂಖ್ಯೆಯು ನಿಖರವಾಗಿ ಸಿಕ್ಕಿಲ್ಲ. ಅದರ ಕುರಿತ ಮಾಹಿತಿ ಕಲೆಹಾಕಲಾಗುತ್ತಿದೆ. ಕಾರ್ಯಪಡೆಯು ಇನ್ನೊಂದು ತಿಂಗಳಿನಲ್ಲಿ ಕೆಲವು ಸಲಹೆಗಳನ್ನು ನೀಡುವ ನಿರೀಕ್ಷೆ ಇದೆ' ಎಂದು ಕೆಡಿಇಎಂ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಸಂಜೀವ್ ಗುಪ್ತ ವಿವರಿಸಿದರು.

9ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 8



ಬುಧವಾರ ನಡೆದ 'ಬೆಂಗಳೂರು ತಂತ್ರಜ್ಞಾನ ಶೃಂಗ – 2021'ರ ಉದ್ಘಾಟನಾ ಕಾರ್ಯಕ್ರಮದಲ್ಲಿ ಆ್ಯಕ್ಸೆಲ್ ಕಂಪನಿಯ ಪಾಲುದಾರ ಪ್ರಶಾಂತ್ ಪ್ರಕಾಶ್, ಐ.ಟಿ. ಮತ್ತು ಬಿ.ಟಿ. ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಸಿ.ಎನ್. ಅಶ್ವತ್ಥ ನಾರಾಯಣ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಯೋಕಾನ್ ಮುಖ್ಯಸ್ಥೆ ಕಿರಣ್ ಮಜುಂದಾರ್ ಶಾ, ಇನ್ಫೊಸಿಸ್ ಸಹ ಸಂಸ್ಥಾಪಕ ಕ್ರಿಸ್ ಗೋಪಾಲಕೃಷ್ಣನ್ ಪಾಲ್ಗೊಂಡಿದ್ದರು. –ಪ್ರಜಾವಾಣಿ ಚಿತ್ರ

₹ 11.89 ಲಕ್ಷ ಕೋಟಿ
2025ರ ವೇಳೆಗೆ ದೇಶದ ಫಿನ್‌ಟೆಕ್ ಉದ್ಯಮದ ಬಂಡವಾಳ ಮೌಲ್ಯ ಇಷ್ಟಾಗಬಹುದು ಎಂದು ಫಿಕ್ಕಿ ಮತ್ತು ಬಿಸಿಜಿ ವರದಿ ಅಂದಾಜಿಸಿದೆ

ಕೆಲವು ಪ್ರಮುಖ ಫಿನ್‌ಟೆಕ್ ಕಂಪನಿಗಳು
- ಫೋನ್‌ಪೆ
- ಪೇಟಿಎಂ
- ಜೆರೊದಾ
- ಗ್ರೋ
- ಮೊಬಿಕ್ವಿಕ್
- ಕ್ರೆಡ್
- ರೇಜರ್‌ಪೆ

ಕಾರ್ಯಪಡೆಯಲ್ಲಿ ಯಾರಿದ್ದಾರೆ
ಹರ್ಷಿಲ್ ಮಾಥುರ್ (ರೇಜರ್‌ಪೆ), ತಿಮ್ಮಣ್ಣಗೌಡ (ವಾಟ್ಸ್‌ಲೋನ್), ಮಿತೇನ್ ಸಂಪತ್ (ಕ್ರೆಡ್), ನಿತಿನ್ ಕಾಮತ್ (ಜೆರೊದಾ), ರವೀಶ್ ನರೇಶ್ (ಖಾತಾಬುಕ್), ಹರ್ಷ್ ಜೈನ್ (ಗ್ರೋ), ಜಾನ್ಸನ್ ಟೆಲ್ಲಿಸ್ (ಸಹ್ಯಾದ್ರಿ ಇನ್‌ಸ್ಟಿಟ್ಯೂಷನ್‌ನ ಆಡಳಿತ ಮಂಡಳಿ ಸದಸ್ಯ)

ಬೆಂಗಳೂರಿನಲ್ಲಿ ಆಸ್ಟ್ರೇಲಿಯಾ ಕಾನ್ಸುಲೇಟ್ ಕಚೇರಿ

ಬೆಂಗಳೂರಿನಲ್ಲಿ ತಮ್ಮ ದೇಶದ ಕಾನ್ಸುಲೇಟ್ ಜನರಲ್ ಕಚೇರಿ ಆರಂಭಿಸುವುದಾಗಿ ಆಸ್ಟ್ರೇಲಿಯಾದ ಪ್ರಧಾನಮಂತ್ರಿ ಸ್ಕಾಟ್ ಮಾರಿಸನ್ ಹೇಳಿದರು.

ಕಾರ್ಯಕ್ರಮದಲ್ಲಿ ವರ್ಚ್ಯುವಲ್ ಆಗಿ ಭಾಗವಹಿಸಿದ್ದ ಅವರು ಈ ವಿಷಯ ಪ್ರಕಟಿಸಿದರು. ಬೆಂಗಳೂರು ಕ್ಷಿಪ್ರಗತಿಯಲ್ಲಿ ಬೆಳೆಯುತ್ತಿರುವ ತಂತ್ರಜ್ಞಾನದ ನೆಲೆಯಾಗಿದೆ ಎಂದರು.

ಹೊಸ ಕಾನ್ಸುಲೇಟ್ ಜನರಲ್ ಸ್ಥಾಪನೆಯ ಮೂಲಕ ಉಭಯ ದೇಶಗಳ ಬಾಂಧವ್ಯ ಇನ್ನಷ್ಟು ಗಟ್ಟಿಯಾಗಲಿದೆ. ವಿಶೇಷವಾಗಿ ಬೆಂಗಳೂರು ವಿಜ್ಞಾನ, ತಂತ್ರಜ್ಞಾನ, ಸಂಶೋಧನೆ ಮತ್ತು ಉದ್ಯಮಶೀಲತೆಯ ನಗರವಾಗಿದೆ ಎಂದು ಅವರು ತಿಳಿಸಿದರು.

ಇಸ್ರೇಲ್ ಪ್ರಧಾನಿ ನಫ್ತಾಲಿ ಬೆನೆಟ್ ಮಾತನಾಡಿ, ಇಸ್ರೇಲ್‌ನ ಪ್ರಾಯೋಗಿಕತೆ ಮತ್ತು ಭಾರತದ ಕಲ್ಪನೆ ಜತೆಗೂಡಿದರೆ ನಾವೀನ್ಯತೆಯಲ್ಲಿ ಕ್ರಾಂತಿ ಸೃಷ್ಟಿಸಬಹುದಾಗಿದೆ. ಎರಡೂ ದೇಶಗಳು ಸೇರಿ ಜಗತ್ತಿನ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಲು ಸಾಧ್ಯವಿದೆ.ಯಾರು ನಾವೀನ್ಯತೆಗೆ ತೆರೆದುಕೊಳ್ಳುತ್ತಾರೋ ಅವರದೇ ಮುಂದಿನ ಭವಿಷ್ಯ ಎಂದು ಹೇಳಿದರು.

ಎಲಿಕ್ಸ್ ಪಾರ್ಕ್ ಸ್ಥಾಪನೆ: ರಾಜ್ಯದಲ್ಲಿ ಮುಂಬರುವ ದಿನಗಳಲ್ಲಿ ಬಯೋ ಎಕಾನಮಿಯಲ್ಲೂ ದೇಶ ಅಗ್ರಸ್ಥಾನವನ್ನು ಅಲಂಕರಿಸಲಿದೆ. ಜೀವವಿಜ್ಞಾನವನ್ನು ಉತ್ತೇಜಿಸಲು ಸದ್ಯದಲ್ಲೇ ಬೆಂಗಳೂರಿನಲ್ಲಿ ಎಲಿಕ್ಸ್ ಪಾರ್ಕ್ ಸ್ಥಾಪನೆ ಮಾಡಲಾಗುವುದು ಎಂದು ಐಟಿ–ಬಿಟಿ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ಕೋವಿಡ್ ಪಿಡುಗಿನ ನಂತರ ಅಭಿವೃದ್ಧಿಯ ಮಾನದಂಡಗಳು ಬದಲಾಗಿದ್ದು, ರಾಜ್ಯವು ಈ ಪರಿಸ್ಥಿತಿಯನ್ನು ತಂತ್ರಜ್ಞಾನದ ಬಲದಿಂದ ಸಕಾರಾತ್ಮಕವಾಗಿ ಬಳಸಿಕೊಳ್ಳುತ್ತಿದೆ. ಉದ್ದಿಮೆಗಳ ಬೆಳವಣಿಗೆಗೆ ಸರ್ಕಾರವು ಹಲವು ಅನುಕೂಲಕರ ನೀತಿಗಳನ್ನು ರೂಪಿಸಿದೆ. ಇದರಿಂದ ಐಟಿ,ಬಿಟಿ, ಯೂನಿಕಾರ್ನ್ ಉದ್ದಿಮೆಗಳಲ್ಲಿ ರಾಜ್ಯವು ಅಗ್ರಸ್ಥಾನದಲ್ಲಿದೆ ಎಂದರು.



ಜಲಾವೃತ
ಬೆಳಗಾವಿ ಹೊರವಲಯದ ಕಂಗ್ರಾಳಿ ಬಿ.ಕೆ. ಗ್ರಾಮದ ಜಮೀನಿನಲ್ಲಿ ಭತ್ತದ ಬೆಳೆ ಜಲಾವೃತವಾಗಿದೆ – ಪ್ರಜಾವಾಣಿ ಚಿತ್ರ/ ಎಂ.ಮಹೇಶ

'ಬೆಳೆ ಹಾನಿ ಸಮೀಕ್ಷೆ: ಶೀಘ್ರ ಪರಿಹಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮಳೆಯಿಂದ ಆಗಿರುವ ಬೆಳೆ ಹಾನಿಯ ಸಮೀಕ್ಷೆ ನಡೆಸಲಾಗುತ್ತಿದ್ದು, ರೈತರಿಗೆ ಆದಷ್ಟು ಬೇಗ ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, ಬೆಳೆ ಹಾನಿಯಿಂದ ತರಕಾರಿ ಮುಂತಾದ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗುವ ಬಗ್ಗೆ ನಿಗಾ ಇರಿಸಲಾಗಿದೆ. ಭತ್ತದ ಹಾಗೂ ಇತರೆ ಧಾನ್ಯಗಳನ್ನು ಬೆಂಬಲ ಬೆಲೆಯಡಿ ಖರೀದಿಸುವ ಕುರಿತು ಮಹತ್ವದ ಸಭೆ ನಡೆಸಲಾಗುತ್ತಿದೆ ಎಂದು ಅವರು ತಿಳಿಸಿದರು.

ಅತಿ ಬೇಗನೆ ಕೆಡುವ ಹಣ್ಣು–ತರಕಾರಿ ಮತ್ತು ಇತರ ವಸ್ತುಗಳ ಬಗ್ಗೆಯೂ ಸಂಪೂರ್ಣ ವರದಿ ಸಲ್ಲಿಸುವಂತೆ ತೋಟಗಾರಿಕೆ ಮತ್ತು ಕೃಷಿ ಇಲಾಖೆಗೆ ಸೂಚಿಸಿರುವುದಾಗಿ ಹೇಳಿದರು.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಬೆಳೆ ಪರಿಹಾರದ ಬಗ್ಗೆ ಪತ್ರ ಬರೆಯುವುದಕ್ಕೆ ಮೊದಲೇ ಬೆಳೆ ಸಮೀಕ್ಷೆ ಮಾಡಿ ಕೂಡಲೇ ಪರಿಹಾರ ನೀಡಲು ಎಲ್ಲ ಕ್ರಮ ಕೈಗೊಳ್ಳಲಾಗಿದೆ ಎಂದು ಬೊಮ್ಮಾಯಿ ತಿಳಿಸಿದರು.

ಇನ್ನಷ್ಟು ಸುದ್ದಿಗಳು 4

'ಜೊಮ್ಯಾಟೊ' ಸೇರಿದಂತೆ ಪಾವತಿ ಪೋರ್ಟಲ್ ಮೇಲೂ ಕಣ್ಣು ಹಾಕಿದ್ದ ಶ್ರೀಕಿ

● ಅಕ್ರಮ್ ಮೊಹಮ್ಮದ್

ಬೆಂಗಳೂರು: ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿಯು ಭಾರತದ ಆನ್‌ಲೈನ್ ಪಾವತಿ ಪೋರ್ಟಲ್‌ಗಳ ಮೇಲೆಯೂ ಕಣ್ಣು ಹಾಕಿದ್ದ. ಕ್ರಿಪ್ಟೊಕರೆನ್ಸಿ ಎಕ್ಸ್‌ಚೇಂಜ್ ಮತ್ತು ಆಹಾರ ವಿತರಣೆ ಸಂಸ್ಥೆ 'ಜೊಮ್ಯಾಟೊ'ವನ್ನೂ ಹ್ಯಾಕ್ ಮಾಡಲು ಉದ್ದೇಶಿಸಿದ್ದ ಎಂಬ ದಾಖಲೆಗಳು 'ಪ್ರಜಾವಾಣಿ'ಗೆ ಲಭ್ಯವಾಗಿವೆ.

ಶ್ರೀಕಿ ಮತ್ತು ಆತನ ಗೆಳೆಯ ರಾಬಿನ್ ಖಂಡೇಲ್‌ವಾಲ್‌ನಿಂದ ವಶಪಡಿಸಿಕೊಳ್ಳಲಾದ ಒಂದು ಹಾರ್ಡ್‌ಡಿಸ್ಕ್‌ನಲ್ಲಿ ಇಂತಹ ಮಾಹಿತಿ ಸಿಕ್ಕಿದೆ. 16 ವೆಬ್‌ಸೈಟ್‌ಗಳನ್ನು ಹ್ಯಾಕ್ ಮಾಡುವುದಕ್ಕೆ ಸಂಬಂಧಿಸಿದ ಮಾಹಿತಿಯು ಈ ಹಾರ್ಡ್‌ಡಿಸ್ಕ್‌ನಲ್ಲಿ ಇದೆ ಎಂಬುದು ಸೈಬರ್ ವಿಧಿವಿಜ್ಞಾನ ಸಂಸ್ಥೆಯು ನಡೆಸಿದ ವಿಶ್ಲೇಷಣೆಯಲ್ಲಿ ತಿಳಿದು ಬಂದಿದೆ. ಆನ್‌ಲೈನ್ ಪಾವತಿ ಪೋರ್ಟಲ್‌ಗಳಾದ ಕ್ಯಾಷ್‌ಫ್ರೀ, ಪೇಯುಮನಿ, ಪೋಕರ್ ಸೈಟ್‌ಗಳಾದ ಪಿಪಿಪೋಕರ್ ಕ್ಲಬ್, ಕಾಲಿಂಗ್‌ಸ್ಟೇಷನ್, ಕ್ರಿಪ್ಟೊಕರೆನ್ಸಿ ಎಕ್ಸ್‌ಚೇಂಜ್ ಎಫ್‌ಸಿಸಿಇ.ಜೆಪಿ ಈ ಪಟ್ಟಿಯಲ್ಲಿ ಇವೆ.

ಈ ವೆಬ್‌ಸೈಟ್‌ಗಳನ್ನು ಹ್ಯಾಕ್ ಮಾಡುವ ಪ್ರಯತ್ನ ನಡೆದಿತ್ತು ಎಂಬುದು ಕ್ಯಾಸಿನೊ143 ಮತ್ತು ಪೆಸಿಫಿಕ್ ಗೇಮಿಂಗ್ ಪ್ರೈ. ಲಿ.ನ ಪೋಕರ್‌ಸೇಂಟ್ ವೆಬ್‌ಸೈಟ್ ಹ್ಯಾಕಿಂಗ್‌ನ ತನಿಖೆಯ ಸಂದರ್ಭದಲ್ಲಿ ತಿಳಿದು ಬಂದಿತ್ತು.

ಗ್ರೂಪ್ ಸೈಬರ್ ಐಡಿ ಟೆಕ್ನಾಲಜಿ ಪ್ರೈ.ಲಿ. ಎಂಬ ಸೈಬರ್ ವಿಧಿವಿಜ್ಞಾನ ಸಂಸ್ಥೆಯು ಹಾರ್ಡ್‌ಡಿಸ್ಕ್ ಅನ್ನು ವಿಶ್ಲೇಷಣೆಗೆ ಒಳಪಡಿಸಿದೆ. ಅದರಲ್ಲಿ 16 ವೆಬ್‌ಸೈಟ್‌ಗಳ ಪಟ್ಟಿ ಇತ್ತು ಎಂದು ಪೊಲೀಸರು ಸಲ್ಲಿಸಿರುವ ಆರೋಪಪಟ್ಟಿಯಲ್ಲಿ ಇದೆ. ಪೊಲೀಸರು ಒಟ್ಟು ಆರು ಹಾರ್ಡ್‌ಡಿಸ್ಕ್‌ಗಳನ್ನು ವಶಕ್ಕೆ ಪಡೆದಿದ್ದರು.

ಇತರ ಹಾರ್ಡ್‌ಡಿಸ್ಕ್‌ಗಳಲ್ಲಿ ಇರುವ ಮಾಹಿತಿಯು ಗೂಢ ಲಿಪಿಯಲ್ಲಿದೆ. ಈಗ ಇರುವ ವಿಧಿವಿಜ್ಞಾನ ಸಾಫ್ಟ್‌ವೇರ್ ಬಳಸಿ ಈ ಹಾರ್ಡ್‌ಡಿಸ್ಕ್‌ಗಳಲ್ಲಿನ ಮಾಹಿತಿ ಸಂಗ್ರಹಿಸಲು ಸಾಧ್ಯವಿಲ್ಲ ಎಂದು ಸೈಬರ್ ವಿಧಿವಿಜ್ಞಾನ ಸಂಸ್ಥೆಯು ಹೇಳಿದೆ.

ತನ್ನ ವೆಬ್‌ಸೈಟ್‌ಗೆ ಕನ್ನ ಹಾಕಿ 1.7 ಕೋಟಿ ಬಳಕೆದಾರರ ಮಾಹಿತಿ ಕಳ್ಳತನ ಮಾಡಲಾಗಿದೆ ಎಂದು ಜೊಮ್ಯಾಟೊ ಸಂಸ್ಥೆಯು 2017ರ ಮೇಯಲ್ಲಿ ಹೇಳಿತ್ತು. ಶ್ರೀಕಿಯ ಪಟ್ಟಿಯಲ್ಲಿ ಜೊಮ್ಯಾಟೊ ಕೂಡ ಇತ್ತು ಎಂಬ ಬಗ್ಗೆ ಜೊಮ್ಯಾಟೊ ಸಂಸ್ಥೆಯಿಂದ ಪ್ರತಿಕ್ರಿಯೆ ಪಡೆದುಕೊಳ್ಳುವುದು ಸಾಧ್ಯವಾಗಿಲ್ಲ.

ಲಖಿಂಪುರ– ಖೇರಿ ತನಿಖೆಯ ನಿಗಾಕ್ಕೆ ನಿವೃತ್ತ ನ್ಯಾಯಮೂರ್ತಿ ನೇಮಕ

ನವದೆಹಲಿ (ಪಿಟಿಐ): ಉತ್ತರ ಪ್ರದೇಶದ ಲಖಿಂಪುರ–ಖೇರಿ ಹಿಂಸಾಚಾರ ಪ್ರಕರಣದ ಕುರಿತು ವಿಶೇಷ ತನಿಖಾ ತಂಡ (ಎಸ್‌ಐಟಿ) ನಡೆಸುತ್ತಿರುವ ತನಿಖೆಯ ಮೇಲ್ವಿಚಾರಣೆಗಾಗಿ ಸುಪ್ರೀಂ ಕೋರ್ಟ್ ಬುಧವಾರ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ರಾಕೇಶ್ ಕುಮಾರ್ ಜೈನ್ ಅವರನ್ನು ನೇಮಿಸಿದೆ.

ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಮತ್ತು ನ್ಯಾಯಮೂರ್ತಿಗಳಾದ ಸೂರ್ಯಕಾಂತ ಮತ್ತು ಹಿಮಾ ಕೊಹ್ಲಿ ಅವರನ್ನೊಳಗೊಂಡ ಪೀಠವು, ರಾಜ್ಯ ಸರ್ಕಾರ ನೀಡಿದ ಐಪಿಎಸ್ ಅಧಿಕಾರಿಗಳ ಹೆಸರನ್ನು ಪರಿಗಣಿಸಿ ಅದರಲ್ಲಿ ಮೂವರು ಅಧಿಕಾರಿಗಳನ್ನು ಪ್ರಕರಣದ ತನಿಖೆ ನಡೆಸುತ್ತಿರುವ ಎಸ್‌ಐಟಿ ತಂಡದ ಭಾಗವಾಗಿ ನೇಮಿಸಿತು. ಈ ಕುರಿತು ಶೀಘ್ರದಲ್ಲೇ ವಿವರವಾದ ಆದೇಶವನ್ನು ಹೊರಡಿಸಲಾಗುವುದು ಎಂದು ಮುಖ್ಯ ನ್ಯಾಯಮೂರ್ತಿ ತಿಳಿಸಿದರು.

56 ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಿ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅವಧಿ ಮುಗಿದು ಚುನಾವಣೆ ಬಾಕಿ ಇರುವ ರಾಜ್ಯದ 56 ನಗರ ಸ್ಥಳೀಯ ಸಂಸ್ಥೆಗಳಿಗೆ ಇದೇ ಡಿಸೆಂಬರ್ 30ರೊಳಗೆ ಚುನಾವಣೆ ನಡೆಸುವಂತೆ ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಹೈಕೋರ್ಟ್ ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರ ಮತ್ತು ರಾಜ್ಯ ಚುನಾವಣಾ ಆಯೋಗದ ವಾದ ಆಲಿಸಿದ ನ್ಯಾಯಪೀಠ, 'ಇದೇ 26ರೊಳಗೆ ರಾಜ್ಯ ಸರ್ಕಾರ ಸ್ಥಳೀಯ ಸಂಸ್ಥೆಗಳ ವಾರ್ಡ್ ಮೀಸಲಾತಿ ಅಧಿಸೂಚನೆ ಹೊರಡಿಸಬೇಕು. ನಂತರ ಚುನಾವಣಾ ಆಯೋಗ ವೇಳಾಪಟ್ಟಿ ಪ್ರಕಟಿಸಬೇಕು. ಡಿಸೆಂಬರ್ 30ರೊಳಗೆ ಚುನಾವಣೆ ನಡೆಸಬೇಕು' ಎಂದು ಆದೇಶಿಸಿದೆ.

ಇದೇ ವೇಳೆ ಹೆಚ್ಚುವರಿ ಅಡ್ವೊಕೇಟ್ ಜನರಲ್ ಧ್ಯಾನ್ ಚಿನ್ನಪ್ಪ ಅವರು ಈ ಸಂಬಂಧ ನಗರಾಭಿವೃದ್ಧಿ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿಯವರ ಪ್ರಮಾಣ ಪತ್ರವನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು.

2021ರ ಸೆಪ್ಟೆಂಬರ್ 16ರಂದು ಹೈಕೋರ್ಟ್ ನೀಡಿದ ಆದೇಶದಂತೆ ಮೀಸಲಾತಿ ನಿಗದಿಪಡಿಸುವ ಪ್ರಕ್ರಿಯೆ ನಡೆಸಲಾಗಿದೆ. 56 ನಗರ ಸ್ಥಳೀಯ ಸಂಸ್ಥೆಗಳ ಪೈಕಿ 10 ನಗರ ಸ್ಥಳೀಯ ಸಂಸ್ಥೆಗಳ ಅಂತಿಮ ಮೀಸಲಾತಿ ಅಧಿಸೂಚನೆ ಪ್ರಕಟಿಸಲಾಗಿದೆ.

8ನೇ ಪುಟ ನೋಡಿ

ಕ್ರಿಕೆಟ್: ಭಾರತ ಶುಭಾರಂಭ

ಜೈಪುರ (ಪಿಟಿಐ): ರೋಹಿತ್ ಶರ್ಮಾ ನಾಯಕತ್ವದ ಚೊಚ್ಚಲ ಟಿ20 ಕ್ರಿಕೆಟ್ ಪಂದ್ಯದಲ್ಲಿ ಭಾರತ ತಂಡವು 5 ವಿಕೆಟ್‌ಗಳಿಂದ ನ್ಯೂಜಿಲೆಂಡ್ ಎದುರು ಜಯಿಸಿತು. ಮೂರು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು.

ಸವಾಯ್ ಮಾನಸಿಂಗ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ ತಂಡ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 164 ರನ್ ಗಳಿಸಿತು. ಅದಕ್ಕುತ್ತರವಾಗಿ ಭಾರತ 19.4 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 166 ರನ್ ಗಳಿಸಿತು.

ವಿವರ ಪುಟ 12

ಸ್ಟ್ಯಾಂಡ್‌ಅಪ್ ಕಮಿಡಿಯನ್ ವೀರ್ ದಾಸ್ ಹೇಳಿಕೆಗೆ ಕೆಲವರ ಬೆಂಬಲ, ಆಕ್ಷೇಪ

'ಎರಡೂ ರೀತಿಯ ಭಾರತ' ಹೊತ್ತಿಸಿದ ಕಿಡಿ

ನವದೆಹಲಿ (ಪಿಟಿಐ): ಸ್ಟ್ಯಾಂಡ್‌ಅಪ್ ಕಮಿಡಿಯನ್ (ವಿಡಂಬನಕಾರ) ವೀರ್ ದಾಸ್ ಅವರು 'ಐ ಕಮ್ ಫ್ರಮ್ ಇಂಡಿಯಾ' ಹೆಸರಿನ 6 ನಿಮಿಷಗಳ ವಿಡಿಯೊವನ್ನು ಯೂಟ್ಯೂಬ್‌ಗೆ ಸೋಮವಾರ ಅಪ್‌ಲೋಡ್ ಮಾಡಿದ್ದರು. ಅಮೆರಿಕದ ವಾಷಿಂಗ್ಟನ್ ಡಿಸಿಯಲ್ಲಿರುವ ಜಾನ್ ಎಫ್.ಕೆನಡಿ ಸಭಾಂಗಣದಲ್ಲಿ ಇತ್ತೀಚೆಗೆ ಅವರು ನೀಡಿದ್ದ ಕಾರ್ಯಕ್ರಮದ ಆಯ್ದ ಭಾಗ ಈ ವಿಡಿಯೊದಲ್ಲಿದೆ. ರೈತರ ಪ್ರತಿಭಟನೆ, ಕೋವಿಡ್ ವಿರುದ್ಧದ ಹೋರಾಟ, ಮಹಿಳೆಯರಿಗೆ ಗೌರವ ನೀಡುವಲ್ಲಿ ಇರುವ ದ್ವಂದ್ವ ಸೇರಿದಂತೆ ಹಲವು ವಿಚಾರಗಳನ್ನು ಅವರು ತಮ್ಮ ಕಾರ್ಯಕ್ರಮದಲ್ಲಿ ಪ್ರಸ್ತಾಪಿಸಿದ್ದಾರೆ. ಪ್ರತಿ ಮಾತಿಗೂ 'ನಾನು ಎರಡೂ ರೀತಿಯ ಭಾರತದಿಂದ ಬಂದಿದ್ದೇನೆ' ಎಂದು ಅವರು ಹೇಳುತ್ತಾ ಹೋಗುತ್ತಾರೆ. ಇವರ ಮಾತುಗಳಿಗೆ ಭಾರಿ ಪರ–ವಿರೋಧ ವ್ಯಕ್ತವಾಗುತ್ತಿದೆ. ಅವರ ವಿರುದ್ಧ ದೂರು ಸಹ ದಾಖಲಾಗಿದೆ.

ವೀರ್ ದಾಸ್ ಹೇಳಿದ್ದೇನು?

- ನಾನು ಬಂದಿರುವ ಭಾರತದಲ್ಲಿ ಹಗಲಿನ ಹೊತ್ತು ಮಹಿಳೆಯರನ್ನು ಪೂಜಿಸಲಾಗುತ್ತದೆ, ರಾತ್ರಿ ಹೊತ್ತು ಅವರ ಮೇಲೆ ಸಾಮೂಹಿಕ ಅತ್ಯಾಚಾರ ನಡೆಯುತ್ತದೆ
- ಪ್ರತಿ ಬಾರಿಯೂ ನಮಗೆ ಮಾಹಿತಿ ಸಿಕ್ಕಾಗ, ನಾವು ಪ್ರಧಾನಿ ಬಗ್ಗೆ ಕಾಳಜಿ ತೋರಿಸುತ್ತೇವೆ, ಆದರೆ ಪಿಎಂ ಕೇರ್ಸ್ ಕುರಿತು ನಮಗೆ ಯಾವುದೇ ಮಾಹಿತಿ ಸಿಗುವುದಿಲ್ಲ
- ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ, ಸಿಖ್ ಸಮುದಾಯಗಳಿಂದ ಕೂಡಿರುವ ಭಾರತದಿಂದ ನಾನು ಬಂದಿದ್ದೇನೆ. ಮುಗಿಲಿನತ್ತ ನೋಡಿದಾಗ ನಮಗೆಲ್ಲರಿಗೂ ಕಾಣುವ ಒಂದು ಸಾಮಾನ್ಯ ಅಂಶವೆಂದರೆ, ಗಗನಮುಖಿಯಾಗಿರುವ ಪೆಟ್ರೋಲ್ ದರ
- ಪಾಕಿಸ್ತಾನಕ್ಕೆ ಹೋಗಿ ಎಂದು ಪ್ರತಿದಿನ ನಿರ್ದೇಶಿಸುವ ಭಾರತವು, ಕ್ರಿಕೆಟ್ ಮೈದಾನದಲ್ಲಿ ಎದುರುಗೊಳ್ಳುವಂತೆ ಪಾಕಿಸ್ತಾನೀಯರಿಗೆ ಆಹ್ವಾನ ನೀಡುತ್ತದೆ
- ಮಾಸ್ಕ್ ಧರಿಸಿರುವ ಮಕ್ಕಳು ಪರಸ್ಪರರ ಕೈಹಿಡಿದು ನಡೆಯುತ್ತಾರೆ, ಇದೇ ದೇಶದಲ್ಲಿ ಮಾಸ್ಕ್ ಧರಿಸದ ನಾಯಕರು ಪರಸ್ಪರ ಆಲಂಗಿಸುತ್ತಾರೆ
- ನಾವು ಸಸ್ಯಾಹಾರಿಗಳು ಎಂದು ಹೆಮ್ಮೆಪಡುತ್ತೇವೆ, ಆದರೆ ತರಕಾರಿಗಳನ್ನು ಬೆಳೆಯುವ ರೈತರನ್ನು ಓಡಿಸುತ್ತೇವೆ



- ನಾವು ದೇಶದ ಸೈನಿಕರನ್ನು ಸಂಪೂರ್ಣವಾಗಿ ಬೆಂಬಲಿಸುತ್ತೇವೆ, ಅದು ಅವರ ಪಿಂಚಣಿ ವಿಷಯ ಚರ್ಚೆಗೆ ಬರುವವರೆಗೆ ಮಾತ್ರ
- 30 ವರ್ಷಕ್ಕಿಂತ ಕಡಿಮೆ ವಯಸ್ಸಿನ ಜನರೇ ಹೆಚ್ಚು ಇರುವ ಅತಿದೊಡ್ಡ ದೇಶ ನಮ್ಮದು. ಆದರೆ, ಈಗಲೂ 75 ವರ್ಷ ಮೀರಿದ ನಾಯಕರ 150 ವರ್ಷ ಹಳೆಯ ಚಿಂತನೆಗಳನ್ನು ಕೇಳಿಸಿಕೊಳ್ಳಬೇಕಿದೆ
- ನಾವು ಬ್ರಿಟಿಷರನ್ನು ಹೊಡೆದೋಡಿಸಿದ್ದೇವೆ, ಆದರೆ ಸರ್ಕಾರವನ್ನು ಆಳುವ ಪಕ್ಷ ಎಂದು ಕರೆಯುತ್ತೇವೆ
- ಕೆಲಸದವರು, ವಾಹನ ಚಾಲಕರನ್ನು ನೇಮಿಸಿಕೊಂಡಿರುವ ನಾವು, ಕೆಲಸಕ್ಕಾಗಿ ಅಮೆರಿಕಕ್ಕೆ ಪ್ರಯಾಣಿಸುತ್ತೇವೆ

9ನೇ ಪುಟ ನೋಡಿ


ಚಿನಕುರಳಿ
ಪ್ರಕಾಶ್ ಶೆಟ್ಟಿ



ಭದ್ರತೆ ಬೆನ್ನಲ್ಲೇ ಹ್ಯಾಕರ್ ಶ್ರೀಕಿ ನಾಪತ್ತೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಟ್‌ಕಾಯಿನ್ ಹಗರಣದ ಸೂತ್ರದಾರ ಎನ್ನಲಾಗಿರುವ ಶ್ರೀಕೃಷ್ಣ ಅಲಿಯಾಸ್ ಶ್ರೀಕಿಗೆ ಪೊಲೀಸ್ ಭದ್ರತೆ ನೀಡಲಾಗಿದೆ. ಭದ್ರತೆಗೆ ನಿಯೋಜನೆಯಾಗಿರುವ ಇನ್‌ಸ್ಪೆಕ್ಟರ್ ಆತನ ಮನೆಗೆ ಹೋಗಿ ನೋಡಿದರೆ ಆತ ನಾಪತ್ತೆ!



ಶ್ರೀಕೃಷ್ಣ

ಶ್ರೀಕಿ ಜೀವಕ್ಕೆ ಅಪಾಯವಿದ್ದು, ಆತನಿಗೆ ಪೊಲೀಸ್ ಭದ್ರತೆ ನೀಡಬೇಕು ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಒತ್ತಾಯಿಸಿದ್ದರು. ಹೀಗಾಗಿ ಬೆಂಗಳೂರು ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರು ಆತನ ಭದ್ರತೆಗೆ ಇನ್‌ಸ್ಪೆಕ್ಟರ್‌ವೊಬ್ಬರನ್ನು ನಿಯೋಜಿಸಿದ್ದರು.

'ಜಯನಗರದ ಈಸ್ಟ್ ಬ್ಲಾಕ್‌ನ 10ನೇ ಮುಖ್ಯರಸ್ತೆಯಲ್ಲಿರುವ ಶ್ರೀಕಿಗೆ ಮನೆಗೆ ಪೊಲೀಸರು ಮಂಗಳವಾರ ಹೋಗಿದ್ದರು. ಆದರೆ ಆತ ಮನೆಯಲ್ಲಿ ಇರಲಿಲ್ಲ. ಅವರ ಅಪ್ಪ ಅಮ್ಮ ಹಾಗೂ ಸಹೋದರನನ್ನು ವಿಚಾರಿಸಿದಾಗ ಹೊರಗಡೆ ಹೋಗಿರುವುದಾಗಿ ಸಿಬ್ಬಂದಿಗೆ ತಿಳಿಸಿದ್ದರು. ಆತ ಬರಬಹುದೆಂದು ಅವರು ಅಲ್ಲೇ ಕಾದಿದ್ದಾರೆ. ಸಾಕಷ್ಟು ಸಮಯ ಆದರೂ ಬಾರದಿದ್ದಾಗ ಆತನ ಮೊಬೈಲ್ ಸಂಖ್ಯೆ ನೀಡುವಂತೆ ಕೇಳಿದ್ದಾರೆ. ಮೊಬೈಲ್ ಸ್ವಿಚ್ಡ್ ಆಫ್ ಆಗಿದ್ದು ಆತ ಬಂದ ನಂತರ ಮಾಹಿತಿ ನೀಡುವುದಾಗಿ ಅವರು ತಿಳಿಸಿದ್ದಾರೆ. ದಿನವಿಡೀ ಕಾದ ಸಿಬ್ಬಂದಿ ಆತ ಪತ್ತೆಯಾಗದಿದ್ದಾಗ ವಾಪಸ್ಸಾಗಿದ್ದಾರೆ' ಎಂದು ಕಮಲ್ ಪಂತ್ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಬುಧವಾರ ಬೆಳಿಗ್ಗೆಯೂ ಸಿಬ್ಬಂದಿ ಆತನ ಮನೆ ಬಳಿ ಹೋಗಿದ್ದರು. ಆಗಲೂ ಆತನ ಸುಳಿವು ಸಿಕ್ಕಿಲ್ಲ' ಎಂದು ಹೇಳಿದರು.

ಕಾಂಗ್ರೆಸ್ ಪತ್ರಿಕಾಗೋಷ್ಠಿಯಲ್ಲಿ ಗುಪ್ತದಳ!

ಶ್ರೀಕಿ ಭಾಗಿಯಾಗಿರುವ ಬಿಟ್‌ಕಾಯಿನ್ ಹ್ಯಾಕಿಂಗ್ ಹಗರಣಕ್ಕೆ ಸಂಬಂಧಿಸಿದಂತೆ ಕೆಪಿಸಿಸಿ ಕಚೇರಿಯಲ್ಲಿ ಕಾಂಗ್ರೆಸ್ ಮುಖಂಡರು ಬುಧವಾರ ನಡೆಸಿದ ಪತ್ರಿಕಾಗೋಷ್ಠಿಯ ವೇಳೆ ಹಾಜರಿದ್ದ ರಾಜ್ಯ ಗುಪ್ತದಳದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯನ್ನು ಹೊರಕ್ಕೆ ಕಳುಹಿಸಲಾಯಿತು.

ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಮತ್ತು ಶಾಸಕ ಪ್ರಿಯಾಂಕ್ ಖರ್ಗೆ ಅವರ ಪತ್ರಿಕಾಗೋಷ್ಠಿ ನಿಗದಿಯಾಗಿತ್ತು. ಗೋಷ್ಠಿ ಆರಂಭಕ್ಕೂ ಮೊದಲೇ ಮಫ್ತಿಯಲ್ಲಿ ಬಂದಿದ್ದ ಗುಪ್ತದಳದ ಪೊಲೀಸ್ ಇನ್‌ಸ್ಪೆಕ್ಟರ್ ಕಾತ್ಯಾಯಿನಿ ಆಳ್ವ ಮತ್ತು ಸಿಬ್ಬಂದಿ ಸಭಾಂಗಣದಲ್ಲಿ ಆಸೀನರಾಗಿದ್ದರು. ಪತ್ರಿಕಾಗೋಷ್ಠಿ ಆರಂಭವಾಗುತ್ತಿದ್ದಂತೆಯೇ ಪಕ್ಷದ ಮುಖಂಡ ಎಂ. ರಾಮಚಂದ್ರಪ್ಪ ಮತ್ತು ಕೆಲವು ಕಾರ್ಯಕರ್ತರು, ಪೊಲೀಸ್ ಅಧಿಕಾರಿಗಳು ಅಲ್ಲಿರುವುದನ್ನು ಗುರುತಿಸಿದರು.

ಕಾತ್ಯಾಯಿನಿ ಬಳಿ ತೆರಳಿದ ರಾಮಚಂದ್ರಪ್ಪ, 'ಪತ್ರಿಕಾಗೋಷ್ಠಿ ನಡೆಯುತ್ತಿದೆ. ಇಲ್ಲಿ ಪೊಲೀಸರು ಹಾಜರಿರುವುದು ಸರಿಯಲ್ಲ' ಎಂದು ಆಕ್ಷೇಪಿಸಿದಾಗ, ಪೊಲೀಸರು ಅಲ್ಲಿಂದ ಹೊರ ನಡೆದರು.

ಬೆಂಕಿ ಅವಘಡ: ಪ್ರಾಣ ಉಳಿಸಿದ ಶ್ವಾನ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಗೋಡಿಯ ಸಂಪಿಗೆನಗರ ಸಮೀಪದ ವಸುಂಧರಾ ಲೇಔಟ್‌ನ ವಿ ಮ್ಯಾಕ್ಸ್ ಶಾರ್ಲೆಟ್ ವಸತಿ ಸಮುಚ್ಚಯದಲ್ಲಿ ಬುಧವಾರ ಸಂಭವಿಸಿದ ಅಗ್ನಿ ಅವಘಡದ ವೇಳೆ ‘ಅಪ್ಪು’ ಹೆಸರಿನ ಶ್ವಾನವು ಜೋರಾಗಿ ಬೊಗಳಿ ಅನೇಕ ನಿವಾಸಿಗಳ ಜೀವ ಉಳಿಸಿದೆ!

‘ವಸತಿ ಸಮುಚ್ಚಯದ 119ನೇ ಫ್ಲ್ಯಾಟ್‌ನ ಕೊಠಡಿಯೊಂದರಲ್ಲಿ ಮಧ್ಯಾಹ್ನ 3 ಗಂಟೆ ಸುಮಾರಿಗೆ ಬೆಂಕಿ ಹೊತ್ತಿಕೊಂಡಿತ್ತು. ಫ್ಲ್ಯಾಟ್‌ನಲ್ಲಿದ್ದ ಸಾಕು ನಾಯಿ ‘ಅಪ್ಪು’ ಪದೇ ಪದೇ ಜೋರಾಗಿ ಬೊಗಳುತ್ತಿತ್ತು. ನಾವು ಗಾಬರಿಯಿಂದ ಬಾಗಿಲು ತೆರೆದು ನೋಡಿದಾಗ ಬೆಂಕಿ ಹೊತ್ತಿ ಉರಿಯುತ್ತಿರುವುದು ಕಾಣಿಸಿತ್ತು. ಕೂಡಲೇ ವಿಷಯವನ್ನು ಇತರ ಫ್ಲ್ಯಾಟ್‌ನವರಿಗೆ ತಿಳಿಸಿದೆವು. ಹೀಗಾಗಿ ನಿವಾಸಿಗಳೆಲ್ಲಾ ಹೊರಗೆ ಓಡಿ ಬಂದರು. ಅಪ್ಪುವಿನ ಸಮಯ ಪ್ರಜ್ಞೆಯಿಂದ ದೊಡ್ಡ ಅನಾಹುತವೊಂದು ತಪ್ಪಿತು’ ಎಂದು ನಿವಾಸಿಯೊಬ್ಬರು ತಿಳಿಸಿದರು.

‘ವಸತಿ ಸಮುಚ್ಚಯದ ಹಿಂದೆ ನಮ್ಮ ಮನೆ ಇದೆ. ಮಧ್ಯಾಹ್ನ 3 ಗಂಟೆ ಸುಮಾರಿಗೆ ಹೊರಗೆ ಬಂದು ನೋಡಿದಾಗ ವಸತಿ ಸಮುಚ್ಚಯದ ಕೋಣೆಯೊಂದರಲ್ಲಿ ಬೆಂಕಿ ಹೊತ್ತಿಕೊಂಡಿತ್ತು. ಜನರೆಲ್ಲಾ ಹೊರಗೆ ಓಡಿಬರುತ್ತಿದ್ದರು. ಕೂಡಲೇ ಪೊಲೀಸ್ ಠಾಣೆಗೆ ಕರೆಮಾಡಿ ವಿಷಯ ತಿಳಿಸಿದೆ. ಅವರು ಅಗ್ನಿಶಾಮಕ ದಳದವರಿಗೆ ಮಾಹಿತಿ ಮುಟ್ಟಿಸಿದ್ದಾರೆ. ಸಿಬ್ಬಂದಿ ಸ್ಥಳಕ್ಕೆ ಬಂದು ಬೆಂಕಿ ನಂದಿಸಿದ್ದಾರೆ’ ಎಂದು ಸ್ಥಳೀಯರಾದ ಚಿನ್ನಸ್ವಾಮಿ ಹೇಳಿದರು.

‘ಬೆಂಕಿ ಹೊತ್ತಿ ಉರಿದಿದ್ದರಿಂದ ಕೋಣೆಯಲ್ಲಿದ್ದ ಪೀಠೋಪಕರಣ ಹಾಗೂ ಇತರ ವಸ್ತುಗಳು ಸುಟ್ಟು ಕರಕಲಾಗಿವೆ. ಬೆಂಕಿಯಿಂದಾಗಿ ಕೆಲಕಾಲ ಕಪ್ಪು ಹೊಗೆ ದಟ್ಟೈಸಿತ್ತು. ವಸತಿ ಸಮುಚ್ಚಯದಲ್ಲಿ ಸುಮಾರು 180 ಫ್ಲ್ಯಾಟ್‌ಗಳಿವೆ. ಬೆಂಕಿ ಹೊತ್ತಿಕೊಂಡಾಗ ಮನೆಯಲ್ಲಿ ವೃದ್ಧೆಯೊಬ್ಬರು ಇದ್ದರು. ಅವರನ್ನು ಪಕ್ಕದ ಫ್ಲ್ಯಾಟ್‌ನವರು ಹೊರಗೆ ಕರೆದುಕೊಂಡು ಬಂದಿದ್ದಾರೆ’ ಎಂದು ತಿಳಿಸಿದ್ದಾರೆ.



ವಸತಿ ಸಮುಚ್ಚಯದ ಫ್ಲ್ಯಾಟ್‌ನಲ್ಲಿ ಬೆಂಕಿ ಹೊತ್ತಿಕೊಂಡಿರುವುದು

ಕೆಎಸ್‌ಪಿಸಿಬಿ: ಹಿತಾಸಕ್ತಿ ಸಂಘರ್ಷ ಆರೋಪದ ಸುಳಿಯಲ್ಲಿ ಸಿಲುಕಿದ ನೇಮಕಾತಿ

ಅಧ್ಯಕ್ಷರಿಗೆ ದೊಡ್ಡ ಕಂಪನಿಗಳ ನಂಟು

• ಚಿರಂಜೀವಿ ಕುಲಕರ್ಣಿ

ಪ್ರಜಾವಾಣಿ ವಿಶೇಷ

ಬೆಂಗಳೂರು: ಅದಾನಿ, ಗೋದ್ರೇಜ್, ವೇದಾಂತ ಸೇರಿದಂತೆ ಬೃಹತ್ ಕಂಪನಿಗಳ ಸಲಹೆಗಾರರಾಗಿ ಕಾರ್ಯನಿರ್ವಹಿಸಿರುವ ಡಾ. ಶಾಂತ್ ಅವ್ವೇರಹಳ್ಳಿ ತಿಮ್ಮಯ್ಯ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ್ದಾರೆ. ಈಗ ಮಂಡಳಿ ಅಧ್ಯಕ್ಷ ಗಾದಿಯಲ್ಲಿ ಕುಳಿತು ದೊಡ್ಡ ಕಂಪನಿಗಳಿಂದ ಆಗುವ ಪರಿಸರ ಮಾಲಿನ್ಯ ನಿಯಂತ್ರಿಸುವ ಮತ್ತು ಬೃಹತ್ ಉದ್ದಿಮೆಗಳು ಸಲ್ಲಿಸುವ ಪ್ರಸ್ತಾವಗಳನ್ನು ಅನುಮೋದಿಸುವ ಕೆಲಸ ಮಾಡಬೇಕಿದೆ.

ಶಾಂತ್ ತಿಮ್ಮಯ್ಯ ಮೆಟಾಮಾರ್ಫೋಸಿಸ್ ಕನ್ಸಲ್ಟೆಂಟ್ಸ್ ಪ್ರೈವೇಟ್ ಲಿಮಿಟೆಡ್‌ನ ಮತ್ತು ಮೆಟಾಮಾರ್ಫೋಸಿಸ್ ಲ್ಯಾಬೋರೇಟರಿನ ಪ್ರೈವೇಟ್ ಲಿಮಿಟೆಡ್‌ನ ಮುಖ್ಯಸ್ಥರಾಗಿದ್ದ ಇವರು ಬೃಹತ್ ಕಂಪನಿಗಳ ಸಲಹೆಗಾರರಾಗಿ ಕೆಲಸ ಮಾಡಿರುವ ದಾಖಲೆಗಳು ‘ಪ್ರಜಾವಾಣಿ’ಗೆ ಲಭ್ಯವಾಗಿವೆ. ಗಣಿ ಮತ್ತು ಕಟ್ಟಡ ಕಲ್ಲು ಕ್ವಾರಿ ಯೋಜನೆಗಳಿಗೂ ಸಲಹೆಗಾರರಾಗಿದ್ದರು.

ಮಂಡಳಿಯ ನೂತನ ಅಧ್ಯಕ್ಷರು ಸಲಹೆಗಾರರಾಗಿದ್ದ ಹಲವು ಕಂಪನಿಗಳು ದೊಡ್ಡ ಪ್ರಮಾಣದ ಪರಿಸರ ಮಾಲಿನ್ಯಕ್ಕೆ ಕಾರಣವಾದ ಆರೋಪ ಎದುರಿಸುತ್ತಿವೆ. ಇದೇ ಕಾರಣಕ್ಕಾಗಿ ಕೆಲವು ಕಂಪನಿಗಳಿಗೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಕೋಟ್ಯಂತರ ರೂಪಾಯಿ ದಂಡ ವಿಧಿಸಿದೆ. ಈ ವಿಷಯವನ್ನು ಮುಂದಿಟ್ಟುಕೊಂಡು ಶಾಂತ್ ಅವರ ನೇಮಕವನ್ನು ಪ್ರಶ್ನಿಸಿರುವ ಪರಿಸರವಾದಿಗಳು, ‘ಈ ನೇಮಕ ನೇರವಾಗಿ ಹಿತಾಸಕ್ತಿ ಸಂಘರ್ಷವನ್ನು ಒಳಗೊಂಡಿದೆ’ ಎಂದಿದ್ದಾರೆ.

‘ಕೆಎಸ್‌ಪಿಸಿಬಿ ಅಧ್ಯಕ್ಷರು ಖಾಸಗಿ ಉದ್ದಿಮೆಗಳ ಸ್ಥಾಪನೆ ಮತ್ತು ಕಾರ್ಯಾಚರಣೆಗೆ ಅನುಮತಿ ನೀಡುವಲ್ಲಿ ಮಹತ್ತರವಾದ ಪಾತ್ರವನ್ನು ನಿರ್ವಹಿಸಬೇಕಾಗುತ್ತದೆ. ಖಾಸಗಿ ಕಂಪನಿಗಳಿಗಾಗಿ ಕೆಲಸ ಮಾಡಿದ ವ್ಯಕ್ತಿಯೊಬ್ಬರು ಆ ಕಂಪನಿಗಳ ಯೋಜನೆಗಳನ್ನು ನಿಷ್ಪಕ್ಷಪಾತವಾಗಿ ಪರಿಶೀಲಿಸುತ್ತಾರೆ ಎಂದು ಹೇಳುವುದು ಕಷ್ಟ. ಯಾವುದೇ ಬೆಲೆ ತೆತ್ತಾದರೂ ಹಿತಾಸಕ್ತಿ ಸಂಘರ್ಷವನ್ನು ತಡೆಯಬೇಕು’ ಎಂದು 20 ವರ್ಷಗಳಿಗೂ ಹೆಚ್ಚು ಕಾಲ ಮಂಡಳಿಯಲ್ಲಿ ಅಧಿಕಾರಿಯಾಗಿದ್ದ ವ್ಯಕ್ತಿಯೊಬ್ಬರು ಪತ್ರಿಕೆಗೆ ಪ್ರತಿಕ್ರಿಯಿಸಿದರು.

ವೇದಾಂತ ಕಂಪನಿಯು ಚಿತ್ರದುರ್ಗದಲ್ಲಿ ಗಣಿಗಾರಿಕೆ ಆರಂಭಿಸುವುದಕ್ಕೆ ಪೂರಕವಾಗಿ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಅನುಮತಿ ಪಡೆಯಲು ಪೂರಕವಾದ ದಾಖಲೆಗಳನ್ನು ಶಾಂತ್ ಅವರ ಕಂಪನಿಯೇ ಸಿದ್ಧಪಡಿಸಿತ್ತು. ಗಾಳಿ ಮತ್ತು ನೀರಿನ ಗುಣಮಟ್ಟ ಹಾಗೂ ಶಬ್ದಮಾಲಿನ್ಯಕ್ಕೆ ಸಂಬಂಧಿಸಿದ ವರದಿಗಳೂ ಅದರಲ್ಲಿ ಸೇರಿದ್ದವು. ಅದಾನಿ ವಿಳ್ಹಿಂಜಮ್ ಪೋರ್ಟ್ ಪ್ರೈವೇಟ್ ಲಿಮಿಟೆಡ್ ಯೋಜನೆಗೂ ಗಾಳಿಯ ಗುಣಮಟ್ಟ ಮತ್ತು ಶಬ್ದಮಾಲಿನ್ಯಕ್ಕೆ ಸಂಬಂಧಿಸಿದ ವರದಿಗಳನ್ನೂ ಇವರೇ ಸಿದ್ಧಪಡಿಸಿ ಕೊಟ್ಟಿದ್ದರು.

ನಗರದ ಅಪಾರ್ಟ್‌ಮೆಂಟ್ ಯೋಜನೆಯೊಂದಕ್ಕೆ ಪರಿಸರ ಇಲಾಖೆ ನೀಡಿದ್ದ ನಿರಾಕ್ಷೇಪಣಾ ಪತ್ರವನ್ನು ಹಸಿರು ನ್ಯಾಯಮಂಡಳಿ ಇತ್ತೀಚೆಗೆ ರದ್ದುಮಾಡಿದೆ. ಕೈಕೊಂಡರಹಳ್ಳಿ ಮತ್ತು ಕಸವನಹಳ್ಳಿ ಕೆರೆಗಳಿಗೆ ಹಾನಿಯುಂಟುಮಾಡಿದ ಆರೋಪದ ಮೇಲೆ ಈ ಕ್ರಮ ಕೈಗೊಳ್ಳಲಾಗಿದೆ. ಸದರಿ ಯೋಜನೆಗೂ ಶಾಂತ್ ತಿಮ್ಮಯ್ಯ ಸಲಹೆಗಾರರಾಗಿದ್ದರು.

ಈ ಪ್ರಕರಣದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲು ಆದೇಶಿಸಿರುವ ಸುಪ್ರೀಂಕೋರ್ಟ್, ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ನಿರ್ದೇಶನ ನೀಡಿದೆ. ತಾವೇ ಸಲಹೆಗಾರರಾಗಿದ್ದ ಯೋಜನೆಯ ಕುರಿತು ಕೆಎಸ್‌ಪಿಸಿಬಿ ಅಧ್ಯಕ್ಷರಾಗಿ ಪರಿಶೀಲನೆ ನಡೆಸಿ, ವರದಿ ನೀಡಬೇಕಾದ ಜವಾಬ್ದಾರಿ ಅವರಿಗೇ ದಕ್ಕಿದೆ.

ಗಣಿಗಾರಿಕೆಗೂ ನಂಟು

ಕೆಎಸ್‌ಪಿಸಿಬಿ ಅಧ್ಯಕ್ಷರು ಮಧುಗಿರಿ ಗ್ರಾನೈಟ್ಸ್ ಎಂಬ ಉದ್ದಿಮೆಯ ಪಾಲುದಾರರೂ ಹೌದು. ಈ ಸಂಸ್ಥೆ ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನಲ್ಲಿ ಗ್ರಾನೈಟ್ ಗಣಿ ಹೊಂದಿದೆ. ಶಾಂತ್ ಅವರು ಮಹರ್ಷಿ ಓರ್ಸ್ ಪ್ರೈವೇಟ್ ಲಿಮಿಟೆಡ್ ಎಂಬ ಸಂಸ್ಥೆಯಲ್ಲೂ ಪಾಲುದಾರರಾಗಿದ್ದಾರೆ ಎಂಬ ದಾಖಲೆಗಳು ಲಭ್ಯವಾಗಿದೆ.

ಜಲ (ಮಾಲಿನ್ಯ ನಿಯಂತ್ರಣ) ಕಾಯ್ದೆ–1974ರ ಸೆಕ್ಷನ್ 8–ಇ ಅಡಿಯಲ್ಲಿ ಕೆಎಸ್‌ಪಿಸಿಬಿ ಅಧ್ಯಕ್ಷರು ಮತ್ತು ಸದಸ್ಯರನ್ನು ನೇಮಕ ಮಾಡಲಾಗುತ್ತದೆ. ‘ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರು ನೇರವಾಗಿ ಅಥವಾ ಬೇರೊಬ್ಬರ ಮೂಲಕ ಯಾವುದೇ ಕಂಪನಿಗಳಲ್ಲಿ ಹಿತಾಸಕ್ತಿ ಅಥವಾ ಷೇರು ಹೊಂದಿರಬಾರದು’ ಎಂಬ ನಿಬಂಧನೆ ಕಾಯ್ದೆಯಲ್ಲಿದೆ.

ಆರೋಪಗಳ ಕುರಿತು ಶಾಂತ್ ತಿಮ್ಮಯ್ಯ ಅವರನ್ನು ‘ಪ್ರಜಾವಾಣಿ’ ಸಂಪರ್ಕಿಸಿದಾಗ, ‘ನನ್ನ ವಿರುದ್ಧ ದುರುದ್ದೇಶದಿಂದ ಆರೋಪ ಮಾಡಲಾಗಿದೆ. ಯಾವುದೇ ಆರೋಪಗಳಲ್ಲೂ ಹುರುಳಿಲ್ಲ’ ಎಂದರು.

‘ನಾನು ಈ ಕಂಪನಿಗಳ ಜತೆ ಹಿಂದೆ ನಂಟು ಹೊಂದಿದ್ದೆ. ಈಗ ಎಲ್ಲ ಸಂಬಂಧಗಳನ್ನೂ ತುಂಡರಿಸಿಕೊಂಡಿದ್ದೇನೆ. ಪಕ್ಷಪಾತದಿಂದ ವರ್ತಿಸುವ ಪ್ರಶ್ನೆಯೇ ಇಲ್ಲ. ವಕೀಲರು ನ್ಯಾಯಾಧೀಶರಾಗಿ ನೇಮಕಗೊಂಡಾಗ ಅವರು ನೀಡುವ ತೀರ್ಪುಗಳನ್ನು ಪಕ್ಷಪಾತದ ನೆಲೆಯಲ್ಲಿ ಪ್ರಶ್ನಿಸುವುದಿಲ್ಲ’ ಎಂದು ಹೇಳಿದರು.

‘ಹಿತಾಸಕ್ತಿ ಸಂಘರ್ಷದ ಪ್ರಶ್ನೆ ಎದುರಾದಾಗ ನ್ಯಾಯಾಧೀಶರು ವಿಚಾರಣೆಯಿಂದ ಹಿಂದೆ ಸರಿದಂತೆಯೇ ತೀರ್ಮಾನ ಕೈಗೊಳ್ಳುತ್ತೀರಾ’ ಎಂಬ ಪ್ರಶ್ನೆಗೆ ‘ಮಂಡಳಿ ಅಧ್ಯಕ್ಷರ ಹುದ್ದೆಗೆ ಅರ್ಜಿ ಸಲ್ಲಿಸುವಾಗಲೇ ಎಲ್ಲ ಮಾಹಿತಿಗಳನ್ನೂ ಸರ್ಕಾರದ ಜತೆ ಹಂಚಿಕೊಂಡಿದ್ದೇನೆ. ನೇಮಕಾತಿಯಲ್ಲಿ ಯಾವ ತಪ್ಪೂ ಆಗಿಲ್ಲ’ ಎಂದು ಉತ್ತರಿಸಿದರು.

ತಡರಾತ್ರಿ ತನಕ ಮೆಟ್ರೊ ಫೀಡರ್ ಬಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಮುಖ ಮೆಟ್ರೊ ರೈಲು ನಿಲ್ದಾಣಗಳಿಂದ ಪ್ರಯಾಣಿಕರ ಅನುಕೂಲಕ್ಕಾಗಿ ಫೀಡರ್ ಬಸ್‌ಗಳ ಸೇವೆಯನ್ನು ಬಿಎಂಟಿಸಿ ತಡರಾತ್ರಿ ತನಕ ವಿಸ್ತರಣೆ ಮಾಡಿದೆ.




ಎಸ್.ವಿ.(ಸ್ವಾಮಿ ವಿವೇಕಾನಂದ) ಮೆಟ್ರೊ ನಿಲ್ದಾಣದಿಂದ ಧೂಪನಹಳ್ಳಿ ಮತ್ತು ಕೋರಮಂಗಲ ಮಾರ್ಗದಲ್ಲಿ ಸಿಲ್ಕ್ ಬೋರ್ಡ್, ಎಸ್.ವಿ. ಮೆಟ್ರೊ ನಿಲ್ದಾಣದಿಂದ ಕೆ.ಆರ್.ಪುರ ಮತ್ತು ಹೂಡಿ ರೈಲು ನಿಲ್ದಾಣ ಮಾರ್ಗದಲ್ಲಿ ವೈಟ್‌ಫೀಲ್ಡ್ ಟಿಟಿಎಂಸಿ, ವಿಜಯನಗರ ಮೆಟ್ರೊ ನಿಲ್ದಾಣದಿಂದ ಚಂದ್ರ ಲೇಔಟ್ ಮತ್ತು ನಾಗರಬಾವಿ ಮಾರ್ಗದಲ್ಲಿ ಅಂಬೇಡ್ಕರ್ ಕಾಲೇಜು, ರಾಜರಾಜೇಶ್ವರಿನಗರ ಮೆಟ್ರೊ ನಿಲ್ದಾಣದಿಂದ ಬೆಂಗಳೂರು ವಿಶ್ವವಿದ್ಯಾಲಯದ ಮಾರ್ಗದಲ್ಲಿ ಬಿಇಎಂಎಲ್ 5ನೇ ಹಂತಕ್ಕೆ ಫೀಡರ್ ಬಸ್‌ಗಳ ಅವಧಿ ವಿಸ್ತರಣೆ ಮಾಡಿದೆ.

ಜ್ಞಾನಭಾರತಿ ಮೆಟ್ರೊ ನಿಲ್ದಾಣದಿಂದ ಉಲ್ಲಾಳು ಉಪನಗರ, ಜಾಲಹಳ್ಳಿ ಮೆಟ್ರೊ ನಿಲ್ದಾಣದಿಂದ ಟಿವಿಎಸ್ ಕ್ರಾಸ್ ಮಾರ್ಗದಲ್ಲಿ ಪೀಣ್ಯ 2ನೇ ಹಂತ, ನಾಗಸಂದ್ರ ಮೆಟ್ರೊ ನಿಲ್ದಾಣದಿಂದ ದಾಸರಹಳ್ಳಿ, ಚಿಕ್ಕಬಾಣಾವರ, ಜಯನಗರ ಮೆಟ್ರೊ ನಿಲ್ದಾಣದಿಂದ ಜಯನಗರ 5ನೇ ಬ್ಲಾಕ್, ಪುಟ್ಟೇನಹಳ್ಳಿ, ಕೊತ್ತನೂರು ದಿಣ್ಣೆ ಮಾರ್ಗದಲ್ಲಿ ಜಂಬು ಸವಾರಿ ದಿಣ್ಣೆ, ರೇಷ್ಮೆ ಸಂಸ್ಥೆ ಮೆಟ್ರೊ ನಿಲ್ದಾಣದಿಂದ ಅಗರ ಗೇಟ್ ಮತ್ತು ಉದಯಪಾಳ್ಯ ಮಾರ್ಗದಲ್ಲಿ ಕಗ್ಗಲಿಪುರಕ್ಕೆ ಫೀಡರ್ ಬಸ್‌ಗಳ ಕಾರ್ಯಾಚರಣೆಯನ್ನು ತಡರಾತ್ರಿ ತನಕ ವಿಸ್ತರಿಸಲಾಗಿದೆ ಎಂದು ಬಿಎಂಟಿಸಿ ತಿಳಿಸಿದೆ.

ನ್ಯಾಯಮೂರ್ತಿ ವೇಣುಗೋಪಾಲಗೌಡ ನೇಮಕಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ರಾಜ್ಯದಲ್ಲಿ ಅಪೌಷ್ಟಿಕತೆಗೆ ಒಳಗಾಗಿರುವ ಮಕ್ಕಳು, ಗರ್ಭಿಣಿಯರು, ಬಾಣಂತಿಯರು, ಕಿಶೋರಾವಸ್ಥೆಯ ಹೆಣ್ಣು ಮಕ್ಕಳನ್ನು ಗುರುತಿಸುವ, ಆರೋಗ್ಯ ತಪಾಸಣೆ ಮಾಡುವ ಹಾಗೂ ಪೌಷ್ಟಿಕಾಂಶಗಳನ್ನು ಒದಗಿಸುವ ಕಾರ್ಯಕ್ರಮಗಳ ಮೇಲ್ವಿಚಾರಣಾ ಸಮಿತಿ ಅಧ್ಯಕ್ಷರಾಗಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎ.ಎನ್ ವೇಣುಗೋಪಾಲಗೌಡ ಅವರು ಮುಂದುವರಿಯಲು ಒಪ್ಪಿದ್ದಾರೆ’ ಎಂದು ರಾಜ್ಯ ಕಾನೂನು ಸೇವಾ ಪ್ರಾಧಿಕಾರ ಹೈಕೋರ್ಟ್‌ಗೆ ತಿಳಿಸಿದೆ.

ಬೆಳಗಾವಿ ಜಿಲ್ಲೆ ಅಥಣಿಯ ವಿಮೋಚನಾ ಸಂಸ್ಥೆ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಪ್ರಾಧಿಕಾರದ ಪರ ವಕೀಲರು ಈ ಸಂಬಂಧ ನ್ಯಾಯಪೀಠಕ್ಕೆ ಮೆಮೊ ಸಲ್ಲಿಸಿದರು. ಇದನ್ನು ಪರಿಗಣಿಸಿದ ಪೀಠ, ಮೇಲ್ವಿಚಾರಣಾ ಸಮಿತಿ ಅಧ್ಯಕ್ಷರಾಗಿ ನಿವೃತ್ತ ನ್ಯಾಯಮೂರ್ತಿ ಎ.ಎನ್. ವೇಣುಗೋಪಾಲಗೌಡ ಅವರನ್ನು ನೇಮಿಸಿ ಆದೇಶ ಹೊರಡಿಸಬೇಕು ಎಂದು ಸೂಚಿಸಿ ವಿಚಾರಣೆ ಮುಂದೂಡಿದೆ.

ವಾರ್ಷಿಕ 15 ಲಕ್ಷ ಲೀಟರ್ ಸಂಗ್ರಹ: ನೀರು ಖರೀದಿ ನಿಲ್ಲಿಸಿದ ನಾಗರಿಕರು

152 ಫ್ಲ್ಯಾಟ್‌ಗಳಿಗೆ ಮಳೆನೀರು ಮೂಲ ಆಧಾರ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹತ್ತು ವರ್ಷಗಳ ಹಿಂದೆ ಇಲ್ಲಿ ನೀರಿಗಾಗಿ ಪರದಾಡುವ ಸ್ಥಿತಿ ಇತ್ತು. ಕಾವೇರಿ ನೀರಿನ ಸಂಪರ್ಕವೂ ಇರಲಿಲ್ಲ. ದಿನನಿತ್ಯ ಟ್ಯಾಂಕರ್ ನೀರು ಖರೀದಿಸಬೇಕಾಗಿತ್ತು. ಆಗ ಕಲ್ಪನೆ ಮೂಡಿದ್ದು ಮಳೆ ನೀರು ಸಂಗ್ರಹ. ಮಳೆ ನೀರನ್ನು ಜತನದಿಂದ ಸಂಗ್ರಹಿಸಿ ಮನೆ ಮನೆಗಳಲ್ಲಿ ಬಳಕೆಯಾಗುವಂತೆ ಮಾಡಲಾಯಿತು.

ಐದು ಎಕರೆ ಪ್ರದೇಶದಲ್ಲಿರುವ ಈ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ 152 ಫ್ಲ್ಯಾಟ್‌ಗಳಿವೆ. ಮಳೆ ನೀರು ಸಂಗ್ರಹ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಿ ಹತ್ತು ವರ್ಷಗಳಾಗಿವೆ. ಈ ಅವಧಿಯಲ್ಲಿ ಒಂದು ದಿನವೂ ನೀರು ಖರೀದಿಸುವ ಪ್ರಸಂಗ ಬಂದಿಲ್ಲ. ಬದಲಾಗಿ ಹೆಚ್ಚುವರಿ ನೀರು ಸಂಗ್ರಹವಾಗುತ್ತಿದೆ. ಇಲ್ಲಿನ ಜನರಿಗೆ

ಹೊಸ ಬೆಳಕು

ಮಳೆ ನೀರು ಈಗ ಜೀವನಾಡಿಯಾಗಿದೆ.

ನಗರದ ಹಲ್ಲೂರು ರಸ್ತೆಯ ಅಂಬಲಿಪುರದ 'ಎಸ್‌ಜೆಆರ್ ರೆಡ್‌ವುಡ್ಸ್' ಅಪಾರ್ಟ್‌ಮೆಂಟ್‌ನಲ್ಲಿನ ಯಶೋಗಾಥೆ ಇದು. ಈ ಅಪಾರ್ಟ್‌ಮೆಂಟ್‌ನ 1500 ಚದರ ಮೀಟರ್ ಅಡಿ ಚಾವಣಿ ಮೇಲೆ ಮಳೆ ನೀರು ಸಂಗ್ರಹಿಸಲಾಗುತ್ತಿದೆ. ವಾರ್ಷಿಕ 15 ಲಕ್ಷ ಲೀಟರ್ ನೀರು ಸಂಗ್ರಹಿಸಲಾಗುತ್ತಿದೆ. ದಿನ ನಿತ್ಯದ ಬಳಕೆಗೆ ಇದೇ ಜೀವ ಜಲವಾಗಿದೆ. ಈ ಪ್ರದೇಶದಲ್ಲಿ ಬೀಳುವ ಮಳೆ ನೀರನ್ನು ಸಂಗ್ರಹಿಸಲು 85 ಸಾವಿರ ಲೀಟರ್ ಸಾಮರ್ಥ್ಯದ ಟ್ಯಾಂಕ್ ನಿರ್ಮಿಸಲಾಗಿದೆ. ಸಂಗ್ರಹಿಸಿದ ನೀರನ್ನು



ಕಟ್ಟಡದಲ್ಲಿ ಮಳೆ ನೀರು ಸಂಗ್ರಹಕ್ಕಾಗಿ ಅಳವಡಿಸಿರುವ ಟ್ಯಾಂಕ್

ಶುದ್ಧೀಕರಣಗೊಳಿಸಿ ಕುಡಿಯುವುದಕ್ಕೂ ಬಳಸಲಾಗುತ್ತಿದೆ.

'ಸರ್ಜಾಪುರ ಪ್ರದೇಶದಲ್ಲಿ 2010ರಲ್ಲಿ ಕಾವೇರಿ ನೀರು ಪೂರೈಕೆಯಾಗುತ್ತಿರಲಿಲ್ಲ. ನೀರಿಗಾಗಿ ಪರಿತಪಿಸಬೇಕಾಗುತ್ತಿತ್ತು. ಟ್ಯಾಂಕರ್‌ಗಳ ಮೂಲಕ ನಾವು ನೀರು ಖರೀದಿಸುತ್ತಿದ್ದೇವು. ಆಗ ನೀರು ಸಂಗ್ರಹ ಕಲ್ಪನೆ ಮೂಡಿತು. ಮಳೆ ನೀರು ಸಂಗ್ರಹ ವ್ಯವಸ್ಥೆ ಕೈಗೊಂಡ ನಂತರ ಸಮಸ್ಯೆ ಬಗೆಹರಿಯಿತು. ಸಂಗ್ರಹವಾಗುವ ಮಳೆ ನೀರನ್ನು ಮೊದಲು ಫೆರೊ ಸಿಮೆಂಟ್ ಫಿಲ್ಟರ್‌ಗೆ ಪೂರೈಸುವ ವ್ಯವಸ್ಥೆ ಮಾಡಲಾಗಿದೆ. ಬಳಿಕ ಪೈಪುಗಳ ಮೂಲಕ ಮನೆಗಳಿಗೆ ಪೂರೈಸಲಾಗುತ್ತಿದೆ' ಎಂದು ಬಯೋಮ್– ಎನ್ವಿರಾನ್‌ಮೆಂಟಲ್ ಸಲ್ಯೂಷನ್ಸ್‌ನ ಶುಭಾ ರಾಮಚಂದ್ರನ್ ವಿವರಿಸಿದ್ದಾರೆ.

'ಈಗ ಕಾವೇರಿ ನೀರು ವಾರಕ್ಕೊಮ್ಮೆ ಪೂರೈಕೆಯಾಗುತ್ತಿದೆ. ಈ ನೀರು ಸಹ ಸಾಕಾಗುವುದಿಲ್ಲ. ಮಳೆ ನೀರು ಸಂಗ್ರಹದ ವ್ಯವಸ್ಥೆಯನ್ನು ಮಾಡಿಕೊಳ್ಳದೆ ಇದ್ದರೆ ಮತ್ತೆ ನಾವು ನೀರು ಖರೀದಿಸುವ ಪರಿಸ್ಥಿತಿ ಇರುತ್ತಿತ್ತು. ಈಗ ನಮಗೆ ಹಣವೂ ಉಳಿತಾಯವಾಗಿದೆ ಮತ್ತು ನೀರಿನ ಸಮಸ್ಯೆಯೂ ಬಗೆಹರಿದಿದೆ' ಎಂದು ಶುಭಾ ವಿವರಿಸುತ್ತಾರೆ.

'ಅತಿ ಹೆಚ್ಚು ಮಳೆ ನೀರು ಸಂಗ್ರಹಿಸುತ್ತಿರುವ ನಗರಗಳಲ್ಲಿ ಚೆನ್ನೈ ನಂತರ ಬೆಂಗಳೂರು ಎರಡನೇ ಸ್ಥಾನದಲ್ಲಿದೆ. ನಾಗರಿಕರಲ್ಲಿ ಈಗ ಅರಿವು ಮೂಡುತ್ತಿರುವುದರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಸ್ವಯಂ ಪ್ರೇರಣೆಯಿಂದ ಮಳೆ ನೀರು ಸಂಗ್ರಹದ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತಿದ್ದಾರೆ. ಬೆಂಗಳೂರು ನಗರದಲ್ಲಿ ಸರಾಸರಿ 1000 ಮಿಲಿ ಮೀಟರ್ ಮಳೆಯಾಗುತ್ತದೆ. ಈ ನೀರನ್ನು ಸಂಗ್ರಹಿಸಿದರೆ ನಗರದಲ್ಲಿ ಬಹುತೇಕ ಸಮಸ್ಯೆ ಬಗೆಹರಿಯುತ್ತದೆ' ಎಂದು ಬಯೋಮ್ ಎನ್ವಿರಾನ್‌ಮೆಂಟಲ್ ಟ್ರಸ್ಟ್‌ನ ಸಲಹೆಗಾರ ವಿಶ್ವನಾಥ್ ಹೇಳುತ್ತಾರೆ.



ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ತೇಜಸ್ವಿ ಕಟ್ಟೀಮನಿ ಮಾತನಾಡಿದರು. ಎಚ್‌.ಎಲ್‌.ಪುಷ್ಪಾ, ಜೋಗಿ ಇದ್ದರು

'ಜಂಗ್ಲೀ ಕುಲಪತಿಯ ಜಂಗೀ ಕಥೆ' ಬಿಡುಗಡೆ

ಬೆಂಗಳೂರು: ದೇಶದ 10 ಕೋಟಿ ಆದಿವಾಸಿಗಳಿಗೆ ಕೇಂದ್ರೀಯ ಬುಡಕಟ್ಟು ವಿಶ್ವವಿದ್ಯಾಲಯ ಬೆಳಕಿನ ಕಿಂಡಿ ಇದ್ದಂತೆ ಎಂದು ಆಂಧ್ರಪ್ರದೇಶದ ಕೇಂದ್ರೀಯ ಬುಡಕಟ್ಟು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ತೇಜಸ್ವಿ ಕಟ್ಟೀಮನಿ ಅಭಿಪ್ರಾಯಪಟ್ಟರು.

'ಅವಧಿ' ಅಂತರ್ಜಾಲ ತಾಣ ಏರ್ಪಡಿಸಿದ್ದ ಆನ್‌ಲೈನ್ ಕಾರ್ಯಕ್ರಮದಲ್ಲಿ ಪ್ರೊ.ತೇಜಸ್ವಿ ಕಟ್ಟೀಮನಿ ಅವರ ಆತ್ಮಕಥನ 'ಜಂಗ್ಲೀ ಕುಲಪತಿಯ ಜಂಗೀ ಕಥೆ' ಬಿಡುಗಡೆ ಮಾಡಲಾಯಿತು. ಮಧ್ಯಪ್ರದೇಶದ ಅಮರಕಂಟಕದಲ್ಲಿ ಈ ಮೊದಲು ಕೇಂದ್ರೀಯ ಬುಡಕಟ್ಟು ವಿಶ್ವವಿದ್ಯಾಲಯದ ಕುಲಪತಿಯಾಗಿ ವಿಶ್ವ ವಿದ್ಯಾಲಯ ಕಟ್ಟಿದ ಕಥನವನ್ನು ಈ ಕೃತಿ ಒಳಗೊಂಡಿದೆ.

'ಎಮ್ಮೆ ಕಾಯುತ್ತಿದ್ದ, ಒಂದೇ ಶರ್ಟ್‌ನಲ್ಲಿ ಕಾಲೇಜಿನ ವಿದ್ಯಾಭ್ಯಾಸ ಮಾಡಿದ ಹಳ್ಳಿ ಹುಡುಗನ ಮನಸ್ಸಿನ ತಲ್ಲಣ ಇದರಲ್ಲಿ ಚಿತ್ರಣಗೊಂಡಿದೆ. ದೇಶದ ಎಲ್ಲೆಡೆ ಹಂಚಿ ಹೋಗಿರುವ ಬುಡಕಟ್ಟು ಮಕ್ಕಳಿಗೆ ಈ ವಿಶ್ವ ವಿದ್ಯಾಲಯ ಆಸರೆಯಾಗಿದೆ. ಈ ಸಮಯದಲ್ಲಿ ಅವರ ಕುಶಲತೆ ದೇಶ-ವಿದೇಶಕ್ಕೆ ಪರಿಚಯಿಸುವ ಅವಕಾಶ ನನಗೆ ದೊರೆಯಿತು' ಎಂದು ತೇಜಸ್ವಿ ಕಟ್ಟೀಮನಿ ಸಂತಸ ವ್ಯಕ್ತಪಡಿಸಿದರು.

ಕೃತಿ ಬಿಡುಗಡೆ ಮಾಡಿದ ಪತ್ರಕರ್ತ ಜೋಗಿ, 'ಯಾವುದೇ ವಿಶ್ವ ವಿದ್ಯಾಲಯಕ್ಕೂ ಆತ್ಮಕತೆ ಇರುತ್ತದೆ ಎನ್ನುವುದನ್ನು ತೇಜಸ್ವಿ ಕಟ್ಟೀಮನಿ ತೋರಿಸಿಕೊಟ್ಟಿದ್ದಾರೆ' ಎಂದರು. ಕೃತಿ ಕುರಿತು ಕವಯಿತ್ರಿ ಎಚ್.ಎಲ್. ಪುಷ್ಪಾ, 'ಅವಧಿ' ಪ್ರಧಾನ ಸಂಪಾದಕ ಜಿ.ಎನ್. ಮೋಹನ್ ಮಾತನಾಡಿದರು.

ಬಹುಹಂತದ ಮೆಟ್ರೊ ರೈಲು ಮಾರ್ಗಕ್ಕೆ ಆಗ್ರಹಿಸಿ ಸಹಿ ಸಂಗ್ರಹ

ಒಆರ್‌ಆರ್: ಸಮಗ್ರ ಸಂಚಾರ ವ್ಯವಸ್ಥೆಗೆ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಗ್ರ ಸಂಚಾರ ವ್ಯವಸ್ಥೆ ಮತ್ತು ಮೂಲ ಸೌಕರ್ಯಕ್ಕೆ ಆಗ್ರಹಿಸಿ ಬೆಳ್ಳಂದೂರು ಮತ್ತು ಮಹದೇವಪುರ ನಿವಾಸಿಗಳು ಆನ್‌ಲೈನ್ ಅಭಿಯಾನ ಆರಂಭಿಸಿದ್ದಾರೆ. ಹೊರ ವರ್ತುಲ ರಸ್ತೆಯಲ್ಲಿ ಬಹು ಹಂತಗಳ ಮೆಟ್ರೊ ರೈಲು ಮಾರ್ಗ ನಿರ್ಮಾಣಕ್ಕೆ ಒತ್ತಾಯಿಸಿ ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವ ಹರ್ದೀಪ್ ಸಿಂಗ್ ಪುರಿ ಅವರಿಗೂ ಪತ್ರ ಬರೆದಿದ್ದಾರೆ.

ಹೊರವರ್ತುಲ ರಸ್ತೆಯಲ್ಲಿನ 'ನಮ್ಮ ಮೆಟ್ರೊ' ಎರಡನೇ ಹಂತದ ಬಹು ನಿರೀಕ್ಷಿತ ಸಿಲ್ಕ್ ಬೋರ್ಡ್–ಕೆ.ಆರ್.ಪುರ ಮಾರ್ಗದ (ರೀಚ್ 2ಎ) ಕಾಮಗಾರಿಯನ್ನು ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ಆರಂಭಿಸಿದೆ. ಸಿಲ್ಕ್ ಬೋರ್ಡ್‌ನಿಂದ ಕಾಡುಬೀಸನಹಳ್ಳಿ ತನಕ (10 ಕಿ.ಮೀ) ಮೊದಲ ಪ್ಯಾಕೇಜ್‌ನ ನಿರ್ಮಾಣ ಗುತ್ತಿಗೆಯನ್ನು ಅಫ್ಕಾನ್ಸ್ ಸಂಸ್ಥೆ ಪಡೆದಿದ್ದರೆ, ಕಾಡುಬೀಸನಹಳ್ಳಿಯಿಂದ ಬೈಯಪ್ಪನಹಳ್ಳಿಯವರೆಗಿನ (9.75 ಕಿ.ಮೀ) ಎರಡನೇ ಪ್ಯಾಕೇಜ್‌ನ ಗುತ್ತಿಗೆಯನ್ನು ಶಂಕರನಾರಾಯಣ



ಹೊರ ವರ್ತುಲ ರಸ್ತೆ

ಕನ್‌ಸ್ಟ್ರಕ್ಷನ್ ಪಡೆದಿದೆ. ಎತ್ತರಿಸಿದ ಮೆಟ್ರೊ ರೈಲು ಮಾರ್ಗದಲ್ಲಿ ಒಟ್ಟು 11 ನಿಲ್ದಾಣಗಳು ನಿರ್ಮಾಣ ಆಗಲಿವೆ.

ಬೆಂಗಳೂರಿನಲ್ಲಿ ಒಟ್ಟು 20 ವಿಶೇಷ ಆರ್ಥಿಕ ವಲಯಗಳಿದ್ದರೆ (ಎಸ್‌ಇಜಡ್), ಇಬ್ಬಲೂರು ವೃತ್ತದಿಂದ 3 ಕಿಲೋ ಮೀಟರ್ ಆಸುಪಾಸಿನಲ್ಲಿ ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿದ 8 ವಿಶೇಷ ಆರ್ಥಿಕ ವಲಯಗಳಿವೆ. ಸರ್ಜಾಪುರ ರಸ್ತೆಯಲ್ಲಿ ಮೂರು ಮತ್ತು ಹೊರ ವರ್ತುಲ ರಸ್ತೆಯಲ್ಲಿ ಐದು ಎಸ್‌ಇಜಡ್‌ಗಳಿವೆ. ಮಹದೇವಪುರ ವಲಯದಲ್ಲಿ ಒಟ್ಟು 11 ಎಸ್‌ಇಜಡ್ ಮತ್ತು ಎಲೆಕ್ಟ್ರಾನಿಕ್ ಸಿಟಿಯಲ್ಲಿ 2 ಎಸ್‌ಇಜಡ್‌ಗಳಿಗೆ ಬೆಳ್ಳಂದೂರು ಮಾರ್ಗವೇ ಸಂಪರ್ಕ ಕೊಂಡಿ.

ಐ.ಟಿ ಕಂಪನಿ ಉದ್ಯೋಗಿಗಳು ಸೇರಿ ಒಟ್ಟು 15 ಲಕ್ಷಕ್ಕೂ ಹೆಚ್ಚು ಜನ ಈ ಮಾರ್ಗದಲ್ಲಿ ಪ್ರತಿನಿತ್ಯ ಪ್ರಯಾಣಿಸುತ್ತಾರೆ. ಬೆಂಗಳೂರಿನ ಪ್ರಮುಖ ಐದು ಸಂಚಾರ ದಟ್ಟಣೆ ಪ್ರದೇಶಗಳಲ್ಲಿ ಎರಡು ಬೆಳ್ಳಂದೂರು ಭಾಗದಲ್ಲೇ (ಹೊರ ವರ್ತುಲ ರಸ್ತೆ ಮತ್ತು ಸರ್ಜಾರಪುರ ರಸ್ತೆ) ಇವೆ. ಇಲ್ಲಿ ಸಂಚಾರ ದಟ್ಟಣೆ ಕಡಿಮೆ ಮಾಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಗರ ಭೂಸಾರಿಗೆ ನಿರ್ದೇಶನಾಲಯ (ಡಲ್ಟ್) ಮೂಲಕ ಸಮಗ್ರ ಯೋಜನೆ ರೂಪಿಸಬೇಕು ಎಂಬುದು ನಿವಾಸಿಗಳ ಒತ್ತಾಯ.

'ಎತ್ತರಿಸಿದ ಮೆಟ್ರೊ ರೈಲು ಮಾರ್ಗವನ್ನು ಬಹು ಹಂತದ ಮಾರ್ಗವನ್ನಾಗಿ ನಿರ್ಮಿಸಬೇಕು. ಬಿಟಿಎಂ ಲೇಔಟ್‌ನಲ್ಲಿ ನಿರ್ಮಿಸುತ್ತಿರುವ ಮಾದರಿಯಲ್ಲೇ ಎತ್ತರಿಸಿದ ಮಾರ್ಗದಲ್ಲೇ ಬಸ್ ಮತ್ತು ಇತರೆ ವಾಹನಗಳ ಸಂಚಾರಕ್ಕೆ ಅವಕಾಶ ಆಗುವಂತೆ ಮಾಡಬೇಕು. ಬೆಂಗಳೂರಿನಲ್ಲಿ ಅತೀ ಹೆಚ್ಚು ಸಂಚಾರ ದಟ್ಟಣೆ ಸಮಸ್ಯೆ ಎದುರಿಸಿರುತ್ತಿರುವ ಮಾರ್ಗ ಎಂದರೆ ಹೊರ ವರ್ತುಲ ರಸ್ತೆ. ಈ ಮಾರ್ಗದಲ್ಲಿ ಬಹು ಹಂತದ ಮೆಟ್ರೊ ರೈಲು ಮಾರ್ಗ ನಿರ್ಮಾಣ ಮಾಡಲೇಬೇಕು' ಎಂದು ಹರ್ದೀಪ್ ಸಿಂಗ್ ಪುರಿ ಅವರಿಗೆ ಬರೆದಿರುವ ಪತ್ರದಲ್ಲಿ ನಿವಾಸಿಗಳು ಆಗ್ರಹಿಸಿದ್ದಾರೆ.

ಆನ್‌ಲೈನ್ ಸಹಿ ಸಂಗ್ರಹ ಅಭಿಯಾನವನ್ನು ನಿವಾಸಿಗಳು ಆರಂಭಿಸಿದ್ದು, 2,500ಕ್ಕೂ ಹೆಚ್ಚು ಜನ ಸಹಿ ಮಾಡಿದ್ದಾರೆ. 5 ಸಾವಿರ ಜನರ ಸಹಿ ಸಂಗ್ರಹಿಸಿ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ಬೆಳ್ಳಂದೂರು ಅಭಿವೃದ್ಧಿ ವೇದಿಕೆಯ ವಿಷ್ಣು ಪ್ರಸಾದ್ ತಿಳಿಸಿದರು.

'ಕಾರ್ಮೆಲ್‌ರಾಂ ತನಕ ಮೆಟ್ರೊ ಬೇಕು'

ಸರ್ಜಾಪುರ ರಸ್ತೆಯಲ್ಲಿನ ಕಾರ್ಮೆಲ್‌ರಾಂ ರೈಲು ನಿಲ್ದಾಣದ ತನಕವಾದರೂ ಮೆಟ್ರೊ ರೈಲು ಮಾರ್ಗ ವಿಸ್ತರಿಸಬೇಕು ಎಂದು ಬೆಳ್ಳಂದೂರು ಮತ್ತು ಕಸವನಹಳ್ಳಿ ಅಭಿವೃದ್ಧಿ ವೇದಿಕೆಗಳು ಒತ್ತಾಯಿಸಿವೆ.

'ಈ ಮಾರ್ಗದಲ್ಲಿ ಮೂರು ಪ್ರಮುಖ ಐ.ಟಿ ಎಸ್‌ಇಜಡ್‌ಗಳಿವೆ. 2 ಲಕ್ಷದಿಂದ 3 ಲಕ್ಷ ಉದ್ಯೋಗಿಗಳು ಈ ಮಾರ್ಗದಲ್ಲಿ ನಿತ್ಯ ಸಂಚರಿಸುತ್ತಿದ್ದಾರೆ' ಎಂದು ವಿವರಿಸಿವೆ.

'ಇದೇ ವೇಳೆ ಕಾರ್ಮೆಲ್‌ರಾಂ ರೈಲು ನಿಲ್ದಾಣವನ್ನು ಮೇಲ್ದರ್ಜೆಗೆ ಏರಿಸುವ ಅನಿವಾರ್ಯತೆಯೂ ಇದೆ. ಅಂತರ ರಾಜ್ಯಕ್ಕೆ ಸಂಪರ್ಕ ಕಲ್ಪಿಸುವ ಮತ್ತು ಉಪ ನಗರಗಳನ್ನು ಸಂಪರ್ಕಿಸುವ ಪ್ರಮುಖ ನಿಲ್ದಾಣ ಇದಾಗಿದೆ' ಎಂದು ತಿಳಿಸಿವೆ.

ಜನಪ್ರತಿನಿಧಿಗಳ ವಿರುದ್ಧದ ಪ್ರಕರಣ: ಮಾಹಿತಿ ಪಡೆಯಲು ಸೂಚನೆ

ಬೆಂಗಳೂರು: ರಾಜ್ಯದಲ್ಲಿನ ಶಾಸಕರು ಮತ್ತು ಸಂಸದರ ವಿರುದ್ಧ 2020ರ ಸೆ. 16ರ ನಂತರ ಸರ್ಕಾರ ಹಿಂಪಡೆದು ಕೊಂಡಿರುವ ಮತ್ತು ವಿಚಾರಣೆಗೆ ಬಾಕಿಯಿರುವ ಕ್ರಿಮಿನಲ್ ಪ್ರಕರಣಗಳ ಕುರಿತು ವಿಶೇಷ ಸೆಷನ್ಸ್ ಮತ್ತು ಮ್ಯಾಜಿಸ್ಟ್ರೇಟ್ (ಜನಪ್ರತಿನಿಧಿಗಳ) ನ್ಯಾಯಾಲಯದಿಂದ ಮಾಹಿತಿ ಪಡೆಯುವಂತೆ ರಿಜಿಸ್ಟ್ರಾರ್ ಜನರಲ್ ಅವರಿಗೆ ಹೈಕೋರ್ಟ್ ಸೂಚಿಸಿದೆ.

ಈ ಕುರಿತ ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಪ್ರಕರಣದ ಅಮಿಕಸ್ ಕ್ಯೂರಿ (ನ್ಯಾಯಾಲಯಕ್ಕೆ ಸಹಕರಿಸುವ ವಕೀಲ) ಹಿರಿಯ ವಕೀಲ ಆದಿತ್ಯ ಸೋಂಧಿ, 'ಶಾಸಕರು ಮತ್ತು ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳನ್ನು ಸರ್ಕಾರ ಹಿಂಪಡೆದಿರುವ ಕುರಿತು ಮಾಹಿತಿ ಸಲ್ಲಿಸುವಂತೆ 2021ರ ಆಗಸ್ಟ್ 26ರಂದು ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ' ಎಂದು ತಿಳಿಸಿದರು.

'2020ರ ಸೆ. 16ರ ಬಳಿಕ ಬಾಕಿಯಿರುವ ಅಥವಾ ವಿಲೇವಾರಿ ಮಾಡಲಾದ ಪ್ರಕರಣಗಳ ಪಟ್ಟಿಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಗಳಿಂದ ಪಡೆದುಕೊಳ್ಳಬೇಕು ಎಂದು ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಅವರಿಗೆ ಸುಪ್ರೀಂ ಕೋರ್ಟ್ ನಿರ್ದೇಶಿಸಿದೆ' ಎಂದೂ ವಿವರಿಸಿದರು. ವಿಚಾರಣೆಯನ್ನು 2022ರ ಜ.17ಕ್ಕೆ ಮುಂದೂಡಲಾಗಿದೆ.

ಕಥಾ ಸ್ಪರ್ಧೆ ಫಲಿತಾಂಶ ಪ್ರಕಟ

ಬೆಂಗಳೂರು: ಲೇಖಿಕಾ ಸಾಹಿತ್ಯ ವೇದಿಕೆ ಆಯೋಜಿಸಿದ್ದ ರಾಜ್ಯಮಟ್ಟದ 'ತ್ರಿವೇಣಿ ಸ್ಮೃತಿ–ಮನೋವೈಜ್ಞಾನಿಕ ಕಥಾ ಸ್ಪರ್ಧೆ'ಯ ಫಲಿತಾಂಶ ಪ್ರಕಟವಾಗಿದ್ದು, ಇಂಗ್ಲೆಂಡಿನ ಡಾ. ಪ್ರೇಮಲತಾ ಬಿ. ಅವರ 'ನಡಿಗೆ' ಕೃತಿ ಪ್ರಥಮ ಬಹುಮಾನಕ್ಕೆ ಆಯ್ಕೆಯಾಗಿದೆ.

ಈ ಬಹುಮಾನವು ₹ 1 ಸಾವಿರ ನಗದು ಒಳಗೊಂಡಿದೆ. ಇಲ್ಲಿನ ರಾಜೇಶ್ವರಿ ಜಯಕೃಷ್ಣ ಅವರ 'ತಲ್ಲಣಿಸದಿರು ಕಂಡ್ಯ' ಕೃತಿ ದ್ವಿತೀಯ ಬಹುಮಾನಕ್ಕೆ, ಧಾರವಾಡದ ಪುಷ್ಪಾ ಮಹೇಶ್ ಅವರ 'ಕಪ್ಪು ವರ್ತುಲಗಳು' ಕೃತಿ ತೃತೀಯ ಬಹುಮಾನಕ್ಕೆ ಹಾಗೂ ಇಲ್ಲಿನ ಲತಾ ಶ್ರೀನಿವಾಸ್ ಅವರ 'ಇಳೆಯ ಮೋಹದಲ್ಲಿ' ಕೃತಿಯು ಸಮಾಧಾನಕರ ಬಹುಮಾನಕ್ಕೆ ಆಯ್ಕೆಯಾಗಿವೆ. ಈ ಬಹುಮಾನಗಳು ₹ 750ರಿಂದ ₹ 400 ನಗದು ಹೊಂದಿವೆ.

ಶೈಲಜಾ ಸುರೇಶ್ ಮತ್ತು ಮೀರಾ ಶಂಕರ್ ಕಥಾ ಸ್ಪರ್ಧೆಯ ತೀರ್ಪುಗಾರರಾಗಿದ್ದರು ಎಂದು ಪ್ರಕಟಣೆ ತಿಳಿಸಿದೆ.

ಇಂದು ನೀರು ಪೂರೈಕೆ ವ್ಯತ್ಯಯ

ಬೆಂಗಳೂರು: ಐಟಿಸಿ ವಿಂಡ್ಸರ್ ಮ್ಯಾನರ್ ಹೋಟೆಲ್ ಸಮೀಪದ ಕೊಳವೆ ಮಾರ್ಗಕ್ಕೆ ಎಲೆಕ್ಟ್ರೊ ಮ್ಯಾಗ್ನೆಟಿಕ್ ಫ್ಲೋ ಮೀಟರ್ ಅಳವಡಿಸುವ ಕಾಮಗಾರಿ ಕಾರಣ ಇದೇ 18ರಂದು ಬೆಳಿಗ್ಗೆ 10ರಿಂದ ರಾತ್ರಿ 12ರ ವರೆಗೆ ಮಲ್ಲೇಶ್ವರ, ಯಶವಂತಪುರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ವಿದ್ಯುತ್ ಕೇಂದ್ರಗಳಲ್ಲಿ ತುರ್ತು ಕಾರ್ಯ ನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ಇದೇ18ರಂದು ಬೆಳಿಗ್ಗೆ 10ರಿಂದ ಸಂಜೆ 5 ರವರೆಗೆ ನಗರದ ವಿವಿಧ ಸ್ಥಳಗಳಲ್ಲಿ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಸ್ಥಳಗಳು: ಚೊಕ್ಕನಹಳ್ಳಿ, ಕ್ಲಬ್ ಹೌಸ್, ಸಂತೋರಿನಿ ಬ್ಲಾಕ್, ಸೆರೆನಿಟಾ ಬ್ಲಾಕ್, ಪ್ಯಾರಾಡಿಸೊ-3 ಬ್ಲಾಕ್-17, ಸಂಪಿಗೆಹಳ್ಳಿ ಪೊಲೀಸ್ ಠಾಣೆ ಸುತ್ತಮುತ್ತ ಪ್ರದೇಶಗಳು.

ಸಿದ್ಧಾರ್ಥ ಶಾಲೆ, ಟಿ.ಪಿ. ಮುಖ್ಯ ರಸ್ತೆ, ಭೈರವೇಶ್ವರ ಇಂಡಸ್ಟ್ರೀಸ್, ಸೃಷ್ಟಿ ನಗರ, ವೀರ ಭದ್ರೇಶ್ವರ ನಗರ, ಮಹದೇಶ್ವರ ನಗರ, ಸಿಂಡಿಕೇಟ್ ಬ್ಯಾಂಕ್ ಲೇಔಟ್, ಕೆಂಗೇರಿ ಮುಖ್ಯ ರಸ್ತೆ, ಭುವನೇಶ್ವರಿ ನಗರ, ದೊಡ್ಡಬಸ್ತಿ ಮುಖ್ಯ ರಸ್ತೆ, ಆರ್.ಆರ್. ಲೇಔಟ್, ಆರ್.ಆರ್. ರೆಸಿಡೆನ್ಸಿ, ಬಿಇಎಲ್ ಒಂದನೇ ಮತ್ತು 2ನೇ ಹಂತ, ಅಂಬೇಡ್ಕರ್ ನಗರ, ಉಲ್ಲಾಳ ಬಸ್ ನಿಲ್ದಾಣ, ಬಿಡಿಎ ಕಾಲೊನಿ, ವಿಜಯ ನಗರ, ಮಾರೇನಹಳ್ಳಿ, ಗೋವಿಂದರಾಜ ನಗರ, ಚಂದ್ರಾಲೇಔಟ್, ವಿನಾಯಕ ನಗರ, ನರಸಾಪುರ, ಪ್ರಶಾಂತ ನಗರ, ಅಮರ ಜ್ಯೋತಿ ನಗರ, ಮೂಡಲಪಾಳ್ಯ, ಎಸ್‌ವಿಜಿ ನಗರ ಸುತ್ತಮುತ್ತಲ ಪ್ರದೇಶಗಳು.

ಮಳೆ ನಿಂತ ಬಳಿಕ ರಸ್ತೆ ದುರಸ್ತಿ: ಬೊಮ್ಮಾಯಿ

ಬೆಂಗಳೂರು: ಮಳೆ ನಿಂತ ಬಳಿಕ ಬೆಂಗಳೂರಿನ ಸಮಗ್ರ ರಸ್ತೆಗಳ ದುರಸ್ತಿಯನ್ನು ಯುದ್ಧೋಪಾದಿಯಲ್ಲಿ ಕೈಗೊಳ್ಳಲಾಗುವುದು. ಇದರ ಮೇಲ್ವಿಚಾರಣೆ ತಾವೇ ವಹಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, ನಗರದಲ್ಲಿ ಅನಿರೀಕ್ಷಿತವಾಗಿ ಮಳೆ ಬೀಳುತ್ತಿದೆ. ಇನ್ನೂ ನಾಲ್ಕರಿಂದ ಐದು ದಿನಗಳ ಕಾಲ ಮಳೆಯಾಗುವ ಸೂಚನೆ ಇದೆ ಎಂದರು.

ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತದ ಪರಿಣಾಮ ಬೆಂಗಳೂರು ನಗರ ಹಾಗೂ ಕೆಲವು ಜಿಲ್ಲೆಗಳಲ್ಲಿ ಮಳೆಯಾಗುತ್ತಿದೆ. ಈಗಾಗಲೇ ಸಭೆ ನಡೆಸಿ ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಲಾಗಿದೆ. ಮಳೆ ನಿಂತ ತಕ್ಷಣವೇ ತಗ್ಗು ಪ್ರದೇಶಗಳಲ್ಲಿ ಪರಿಹಾರ ಕಾರ್ಯಕ್ಕೆ ತಂಡಗಳ ನಿಯೋಜನೆ ಮಾಡಲಾಗುವುದು. ತಂಡದಲ್ಲಿ ಹೆಚ್ಚಿನ ಜನರನ್ನು ಸೇರ್ಪಡೆಗೊಳಿಸಲು ಈಗಾಗಲೇ ಸೂಚನೆ ನೀಡಲಾಗಿದೆ. ಇದಲ್ಲದೇ ಎನ್‌ಡಿಆರ್‌ಎಫ್ ತಂಡಗಳನ್ನು ಹಾಗೂ ರಾಜ್ಯದ ಎಸ್‌ಡಿಆರ್‌ಎಫ್‌ನ ನಾಲ್ಕು ತಂಡಗಳನ್ನು ಬೆಂಗಳೂರಿಗೆ ಸೀಮಿತವಾಗಿ ರಚಿಸಲು ಸೂಚಿಸಲಾಗಿದೆ ಎಂದೂ ಹೇಳಿದರು.

ಮಳೆ ನಿರ್ವಹಣೆಗೆ ಸಂಬಂಧಿಸಿದಂತೆ ಆಗುತ್ತಿದ್ದ ಗೊಂದಲಗಳನ್ನು ನಿವಾರಿಸಲಾಗಿದೆ. ಮಳೆ ನಿಂತ ಕೂಡಲೇ ರಸ್ತೆ ದುರಸ್ತಿಯಾಗಬೇಕು, ನಿರ್ವಹಣೆ ಹೊತ್ತ ಸಂಸ್ಥೆ ಮಾಡದಿದ್ದರೆ, ಅವರ ಮೊತ್ತವನ್ನು ತಡೆ ಹಿಡಿಯಲಿದೆ. ಪಾಲಿಕೆಯೇ ಈ ಕಾರ್ಯವನ್ನು ಕೈಗೊಳ್ಳಲಿದೆ ಎಂದರು.

300ರ ಗಡಿ ದಾಟಿದ ಕೋವಿಡ್

ಪ್ರಜಾವಾಣಿ ವಾರ್ತೆ


ಬೆಂಗಳೂರು: ರಾಜ್ಯದಲ್ಲಿ 308 ಮಂದಿ ಕೋವಿಡ್ ಪೀಡಿತರಾಗಿರುವುದು ಬುಧವಾರ ದೃಢಪಟ್ಟಿದೆ. 7 ದಿನಗಳಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿವೆ.

ಒಂದು ದಿನದ ಅವಧಿಯಲ್ಲಿ 1.04 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕುದೃಢ ಪ್ರಮಾಣವು ಶೇ 0.29 ರಷ್ಟು ವರದಿಯಾಗಿದೆ. 3 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 14 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬಳ್ಳಾರಿ ಸೇರಿದಂತೆ 12 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ.

ಬೆಂಗಳೂರಿನಲ್ಲಿ 207 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 29.92 ಲಕ್ಷ ದಾಟಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆ ಕಂಡಿದ್ದು, ಸದ್ಯ 7,409 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆಯುತ್ತಿದ್ದಾರೆ. ಬಾಗಲಕೋಟೆ, ಚಿಕ್ಕಬಳ್ಳಾಪುರ, ರಾಯಚೂರು, ವಿಜಯಪುರ ಹಾಗೂ ಯಾದಗಿರಿ ಜಿಲ್ಲೆಯಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 10ಕ್ಕಿಂತ ಕಡಿಮೆಯಿದೆ. ಬೆಂಗಳೂರಿನಲ್ಲಿ ಗರಿಷ್ಠ (6,110) ಸಕ್ರಿಯ ಪ್ರಕರಣಗಳಿವೆ. ಕೋವಿಡ್ ಪೀಡಿತರಲ್ಲಿ 8 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ.

ಬೆಂಗಳೂರಿನಲ್ಲಿ ಇಬ್ಬರು, ಚಿತ್ರದುರ್ಗ, ದಕ್ಷಿಣ ಕನ್ನಡ, ಹಾಸನ, ಕೋಲಾರ, ಕೊಪ್ಪಳ ಹಾಗೂ ಮೈಸೂರಿನಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ಮರಣ ಪ್ರಮಾಣದರವು ಶೇ 2.59 ರಷ್ಟು ದೃಢಪಟ್ಟಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,161ಕ್ಕೆ ಏರಿಕೆಯಾಗಿದೆ. 384 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.46 ಲಕ್ಷ ದಾಟಿದೆ.



ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,54,463 ಒಟ್ಟು ಪ್ರಕರಣಗಳು (12,54,256 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
6,110	12,32,036	16,316

ದಿನದ ಏರಿಕೆ

ಹೊಸ ಪ್ರಕರಣ	207
ಗುಣಮುಖ	256
ಸಾವು	02

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ನಗರದಲ್ಲಿ ಇಂದು

'ಉಬುಂಟು' ಮಹಿಳಾ ಉದ್ಯಮಿಗಳ ಸಮಾವೇಶ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಮುಖ್ಯ ಅತಿಥಿ: ಮುರುಗೇಶ್ ನಿರಾಣಿ, ಮುಖ್ಯ ಭಾಷಣಕಾರರು: ಹೀನಾ ನಾಗರಾಜ್, ಶ್ರದ್ಧಾ ಶರ್ಮಾ, ದಿವ್ಯಾ ಗೋಕುಲನಾಥ್, ಸ್ಥಳ: ಹೋಟೆಲ್ ಲಲಿತ್ ಅಶೋಕ್, ಬೆಳಿಗ್ಗೆ 9.30

ವಿಶ್ವ ಮಧುಮೇಹ ದಿನದ ಪ್ರಯುಕ್ತ 'ನಿಮ್ಮ ಜೀವನಕ್ಕೆ ಹೊಸ ರೂಪ ನೀಡಿ' ವೆಬಿನಾರ್: ಭಾಗವಹಿಸುವವರು: ಡಾ.ಎ. ಶಾರದಾ, ಡಾ.ಜಿ. ಮೊಯಿನುದ್ದಿನ್, ಡಾ. ಪ್ರಿಯಾ ಚಿನ್ನಪ್ಪ, ಆಯೋಜನೆ: ಮಣಿಪಾಲ್ ಆಸ್ಪತ್ರೆಗಳ ಸಮೂಹ, 'ಪ್ರಜಾವಾಣಿ', 'ಡೆಕ್ಕನ್ ಹೆರಾಲ್ಡ್', ಸಂಜೆ 4 (ಆನ್‌ಲೈನ್ ಕಾರ್ಯಕ್ರಮ)

ಕನ್ನಡ ರಾಜ್ಯೋತ್ಸವ ಹಾಗೂ ಅಣ್ಣಮ್ಮದೇವಿ ಉತ್ಸವ: ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಮುಖ್ಯ ಅತಿಥಿಗಳು: ರಾಕೇಶ್ ಸಿಂಗ್, ಗೌರವ್ ಗುಪ್ತ, ಕೆ.ಎ. ದಯಾನಂದ್, ಗೌತಮ್ ಕುಮಾರ್, ಸಿ.ಕೆ. ರಾಮೇಗೌಡ, ಆಯೋಜನೆ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೌಕರರ ಕನ್ನಡ ಸಂಘ, ಸ್ಥಳ: ಬಿಬಿಎಂಪಿ ಕೇಂದ್ರ ಕಚೇರಿ, ಸಂಜೆ 4.30

ವರದಿ ಬಿಡುಗಡೆ: 'ಮತೀಯ ಗೂಂಡಾಗಿರಿಯಿಂದ ಮತ್ತು ದ್ವೇಷದ ಅಪರಾಧಗಳವರೆಗೆ: ಅಂಬೇಡ್ಕರ್ ಅವರ ಭ್ರಾತೃತ್ವದ ಕನಸಿನ ಮೇಲೆ ದಾಳಿ' ವರದಿ ಬಿಡುಗಡೆ, ಆಯೋಜನೆ: ಪಿಯುಸಿಎಲ್, ಎಐಪಿಎಫ್, ಎಐಎಲ್‌ಎಜೆ ಮತ್ತು ಗೌರಿ ಲಂಕೇಶ್ ನ್ಯೂಸ್, ಸ್ಥಳ: 1ನೇ ಕಟ್ಟಡ, ಶಾಸಕರ ಭವನ, ಸಂಜೆ 4.30

ಡಾ.ಎಚ್. ಎಸ್. ಗೋಪಾಲ ರಾವ್–75: ಅಧ್ಯಕ್ಷತೆ: ಟಿ.ಎಸ್. ನಾಗಾಭರಣ, ಗೌರವಾರ್ಪಣೆ: ಡಾ.ಎಚ್.ಎಸ್. ಗೋಪಾಲರಾವ್, ಗೌರವಿಸುವವರು: ಹಂ.ಪ. ನಾಗರಾಜಯ್ಯ, ಗೌರವ ನುಡಿ: ಆರ್. ಶೇಷಶಾಸ್ತ್ರಿ, ಬಿ.ವಿ. ರಾಜಾರಾಮ್, ಆಯೋಜನೆ: ಕನ್ನಡ ಗೆಳೆಯರ ಬಳಗ, ಸ್ಥಳ: ಬಿ.ಎಂ.ಶ್ರೀ. ಪ್ರತಿಷ್ಠಾನ ಕಲಾಭವನ, ಎನ್.ಆರ್. ಕಾಲೋನಿ, ಸಂಜೆ 5



ಟಿ.ಎಸ್. ನಾಗಾಭರಣ

ಕನ್ನಡ ರಾಜ್ಯೋತ್ಸವ ಹಾಗೂ ಕನ್ನಡ ನಾಟಕೋತ್ಸವ: ಉದ್ಘಾಟನೆ: ಕೆ.ವಿ. ನಾಗರಾಜಮೂರ್ತಿ, ಮುಖ್ಯ ಅತಿಥಿ: ಮಾಲತಿಶ್ರೀ ಮೈಸೂರು, ಅಧ್ಯಕ್ಷತೆ: ಶ್ರೀರಾಮೇಗೌಡ, ಆಯೋಜನೆ: ಉದಯಭಾನು ಕಲಾಸಂಘ, ಸ್ಥಳ: ಉದಯಭಾನು ಕಲಾಸಂಘದ ಸಾಂಸ್ಕೃತಿಕ ಭವನ, ಕೆಂಪೇಗೌಡನಗರ, ಸಂಜೆ 5.30

ಇನ್ಫೊಸಿಸ್ ಪ್ರತಿಷ್ಠಾನದ ಹೊಸ ಕಟ್ಟಡ ಸಂಕೀರ್ಣಕ್ಕೆ ಬಸವರಾಜ ಬೊಮ್ಮಾಯಿ ಚಾಲನೆ

ಜಯದೇವ ಅತಿ ದೊಡ್ಡ ಹೃದ್ರೋಗ ಆಸ್ಪತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇನ್ಫೊಸಿಸ್ ಪ್ರತಿಷ್ಠಾನವು ನಗರದ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಆವರಣದಲ್ಲಿ ನಿರ್ಮಿಸಿಕೊಟ್ಟಿರುವ 350 ಹಾಸಿಗೆಗಳ ಹೊಸ ಕಟ್ಟಡದ ಸಂಕೀರ್ಣಕ್ಕೆ ಬುಧವಾರ ಚಾಲನೆ ದೊರೆಯಿತು. ಇದರೊಂದಿಗೆ ಜಗತ್ತಿನ ಅತೀ ದೊಡ್ಡ ಹೃದ್ರೋಗ ಆಸ್ಪತ್ರೆಯಾಗಿ ಜಯದೇವ ಹೊರಹೊಮ್ಮಿದೆ.

ನಗರದಲ್ಲಿನ ಆಸ್ಪತ್ರೆಯ ಹಳೆಯ ಕಟ್ಟಡವು 700 ಹಾಸಿಗೆಗಳನ್ನು ಹೊಂದಿವೆ. ಈಗ ಇಲ್ಲಿ ಒಟ್ಟು ಹಾಸಿಗೆಗಳ ಸಂಖ್ಯೆ 1,050ಕ್ಕೆ ಏರಿಕೆಯಾಗಿದೆ. ಹೃದ್ರೋಗ ಚಿಕಿತ್ಸೆಗೆ ಮೀಸಲಿರುವ ಗುಜರಾತ್‌ನ ಯು.ಎನ್. ಮೆಹ್ತಾ ಆಸ್ಪತ್ರೆಯು (ಸಾವಿರ ಹಾಸಿಗೆ) ಇಷ್ಟು ದಿನ ಜಗತ್ತಿನ ಅತಿ ದೊಡ್ಡ ಆಸ್ಪತ್ರೆಯಾಗಿತ್ತು. ಈಗ ಆ ಹಿರಿಮೆಗೆ ಜಯದೇವ ಹೃದ್ರೋಗ ಸಂಸ್ಥೆ ಭಾಜನವಾಗಿದೆ.

ನೂತನ ಕಟ್ಟಡ ಸಂಕೀರ್ಣವನ್ನು ಉದ್ಘಾಟಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಕರ್ನಾಟಕವು ಪ್ರಗತಿಪರ ರಾಜ್ಯವಾಗಿದ್ದರೂ ಆರೋಗ್ಯ ಕ್ಷೇತ್ರದಲ್ಲಿ ಇನ್ನಷ್ಟು ಸುಧಾರಣೆಗಳನ್ನು ಮಾಡಬೇಕಾಗಿದೆ. ಹಾಗಾಗಿ, ಸಮಗ್ರ ಆರೋಗ್ಯ ವಿಷನ್ (ಮುನ್ನೋಟ) ಸಿದ್ಧಪಡಿಸಲಾಗುತ್ತಿದೆ. ಈ ವರ್ಷ 250 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಮುಂದಿನ ವರ್ಷ ಕೇಂದ್ರ ಸರ್ಕಾರದ ಸಹಯೋಗದಲ್ಲಿ 250 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಲಾಗುತ್ತದೆ' ಎಂದು ತಿಳಿಸಿದರು.



ಹೊಸ ಕಟ್ಟಡ ಸಂಕೀರ್ಣಕ್ಕೆ ಬಸವರಾಜ ಬೊಮ್ಮಾಯಿ ಚಾಲನೆ ನೀಡಿದರು. ಡಾ.ಕೆ. ಸುಧಾಕರ್, ಡಾ.ಸಿ.ಎನ್. ಮಂಜುನಾಥ್ ಹಾಗೂ ಶಾಸಕಿ ಸೌಮ್ಯಾ ರೆಡ್ಡಿ ಇದ್ದರು –ಪ್ರಜಾವಾಣಿ ಚಿತ್ರ

ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್, 'ಹೃದ್ರೋಗ ಸಮಸ್ಯೆಗಳು ಹೆಚ್ಚಳವಾಗುತ್ತಿದೆ. ದೇಶದಲ್ಲಿ ವರದಿಯಾಗುತ್ತಿರುವ ಒಟ್ಟು ಸಾವಿನ ಪ್ರಕರಣಗಳಲ್ಲಿ ಶೇ 24 ರಷ್ಟು ಮರಣ ಪ್ರಕರಣಗಳು ಹೃದ್ರೋಗಕ್ಕೆ ಸಂಬಂಧಿಸಿದ್ದಾಗಿವೆ. ಆರೋಗ್ಯಯುತ ಜೀವನಕ್ಕೆ ಮದ್ಯಪಾನದಂತಹ ವ್ಯಸನದಿಂದ ದೂರವಿರಬೇಕು. ನಿಯಮಿತವಾಗಿ ವ್ಯಾಯಾಮ ಮಾಡಬೇಕು' ಎಂದು ಹೇಳಿದರು.

ಎಲ್ಲರಿಗೂ ಚಿಕಿತ್ಸೆ: ಇನ್ಫೊಸಿಸ್ ಪ್ರತಿಷ್ಠಾನದ ಅಧ್ಯಕ್ಷೆ ಸುಧಾ ಮೂರ್ತಿ, 'ಅಮೆರಿಕದಂತಹ ಮುಂದುವರಿದ ದೇಶಗಳಲ್ಲಿ ವೈದ್ಯಕೀಯ ಚಿಕಿತ್ಸೆ ಸಿಗುವುದು ಕಷ್ಟ. ಆದರೆ, ನಮ್ಮ ದೇಶದಲ್ಲಿ ಸರ್ಕಾರಿ ವ್ಯವಸ್ಥೆಯಡಿ ಎಲ್ಲರಿಗೂ ಸುಲಭವಾಗಿ ಚಿಕಿತ್ಸೆ ದೊರೆಯುತ್ತದೆ. ಸಮಾಜದಿಂದ ಬಂದ ಹಣವನ್ನು ಸಮಾಜಕ್ಕೇ ಪ್ರತಿಷ್ಠಾನದ ಮೂಲಕ ನೀಡಲಾಗುತ್ತಿದೆ' ಎಂದರು.

ಇನ್ಫೊಸಿಸ್ ಸಂಸ್ಥಾಪಕ ಎನ್. ಆರ್. ನಾರಾಯಣಮೂರ್ತಿ, 'ಸಮಾಜಕ್ಕೆ ಅಗತ್ಯವಿರುವ ಶಿಕ್ಷಣ, ಆರೋಗ್ಯ, ಪೌಷ್ಟಿಕ ಆಹಾರ ಮತ್ತು ವಸತಿ ನೀಡಲು 1996ರಲ್ಲಿ ಪ್ರತಿಷ್ಠಾನ ಪ್ರಾರಂಭಿಸಿ, ವಿವಿಧ ಸಾಮಾಜಿಕ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಜಾಗತಿಕ ಸರಾಸರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಹೃದ್ರೋಗ ಮರಣಗಳು ದೇಶದಲ್ಲಿ ವರದಿಯಾಗುತ್ತಿವೆ. ಹೃದಯ ಸಮಸ್ಯೆಗಳ ಚಿಕಿತ್ಸೆಗೆ ಬೆಂಗಳೂರಿನಲ್ಲಿ ಜಯದೇವ ಹೃದ್ರೋಗ ಆಸ್ಪತ್ರೆ ಇರುವುದು ನಮ್ಮ ಅದೃಷ್ಟ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

'ಯುವ ಜನರಲ್ಲಿ ಹೃದಯ ಸಮಸ್ಯೆ'

'ಹೃದಯ ಸಂಬಂಧಿ ಕಾಯಿಲೆಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿವೆ. ರಾತ್ರಿ 8 ಗಂಟೆಯಿಂದ ಬೆಳಿಗ್ಗೆ 6ರವರೆಗೆ ಪ್ರತಿ ಐದು ನಿಮಿಷಕ್ಕೆ ಒಬ್ಬ ರೋಗಿ ತುರ್ತು ಚಿಕಿತ್ಸೆಗೆ ದಾಖಲಾಗುತ್ತಿದ್ದಾರೆ. ಇದರಿಂದ ಆಸ್ಪತ್ರೆ ಮೇಲೆ ಒತ್ತಡ ಹೆಚ್ಚಾಗಿತ್ತು. ಇನ್ಫೊಸಿಸ್ ಫೌಂಡೇಷನ್ ಕೊಡುಗೆಯಾಗಿ ನೀಡುತ್ತಿರುವ ಈ ಆಸ್ಪತ್ರೆಯಿಂದ ಒತ್ತಡ ನಿವಾರಣೆಯಾಗಲಿದೆ. 105 ಹೃದ್ರೋಗ ತಜ್ಞರು, 50 ಶಸ್ತ್ರಚಿಕಿತ್ಸಕರು ಸಂಸ್ಥೆಯಲ್ಲಿದ್ದು, ವೈದ್ಯರ ಕೊರತೆಯಿಲ್ಲ' ಎಂದು ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ತಿಳಿಸಿದರು.

'ನಾಲ್ಕು ಅಂತಸ್ತಿನ ಹೊಸ ಕಟ್ಟಡದಲ್ಲಿ ಎರಡು ಕಾರ್ಡಿಯಾಕ್ ಕ್ಯಾಥ್ ಲ್ಯಾಬ್, ಎರಡು ಶಸ್ತ್ರಚಿಕಿತ್ಸೆಯ ಕೊಠಡಿಗಳು, ಒಂದು ಹೈಬ್ರಿಡ್ ಶಸ್ತ್ರಚಿಕಿತ್ಸೆ ಕೊಠಡಿ, 100 ಐಸಿಸಿ ಬೆಡ್‌ಗಳು, 250 ಸಾಮಾನ್ಯ ಹಾಸಿಗೆ ವ್ಯವಸ್ಥೆ ಇದೆ. 20 ತಿಂಗಳಲ್ಲಿ ಕಟ್ಟಡದ ಕಾಮಗಾರಿ ಮುಗಿಸಲಾಗಿದೆ. ಸೋಮವಾರದಿಂದ ನೂತನ ಕಟ್ಟಡದಲ್ಲಿ ಸೇವೆ ಪ್ರಾರಂಭಿಸಲಾಗುವುದು' ಎಂದು ಹೇಳಿದರು.


ಸುದ್ದಿ 2 ನಿಮಿಷ

ಬಿಜೆಪಿಯವರು ಮೆಂಟಲ್ ಗಿರಾಕಿಗಳು: ಶಿವಕುಮಾರ್ ಟೀಕೆ

ಬೆಂಗಳೂರು: 'ಬಿಜೆಪಿಯವರು ಮೆಂಟಲ್ ಗಿರಾಕಿಗಳು. ನಮ್ಮ ಪಕ್ಷದ ವಿಚಾರದಲ್ಲಿ ತಲೆ ಹಾಕಲು ಅವರು ಯಾರು? ಮೊದಲು ಅವರ ತಟ್ಟೆಯಲ್ಲಿ ಬಿದ್ದಿರುವ ಹೆಗ್ಗಣ ಎತ್ತಿಹಾಕಿ, ಸ್ವಚ್ಛಗೊಳಿಸಿಕೊಳ್ಳಲಿ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಕಾಂಗ್ರೆಸ್‌ನಲ್ಲಿ ಬಣ ರಾಜಕೀಯ ಜೋರಾಗಿದೆ ಎಂಬ ಬಿಜೆಪಿ ಟೀಕೆ ಕುರಿತು ಬುಧವಾರ ಪ್ರತಿಕ್ರಿಯಿಸಿದ ಅವರು, 'ಪುನೀತ ನಮನ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಿದ್ದ ಕಾರಣದಿಂದ ಸಿದ್ದರಾಮಯ್ಯ ಅವರು ಪಕ್ಷದ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷರ ಪದಗ್ರಹಣ ಸಮಾರಂಭದಲ್ಲಿ ಚಿಕ್ಕದಾಗಿ ಭಾಷಣ ಮಾಡಿದರು. ಅವರೇ ಇದನ್ನು ಸ್ಪಷ್ಟಪಡಿಸಿದ್ದಾರೆ. ಬಿಜೆಪಿಯವರು ಏನೇನೋ ಹೇಳಿದರೆ ಉತ್ತರ ಕೊಡಲಾಗದು. ಮುಖ್ಯಮಂತ್ರಿ ಮಾತನಾಡಿದರೆ ಉತ್ತರಿಸುತ್ತೇನೆ' ಎಂದರು.

'ಪಕ್ಷದ ಅಧ್ಯಕ್ಷನಾಗಿ ಕಾರ್ಯಕರ್ತರ ಮೇಲೆ ನಿಗಾ ಇಡುವುದು, ನಿಯಂತ್ರಿಸುವುದು ತಪ್ಪೇನೂ ಅಲ್ಲ. ಪಕ್ಷದ ಕಾರ್ಯಕರ್ತರು ಮನೆಯ ಮಕ್ಕಳಿದ್ದಂತೆ. ಬೈದರೂ ಪ್ರೀತಿಯಿಂದ ನೋಡುತ್ತಾರೆ, ಗದರಿದರೂ ಪ್ರೀತಿಸುತ್ತಾರೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.



ಮಂಗಳವಾರದ ಕಾರ್ಯಕ್ರಮಕ್ಕೆ ಶಾಸಕ ಜಮೀರ್ ಅಹಮ್ಮದ್ ಖಾನ್ ಗೈರಾಗಿದ್ದ ಕುರಿತು ಕೇಳಿದಾಗ, 'ಅವರು ದೆಹಲಿಯಲ್ಲಿದ್ದರು. ಅವರೂ ಪಕ್ಷಕ್ಕಾಗಿ ಕೆಲಸ ಮಾಡುತ್ತಿದ್ದಾರೆ. ಎಲ್ಲರಿಗೂ ಬೆಂಬಲಿಗರು ಇರುತ್ತಾರೆ. ಜಮೀರ್ ಅವರಿಗೂ ಇದ್ದಾರೆ. ಅವರು ಗೈರಾಗಿದ್ದನ್ನು ಬೇರೆ ರೀತಿ ಅರ್ಥೈಸಲು ಆಗುವುದಿಲ್ಲ' ಎಂದರು.

ಜಾಮೀನು ನಿಯಮ ಉಲ್ಲಂಘನೆ: ರೌಡಿ ಬಂಧನ

ಬೆಂಗಳೂರು: ಜಾಮೀನು ಹಾಗೂ ಭದ್ರತಾ ನಿಯಮಗಳನ್ನು ಉಲ್ಲಂಘಿಸಿರುವ ರೌಡಿ ಅಮೀನುದ್ದೀನ್ ನಯೀಮ್ ಎಂಬಾತನನ್ನು ಪೂರ್ವ ವಿಭಾಗದ ಪೊಲೀಸರು ವಶಕ್ಕೆ ಪಡೆದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

'ಶಿವಾಜಿನಗರದ ಸ್ಲಾಟರ್ ಹೌಸ್ ನಿವಾಸಿಯಾಗಿರುವ ಆರೋಪಿಯು ಜಾಮೀನಿನ ಮೇಲೆ ಬಿಡುಗಡೆಯಾದ ನಂತರ ಸಮಾಜಘಾತುಕ ಚಟುವಟಿಕೆಗಳಲ್ಲಿ ತೊಡಗಿದ್ದ. ಸಮಾಜದಲ್ಲಿ ಶಾಂತಿ ಕದಡಲು ಮುಂದಾಗಿದ್ದ. ಸಾರ್ವಜನಿಕ ಆಸ್ತಿಪಾಸ್ತಿಗೂ ಹಾನಿಯುಂಟು ಮಾಡುತ್ತಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

'ಭಾರತಿನಗರ ಠಾಣೆ ಪೊಲೀಸರು ಜ.13ರಂದು ಆರೋಪಿಯನ್ನು ಬಂಧಿಸಿದ್ದರು. ₹1 ಲಕ್ಷದ ಶ್ಯೂರಿಟಿ ಹಾಗೂ ವೈಯಕ್ತಿಕ ಮುಚ್ಚಳಿಕೆ ಪಡೆದು ಕೆಲ ಷರತ್ತುಗಳ ಮೇಲೆ ಆತನಿಗೆ ಜಾಮೀನು ಮಂಜೂರು ಮಾಡಲಾಗಿತ್ತು. ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗದಂತೆಯೂ ಸೂಚಿಸಲಾಗಿತ್ತು. ಹೀಗಿದ್ದರೂ ಆರೋಪಿ ಅಪರಾಧ ಕೃತ್ಯಗಳಲ್ಲಿ ತೊಡಗಿದ್ದ' ಎಂದು ಹೇಳಿದ್ದಾರೆ.

ಶಬ್ಬೀರ್ ಬಂಧನ: 'ವೈಯಕ್ತಿಯ ಮುಚ್ಚಳಿಕೆ ಮೇಲೆ ಜಾಮೀನು ಪಡೆದು ಜೈಲಿನಿಂದ ಬಿಡುಗಡೆಯಾಗಿದ್ದ ಶಬ್ಬೀರ್ (26) ಎಂಬಾತ ಮತ್ತೆ ಅಪರಾಧ ಕೃತ್ಯಗಳನ್ನು ಮುಂದುವರಿಸಿದ್ದ. ಹೀಗಾಗಿ ಆತನನ್ನೂ ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಒಂದು ವಚನ ಪಾಲಿಸಿದರೂ ಬದುಕು ಸಾರ್ಥಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಚಾರ– ವಿಚಾರಗಳ ಕುರಿತು ಬಸವಾದಿ ಶರಣರು ರಚಿಸಿರುವ 21,000 ವಚನಗಳಲ್ಲಿ ಒಂದನ್ನು ಸಂಪೂರ್ಣವಾಗಿ ಪಾಲಿಸಿದರೂ ಜೀವನ ಸಾರ್ಥಕವಾಗುತ್ತದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಮೈಸೂರಿನ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಬುಧವಾರ ನಗರದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ರಮಣಶ್ರೀ ಪ್ರಶಸ್ತಿ ಪ್ರದಾನ ಮತ್ತು ಎಸ್. ಷಡಕ್ಷರಿ ಅವರ 'ಕ್ಷಣ ಹೊತ್ತು ಆಣಿ ಮುತ್ತು–9' ಕೃತಿಯನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

ಅಧಿಕಾರವನ್ನು ಪಿತ್ರಾರ್ಜಿತ ಆಸ್ತಿ ಎಂದು ಭಾವಿಸಿದವರೂ ಇದ್ದಾರೆ. ಕೈ ಎತ್ತಿ ನಮಸ್ಕರಿಸುವುದಕ್ಕೂ ಹಿಂದೇಟು ಹಾಕುವವರಿದ್ದಾರೆ. ವಚನಗಳ ಬಳಕೆ ಭಾಷಣಗಳಿಗೆ ಸೀಮಿತವಾಗಬಾರದು. ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಮೌಲ್ಯಯುತ ಬದುಕು ಸಾಧ್ಯವಾಗುತ್ತದೆ ಎಂದರು.

ಬಸವಣ್ಣನವರ ಕಾಲದಲ್ಲಿದ್ದ ಅಸ್ಪೃಶ್ಯತೆ, ಅಸಮಾನತೆ, ಲಿಂಗ ತಾರತಮ್ಯ, ಮೂಢನಂಬಿಕೆಗಳು ಈಗಲೂ ಇವೆ. ಈ ಕಾರಣಕ್ಕಾಗಿಯೇ ಬಸವಣ್ಣ ಇಂದಿಗೂ ಪ್ರಸ್ತುತ ಎಂಬ ಮಾತು ಚಾಲ್ತಿಯಲ್ಲಿ ಉಳಿದಿದೆ. ದಯೆಯೇ ಧರ್ಮದ ಮೂಲ ಮತ್ತು ಕಾಯಕವೇ ಕೈಲಾಸ ಎಂಬ ಬಸವಣ್ಣನವರ ಸಾಲುಗಳು ಜೀವನದ ಸಾರವನ್ನು ತಿಳಿಸುತ್ತವೆ ಎಂದು ಹೇಳಿದರು.



ಬೆಂಗಳೂರಿನಲ್ಲಿ ಬುಧವಾರ ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶಿಕ್ಷಣ ತಜ್ಞ ಡಾ. ಗುರುರಾಜ ಕರಜಗಿ ಅವರಿಗೆ 'ರಮಣ ಶ್ರೀ ಜೀವಮಾನ ಸಾಧಕ' ಪ್ರಶಸ್ತಿ ಪ್ರದಾನ ಮಾಡಿದರು. ಕನ್ನಡ ಸಾಹಿತ್ಯ ಪರಿಷತ್ ನಿಟಕಪೂರ್ವ ಅಧ್ಯಕ್ಷ ಮನು ಬಳಿಗಾರ, ಪ್ರತಿಷ್ಠಾನದ ಅಧ್ಯಕ್ಷ ಎಸ್ ಷಡಕ್ಷರಿ, ಅವರ ಮಗ ವೀರೇಂದ್ರ ಷಡಕ್ಷರಿ ಇದ್ದರು

ಡಾ.ಗುರುರಾಜ ಕರಜಗಿ ಅವರಿಗೆ ರಮಣಶ್ರೀ ಶರಣ ಜೀವಮಾನ ಸಾಧಕ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಡಾ.ಶಾಂತಾ ಇಮ್ರಾಪೂರ (ಶರಣ ಸಾಹಿತ್ಯ ಸಂಶೋಧನೆ), ಡಾ.ಪ್ರದೀಪ ಕುಮಾರ್ ಹೆಬ್ರಿ (ಆಧುನಿಕ ವಚನ ರಚನೆ), ಮತ್ತು ಡಾ.ನಂದಾ ಪಾಟೀಲ (ವಚನ ಸಂಗೀತ) ಅವರಿಗೆ ರಮಣಶ್ರೀ ಹಿರಿಯ ಶ್ರೇಣಿ ಪ್ರಶಸ್ತಿ ಹಾಗೂ ಸ್ವಾಮಿ ವಿವೇಕಾನಂದ ಇಂಟಿಗ್ರೇಟೆಡ್ ಗ್ರಾಮೀಣ ಆರೋಗ್ಯ ಕೇಂದ್ರದ ಜಪಾನಂದ ಸ್ವಾಮಿ ಸ್ವಾಮೀಜಿ ಅವರಿಗೆ ಶರಣ ಸಂಸ್ಕೃತಿ ಪ್ರಸಾರ ಸಂಸ್ಥೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಡಾ.ಜಿ.ಭಾಗ್ಯಮ್ಮ (ಶರಣ ಸಾಹಿತ್ಯ ಸಂಶೋಧನೆ), ಸ್ಮಿತಾರಾವ್ ಬೆಳ್ಳೂರ್ (ವಚನ ಸಂಗೀತ) ಅವರಿಗೆ ರಮಣಶ್ರೀ ಶರಣ ಉತ್ತೇಜನ ಪ್ರಶಸ್ತಿ ಮತ್ತು ನಂಜನಗೂಡಿನ ಪತಂಜಲಿ ಯೋಗ ಶಿಕ್ಷಣ ಸಮಿತಿಗೆ ಶರಣ ಸಂಸ್ಕೃತಿ ಉತ್ತೇಜನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸಾಹಿತಿ ಗೊ.ರು.ಚನ್ನಬಸಪ್ಪ, ಏಷ್ಯಾನೆಟ್ ಸುವರ್ಣ ನ್ಯೂಸ್ ಮತ್ತು ಕನ್ನಡಪ್ರಭ ಪ್ರಧಾನ ಸಂಪಾದಕ ರವಿ ಹೆಗಡೆ, ಕನ್ನಡ ಸಾಹಿತ್ಯ ಪರಿಷತ್‌ನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್, ಬಿಜೆಪಿ ಮುಖಂಡ ಅರುಣ್ ಸೋಮಣ್ಣ, ರಮಣ ಶ್ರೀ ಪ್ರತಿಷ್ಠಾನದ ಅಧ್ಯಕ್ಷ ಎಸ್. ಷಡಕ್ಷರಿ, ವೀರೇಂದ್ರ ಷಡಕ್ಷರಿ, ಅರುಣಾ ಸತೀಶ್ ಮತ್ತಿತರರು ಉಪಸ್ಥಿತರಿದ್ದರು.



ವಕ್ಫ್ ಮಂಡಳಿಯ ಅಧ್ಯಕ್ಷರಾಗಿ ಚುನಾಯಿತರಾದ ಮೌಲಾನ ಶಾಫಿ ಸಅದಿ ಅವರನ್ನು ಮುಜರಾಯಿ, ವಕ್ಫ್ ಸಚಿವೆ ಶಶಿಕಲಾ ಜೊಲ್ಲೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ಮತ್ತು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ಅಭಿನಂದಿಸಿದರು.

ಬಿಜೆಪಿಯ ಮೌಲಾನ ಶಾಫಿ ವಕ್ಫ್‌ಗೆ ಆಯ್ಕೆ

ಬೆಂಗಳೂರು: ರಾಜ್ಯ ವಕ್ಫ್ ಮಂಡಳಿಯ ಅಧ್ಯಕ್ಷರಾಗಿ ಬಿಜೆಪಿ ಅಭ್ಯರ್ಥಿ ಮೌಲಾನ ಶಾಫಿ ಸಅದಿ ಚುನಾಯಿತರಾಗಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಬುಧವಾರ ಚುನಾವಣೆ ನಡೆಯಿತು. ಒಟ್ಟು 10 ಮಂದಿ ಸದಸ್ಯರಲ್ಲಿ 6 ಮಂದಿ ಬಿಜೆಪಿ ಅಭ್ಯರ್ಥಿ ಪರವಾಗಿ ಮತ ಚಲಾಯಿಸಿದರು. ಕಾಂಗ್ರೆಸ್ ಅಭ್ಯರ್ಥಿಗೆ 4 ಮತಗಳು ಲಭಿಸಿದವು ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ತಿಳಿಸಿದರು.

ಈ ಮೂಲಕ ರಾಜ್ಯದಲ್ಲಿ ಮೊದಲ ಬಾರಿಗೆ ವಕ್ಫ್‌ಗೆ ಬಿಜೆಪಿ ಅಭ್ಯರ್ಥಿ ಗೆಲುವು ಸಾಧಿಸಿದ್ದಾರೆ. ದಕ್ಷಿಣ ಕನ್ನಡ ಮೂಲದ ಮೌಲಾನ ಶಾಫಿ ಸಅದಿ ಅವರನ್ನು ಅವಿರೋಧವಾಗಿ ಆಯ್ಕೆ ಮಾಡುವ ಪ್ರಸ್ತಾಪವನ್ನು ಬಿಜೆಪಿ ಮುಂದಿಟ್ಟಿತ್ತು. ಕಾಂಗ್ರೆಸ್ ಒಪ್ಪದ ಕಾರಣ ಚುನಾವಣೆ ನಡೆಯಿತು. ಹಿಂದೆ ಹಜ್ ಸಮಿತಿ ಅಧ್ಯಕ್ಷತೆಯನ್ನೂ ಬಿಜೆಪಿಯೇ ಗೆದ್ದಿತ್ತು ಎಂದು ಅವರು ಹೇಳಿದರು.

ಪಿಎಚ್‌.ಡಿ ಪದವಿ

ಬೆಂಗಳೂರು: ಜೈನ್ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಸಂತೋಷ್ ಕುಮಾರ್ ಆರ್.ಎಂ. ಅವರಿಗೆ ಪಿಎಚ್.ಡಿ. ಪದವಿ ನೀಡಲಾಗಿದೆ.

'ಕೊರಟಿ ಶ್ರೀನಿವಾಸರಾವ್ ಅವರ ಸಣ್ಣ ಕಥೆಗಳು ವಿಭಿನ್ನ ನೆಲೆಗಳು' ಶೀರ್ಷಿಕೆ ಅಡಿಯಲ್ಲಿ ಮಂಡಿಸಿದ ಪ್ರಬಂಧಕ್ಕೆ ಈ ಪದವಿ ನೀಡಲಾಗಿದೆ. ಡಾ.ಕೆ. ಗೋಕುಲನಾಥ್ ಅವರು ಸಂತೋಷ್ ಕುಮಾರ್ ಅವರಿಗೆ ಮಾರ್ಗದರ್ಶನ ಮಾಡಿದ್ದರು.

ಡ್ರ್ಯಾಗರ್‌ನಿಂದ ಇನ್‌ಸ್ಪೆಕ್ಟರ್ ಮೇಲೆ ಹಲ್ಲೆ: ರೌಡಿ ಕಾಲಿಗೆ ಗುಂಡೇಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡ್ರ್ಯಾಗರ್‌ನಿಂದ ಇನ್‌ಸ್ಪೆಕ್ಟರ್ ಮೇಲೆ ಹಲ್ಲೆ ನಡೆಸಿ ಪರಾರಿಯಾಗಲು ಯತ್ನಿಸಿದ್ದ ರೌಡಿಶೀಟರ್ ಪಳನಿ ಯಾನೆ ಕರ್ಚೀಫ್ ಪಳನಿ (35) ಎಂಬಾತನನ್ನು ಸಿಸಿಬಿ ಪೊಲೀಸರು ಕಾಲಿಗೆ ಗುಂಡೇಟು ಹೊಡೆದು ಬಂಧಿಸಿದ್ದಾರೆ.



ರೌಡಿ ಪಳನಿ

'ಕೆಲ ತಿಂಗಳ ಹಿಂದೆ ಬೆಳ್ಳಂದೂರಿನಲ್ಲಿ ಮುನ್ನಾಕುಮಾರ್ ಎಂಬಾತನ ಕೊಲೆಯಾಗಿತ್ತು. ಆ ಪ್ರಕರಣದ ಪ್ರಮುಖ ಆರೋಪಿಯಾಗಿದ್ದ ಪಳನಿ, ಅಶೋಕ ನಗರ ಠಾಣೆ ವ್ಯಾಪ್ತಿಯ ಹೊಸೂರು ರಸ್ತೆಯ ಸ್ಮಶಾನದ ಬಳಿ ಅಡಗಿರುವ ಮಾಹಿತಿ ಲಭಿಸಿತ್ತು. ಆತನ ಚಲನವಲನಗಳ ಮೇಲೆ ನಿಗಾ ಇಡಲಾಗಿತ್ತು. ಆತ ಅಲ್ಲಿ ಇರುವುದು ಖಾತರಿಯಾದ ನಂತರ ಸಿಸಿಬಿ ಎಸಿಪಿ ಪರಮೇಶ್ವರ್ ನೇತೃತ್ವದ ತಂಡವು ಮಂಗಳವಾರ ತಡರಾತ್ರಿ ಸ್ಥಳಕ್ಕೆ ಹೋಗಿ ಆತನನ್ನು ಸುತ್ತುವರಿದಿತ್ತು. ಪೊಲೀಸರನ್ನು ಕಂಡೊಡನೆ ಆತ ಓಡಿಹೋಗಲು ಯತ್ನಿಸಿದ್ದ. ಶರಣಾಗುವಂತೆ ಹೇಳಿದರೂ ಕೇಳಲಿಲ್ಲ. ಆತನ ಬೆನ್ನಟ್ಟಿದ್ದ ಇನ್‌ಸ್ಪೆಕ್ಟರ್ ಹರೀಶ್‌ಕುಮಾರ್ ಅವರ ಎಡಗೈಗೆ ಡ್ರ್ಯಾಗರ್‌ನಿಂದ ತಿವಿದಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

'ಆತ ಓಡಿಹೋಗಲು ಮುಂದಾದಾಗ ಎಸಿಪಿ ಅವರು ಗಾಳಿಯಲ್ಲಿ ಒಂದು ಸುತ್ತು ಗುಂಡು ಹಾರಿಸಿದರು. ಅದನ್ನೂ ಲೆಕ್ಕಿಸದೆ ಆತ ತನ್ನನ್ನು ಬಂಧಿಸಲು ಮುಂದಾದ ಸಿಬ್ಬಂದಿ ಮೇಲೆ ಹಲ್ಲೆ ನಡೆಸಲು ಪ್ರಯತ್ನಿಸಿದ. ಹೀಗಾಗಿ ಆತ್ಮರಕ್ಷಣೆಗಾಗಿ ಆತನ ಕಾಲಿಗೆ ಗುಂಡೇಟು ಹೊಡೆದು ಬಂಧಿಸಲಾಯಿತು. ಗಾಯಗೊಂಡಿರುವ ಇನ್‌ಸ್ಪೆಕ್ಟರ್ ಅವರನ್ನು ಬೌರಿಂಗ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಆರೋಪಿಗೂ ಅದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆ' ಎಂದು ಹೇಳಿದ್ದಾರೆ.

'2013ರಲ್ಲಿ ಆನೆಪಾಳ್ಯದಲ್ಲಿ ನಡೆದಿದ್ದ ಲೋಕಿ ಎಂಬಾತನ ಹತ್ಯೆಯಲ್ಲಿ ಪಳನಿ ಪಾತ್ರವಿತ್ತು. ರೌಡಿಶೀಟರ್ ಬಬ್ಲಿ ಜೊತೆ ಒಡನಾಟ ಹೊಂದಿದ್ದ ಪಳನಿ ವಿರುದ್ಧ ನಗರದ ವಿವಿಧ ಠಾಣೆಗಳಲ್ಲಿ ಮೂರು ಕೊಲೆ, ಎರಡು ಕೊಲೆ ಯತ್ನ ಪ್ರಕರಣಗಳು ದಾಖಲಾಗಿದ್ದವು' ಎಂದು ಮಾಹಿತಿ ನೀಡಿದ್ದಾರೆ.

ಉದ್ಯಮಿ ಮನೆಯಲ್ಲಿ ₹47 ಲಕ್ಷ ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಮಿ ಶ್ರೀಧರ್ ಎಂಬುವರ ಮನೆಗೆ ನುಗ್ಗಿ ₹47 ಲಕ್ಷ ನಗದು ಹಾಗೂ 150 ಗ್ರಾಂ ಚಿನ್ನಾಭರಣ ಕಳವು ಮಾಡಲಾಗಿದೆ. ಈ ಸಂಬಂಧ ಬಾಣಸವಾಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಭದ್ರತಾ ಸಿಬ್ಬಂದಿಯಾಗಿದ್ದ ನೇಪಾಳದ ವಿಷ್ಣು, ಕಳ್ಳತನ ನಡೆದ ದಿನದಿಂದ ಕೆಲಸಕ್ಕೆ ಗೈರು ಆಗಿದ್ದಾನೆ. ಆತನೇ ಕೃತ್ಯ ಎಸಗಿರಬಹುದೆಂಬ ಅನುಮಾನವಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಕಮ್ಮನಹಳ್ಳಿ ಮುಖ್ಯರಸ್ತೆಯ ನಿವಾಸಿಯಾಗಿರುವ ಶ್ರೀಧರ್ ಅವರ ಮನೆಯಲ್ಲಿ ವಿಷ್ಣು ಎರಡು ತಿಂಗಳ ಹಿಂದೆ ಕೆಲಸಕ್ಕೆ ಸೇರಿದ್ದ. ಮನೆಯವರೆಲ್ಲಾ ಕಾರ್ಯಕ್ರಮವೊಂದರ ನಿಮಿತ್ತ ಹೊರಗೆ ಹೋದಾಗ ಮಲಗುವ ಕೋಣೆಯ ಬೀರುವಿನಲ್ಲಿ ಇಟ್ಟಿದ್ದ ನಗದು ಹಾಗೂ ಚಿನ್ನಾಭರಣ ಕಳುವು ಮಾಡಿಕೊಂಡು ಪರಾರಿಯಾಗಿರುವ ಸಾಧ್ಯತೆ ಇದೆ' ಎಂದು ಹೇಳಿದ್ದಾರೆ.

'ತಂತ್ರಜ್ಞಾನ– ಸಂಶೋಧನೆ ಕ್ಷೇತ್ರದಲ್ಲಿ ಹೆಚ್ಚು ಹೂಡಿಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಂತ್ರಜ್ಞಾನ ಮತ್ತು ಸಂಶೋಧನಾ ಕ್ಷೇತ್ರಗಳಲ್ಲಿ ಹೆಚ್ಚು ಬಂಡವಾಳ ಹೂಡಿಕೆ ಮಾಡಿದರೆ ದೇಶದ ಭವಿಷ್ಯ ಸುಭದ್ರವಾಗಲಿದೆ ಎಂದು ನೊಬೆಲ್ ಪುರಸ್ಕೃತ ವಿಜ್ಞಾನಿ ವೆಂಕಿ ರಾಮಕೃಷ್ಣನ್ ಪ್ರತಿಪಾದಿಸಿದರು.

ಬೆಂಗಳೂರು ತಂತ್ರಜ್ಞಾನ ಶೃಂಗದಲ್ಲಿ ನಡೆದ ವಿದ್ವತ್ ಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗ ಭಾರತದಲ್ಲಿ ಸಂಶೋಧನೆಗಳಿಗೆ ಜಿಡಿಪಿಯ ಶೇ 0.8ರಷ್ಟು ಮಾತ್ರ ಹೂಡಿಕೆಯಾಗುತ್ತಿದೆ. ಇದು ಕೊರಿಯಾ, ಜಪಾನ್ ಮತ್ತಿತರ ದೇಶಗಳಿಗೆ ಹೋಲಿಸಿದರೆ ಶೇ 25ಕ್ಕಿಂತ ಕಡಿಮೆ ಇದೆ. ಆದರೂ ಇತ್ತೀಚಿನ ವರ್ಷಗಳಲ್ಲಿ ಹೂಡಿಕೆ ಹೆಚ್ಚುತ್ತಿರುವುದು ಸಮಾಧಾನಕರ ಎಂದರು.

ಗೂಗಲ್, ಮೈಕ್ರೊಸಾಫ್ಟ್‌ನಂತಹ ಖಾಸಗಿ ಸಂಸ್ಥೆಗಳು ಕೂಡಾ ಸಂಶೋಧನಾ ಕ್ಷೇತ್ರದಲ್ಲಿ ಹೂಡಿಕೆ ಮಾಡುತ್ತಿವೆ. ಸಂಶೋಧನೆ ಮತ್ತು ತಂತ್ರಜ್ಞಾನ ಪರಸ್ಪರ ಪೂರಕ. ಯಾವುದೇ ದೇಶದ ಬೆಳವಣಿಗೆಯು ಅಲ್ಲಿನ ನೈಸರ್ಗಿಕ ಸಂಪನ್ಮೂಲಗಳಿಗಿಂತ ಜ್ಞಾನ ಮತ್ತು ಸಂಶೋಧನೆ ಮೇಲೆ ಅವಲಂಬಿತವಾಗಿರುತ್ತದೆ. ತಂತ್ರಜ್ಞಾನ ಮತ್ತು ಸಂಶೋಧನೆಗಳಿಗೆ ಹೆಚ್ಚು ತೆರೆದುಕೊಂಡಿಲ್ಲದ ರಾಷ್ಟ್ರಗಳು ಅಭಿವೃದ್ಧಿ ಹೊಂದಿಲ್ಲ ಎಂದು ಅವರು ಹೇಳಿದರು.

ಭಾರತದಲ್ಲಿ 5 ಕೋಟಿ ಸ್ಮಾರ್ಟ್‌ಫೋನ್ ಬಳಕೆದಾರರಿದ್ದರು. ಈಗ ಆ ಸಂಖ್ಯೆ 8.20 ಕೋಟಿಗೆ ಏರಿಕೆಯಾಗಿದೆ. ಅಲ್ಲದೆ, ಭಾರತ ಸರ್ಕಾರ ಕೇವಲ 278 ದಿನಗಳಲ್ಲಿ 100 ಕೋಟಿ ಕೋವಿಡ್ ಲಸಿಕೆ ನೀಡಿರುವುದು ಮಹತ್ತರ ಸಾಧನೆ ಎಂದು ರಾಮಕೃಷ್ಣನ್ ಮೆಚ್ಚುಗೆ ವ್ಯಕ್ತಪಡಿಸಿದರು.

ಬಯೋಕಾನ್ ಸಂಸ್ಥಾಪಕಿ ಕಿರಣ್ ಮಜುಂದಾರ್ ಷಾ ಅವರು ನೊಬೆಲ್ ಪುರಸ್ಕೃತ ವಿಜ್ಞಾನಿ ವೆಂಕಿ ರಾಮಕೃಷ್ಣನ್ ಅವರ ಬದುಕು-ಸಾಧನೆಗಳ ಕಿರುಪರಿಚಯ ಮಾಡಿದರು.

ದೇಶಿ ನವೋದ್ಯಮಗಳಿಗೆ ಅಂತರರಾಷ್ಟ್ರೀಯ ಹೂಡಿಕೆ

ಬೆಂಗಳೂರು: ತಂತ್ರಜ್ಞಾನದ ಲಭ್ಯತೆ, ಭವಿಷ್ಯದ ತಾಂತ್ರಿಕತೆಯಾಗಿರುವ ಕೃತಕ ಬುದ್ಧಿಮತ್ತೆ ಮತ್ತು ಮೆಷಿನ್ ಲರ್ನಿಂಗ್‌ಗೆ ಮತ್ತಷ್ಟು ಬೇಡಿಕೆ ಇರಲಿದೆ. ವಿದ್ಯಾರ್ಥಿಗಳಿಗೆ ಕೇವಲ ಪರೀಕ್ಷೆ ಎನ್ನುವುದು ಮುಖ್ಯವಾಗಬಾರದು, ಅದರ ಬದಲು ಹೊಸ ವಿಚಾರ ಕಲಿತುಕೊಳ್ಳುವುದು ಮುಖ್ಯವಾಗಬೇಕು ಎಂದು ಸಿಲ್ವಂಟ್ ಅಡ್ವೈಸರ್ಸ್‌ನ ನಿರ್ದೇಶಕ ಆನಂದ್ ಸುದರ್ಶನ್ ಅಭಿಪ್ರಾಯಪಟ್ಟರು.

ಬೆಂಗಳೂರು ತಂತ್ರಜ್ಞಾನ ಶೃಂಗ-2021ರಲ್ಲಿ ಬುಧವಾರ ನಡೆದ 'ಎಜುಟೆಕ್: ಉತ್ಪ್ರೇಕ್ಷೆಯೋ ಅಥವಾ ವಾಸ್ತವವೋ?' ಎಂಬ ಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ದೇಶದ ಶೈಕ್ಷಣಿಕ ನವೋದ್ಯಮಗಳಿಗೆ ಈ ಅವಧಿಯಲ್ಲಿ ಹೆಚ್ಚಿನ ಮನ್ನಣೆ ದೊರೆಯಿತು. ಬಹಳಷ್ಟು ನವೋದ್ಯಮಗಳು ದೊಡ್ಡ ಮಟ್ಟದ ಕಂಪನಿಯಾಗಿ ಹೊರಹೊಮ್ಮಿದವು. ಅಂತರರಾಷ್ಟ್ರೀಯ ಹೂಡಿಕೆ ಕೂಡ ಭಾರತದ ಶೈಕ್ಷಣಿಕ ನವೋದ್ಯಮಗಳಿಗೆ ಲಭ್ಯವಾಯಿತು ಎಂದರು.

ಸಿಂಪ್ಲಿಲರ್ನ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೃಷ್ಣಕುಮಾರ್ ಮಾತನಾಡಿ, ಮುಂದಿನ ಹತ್ತು ವರ್ಷಗಳಲ್ಲಿ ಶೈಕ್ಷಣಿಕ ರಂಗದಲ್ಲಿ ಉತ್ತಮ ಅವಕಾಶಗಳು ಲಭ್ಯವಾಗಲಿದೆ. ಬಹುಭಾಷೆಯ ಕಲಿಕಾ ಕ್ರಮ ಮತ್ತು ಸಾಧ್ಯತೆಗಳು ಭಾರತದಲ್ಲಿ ಅಧಿಕ ಪ್ರಮಾಣದಲ್ಲಿ ದೊರೆಯಲಿದೆ ಎಂದರು.

ಅಮೆಜಾನ್ ವೆಬ್ ಸರ್ವೀಸಸ್‌ನ ಎಜುಕೇಶನ್, ಸ್ಪೇಸ್ ಮತ್ತು ಎನ್‌ಪಿಒ ದಕ್ಷಿಣ ಏಷ್ಯಾ ಮುಖ್ಯಸ್ಥ ಸುನಿಲ್ ಪಿಪಿ ಮಾತನಾಡಿ, ಜಾಗತಿಕ ಮಟ್ಟದ ತಂತ್ರಜ್ಞಾನ ಆಧಾರಿತ ವ್ಯವಸ್ಥೆ ಭಾರತದಲ್ಲಿ ಅಳವಡಿಕೆಯಾಗುತ್ತಿದೆ. ಕ್ಯಾಂಪಸ್ ಅಟೋಮೋಟೇಶನ್, ಕನೆಕ್ಟೆಡ್ ಕ್ಲಾಸಸ್‌ನಂತಹ ಹೊಸ ವಿಚಾರಗಳು ಇಂದು ಸಾಧ್ಯವಾಗಿರುವುದು ಉತ್ತಮ ಬೆಳವಣಿಗೆ ಎಂದರು.

ಒನ್ ಬ್ರಿಡ್ಜ್‌ನ ಸ್ಥಾಪಕ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮದನ್ ಪದಕಿ ಈ ಗೋಷ್ಠಿಯನ್ನು ನಿರ್ವಹಿಸಿದರು.

ಅಮೆರಿಕದ ಮೆಸಾಚ್ಯುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಪ್ರಾಧ್ಯಾಪಕ ಡಾ.ರಾಬರ್ಟ್ ಲ್ಯಾಂಗರ್ ಅಭಿಮತ

'ಲಸಿಕೆ ಉತ್ಪಾದನೆ ಹೆಚ್ಚಳ ಸವಾಲಿನ ವಿಷಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಲಸಿಕೆಗಳನ್ನು ಕಂಡುಹಿಡಿದು ವರ್ಷ ಕಳೆದ ಬಳಿಕವೂ ಅನೇಕ ಬಡರಾಷ್ಟ್ರಗಳ ಜನರಿಗೆ ಇನ್ನೂ ಲಸಿಕೆ ತಲುಪಿಲ್ಲ. ಎಲ್ಲರಿಗೂ ಲಸಿಕೆ ನೀಡಬೇಕಾದರೆ ಸ್ಥಳೀಯವಾಗಿ ಉತ್ಪಾದಿಸಲು ಅವಕಾಶ ನೀಡಬೇಕಾಗುತ್ತದೆ. ಆದರೆ, ಯಾವುದೇ ಲೋಪಗಳಾಗದಂತೆ ಲಸಿಕೆ ಉತ್ಪಾದಿಸುವುದು ಸವಾಲಿನ ವಿಷಯ ಎನ್ನುತ್ತಾರೆ ಮೊಡೆರ್ನಾ ಲಸಿಕೆಯನ್ನು ಅಭಿವೃದ್ಧಿಪಡಿಸಿರುವ ಅಮೆರಿಕದ ಮೆಸಾಚ್ಯುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ (ಎಂಐಟಿ) ಪ್ರಾಧ್ಯಾಪಕ ಡಾ.ರಾಬರ್ಟ್ ಎಸ್.ಲ್ಯಾಂಗರ್.

ಬೆಂಗಳೂರು ತಂತ್ರಜ್ಞಾನ ಶೃಂಗ 2021ದಲ್ಲಿ ಬಯೋಕಾನ್ ಸಂಸ್ಥೆಯ ಕಿರಣ್ ಮುಜುಂದಾರ್ ಷಾ ನಡೆಸಿಕೊಟ್ಟ ಸಂವಾದದಲ್ಲಿ ಬುಧವಾರ ಅವರು ಎಂ-ಆರ್‌ಎನ್‌ಎ ಆಧರಿತ ಲಸಿಕೆ ಅಭಿವೃದ್ಧಿ ಕುರಿತು ಅಭಿಪ್ರಾಯ ಹಂಚಿಕೊಂಡರು.

ಎಲ್ಲರಿಗೂ ಲಸಿಕೆ ತಲುಪಿಸುವ ಬಗೆ ಹೇಗೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಲ್ಯಾಂಗರ್, 'ಕೋವಿಡ್ ವೈರಾಣುಗಳನ್ನು ನಿಷ್ಕ್ರಿಯಗೊಳಿಸುವಲ್ಲಿ ಎಂ-ಆರ್‌ಎನ್‌ಎ ಆಧರಿತ ಲಸಿಕೆ ತುಂಬಾ ಪ್ರಯೋಜನಕಾರಿ. ಇವು ತ್ವರಿತವಾಗಿ ಪರಿಣಾಮ ಬೀರಬಲ್ಲವು. ಲಸಿಕೆಯನ್ನು ಸ್ಥಳೀಯವಾಗಿ ಉತ್ಪಾದಿಸಲು ಅವಕಾಶ ನೀಡುವುದು ದೊಡ್ಡ ವಿಚಾರವಲ್ಲ. ಲಸಿಕೆ ತಯಾರಿಸಲು ವೈವಿಧ್ಯಮಯ ಎಂ-ಆರ್‌ಎನ್‌ಎಗಳ ಅಗತ್ಯವಿದೆ. ಅವುಗಳ ಪರಿಶುದ್ಧತೆ ಕಾಪಾಡುವುದು, ಲಸಿಕೆ ಕಲುಷಿತಗೊಳ್ಳದಂತೆ ನೋಡಿಕೊಳ್ಳುವುದು ಸವಾಲಿನ ಕೆಲಸ' ಎಂದರು.

'ಉತ್ಕೃಷ್ಟ ಘಟಕಗಳನ್ನು ಬೇರೆ ಬೇರೆ ದೇಶಗಳಲ್ಲಿ ಸ್ಥಾಪಿಸಬೇಕು ಎಂಬುದು ನಮ್ಮ ಆಶಯವೂ ಕೂಡ. ದುರದೃಷ್ಟವಶಾತ್ ಅದು ಸಾಧ್ಯವಾಗುತ್ತಿಲ್ಲ. ಲಸಿಕೆ ತಯಾರಿಸುವ ಪ್ರಕ್ರಿಯೆಯ ಉಸ್ತುವಾರಿಗೆ ಅನುಭವಿಗಳ ಅಗತ್ಯವಿದೆ. ಇಂತಹವರ ಕೊರತೆ ಇರುವುದು ಮೊಡೆರ್ನಾ ಲಸಿಕೆಯ ಉತ್ಪಾದನೆಗೆ ವೇಗ ನೀಡಲು ಅಡ್ಡಿಯಾಗಿದೆ. ಈ ಕೊರತೆ ನೀಗಿಸಲು ವಿವಿಧ ದೇಶಗಳ ಮಾನವ ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿ ನೀಡಬೇಕಾಗುತ್ತದೆ' ಎಂದರು.

'ನಾವು ಮೂಲ ಸಂಶೋಧನೆಗೆ ಒತ್ತು ನೀಡುತ್ತೇವೆ. ಇದರಲ್ಲಿ ಯಶಸ್ಸು ಕಾಣಬೇಕಾದರೆ ಸಾಕಷ್ಟು ತಾಳ್ಮೆ ವಹಿಸಬೇಕಾಗುತ್ತದೆ. ಯಾವುದೋ ಒಂದು ಸಂಶೋಧನೆಯು ನಿಮಗೆ ಅನಿರೀಕ್ಷಿತ ಯಶಸ್ಸನ್ನು ತಂದುಕೊಡಬಲ್ಲುದು' ಎಂದು ವಿವರಿಸಿದರು.

ಭಾರತದಲ್ಲಿ ವೈಜ್ಞಾನಿಕ ಸಂಶೋಧನೆಗೆ ಉತ್ತೇಜನಕಾರಿ ವಾತಾವರಣ ನಿರ್ಮಿಸುವ ಕುರಿತು ಪ್ರತಿಕ್ರಿಯಿಸಿದ ಅವರು, 'ಅಮೆರಿಕದಲ್ಲಿ ಉತ್ತಮ ವಿಶ್ವವಿದ್ಯಾಲಯಗಳಿವೆ. ಉತ್ತಮ ಮೂಲಸೌಕರ್ಯಗಳಿವೆ. ಪೇಟೆಂಟ್‌ಗೆ ಸಂಬಂಧಿಸಿದಂತೆ ಕಟ್ಟುನಿಟ್ಟಿನ ನಿಯಮಗಳಿವೆ. ಇವಷ್ಟೇ ಸಾಲದು. ಯಾವುದಾದರೂ ಮಹತ್ತರ ಸಂಶೋಧನೆಗೆ ಹೂಡಿಕೆ ಮಾಡಿದರೆ ಅದನ್ನು ಮರಳಿ ಪಡೆಯುವಂತಹ ವ್ಯವಸ್ಥೆ ಕಲ್ಪಿಸುವ ವ್ಯವಸ್ಥೆ ಇಲ್ಲಿದೆ' ಎಂದರು.

> **ಸಂಶೋಧನೆಯಲ್ಲಿ ತೊಡಗಿರುವವರು ಹಣ ಗಳಿಕೆಯ ಆಶಯ ಬದಿಗಿಟ್ಟು ಜಗತ್ತಿಗೆ ಏನನ್ನಾದರೂ ಉತ್ತಮ ಕೊಡುಗೆ ನೀಡಬೇಕೆಂಬ ತುಡಿತವನ್ನು ಹೊಂದಿರಬೇಕು**
>
> **ಡಾ.ರಾಬರ್ಟ್ ಎಸ್.ಲ್ಯಾಂಗರ್**
> ಮೊಡೆರ್ನಾ ಲಸಿಕೆ ಸಂಶೋಧಿಸಿದ ಎಂಐಟಿ ಪ್ರಾಧ್ಯಾಪಕ

'ಸಂಶೋಧನಾ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆ'

'ಕೃತಕ ಬುದ್ಧಿಮತ್ತೆ, ದತ್ತಾಂಶ ವಿಶ್ಲೇಷಣೆ ಮುಂತಾದ ಅತ್ಯಾಧುನಿಕ ಬೆಳವಣಿಗೆಗಳಿಂದ ವೈದ್ಯಕೀಯ ಸಂಶೋಧನಾ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆಗಳಾಗಿವೆ. ಅಣುಗಳ ರಾಸಾಯನಿಕ ಸಂರಚನೆ ಸ್ಪಷ್ಟವಾಗಿ ತಿಳಿದುಕೊಳ್ಳುವುದಕ್ಕೆ ಇವು ಅನುಕೂಲ ಕಲ್ಪಿಸಿವೆ. ಸಂಶೋಧನೆಗಳಿಗೆ ಇವು ಹೊಸ ದಿಸೆ ತೋರಿಸಿವೆ' ಎಂದು ಡಾ.ರಾಬರ್ಟ್ ಲ್ಯಾಂಗರ್ ಅಭಿಪ್ರಾಯಪಟ್ಟರು.



ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಸರ್ಕಾರದ ಜಾಹೀರಾತು ಸಂಸ್ಥೆಯಾದ ಮಾರ್ಕೆಟಿಂಗ್ ಕಮ್ಯುನಿಕೇಷನ್ಸ್ ಆ್ಯಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ (ಎಂ.ಸಿ.ಎ) ₹ 1ಕೋಟಿ ದೇಣಿಗೆ ನೀಡಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಎಂ.ಸಿ.ಎ. ಅಧ್ಯಕ್ಷ ಸಿ.ಮುನಿಕೃಷ್ಣ (ಬಲದಿಂದ ಎರಡನೆಯವರು) ಗುರುವಾರ ಚೆಕ್ ಹಸ್ತಾಂತರಿಸಿದರು. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಸಿದ್ಧಲಿಂಗಪ್ಪ ಪೂಜಾರ್ (ಬಲತುದಿ) ಹಾಗೂ ನಿರ್ದೇಶಕರು ಇದ್ದಾರೆ

'ವಂಶವಾಹಿ ತಿದ್ದುವಿಕೆ – ಸ್ಪಷ್ಟ ಮಾರ್ಗಸೂಚಿ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಂಶವಾಹಿ ತಿದ್ದುವಿಕೆಗೆ (ಜೀನ್ ಎಡಿಟಿಂಗ್) ಸಂಬಂಧಿಸಿದಂತೆ ಕೇಂದ್ರ ಸರ್ಕಾರ ರೂಪಿಸಿರುವ ಮಾರ್ಗಸೂಚಿಗಳಲ್ಲಿ ಸ್ಪಷ್ಟತೆ ಇಲ್ಲ. ಇವುಗಳನ್ನು ಇನ್ನಷ್ಟು ನಿಖರಗೊಳಿಸುವ ಅಗತ್ಯವಿದೆ ಎಂದು ತಜ್ಞರು ಅಭಿಪ್ರಾಯಪಟ್ಟರು.

ಬೆಂಗಳೂರು ತಂತ್ರಜ್ಞಾನ ಶೃಂಗ 2021ರಲ್ಲಿ ಬುಧವಾರ ಬೆಳೆಗಳ ಪುನರುಜ್ಜೀವನ, ಚಿಕಿತ್ಸಾ ವಿಧಾನ, ನಿಖರತೆ ಜೈವಿಕವಿಜ್ಞಾನ ಮತ್ತು ಪರಿಸರ ಸಂರಕ್ಷಣೆ ಕುರಿತ ಸಂವಾದದಲ್ಲಿ ಮಾತನಾಡಿದ ತಕ್ಷಶಿಲಾ ಸಂಸ್ಥೆಯ ಸಂಶೋಧನಾ ವಿಭಾಗದ ಮುಖ್ಯಸ್ಥೆ ಡಾ.ಶಾಂಭವಿ ನಾಯಕ್, 'ಚಿಕಿತ್ಸೆ ಹಾಗೂ ಕ್ಲಿನಿಕಲ್ ಪ್ರಯೋಗಗಳಿಗೆ ಸಂಬಂಧಿಸಿದಂತೆ 2019ರಲ್ಲಿ ಮಾರ್ಗಸೂಚಿಗಳನ್ನು ಕೇಂದ್ರ ಸರ್ಕಾರ ರೂಪಿಸಿದೆ. ಆದರೆ, ಈ ಕುರಿತ ನಿಖರ ಕಾಯ್ದೆಗಳಿಲ್ಲ. ಸಮಸ್ಯೆ ಏನೆಂದರೆ, ಈ ಮಾರ್ಗಸೂಚಿಗಳಲ್ಲಿ ಚಿಕಿತ್ಸೆ ಎಂದರೆ ಏನು, ಕಾಯಿಲೆ ಎಂದರೆ ಏನು ಎಂಬ ಬಗ್ಗೆಯೇ ಸ್ಪಷ್ಟ ವ್ಯಾಖ್ಯಾನಗಳಿಲ್ಲ' ಎಂದು ಬೊಟ್ಟುಮಾಡಿದರು.

'ವಂಶವಾಹಿಗಳ ತಿದ್ದುವಿಕೆಗೆ ಸಂಬಂಧಿಸಿದ ಮಾರ್ಗಸೂಚಿಗಳಲ್ಲೂ ಅಸ್ಪಷ್ಟತೆಗಳಿವೆ. ಚಿಕಿತ್ಸೆಗಳ ದೀರ್ಘಕಾಲಿಕ ಪರಿಣಾಮಗಳನ್ನು ನಿಭಾಯಿಸುವ ಕುರಿತೂ ಮಾರ್ಗಸೂಚಿಗಳು ಮೌನ ವಹಿಸಿವೆ. ಈ ವಿಚಾರದಲ್ಲಿ ಅನೇಕ ನೈತಿಕ ಪ್ರಶ್ನೆಗಳಿಗೂ ಉತ್ತರ ಹುಡುಕಬೇಕು. ಉದಾಹರಣೆಗೆ ಭಾರತೀಯರ ಚರ್ಮದ ಬಣ್ಣವನ್ನು ಮಾರ್ಪಡಿಸುವಂತಹ ಸಂಶೋಧನೆಗಳು ನೈತಿಕವೇ ಅನೈತಿಕವೇ ಎಂಬ ಗೊಂದಲವಿದೆ. ಈ ಬಗ್ಗೆ ಇನ್ನಷ್ಟು ಸ್ಪಷ್ಟತೆಯ ಅಗತ್ಯವಿದೆ' ಎಂದು ಅವರು ಅಭಿಪ್ರಾಯಪಟ್ಟರು.

'ಇಂತಹ ಸಂಶೋಧನೆಗಳಿಗೆ ಸಂಬಂಧಿಸಿದಂತೆ ಸರ್ಕಾರ ಉತ್ತೇಜಿಸುವ ಪಾತ್ರ ನಿಭಾಯಿಸಬೇಕೇ ಹೊರತು ನಿಯಂತ್ರಕನ ಪಾತ್ರವನ್ನಲ್ಲ' ಎಂದರು.

ಕ್ರಿಸ್ಪರ್‌ಬಿಟ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ವಿಜ್ಞಾನಿ ಡಾ.ವೈಜಯಂತಿ ಗುಪ್ತ, 'ಹೊಸ ಉತ್ಪನ್ನಗಳ ಪರವಾನಗಿ ವ್ಯವಸ್ಥೆಗೆ ಸಂಬಂಧಿಸಿದ ಅಡ್ಡಿ ಆತಂಕಗಳನ್ನೂ ನಿವಾರಿಸಬೇಕಿದೆ. ಪೇಟೆಂಟ್‌ಗಳಿಗೆ ಸಂಬಂಧಿಸಿದ ಕಾನೂನುಗಳನ್ನೂ ಒಂದೊಂದು ದೇಶದಲ್ಲಿ ಒಂದೊಂದು ರೀತಿ ವ್ಯಾಖ್ಯಾನಿಸಲಾಗುತ್ತದೆ. ಇವುಗಳಿಗೆ ಸಂಬಂಧಿಸಿದ ಗೊಂದಲ ನಿವಾರಣೆಗೂ ಸರ್ಕಾರ ಪ್ರಯತ್ನಿಸಬೇಕು' ಎಂದರು.

ನ್ಯಾಷನಲ್ ಅಗ್ರಿ- ಫುಡ್ ಬಯೋಟೆಕ್ನಾಲಜಿ ಇನ್‌ಸ್ಟಿಟ್ಯೂಟ್‌ನ ವಿಜ್ಞಾನಿ ಡಾ.ಸಿದ್ಧಾರ್ಥ, 'ವಂಶವಾಹಿ ತಿದ್ದುಪಡಿಗೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ಕೇಂದ್ರ ಇನ್ನೂ ಅಂತಿಮಗೊಳಿಸಿಲ್ಲ. ಅನೇಕ ವಿಜ್ಞಾನಿಗಳು ಈಗಾಗಲೇ ಈ ತಂತ್ರಜ್ಞಾನ ಬಳಸುತ್ತಿದ್ದಾರೆ. ಇವುಗಳ ನಿಯಂತ್ರಣಕ್ಕೆ ಸಂಬಂಧಿಸಿದ ಕೇಂದ್ರವು ತ್ವರಿತವಾಗಿ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

ಇನ್‌ಸ್ಟೆಮ್ ಬೆಂಗಳೂರು ಸಂಸ್ಥೆಯ ಆಕರಕೋಶಗಳ ಸಂಶೋಧನಾ ಕೇಂದ್ರದ (ಸಿಎಸ್‌ಸಿಆರ್) ಸಹಾಯಕ ಸಂಶೋಧಕ ಡಾ.ಸರವಣಭವನ ತಂಗವೇಲು, 'ಆಕರಕೋಶ ಚಿಕಿತ್ಸೆಗೆ ಒಲವು ಹೆಚ್ಚುತ್ತಿದೆ. ಆದರೆ, ಇದು ದುಬಾರಿ. ಕಡುಬಡವರು ಈ ಚಿಕಿತ್ಸೆಯ ಸೌಲಭ್ಯದಿಂದ ವಂಚಿತರಾಗಬೇಕಿದೆ. ಕೇರಳ, ತಮಿಳುನಾಡಿನ ಸರ್ಕಾರಗಳು ಈ ಚಿಕಿತ್ಸೆಗೆ ₹ 10 ಲಕ್ಷದವರೆಗೂ ಸಹಾಯಧನ ನೀಡುತ್ತಿವೆ. ಎಲ್ಲ ರಾಜ್ಯಗಳೂ ಈ ರೀತಿಯ ನೆರವು ಒದಗಿಸುವ ಅಗತ್ಯವಿದೆ' ಎಂದು ಹೇಳಿದರು.

'ವೈದ್ಯರ ಧೋರಣೆ ಬದಲಾಗಲಿ'

'ವೈದ್ಯಕೀಯ ಕ್ಷೇತ್ರದ ಆಧುನಿಕ ಸಂಶೋಧನೆಯ ಕೂಸುಗಳಾದ ಹೊಸ ಉತ್ಪನ್ನಗಳು ಸಾಕಷ್ಟು ಸುರಕ್ಷಿತ ಹಾಗೂ ಪರಿಣಾಮಕಾರಿ. ಈ ಕುರಿತ ದಾಖಲೆಗಳನ್ನು ಹಾಜರುಪಡಿಸಿದರೂ ಇವುಗಳ ಬಳಕೆಗೆ ಉತ್ತೇಜನ ನೀಡಲು ವೈದ್ಯರು ಹಿಂದೇಟು ಹಾಕುತ್ತಾರೆ. ಈ ಮನೋಭಾವ ಬದಲಾಗಬೇಕಿದೆ' ಎಂದು ಟಾಟಾ ಮೆಡಿಕಲ್ ಆ್ಯಂಡ್ ಡಯಾಗ್ನಾಸ್ಟಿಕ್ಸ್ ಲಿಮಿಟೆಡ್ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ವ್ಯವಸ್ಥಾಪಕ ನಿರ್ದೇಶಕ ಗಿರೀಶ್ ಕೃಷ್ಣಮೂರ್ತಿ ಅಭಿಪ್ರಾಯಪಟ್ಟರು.

'ಜೀವಂತವಾಗಿರುವಾಗಲೇ ವಂಶವಾಹಿ ತಿದ್ದುವ ಕ್ರಿಸ್ಪರ್ ತಂತ್ರಜ್ಞಾನ ಬಳಕೆಗೆ ಆಳ ಅನುಭವ ಹೊಂದಿರುವವರ ಕೊರತೆ ಇದೆ. ಇಂತಹ ತಂತ್ರಜ್ಞಾನಗಳನ್ನು ತಾತ್ವಿಕವಾಗಿ ಸಾಬೀತುಪಡಿಸುವುದಕ್ಕಿಂತಲೂ ಅವುಗಳನ್ನು ಉತ್ಪನ್ನದ ರೂಪಕ್ಕಿಳಿಸುವುದು ಕಷ್ಟ' ಎಂದರು.

ವಿಧಾನಸೌಧದಲ್ಲಿ ಫಿನಾಯಿಲ್ ಕುಡಿದು ಆತ್ಮಹತ್ಯೆಗೆ ಯತ್ನ

ಬೆಂಗಳೂರು: ವಿಧಾನಸೌಧದ 2ನೇ ಮಹಡಿಗೆ ಬಂದಿದ್ದ ವ್ಯಕ್ತಿಯೊಬ್ಬರು ಸ್ಯಾನಿಟೈಸರ್ ಹಾಗೂ ಫಿನಾಯಿಲ್ ಸೇವಿಸಿ ಬುಧವಾರ ಆತ್ಮಹತ್ಯೆಗೆ ಯತ್ನಿಸಿದ್ದಾರೆ.

'ಪ್ಯಾಲೇಸ್ ಗುಟ್ಟಹಳ್ಳಿಯ ನಿವಾಸಿಯಾಗಿರುವ ನಂದಕುಮಾರ್, ಮುಖ್ಯಮಂತ್ರಿ ಪರಿಹಾರ ನಿಧಿ ಬಗ್ಗೆ ಮಾಹಿತಿ ಪಡೆಯಲು ವಿಧಾನಸೌಧಕ್ಕೆ ಸಂಜೆ ಭೇಟಿ ನೀಡಿದ್ದರು. ಈ ವೇಳೆ ಅಧಿಕಾರಿಗಳೊಂದಿಗೆ ಗಲಾಟೆ ಮಾಡಿಕೊಂಡಿದ್ದ ಅವರು ಫಿನಾಯಿಲ್ ಸೇವಿಸಿದ್ದರು. ಅಸ್ವಸ್ಥಗೊಂಡಿದ್ದ ಅವರನ್ನು ಕೂಡಲೇ ಚಿಕಿತ್ಸೆಗಾಗಿ ಬೌರಿಂಗ್ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.



ವಿದ್ಯಾರ್ಥಿಗಳು ಮೈಸೂರು ಬ್ಯಾಂಕ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಪಿಯು ಮಂಡಳಿ ನಿರ್ಧಾರ: ಎಐಡಿಎಸ್‌ಒ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದ್ವಿತೀಯ ಪಿಯುಸಿ ಮಧ್ಯವಾರ್ಷಿಕ ಪರೀಕ್ಷೆಯನ್ನು ಮಂಡಳಿಯ ಪರೀಕ್ಷೆಯಾಗಿ ನಡೆಸುವುದಾಗಿ ಪದವಿ ಪೂರ್ವ ಶಿಕ್ಷಣ ಇಲಾಖೆ ನಿರ್ದೇಶಕರು ಸುತ್ತೋಲೆ ಹೊರಡಿಸಿದ್ದಾರೆ. ಇದು ಅವೈಜ್ಞಾನಿಕ ನಡೆ. ಇದನ್ನು ಕೂಡಲೇ ಹಿಂದಕ್ಕೆ ಪಡೆಯಬೇಕು' ಎಂದು ಎಐಡಿಎಸ್‌ಒ ಬೆಂಗಳೂರು ಜಿಲ್ಲಾ ಸಮಿತಿ ಒತ್ತಾಯಿಸಿದೆ.

ಇಲಾಖೆಯ ನಿರ್ಧಾರವನ್ನು ಖಂಡಿಸಿ ಎಐಡಿಎಸ್‌ಒ ನೇತೃತ್ವದಲ್ಲಿ ನೂರಾರು ವಿದ್ಯಾರ್ಥಿಗಳು ಮೈಸೂರು ಬ್ಯಾಂಕ್ ವೃತ್ತದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು. 'ವಿದ್ಯಾರ್ಥಿಗಳ ಭವಿಷ್ಯಕ್ಕೆ ಮಾರಕವಾಗುವ ಮಧ್ಯವಾರ್ಷಿಕ ಬೋರ್ಡ್ ಪರೀಕ್ಷೆ ಬೇಡವೇ ಬೇಡ', 'ಮಧ್ಯವಾರ್ಷಿಕ ಬೋರ್ಡ್ ಪರೀಕ್ಷೆಯ ಹಠಾತ್ ಹೇರಿಕೆ ಬೇಡ' ಎಂಬ ಫಲಕಗಳನ್ನು ಹಿಡಿದಿದ್ದ ವಿದ್ಯಾರ್ಥಿಗಳು ಪದವಿ ಪೂರ್ವ ಶಿಕ್ಷಣ ಇಲಾಖೆ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

'ಮಧ್ಯವಾರ್ಷಿಕ ಪರೀಕ್ಷೆಯನ್ನು ಮಂಡಳಿಯ ಪರೀಕ್ಷೆಯಾಗಿ ನಡೆಸುವುದು ಸರಿಯಲ್ಲ. ಇಲಾಖೆಯ ಏಕಪಕ್ಷೀಯ ನಿರ್ಧಾರದಿಂದ ವಿದ್ಯಾರ್ಥಿಗಳು ಪರಿತಪಿಸುವಂತಾಗಿದೆ. ಈ ನಿರ್ಧಾರವನ್ನು ಕೂಡಲೇ ಹಿಂಪಡೆಯಬೇಕು. ಇಲ್ಲದಿದ್ದರೆ ರಾಜ್ಯದಾದ್ಯಂತ ಹೋರಾಟ ನಡೆಸಲಾಗುತ್ತದೆ' ಎಂದು ಸಮಿತಿಯ ರಾಜ್ಯ ಘಟಕದ ಅಧ್ಯಕ್ಷೆ ಕೆ.ಎಸ್.ಅಶ್ವಿನಿ ಎಚ್ಚರಿಸಿದರು.

ಎಐಡಿಎಸ್‌ಒ ರಾಜ್ಯ ಘಟಕದ ಖಜಾಂಚಿ ಅಭಯಾ ದಿವಾಕರ್, 'ಪಿಯು ಮಂಡಳಿ ಹಾಗೂ ರಾಜ್ಯ ಸರ್ಕಾರದ ನಿಲುವು ಅಪ್ರಜಾತಾಂತ್ರಿಕವಾದುದು. ಇದು ವಿದ್ಯಾರ್ಥಿ ವಿರೋಧಿ ನಡೆಯಾಗಿದೆ. ಕೋವಿಡ್‌ನಿಂದಾಗಿ ವಿದ್ಯಾರ್ಥಿಗಳು ಒಂದೂವರೆ ವರ್ಷ ಭೌತಿಕ ತರಗತಿಗಳಿಂದ ದೂರ ಉಳಿದಿದ್ದರು. ಕೆಲವರು ಶಿಕ್ಷಣದಿಂದಲೇ ವಿಮುಖರಾಗಿದ್ದರು. ಈಗ ಏಕಾಏಕಿ ಬೋರ್ಡ್ ಪರೀಕ್ಷೆ ನಡೆಸುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಲಿದೆ. ಹೀಗಾಗಿ ಈ ಮೊದಲು ಇದ್ದಂತೆ ಕಾಲೇಜು ಹಂತದಲ್ಲೇ ಮಧ್ಯವಾರ್ಷಿಕ ಪರೀಕ್ಷೆ ನಡೆಸಬೇಕು. ಶೈಕ್ಷಣಿಕ ವೇಳಾಪಟ್ಟಿಯನ್ನೂ ವಿಸ್ತರಿಸಿ ಅಂತಿಮ ಪರೀಕ್ಷೆಗಳನ್ನು ಜೂನ್‌ನಲ್ಲೇ ನಡೆಸಬೇಕು' ಎಂದು ಆಗ್ರಹಿಸಿದ್ದಾರೆ.

ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕಲ್ಯಾಣ್, ಉಪಾಧ್ಯಕ್ಷೆ ಸಿ.ಎಂ.ಅಪೂರ್ವ, ಖಜಾಂಚಿ ವಿನಯ್ ಚಂದ್ರ, ಹಯ್ಯಾಳಪ್ಪ ಇದ್ದರು.

ಶ್ರೀಕಿ ಭೇಟಿಗೆ ಸಾಕ್ಷ್ಯ ಕೊಡಿ: ಪ್ರಿಯಾಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾನು ಮಂತ್ರಿಯಾಗಿದ್ದ ಅವಧಿಯಲ್ಲಿ ಹ್ಯಾಕರ್ ಶ್ರೀಕೃಷ್ಣನನ್ನು ಭೇಟಿಯಾಗಿದ್ದೆ ಎಂಬ ಆರೋಪಕ್ಕೆ ಸಾಕ್ಷ್ಯವಿದ್ದರೆ ಬಿಜೆಪಿಯವರು ಬಹಿರಂಗಪಡಿಸಲಿ' ಎಂದು ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ಸವಾಲು ಹಾಕಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಅವರೊಂದಿಗೆ ಬುಧವಾರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಾನು ಶ್ರೀಕೃಷ್ಣನನ್ನು ಭೇಟಿ ಮಾಡಿದ್ದೆ ಎಂದು ಬಿಜೆಪಿ ವಕ್ತಾರ ಗಣೇಶ್ ಕಾರ್ಣಿಕ್ ಆರೋಪಿಸಿದ್ದಾರೆ. ನಾನು ಆತನನ್ನು ಯಾವತ್ತೂ ಭೇಟಿಮಾಡಿಲ್ಲ' ಎಂದರು.

ಬಿಟ್‌ಕಾಯಿನ್ ಹ್ಯಾಕಿಂಗ್ ಹಗರಣದ ವಿಚಾರದಲ್ಲಿ ಬಿಜೆಪಿ ಸರ್ಕಾರ ಏನನ್ನೋ ಮುಚ್ಚಿಡಲು ಯತ್ನಿಸುತ್ತಿದೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಪ್ರಕರಣದ ಕುರಿತು ಸರಿಯಾದ ತನಿಖೆ ನಡೆದರೆ ಬಿಜೆಪಿ ಸರ್ಕಾರದಲ್ಲಿ ಮೂರನೇ ಮುಖ್ಯಮಂತ್ರಿ ಬರುತ್ತಾರೆ ಎಂಬ ಹೇಳಿಕೆಗೆ ಈಗಲೂ ತಾವು ಬದ್ಧ. ಆದರೆ, ತನಿಖೆ ಸರಿಯಾದ ದಿಕ್ಕಿನಲ್ಲಿ ನಡೆಯುತ್ತಿಲ್ಲ ಎಂದು ದೂರಿದರು.

ಶ್ರೀಕಿ ರಾಜ್ಯ ಸರ್ಕಾರದ ಇ-ಸಂಗ್ರಹಣಾ ವ್ಯವಸ್ಥೆಯ ಸರ್ವರ್ ಹ್ಯಾಕ್ ಮಾಡಿ ಕೋಟಿಗಟ್ಟಲೆ ಹಣ ದೋಚಿದ್ದ. ಅದರ ತನಿಖೆ ಯಾವ ಹಂತದಲ್ಲಿದೆ ಎಂಬುದನ್ನು ಸರ್ಕಾರ ಹೇಳಬೇಕು. ಯಾರ ಖಾತೆಗೆ ಹಣ ವರ್ಗಾವಣೆ ಆಗಿದೆ ಎಂಬುದನ್ನೂ ಬಹಿರಂಗಪಡಿಸಲಿ ಎಂದು ಪ್ರಿಯಾಂಕ್ ಆಗ್ರಹಿಸಿದರು.

ಮುಚ್ಚಿಡಲು ಸಂಘಟಿತ ಯತ್ನ: ರಾಮಲಿಂಗಾ ರೆಡ್ಡಿ ಮಾತನಾಡಿ, 'ಪ್ರಕರಣದಲ್ಲಿ ಏನೂ ಇಲ್ಲ ಎಂದು ಮುಖ್ಯಮಂತ್ರಿ ಮತ್ತು ಸಚಿವರು ಪದೇ ಪದೇ ಹೇಳಿಕೆ ನೀಡುತ್ತಿದ್ದಾರೆ. ಅದರ ಬೆನ್ನಲ್ಲೇ, ಕಾಂಗ್ರೆಸ್‌ನವರು ಇದ್ದಾರೆ, ಸಿಐಡಿ ತನಿಖೆ ನಡೆಯುತ್ತಿದೆ ಎಂಬ ಹೇಳಿಕೆಗಳನ್ನೂ ನೀಡುತ್ತಿದ್ದಾರೆ. ಕಾಂಗ್ರೆಸ್ ಮತ್ತು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಮೇಲೆ ಗೂಬೆ ಕೂರಿಸಿ ಪ್ರಕರಣವನ್ನು ಮುಚ್ಚಿಹಾಕಲು ಸಂಘಟಿತ ಪ್ರಯತ್ನ ನಡೆಯುತ್ತಿದೆ' ಎಂದು ಆರೋಪಿಸಿದರು.

> **ಬಿಜೆಪಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಮೌನ ಏಕೆ? ರಾಹುಲ್ ಗಾಂಧಿ ವಿರುದ್ಧ 'ಪೆಡ್ಲರ್' ಎಂಬ ಆರೋಪವನ್ನು ಅವರು ಮಾಡಿದ್ದರು. ಈಗ ಇವರೇ ನಾಪತ್ತೆ**
>
> **ರಾಮಲಿಂಗಾರೆಡ್ಡಿ,** ಕೆಪಿಸಿಸಿ ಕಾರ್ಯಾಧ್ಯಕ್ಷ

'ತಡೆಯಾಜ್ಞೆ ತಂದವರು ಯಾರು?'

'ವಾಟ್ಸ್ ಆ್ಯಪ್ ಚಾಟಿಂಗ್, ಎಸ್‌ಎಂಎಸ್, ಆಡಿಯೊ ಕ್ಲಿಪ್ಪಿಂಗ್ ಪ್ರಸಾರ ಮಾಡದಂತೆ ನಾನೇನೂ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿಲ್ಲ. ರಾಜ್ಯ ಮಾನವ ಹಕ್ಕುಗಳ ಆಯೋಗದಲ್ಲಿ ನನ್ನ ವಿರುದ್ಧ ದೂರು ದಾಖಲಾಗಿದೆಯೋ? ಅಥವಾ ನಿಮ್ಮ ವಿರುದ್ಧವೋ' ಎಂದು ಮೈಸೂರು ಸಂಸದ ಪ್ರತಾಪ್ ಸಿಂಹ ಅವರನ್ನು ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

'ಪ್ರಿಯಾಂಕ ಹೆಸರು ನೋಡಿದರೆ ಮರಿ ಖರ್ಗೆ ಹೆಣ್ಣೋ ಗಂಡೋ ಗೊತ್ತಾಗುವುದಿಲ್ಲ' ಎಂದು ಪ್ರತಾಪ ಸಿಂಹ ಟೀಕಿಸಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ ಪ್ರಿಯಾಂಕ್, 'ಪ್ರತಾಪ್‌ಗೆ ಹಿಂದೂ ಮತ್ತು ಬೌದ್ಧ ಧರ್ಮ ಎರಡರ ಬಗ್ಗೆಯೂ ಅರಿವಿಲ್ಲ. ಪ್ರಿಯಾಂಕ್ ನನ್ನ ಹೆಸರು. ಪ್ರಿಯಾಂಕ್ ಎಂದರೆ ಎಲ್ಲರಿಂದಲೂ ಪ್ರೀತಿ ಗಳಿಸುವವನು ಎಂದರ್ಥ. ಹಾಗೆ ಆಗಲು ನನಗೆ ಸಾಧ್ಯವಾಗಿಲ್ಲ. ಇನ್ನಾದರೂ ಆಗಬೇಕೆಂದು ಪ್ರಯತ್ನಿಸುತ್ತಿರುವೆ' ಎಂದು ಹೇಳಿದರು.

'ಪ್ರತಾಪ್ ಎಂದರೆ ಘನತೆ ಮತ್ತು ಗಾಂಭೀರ್ಯವುಳ್ಳ ವ್ಯಕ್ತಿ ಎಂದರ್ಥ. ಪ್ರತಾಪ್ ಸಿಂಹ ಹಾಗೆ ಇಲ್ಲ. ಬಿಜೆಪಿ ಸಂಸದೆ ಮೇನಕಾ ಗಾಂಧಿಯವರು ಹಿಂದೂ ಹೆಸರುಗಳ ಬಗ್ಗೆ ಬರೆದ ಪುಸ್ತಕ ಓದಿಕೊಳ್ಳಲಿ' ಎಂದರು.

'ನಮ್ಮ ಕುಟುಂಬದ ಬಳಿ ₹ 50,000 ಕೋಟಿ ಆಸ್ತಿ ಇದೆ ಎಂದು ಗಣೇಶ್ ಕಾರ್ಣಿಕ್ ಹೇಳಿದ್ದಾರೆ. ಅವರು ಯಾವ ಕ್ಯಾಪ್ಟನ್ ಎಂಬ ಅನುಮಾನ ಬರುತ್ತಿದೆ. ಎರಡೂ ಕಡೆ ಅವರದ್ದೇ ಸರ್ಕಾರಗಳಿವೆ. ತನಿಖೆ ಮಾಡಿಸಲಿ' ಎಂದು ಹೇಳಿದರು.

'ಘನತೆಯಿಂದ ಚರ್ಚೆಗೆ ಬರುವುದಾದರೆ ಸಿದ್ಧ. ನನ್ನ ಮತ್ತು ಕುಟುಂಬದ ವಿರುದ್ಧ ವೈಯಕ್ತಿಕ ದಾಳಿಗೆ ಇಳಿದರೆ ನಾನು ಕೈಕಟ್ಟಿ ಕೂರುವುದಿಲ್ಲ. ಶರಣರ ನಾಡಿನಿಂದ ಬಂದಿರುವ ನನ್ನಲ್ಲಿ ಬಸವ ತತ್ವ, ಬುದ್ಧ ತತ್ವದ ಜತೆಗೆ ಅಂಬೇಡ್ಕರ್ ಅವರ ಹೋರಾಟ ಗುಣವೂ ರಕ್ತಗತವಾಗಿದೆ' ಎಂದು ಹೇಳಿದರು.

ಕಾಶ್ಮೀರ: ಟಿಆರ್‌ಎಫ್ ಕಮಾಂಡರ್ ಸೇರಿದಂತೆ ಐವರು ಉಗ್ರರ ಹತ್ಯೆ

ಶ್ರೀನಗರ (ಪಿಟಿಐ): 'ಜಮ್ಮು ಮತ್ತು ಕಾಶ್ಮೀರದ ಕುಲ್ಗಾಮ್ ಜಿಲ್ಲೆಯಲ್ಲಿ ಭದ್ರತಾ ಪಡೆಗಳೊಂದಿಗೆ ಬುಧವಾರ ನಡೆದ ಅವಳಿ ಎನ್‌ಕೌಂಟರ್‌ನಲ್ಲಿ ಹತರಾದ ಐವರು ಉಗ್ರರಲ್ಲಿ ರೆಸಿಸ್ಟೆನ್ಸ್ ಫ್ರಂಟ್ (ಟಿಆರ್‌ಎಫ್) ಕಮಾಂಡರ್ ಅಫಕ್ ಸಿಕಂದರ್ ಸೇರಿದ್ದಾನೆ' ಎಂದು ಪೊಲೀಸರು ತಿಳಿಸಿದ್ದಾರೆ.

ದಕ್ಷಿಣ ಕಾಶ್ಮೀರ ಜಿಲ್ಲೆಯ ಗೋಪಾಲಪೋರಾ ಮತ್ತು ಪೊಂಬೆ ಪ್ರದೇಶಗಳಲ್ಲಿ ಗುಂಡಿನ ಚಕಮಕಿ ನಡೆದಿದೆ.

ಉಗ್ರರು ಅಡಗಿರುವ ಖಚಿತ ಮಾಹಿತಿಯ ಮೇರೆಗೆ ಭದ್ರತಾ ಪಡೆಗಳು ಶೋಧ ಕಾರ್ಯಾಚರಣೆ ಕೈಗೊಂಡಿದ್ದವು. ಈ ವೇಳೆ ಪಡೆಗಳ ಮೇಲೆ ಉಗ್ರರು ಗುಂಡು ಹಾರಿಸಿದಾಗ, ಪ್ರತಿದಾಳಿಯ ವೇಳೆ ಇಬ್ಬರು ಉಗ್ರರು ಹತ್ಯೆಗೀಡಾಗಿದ್ದಾರೆ. ಇವರಲ್ಲಿ ಒಬ್ಬ ನಿಷೇಧಿತ ಸಂಘಟನೆ ಟಿಆರ್‌ಎಫ್‌ನ ಕಮಾಂಡರ್ ಆಗಿದ್ದ' ಎಂದು ಕಾಶ್ಮೀರದ ಮಹಾನಿರೀಕ್ಷಕ ವಿಜಯ್ ಕುಮಾರ್ ಹೇಳಿದ್ದಾರೆ.

ಪೊಂಬೆ ಪ್ರದೇಶದಲ್ಲಿ ನಡೆದ ಮತ್ತೊಂದು ಗುಂಡಿನ ಚಕಮಕಿಯಲ್ಲಿ ಮೂವರು ಉಗ್ರರು ಹತರಾಗಿದ್ದಾರೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಒಡಹುಟ್ಟಿದ ಅಣ್ಣ–ತಂಗಿಗೆ ಹೈಕೋರ್ಟ್ ಪ್ರಶ್ನೆ

ಮನುಷ್ಯ ಮಸಣಮುಖಿ, ಆಸ್ತಿಗೇಕೆ ಬಡಿದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮನುಷ್ಯ ಮಸಣಮುಖಿ, ಅಂತಹ ಅಲೆಕ್ಸಾಂಡರ್‌ನ ಸಾಮ್ರಾಜ್ಯವೇ ಉಳಿಯಲಿಲ್ಲ ಎಂದಾಗ ಸಾವಿನ ಹಾದಿಯಲ್ಲಿ ಸದಾ ದಾಪುಗಾಲಿಕ್ಕುವ ನಾವುಗಳು ಅದರಲ್ಲೂ, ಒಡಹುಟ್ಟಿದ ಅಣ್ಣ-ತಂಗಿಯರು ಆಸ್ತಿಗಾಗಿ ಇಳಿವಯಸ್ಸಿನಲ್ಲಿರುವ ತಂದೆ-ತಾಯಿಗಳ ಮನಸ್ಸನ್ನು ನೋಯಿಸುವುದು ಸರಿಯೇ...'



ಕೃಷ್ಣ ಎಸ್ ದೀಕ್ಷಿತ್

ತಂದೆ ಸಂಪಾದಿಸಿದ ಆಸ್ತಿ ಹಂಚಿಕೆ ವ್ಯಾಜ್ಯವೊಂದರಲ್ಲಿ ಕೋರ್ಟ್‌ಗೆ ಖುದ್ದು ಹಾಜರಾಗಿದ್ದ ಅಣ್ಣ-ತಂಗಿ, ವೃದ್ಧ ತಂದೆ-ತಾಯಿಗಳ ಅಹವಾಲನ್ನು ತಾಳ್ಮೆಯಿಂದ ಆಲಿಸಿದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಕೋರ್ಟ್‌ನಿಂದ ಹೊರಗೆ ಹೋಗುವಾಗ ಯಾವುದಾದರೂ ಮರದ ಟೊಂಗೆ ನಮ್ಮ ಮೇಲೆ ಬಿದ್ದರೆ ಕಥೆ ಮುಗಿಯಿತು!. ಹೊರಗೆ ಬಂದವರು ಸುರಕ್ಷಿತವಾಗಿ ಮರಳಿ ಮನೆ ಸೇರುತ್ತೇವೆ ಎಂಬುದೇ ಖಾತ್ರಿ ಇಲ್ಲದಿರುವಾಗ ಆಸ್ತಿ ಹಂಚಿಕೆಗಾಗಿ ಹೆತ್ತ ತಂದೆ-ತಾಯಿಯನ್ನು ಅದೂ ಅವರ ಜೀವನದ ಸಂಧ್ಯಾಕಾಲದಲ್ಲಿ ಯಾಕೆ ನೋಯಿಸುತ್ತೀರಿ' ಎಂದು ಪ್ರಶ್ನಿಸಿತು.

ಬೆಂಗಳೂರು ನಗರದ ನಿವಾಸಿಗಳಾದ ಶ್ರೀಮಂತ ಕುಟುಂಬವೊಂದರ ಆಸ್ತಿ ಹಂಚಿಕೆ ವಿವಾದವನ್ನು ಬುಧವಾರ ವಿಚಾರಣೆ ನಡೆಸಿದ ನ್ಯಾಯಪೀಠ, 'ಮಗ ಎಷ್ಟೇ ಆಗಲಿ ಮಗ. ಅವನ ಉದ್ಧಟತನ, ಒರಟುತನಗಳನ್ನು ನಾವೂ ಕ್ಷಮಿಸಬೇಕು. ಅಷ್ಟೇಕೆ ಮಗನೂ ತನ್ನ ತಂದೆ ತಾಯಿಯ ಯೋಗ ಕ್ಷೇಮವನ್ನು ತಾನೇ ಹೊರಬೇಕು. ಮಗಳ ಮನೆಯಲ್ಲಿ ಅಳಿಯನೊಟ್ಟಿಗೆ ಇರಬೇಕು ಎಂದರೆ ಹೆತ್ತ ತಂದೆ-ತಾಯಿಗೆ ಎಷ್ಟೊಂದು ಮುಜುಗುರವಾಗಬೇಡ' ಎಂದು ಅರ್ಜಿದಾರರನ್ನು ಕೇಳಿತು.

ಇದಕ್ಕೆ ಉತ್ತರಿಸಿದ ಅರ್ಜಿದಾರ ಸ್ವಾಮಿ, 'ಈಕೆ (ತಂಗಿಯ ಕಡೆ ಕೈತೋರಿಸುತ್ತಾ) ತನ್ನ ಸ್ಮಾರ್ಟ್‌ನೆಸ್‌ನಿಂದ ನಮ್ಮ ಕುಟುಂಬವನ್ನೇ ಹಾಳುಗೆಡವಿದ್ದಾಳೆ. ತಂದೆ-ತಾಯಿಯನ್ನು ಆಕೆ ಮನೆಯಲ್ಲಿ ಇಟ್ಟುಕೊಂಡು ಸಾಕುತ್ತಿದ್ದರೂ ಬರುವ ಮೂರೂವರೆ ಲಕ್ಷ ಬಾಡಿಗೆಯಲ್ಲಿ ಬಹುಪಾಲು ಹಣವನ್ನು ಪೊಲೀಸರಿಗೇ ಸುರುವಿ ನನಗೆ ಹಿಂಸೆ ಕೊಡುತ್ತಿದ್ದಾಳೆ. ಸಿವಿಲ್ ವ್ಯಾಜ್ಯಗಳಲ್ಲಿ ನನ್ನ ಸ್ವಯಾರ್ಜಿತ ಸ್ಥಿರಾಸ್ತಿಯನ್ನೂ ಪಾಲು ಮಾಡಿಕೊಡುವಂತೆ ಕೇಳುತ್ತಿದ್ದಾಳೆ. ಇದ್ಯಾವ ನ್ಯಾಯ ಸ್ವಾಮಿ' ಎಂದು ದೈನ್ಯದಿಂದ ಕೇಳಿದರು.

ಇದಕ್ಕೆ ಉತ್ತರಿಸಿದ ತಂಗಿ, 'ಸ್ವಾಮಿ ನನಗೇನೂ ಅವನ ಆಸ್ತಿಯ ಮೇಲೆ ಆಸೆಯಿಲ್ಲ. ನನ್ನ ಮಗ ಅಮೆರಿಕಾದಲ್ಲಿ ಎಂಜಿನಿಯರಿಂಗ್ ಓದುತ್ತಿದ್ದಾನೆ. ನಾನೂ ಸ್ಥಿತಿವಂತಳಿದ್ದೇನೆ. ಆದರೆ ಕೊನೆಗಾಲದಲ್ಲಿ ತಂದೆ-ತಾಯಿಯನ್ನು ನೋಡಿಕೊಳ್ಳುವುದಕ್ಕೆ ಆಸ್ತಿ ಪಾಲು ಮಾಡಿಕೊಡದೆ ಹೋದರೆ ಮುಂದೇನು ಗತಿ ಎಂಬ ಮುಂದಾಲೋಚನೆಯಿಂದ ಈ ರೀತಿ ದಾವೆ ಹೂಡಿದ್ದೇನೆ. ಬೇಕಾದರೆ ವಾಪಸು ತೆಗೆದುಕೊಳ್ಳುತ್ತೇನೆ' ಎಂದರು.

ಪ್ರಕರಣ ಕುಟುಂಬದ ವ್ಯಾಜ್ಯವಾಗಿರುವ ಕಾರಣ ವಿಚಾರಣೆಯನ್ನು ತೆರೆದ ನ್ಯಾಯಾಲಯದಲ್ಲಿ ನಡೆಸುವುದು ಬೇಡ. ಇನ್‌ಕ್ಯಾಮೆರಾ (ಅರ್ಜಿದಾರರ, ಪ್ರತಿವಾದಿಗಳು ಮತ್ತು ವಕೀಲರು ಮಾತ್ರವೇ ಹಾಜರಿರುವ ಕೋಣೆ) ವಿಚಾರಣೆ ನಡೆಯಲಿ ಎಂದು ಆದೇಶಿಸಿದ ಪೀಠ ವಿಚಾರಣೆಯನ್ನು ಇದೇ 29ಕ್ಕೆ ಮುಂದೂಡಿದೆ.

'ವಿನಾಶಕಾಲದಲ್ಲಿ ಜಾಣರಾಗಿ...'

'ಸರ್ವನಾಶೇ ಸಮುತ್ಪನ್ನೇ ಅರ್ಧಂ ತ್ಯಜತಿ ಪಂಡಿತ:' (ಸಂಪೂರ್ಣ ನಾಶದತ್ತ ಸಾಗಿರುವಾಗ ಅಲ್ಪಸ್ವಲ್ಪ ಉಳಿಸಿಕೊಳ್ಳುವುವನೇ ಜಾಣ) ಎಂಬ ಸಂಸ್ಕೃತ ಶ್ಲೋಕವನ್ನು ಉದ್ಧರಿಸಿದ ನ್ಯಾಯಮೂರ್ತಿಗಳು, 'ವೃದ್ಧಾಪ್ಯದಲ್ಲಿ ಮಕ್ಕಳು, ತಂದೆ-ತಾಯಿಗಳನ್ನು ತಮ್ಮ ಜೊತೆಯಲ್ಲೇ ಇರಿಸಿಕೊಂಡು ಪೋಷಿಸಬೇಕು. ಅವರನ್ನು ಕೈಬಿಟ್ಟು ಆಸ್ತಿಗಾಗಿ ಹೊಡೆದಾಡುತ್ತಾ ದೂರವಿಟ್ಟರೆ ಅವರನ್ನು ಯಾರು ನೋಡಿಕೊಳ್ಳುತ್ತಾರೆ. ನಮ್ಮ ಬದುಕು ಒಪ್ಪಂದದ ತಳಹದಿಯ ಮೇಲೆ ನಿಂತಿಲ್ಲ. ಮನುಷ್ಯ ಪ್ರೀತಿಯ ಸದ್ಗುಣಗಳ ಮೇಲೆ ಅವಲಂಬಿತವಾಗಿದೆ ಎಂಬುದನ್ನು ಮರೆಯಬೇಡಿ' ಎಂದು ವ್ಯಾಜ್ಯಕರ್ತ ಕುಟುಂಬಕ್ಕೆ ಸಲಹೆ ನೀಡಿದರು.

ಮುಖ್ಯಾಂಶಗಳು

- ಶ್ರೀಮಂತ ಕುಟುಂಬದ ಆಸ್ತಿ ಹಂಚಿಕೆ ವಿವಾದ
- ಇನ್ ಕ್ಯಾಮೆರಾ ವಿಚಾರಣೆಗೆ ಆದೇಶ

ನಿರಂತರ ಮಳೆ: ಶೇ 70 ರಷ್ಟು ನೆಲಕಚ್ಚಿದ ರಾಗಿ ಬೆಳೆ

ದಾಬಸ್ ಪೇಟೆ: ನಿರಂತರ ಮಳೆಯಿಂದಾಗಿ ನೆಲಮಂಗಲ ತಾಲ್ಲೂಕಿನುದ್ದಕ್ಕೂ ಶೇಕಡ 70ರಷ್ಟು ರಾಗಿ ಬೆಳೆ ನೆಲಕಚ್ಚಿದ್ದು, ಮಳೆ ಹೀಗೆ ಮುಂದುವರಿದರೆ ಹೆಚ್ಚಿನ ಹಾನಿಯಾಗುವ ಆತಂಕ ರೈತರಲ್ಲಿ ಮೂಡಿದೆ.

ರಾಗಿ ಬಿತ್ತನೆ ತಾಲ್ಲೂಕಿನ ಪ್ರಮುಖ ಬೆಳೆಯಾಗಿದೆ. ಇಲ್ಲಿನ ಬಹುತೇಕ ರೈತರು ಕೃಷಿ ಜೊತೆಗೆ ಹೈನುಗಾರಿಕೆಯನ್ನು ಉಪ ಕಸುಬಾಗಿಸಿಕೊಂಡಿದ್ದು, ರಾಗಿ ಜೊತೆಗೆ ಜಾನುವಾರಗಳ ಮೇವಿಗಾಗಿ ರಾಗಿ ಬಿತ್ತನೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಮಾಡುತ್ತಾರೆ.

ಕೊಯಿಲು ಮಾಡುವ ಹಂತದಲ್ಲಿ ಮಳೆ ಬಂದದ್ದರಿಂದ ಬಹುತೇಕ ರಾಗಿ ಬೆಳೆ ನೆಲಕಚ್ಚಿದೆ. ತಗ್ಗು ಪ್ರದೇಶಗಳ ಹೊಲಗಳಲ್ಲಿ ನೀರು ನಿಂತು, ರಾಗಿ ತೆನೆಯಲ್ಲಿ ಮೊಳಕೆಯೊಡೆದು ಹುಲ್ಲು ಕೊಳೆಯುತ್ತಿದೆ.

ನೆಲಮಂಗಲ ತಾಲ್ಲೂಕಿನ ಕಸಬಾ ಹೋಬಳಿಯಲ್ಲಿ 5,938 ಹೆಕ್ಟೇರ್, ಸೋಂಪುರ ಹೋಬಳಿಯಲ್ಲಿ 5,417 ಹೆಕ್ಟೇರ್ ಮತ್ತು ತ್ಯಾಮಗೊಂಡ್ಲು ಹೋಬಳಿಯಲ್ಲಿ 5,217 ಹೆಕ್ಟೇರ್ ಸೇರಿ 16,562 ಹೆಕ್ಟೇರ್‌ನಲ್ಲಿ ರಾಗಿ ಬಿತ್ತನೆಯಾಗಿದೆ. ಈಗಾಗಲೇ ಒಂದಷ್ಟು ಹೆಕ್ಟೇರ್‌ಗಳಲ್ಲಿ ಬೆಳೆಯು ಮಳೆಯಿಂದ ಹಾಳಾಗಿದೆ. ಮಳೆ ಹೀಗೆ ಮುಂದುವರೆದರೆ, ಇನ್ನಷ್ಟು ಬೆಳೆ ಹಾಳಾಗುವ ಸಂಭವವಿದೆ.

'ರಾಗಿ ಪೈರು ನೆಲಕಚ್ಚಿರುವುದರಿಂದ ಹುಲ್ಲು ಕೊಳೆಯುತ್ತದೆ. ಹೆಚ್ಚಿನ ಪ್ರಮಾಣದಲ್ಲಿ ಶೇಖರಣೆ ಮಾಡಲು ಸಾಧ್ಯವಾಗುವುದಿಲ್ಲ. ಮುಂದಿನ ದಿನಗಳಲ್ಲಿ ರಾಗಿ ಹುಲ್ಲಿಗೆ ಅಭಾವ ಸೃಷ್ಟಿಯಾಗುತ್ತದೆ. ರಾಗಿ ಕಪ್ಪಾಗುತ್ತದೆ. ಇದರಿಂದ ಮಾರುಕಟ್ಟೆಯಲ್ಲಿ ರಾಗಿ ಬೆಲೆ ಕುಸಿಯುತ್ತದೆ' ಎನ್ನುತ್ತಾರೆ ರೈತ ರಾಮಯ್ಯ.

ಈಗಾಗಲೇ ಶೇಕಡ 10ರಷ್ಟು ರಾಗಿ ಫಸಲು ಕೊಯ್ಲಿಗೆ ಬಂದಿದ್ದು, ಅವು ಮಳೆಯಿಂದ ಕೊಯ್ಲು ಮಾಡಲು ಆಗದೇ ತೆನೆ ಉದುರಿ ಬರಡಾಗುತ್ತಿದೆ. ಜತೆಗೆ ಹುಲ್ಲು ಸಹ ಕೈಗೆ ಸಿಗುವ ನಂಬಿಕೆ ರೈತರಿಗೆ ಇಲ್ಲವಾಗಿದೆ.

ಸೋಂಪುರ ಹೋಬಳಿ ಅನಂತಪುರ ಬೇಚರೆ ಗ್ರಾಮದ ರೈತ ಮುದ್ದ ಮಾರೇಗೌಡ ಅವರ 5 ಎಕರೆ ರಾಗಿ ಬೆಳೆ ಕೆರೆ ಹಿನ್ನೀರಿನಿಂದ ಹಾಳಾಗಿದೆ. ಸಾವಿರಾರು ರೂಪಾಯಿ ಖರ್ಚು ಮಾಡಿ ಬೆಳೆದ ಬೆಳೆಯು ನೀರಿನಲ್ಲಿ ಕೊಚ್ಚಿ ಹೋಗಿದೆ.

'ಮಳೆಯಿಂದ ರಾಗಿ ಬೆಳೆ ಹಾಳಾಗಿದ್ದರೆ ಕಂದಾಯ ಅಥವಾ ಕೃಷಿ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದರೆ, ಎರಡು ಇಲಾಖೆಗಳ ಅಧಿಕಾರಿಗಳು ಜಂಟಿಯಾಗಿ ಪರಿಶೀಲಿಸಿ, ಬೆಳೆ ನಾಶದ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸುತ್ತೇವೆ' ಎಂದು ನೆಲಮಂಗಲ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕ ಪಿ. ರಾಘವೇಂದ್ರ ಹೇಳಿದರು.

ರೈತರು 'ಕರ್ನಾಟಕ ರೈತ ಸುರಕ್ಷಾ ಫಸಲ್ ವಿಮಾ ಯೋಜನೆಯಲ್ಲಿ' ವಿಮೆ ಕಟ್ಟಿದ್ದರೆ, ಬೆಳೆ ನಾಶವಾದ ಸಂದರ್ಭದಲ್ಲಿ ವಿಮಾ ಸಂಸ್ಥೆಯು ನಷ್ಟ ನಿರ್ಧಾರ ಮಾಡಿ ಪರಿಹಾರ ನೀಡುತ್ತಿತ್ತು. ಆದರೆ, ತಾಲ್ಲೂಕಿನ ಬಹುತೇಕ ರೈತರು ವಿಮೆ ಮಾಡಿಸಲು ತಾತ್ಸಾರ ತೋರಿದ್ದಾರೆ' ಎನ್ನುತ್ತಾರೆ ಕೃಷಿ ಅಧಿಕಾರಿಗಳು.



ಸೋಂಪುರ ಹೋಬಳಿ ಅನಂತಪುರ ಬೇಚರೆ ಗ್ರಾಮದ ರೈತ ಮುದ್ದ ಮಾರೇಗೌಡ ಅವರ 5 ಎಕರೆ ರಾಗಿ ಬೆಳೆಯು ಕೆರೆ ಹಿನ್ನೀರಿನಿಂದ ಹಾಳಾಗಿದೆ.



ರಾಯಚೂರು ಜಿಲ್ಲೆ ಮಸ್ಕಿ ತಾಲ್ಲೂಕಿನ ಕಾಚಾಪುರ ಗ್ರಾಮದ ಹೊಲದಲ್ಲಿ ಬೆಳೆದಿದ್ದ ಈರುಳ್ಳಿಯು ಮಳೆಯಿಂದಾಗಿ ಕೊಳೆಯುತ್ತಿದೆ

ಮೆಕ್ಕೆಜೋಳ, ಜೋಳದ ರಾಶಿ ಮಳೆಗೆ ಸಿಲುಕಿ ಹಾಳು: ರೈತರು ಕಂಗಾಲು

ಬಿಟಿ ಹತ್ತಿ, ಈರುಳ್ಳಿ ಬೆಳೆಗಳಿಗೆ ಹಾನಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಧಾರವಾಡ, ವಿಜಯನಗರ, ಉತ್ತರ ಕನ್ನಡ, ವಿಜಯಪುರ ಜಿಲ್ಲೆಗಳು ಸೇರಿ ವಿವಿಧೆಡೆ ಮಂಗಳವಾರ ರಾತ್ರಿ ಭಾರಿ ಮಳೆಯಾಗಿದ್ದು ಭತ್ತ, ಕೆಂಪುಮೆಣಸು, ಬಿಟಿ ಹತ್ತಿ, ಈರುಳ್ಳಿ ಬೆಳೆ, ಮೆಕ್ಕೆಜೋಳ ಸೇರಿದಂತೆ ವಿವಿಧ ಬೆಳೆಗಳು ಮಳೆಗೆ ಸಿಲುಕಿ ಹಾನಿಯಾಗಿವೆ.

ಗದಗ ಜಿಲ್ಲೆಯ ಲಕ್ಷ್ಮೇಶ್ವರ ಸೇರಿದಂತೆ ಮಂಗಳವಾರ ರಾತ್ರಿ ತಾಲ್ಲೂಕಿನಾದ್ಯಂತ ಗುಡುಗು ಮಿಂಚು ಸಹಿತ ಭಾರಿ ಮಳೆ ಸುರಿದಿದ್ದರಿಂದ ಕೊಯ್ಲಿಗೆ ಬಂದಿದ್ದ ಕೆಂಪುಮೆಣಸು, ಬಿಟಿ ಹತ್ತಿ, ಈರುಳ್ಳಿ ಬೆಳೆಗಳಿಗೆ ಅಪಾರ ಹಾನಿಯಾಗಿದೆ. ಸದ್ಯ ಕೆಂಪುಮೆಣಸನ್ನು ಗಿಡದಿಂದ ಬಿಡಿಸಿ ಕೆಲವು ರೈತರು ಈಗಾಗಲೇ ಕಣದಲ್ಲಿ ಒಣಗಿಸಲು ಹಾಕಿದ್ದಾರೆ. ಆದರೆ ವಾರದಿಂದ ಆಗಾಗ ಸುರಿಯುತ್ತಿರುವ ಮಳೆ ಅದಕ್ಕೆ ಮಾರಕವಾಗಿದೆ. ತಾಡಪತ್ರಿಯಿಂದ ಅವುಗಳನ್ನು ಮುಚ್ಚಿದ್ದರೂ ಒಳಗೇ ಕೊಳೆತು ನಾರುವ ಪರಿಸ್ಥಿತಿ ನಿರ್ಮಾಣವಾಗಿದೆ.

'ಸದ್ಯ ಮೆಣಸಿನಕಾಯಿ ಹಣ್ಣು ಆಗಿದ್ದು ಬಿಡಿಸಲು ಬಂದೇತ್ರಿ. ಆದರ ಮಳಿ ಬಂದು ಎಲ್ಲಾ ಲುಕ್ಸಾನ್ ಆಗೇತಿ. ಮಳಿ ನೀರು ಹಣ್ಣಿಗೆ ಬಡದ್ರಾ ಅದು ಕೊಳೀತದೇ, ಏನ್ ಮಾಡದ್ರೀ? ಕೈಗೆ ಬಂದು ತುತ್ತು ಬಾಯಿಗೆ ಬರಲಿಲ್ಲ ಅನ್ನಂಗ ಆಗೇತ್ರೀ ರೈತನ ಬಾಳು' ಎಂದು ಸಮೀಪದ ಗೋವನಾಳ ಗ್ರಾಮದ ರೈತರಾದ ಚಂದ್ರು ತಳವಾರ, ಶೇಖರಗೌಡ ಕೊರಡೂರ ಅಳಲು ತೋಡಿಕೊಂಡರು.

ಇನ್ನು ರೈತರು ಅಲ್ಪಸ್ವಲ್ಪ ಬೆಳೆದ ಈರುಳ್ಳಿಯನ್ನು ಕಿತ್ತು ಒಣ ಹಾಕಿದ್ದರು. ಆದರೆ ಅಕಾಲಿಕ ಮಳೆಗೆ ಸಿಕ್ಕು ಅದೂ ಸಹ ನಾಶವಾಗಿದ್ದು ರೈತನ ಕಣ್ಣಲ್ಲಿ ನೀರು ತರಿಸಿದೆ.

ಈರುಳ್ಳಿ ಬೆಳೆ ಹಾಳು: ವಿಜಯಪುರ ತಾಲ್ಲೂಕಿನ ಜುಮನಾಳ ಗ್ರಾಮದಲ್ಲಿ ಮಳೆ ಪರಿಣಾಮ ಸುಮಾರು 100 ಎಕರೆಗಿಂತ ಹೆಚ್ಚು ಈರುಳ್ಳಿ ಕೊಳೆತು ಹಾಳಾಗಿದೆ. ಈರುಳ್ಳಿ ಗಿಡಗಳು ಮಳೆಯ ರಭಸಕ್ಕೆ ಬುಡಸಮೇತ ಕಿತ್ತು ಚೆಲ್ಲಾಪಿಲ್ಲಿಯಾಗಿ ಹೊಲದಲ್ಲಿ ಬಿದ್ದಿದ್ದು, ರೈತರು ಕಣ್ಣೀರು ಸುರಿಸುವಂತಾಗಿದೆ.

ಉಕ್ಕಿದ ಕೆರೆ- ಕೊಚ್ಚಿದ ಹೋದ ಬೆಳೆ: ಧಾರವಾಡ, ಕಲಘಟಗಿ ಹಾಗೂ ಅಳ್ನಾವರ ತಾಲ್ಲೂಕಿನಲ್ಲಿ ಧಾರಾಕಾರ ಮಳೆಯಿಂದ ನೀರಸಾಗರ ಜಲಾಶಯ ಕೋಡಿಬಿದ್ದು ಗಂಭ್ಯಾಪುರ, ಎಮ್ಮೆಟ್ಟಿ, ಮುತ್ತಗಿ ಗ್ರಾಮಗಳ ಜಮೀನುಗಳಿಗೆ ನೀರು ನುಗ್ಗಿ ಭತ್ತ, ಗೋವಿನಜೋಳ, ಸೋಯಾಬಿನ್, ಜೋಳ ಬೆಳೆಗಳು ನೀರು ಪಾಲಾಗಿವೆ.

ಅಳ್ನಾವರ ತಾಲ್ಲೂಕಿನಲ್ಲಿ ಸುರಿದ ಭಾರೀ ಮಳೆಗೆ ಡವಗಿ ನಾಲಾ ಮತ್ತೆ ಉಕ್ಕಿ ಹರಿಯಿತು. ತಾಲ್ಲೂಕಿನ ಇಂದಿರಮ್ಮನ ಕೆರೆಗೂ ಸಾಕಷ್ಟು ಪ್ರಮಾಣದಲ್ಲಿ ನೀರು ಹರಿದುಬಂದಿದೆ. ಮಳೆಯಿಂದಾಗಿ ಅಳ್ನಾವರ, ಬೆಣಚಿ, ಕಂಬಾರಗಣವಿ, ಕಾಶೆನಟ್ಟಿ ಗ್ರಾಮದ ಗದ್ದೆಗಳಲ್ಲಿದ್ದ ಭತ್ತ ಹಾಗೂ ಕಬ್ಬು ಬೆಳೆಗೆ ಸಾಕಷ್ಟು ಹಾನಿಯಾಗಿದೆ. ಗುಡಗೇರಿಯಲ್ಲಿ ಮೆಣಸಿನಕಾಯಿ, ಹತ್ತಿ ಬೆಳೆ ಮಳೆಯ ಪಾಲಾಗಿವೆ.

ವಿಜಯನಗರ ಜಿಲ್ಲೆಯ ಹೊಸಪೇಟೆ, ಹಗರಿಬೊಮ್ಮನಹಳ್ಳಿ, ಕೂಡ್ಲಿಗಿ, ಕೊಟ್ಟೂರು ಸೇರಿದಂತೆ ಹಲವೆಡೆ ರಾತ್ರಿ ಸಾಧಾರಣ ಮಳೆಯಾಗಿದೆ. ರೈತರು ಒಕ್ಕಣೆ ಮಾಡಿ ಒಣಗಲು ಹಾಕಿರುವ ಮೆಕ್ಕೆಜೋಳ, ಜೋಳದ ರಾಶಿ ಮಳೆಗೆ ಸಿಲುಕಿವೆ.

ಲದ್ದಿ ಹುಳು ಬಾಧೆ: ಬಾಗಲಕೋಟೆ ಜಿಲ್ಲೆಯಲ್ಲಿ ಹಿಂಗಾರಿ ಜೋಳ ಮತ್ತು ಗೋವಿನ ಜೋಳದಲ್ಲಿ ಲದ್ದಿ ಹುಳು ಬಾಧೆ (ಫಾಲ್ ಆರ್ಮಿವರ್ಮ್) ಕಂಡುಬಂದಿದೆ. ಸದ್ಯ ಮೋಡ ಕವಿದ ಹಾಗೂ ತುಂತುರು ಮಳೆಯಿಂದ ಕೂಡಿದ ವಾತಾವರಣ ಇರುವುದರಿಂದ ಈ ಕೀಟದ ಹರಡುವಿಕೆ ಇನ್ನೂ ಹೆಚ್ಚಾಗುವ ಸಂಭವ ಇದೆ ಎಂದು ಕೃಷಿ ಇಲಾಖೆ ತಿಳಿಸಿದೆ.

ಭತ್ತದ ಬೇಸಾಯಕ್ಕೆ ಹಾನಿ: ಉತ್ತರಕನ್ನಡ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಅಬ್ಬರಿಸಿದ್ದ ಮಳೆ, ಬುಧವಾರ ಕಡಿಮೆಯಾಗಿತ್ತು. ದಿನವಿಡೀ ಮೋಡ, ಬಿಸಿಲು ಕಾಣಿಸಿಕೊಂಡಿತ್ತು. ಮಂಗಳವಾರ ರಾತ್ರಿ ಸುರಿದ ಭಾರಿ ಮಳೆಯಿಂದಾಗಿ ಭತ್ತದ ಬೆಳೆ ಹಾನಿಯಾಗಿದೆ.

ಹಳಿಯಾಳದಲ್ಲಿ ಅತಿ ಹೆಚ್ಚು 8.3 ಸೆ.ಮೀ ಮಳೆಯಾಗಿದ್ದು ಕಾರವಾರದಲ್ಲಿ 6.9 ಸೆ.ಮೀ ಹಾಗೂ ಜೊಯಿಡಾದಲ್ಲಿ 4.3 ಸೆ.ಮೀ ಮಳೆಯಾಗಿದೆ.

ಸಿಡಿಲು ಬಡಿದು ಎರಡು ಎಮ್ಮೆಗಳು ಸಾವು

ಧಾರವಾಡ ಜಿಲ್ಲೆಯ ಅಳ್ನಾವರ ತಾಲ್ಲೂಕಿನ ಗೌಳಿ ದಡ್ಡಿಯಲ್ಲಿ ಎರಡು ಎಮ್ಮೆಗಳು ಸಿಡಿಲಿಗೆ ಮೃತಪಟ್ಟಿವೆ.

ವಿಜಯನಗರ ಜಿಲ್ಲೆ ಹೂವಿನಹಡಗಲಿ ತಾಲ್ಲೂಕಿನಾದ್ಯಂತ ರಾತ್ರಿ ಸುರಿದ ಮಳೆಗೆ ವಿವಿಧ ಗ್ರಾಮಗಳಲ್ಲಿ ಐದು ಮನೆಗಳು ಭಾಗಶಃ ಕುಸಿದಿವೆ. ತಾಲ್ಲೂಕಿನ ಉತ್ತಂಗಿಯಲ್ಲಿ ಮೂರು, ಅರಳಿಹಳ್ಳಿ ಮತ್ತು ಗೋವಿಂದಪುರ ತಾಂಡದಲ್ಲಿ ತಲಾ ಒಂದು ಮನೆ ಭಾಗಶಃ ಕುಸಿದು ಬಿದ್ದಿವೆ. ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ ಎಂದು ತಹಶೀಲ್ದಾರ್ ಕೆ.ಎಚ್.ಮಹೇಂದ್ರ ತಿಳಿಸಿದ್ದಾರೆ.

ಮಳೆಯಿಂದಾಗಿ ಈರುಳ್ಳಿ, ಮೆಣಸಿನ ಬೆಳೆಗೆ ಸ್ವಲ್ಪ ಮಟ್ಟಿಗೆ ಹಾನಿಯಾಗಿದೆ. ಆದರೆ, ಈ ಮಳೆ ಕಡಲೆ, ಜೋಳ, ಕುಸುಬೆ, ಗೋಧಿ ಬೆಳೆಗೆ ಅನುಕೂಲಕಾರಿಯಾಗಿದೆ

ರುದ್ರೇಶಪ್ಪ ಟಿ.ಎಸ್.
ಕೃಷಿ ಇಲಾಖೆ ಜಂಟಿ ನಿರ್ದೇಶಕ

ಕೊಯ್ಲಿಗೆ ಬಂದಿದ್ದ ಭತ್ತ ನೀರು ಪಾಲು

• ಎಂ.ಮಹೇಶ

ಬೆಳಗಾವಿ: ಮಂಗಳವಾರ ರಾತ್ರಿ ಸುರಿದ ಜೋರು ಮಳೆಯಿಂದಾಗಿ ಬೆಳಗಾವಿ ಮತ್ತು ಖಾನಾಪುರ ತಾಲ್ಲೂಕುಗಳಲ್ಲಿ ಭತ್ತದ ಬೆಳೆಗೆ ಬಹಳಷ್ಟು ಹಾನಿಯಾಗಿದೆ. ಕೈಗೆ ಬಂದ ಬೆಳೆ ಬಾಯಿಗೆ ಬಾರದಂತಹ ಸ್ಥಿತಿ ರೈತರದ್ದಾಗಿದೆ.

ಕೋವಿಡ್ ಲಾಕ್‌ಡೌನ್‌ನಿಂದ ಉಂಟಾಗಿದ್ದ ಮಾರುಕಟ್ಟೆ ಸಮಸ್ಯೆ, ಪ್ರವಾಹ ಮತ್ತು ಅತಿವೃಷ್ಟಿಯಿಂದ ನಷ್ಟ ಅನುಭವಿಸಿದ್ದ ರೈತರು ಈಗ ಅಕಾಲಿಕ ಮಳೆಯಿಂದಾಗಿ ಮತ್ತೆ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಬೆಳಗಾವಿ, ಖಾನಾಪುರ ಹಾಗೂ ಕಿತ್ತೂರು ಭಾಗದಲ್ಲಿ ಭತ್ತವನ್ನು ಬೆಳೆಯುತ್ತಾರೆ. ಕೊಯ್ಲಿನ ಸಮಯಕ್ಕೆ ಮಳೆಯಾದ ಕಾರಣ ರೈತರು ತೊಂದರೆ ಅನುಭವಿಸುತ್ತಿದ್ದಾರೆ.

ಕೊಯ್ಲು ಮಾಡಿದ್ದ ಭತ್ತವನ್ನು ಜಮೀನುಗಳಲ್ಲೇ ಬಣವೆ (ಮೆದೆ) ಹಾಕಿದ್ದರು. ಕೆಲವೆಡೆ ಕೊಯ್ಲು ಮಾಡಿ ಒಣಗಲು ಗದ್ದೆಯಲ್ಲಿ ಬಿಟ್ಟಿದ್ದ ಭತ್ತ ನೀರುಪಾಲಾಗಿದೆ. ನೀರು ಇಂಗುವವರೆಗೆ ಹಾಗೂ ಹುಲ್ಲು ಒಣಗುವವರೆಗೆ ಕಾಯುವ ಸ್ಥಿತಿ ನಿರ್ಮಾಣವಾಗಿದೆ.

ಕೃಷಿ ಇಲಾಖೆ ಮಾಹಿತಿ ಪ್ರಕಾರ, ಒಟ್ಟಾರೆ 60 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಭತ್ತದ ಬೆಳೆ ಇದೆ. ಖಾನಾಪುರದಲ್ಲಿ ಅತಿ ಹೆಚ್ಚು ಅಂದರೆ 46 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬೆಳೆಯಲಾಗಿದೆ. ಬಹುತೇಕ ಭತ್ತ ಕೊಯ್ಲಿಗೆ ಬಾಕಿ ಇದೆ. ಈ ಪೈಕಿ ನೂರಾರು ಎಕರೆ ಬೆಳೆ ಹಾನಿಯಾಗಿದೆ. ಪ್ರಾಥಮಿಕ ಮಾಹಿತಿ ಪ್ರಕಾರ, ಸಾವಿರಾರು ಎಕರೆ ಭತ್ತಕ್ಕೆ ಹಾನಿಯಾಗಿದೆ.

ಬೆಳಗಾವಿ, ಖಾನಾಪುರ ತಾಲ್ಲೂಕಿನಲ್ಲಿ ಭತ್ತಕ್ಕೆ ಹಾನಿಯಾಗಿರುವ ಮಾಹಿತಿ ಇದೆ. ಸ್ಥಳೀಯ ಅಧಿಕಾರಿಗಳಿಂದ ಮಾಹಿತಿ ಪಡೆದು ಕ್ರಮ ಕೈಗೊಳ್ಳಲಾಗುವುದು

ಶಿವನಗೌಡ ಪಾಟೀಲ
ಕೃಷಿ ಇಲಾಖೆ ಜಂಟಿ ನಿರ್ದೇಶಕ

ಕಂಗ್ರಾಳಿ ಬಿ.ಕೆ., ಕಂಗ್ರಾಳಿ ಕೆ.ಎಚ್., ಯಳ್ಳೂರು, ಮಚ್ಚೆ, ವಡಗಾವಿ, ದೇಸೂರು, ಕಾಕತಿ, ಹಿಂಡಲಗಾ ಮೊದಲಾದ ಕಡೆಗಳಲ್ಲಿ ಕೊಯ್ಲಿಗೆ ಬಂದಿದ್ದ ಭತ್ತದ ಬೆಳೆ ಜಲಾವೃತವಾಗಿದೆ. ವಿಶೇಷ ತಳಿಯಾದ 'ಬೆಳಗಾವಿ ಬಾಸುಮತಿ' ಕೂಡ ಹಾಳಾಗಿದೆ.

'ಮತ್ತೆ ಮಳೆ ಮುಂದುವರಿದರೆ ಕೊಯ್ಲು ಮಾಡಿದ ಭತ್ತ ಜಮೀನಿನಲ್ಲೇ ಮೊಳಕೆ ಬರುವ ಸಾಧ್ಯತೆಯೂ ಇದೆ. ಸಮರ್ಪಕ ಪರಿಹಾರ ನೀಡಬೇಕು' ಎನ್ನುವುದು ರೈತರ ಆಗ್ರಹವಾಗಿದೆ.

ಅಲ್ಲಲ್ಲಿ ಕಬ್ಬು ಕಟಾವಿಗೂ ತೊಂದರೆ: 'ಬೆಳಗಾವಿ ಬಾಸುಮತಿ ಭತ್ತ ಎಕರೆಗೆ 20 ಕ್ವಿಂಟಲ್ ಬರುತ್ತಿತ್ತು. ತಲಾ ₹3 ಸಾವಿರದಂತೆ ಮಾರಿದರೂ ₹ 60 ಸಾವಿರ ಸಿಗುತ್ತಿತ್ತು. ಅದನ್ನು ಸರ್ಕಾರ ತುಂಬಿಕೊಡಬೇಕು' ಎಂದು ಯಳ್ಳೂರಿನ ರೈತ ರಾಜು ಒತ್ತಾಯಿಸಿದರು.

'ಮಂಗಳವಾರ ಜಿಲ್ಲೆಯ ವಿವಿಧೆಡೆ ಸುರಿದ ಮಳೆಯಿಂದಾಗಿ, ರಾಮದುರ್ಗ, ಸವದತ್ತಿ, ಬೈಲಹೊಂಗಲ, ಗೋಕಾಕ, ಮೂಡಲಗಿ ಮೊದಲಾದ ತಾಲ್ಲೂಕುಗಳಲ್ಲಿ ಹಿಂಗಾರು ಹಂಗಾಮಿನ ಹಲವು ಬೆಳೆಗಳಿಗೆ ಸಾಕಷ್ಟು ಅನುಕೂಲವಾಗಿದೆ. ಕೆಲವೆಡೆ ಹಾನಿಯಾಗಿದೆ' ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಶಿವನಗೌಡ ಪಾಟೀಲ ತಿಳಿಸಿದರು.

ಜಿಟಿಜಿಟಿ ಮಳೆ, ಗಾಳಿ: ನೆಲಕ್ಕುರುಳಿದ ಭತ್ತದ ಬೆಳೆ

ಪ್ರಜಾವಾಣಿ ವಾರ್ತೆ

ಕೊಪ್ಪಳ/ರಾಯಚೂರು: ಜಿಟಿಜಿಟಿ ಮಳೆ ಹಾಗೂ ಗಾಳಿಯಿಂದಾಗಿ ಕೊಪ್ಪಳ, ರಾಯಚೂರು ಜಿಲ್ಲೆಯ ಹಲವೆಡೆ, ಕಟಾವು ಹಂತಕ್ಕೆ ಬಂದಿದ್ದ ಭತ್ತದ ಬೆಳೆ ನೆಲಕ್ಕೆ ಉರುಳಿದೆ. ಮೋಡ ಕವಿದ ವಾತಾವರಣ, ತೇವಾಂಶ ಹೆಚ್ಚಾಗಿರುವುದರಿಂದ ಕಟಾವು ಮಾಡಲು ಆಗುತ್ತಿಲ್ಲ. ಭತ್ತ ಕಪ್ಪಾಗುವ ಆತಂಕ ಎದುರಾಗಿದೆ.

ಕೊಪ್ಪಳ ಜಿಲ್ಲೆಯ ತುಂಗಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ 35 ಸಾವಿರಕ್ಕೂ ಹೆಚ್ಚು ಹೆಕ್ಟೇರ್ ಪ್ರದೇಶದಲ್ಲಿ ಭತ್ತ ನಾಟಿ ಮಾಡಿದ್ದು, ಗಂಗಾವತಿ, ಕಾರಟಗಿ ತಾಲ್ಲೂಕುಗಳಲ್ಲಿ ಹೆಚ್ಚು ಬೆಳೆ ನೆಲಕ್ಕುರುಳಿದೆ.

'ನಾಲ್ಕು ತಿಂಗಳಿನ ಕಾಲ ಬೆಳೆಯನ್ನು ಜೋಪಾನವಾಗಿ ಕಾಪಾಡಿಕೊಂಡಿದ್ದೆವು. ಆದರೆ, ಇದೀಗ ಬೆಳೆ ಸಂಪೂರ್ಣ ನಾಶವಾಗಿದೆ' ಎನ್ನುತ್ತಾರೆ ಗಂಗಾವತಿಯ ರೈತ ಶಂಕ್ರಪ್ಪ.

ಒಟ್ಟು ಬಿತ್ತನೆಯಲ್ಲಿ ಶೇ 30 ರಷ್ಟು ಬೆಳೆ ಕಟಾವು ಮಾಡಿದ್ದು, ಭತ್ತಕ್ಕೆ ಸರಿಯಾದ ಬೆಲೆ ಸಿಗದೆ ರೈತರು ಆತಂಕಕ್ಕೆ ಒಳಗಾಗಿದ್ದಾರೆ. ಪ್ರಸ್ತುತ ಮಾರುಕಟ್ಟೆಯಲ್ಲಿ 1010 ತಳಿಯ ಭತ್ತ ಪ್ರತಿ ಕ್ವಿಂಟಲ್‌ಗೆ ₹ 1,100ರಿಂದ ₹1120, ಕಾವೇರಿ ಸೋನಾ ₹ 1230ರಿಂದ ₹ 1300, ಆರ್.ಎನ್.ಆರ್ ₹ 1350ರಿಂದ ₹ 1430, ಸೋನಾ ₹ 1220ರಿಂದ ₹ 1270 ಬೆಲೆ ಇದೆ.

'ದೀಪಾವಳಿ ಹಬ್ಬದ ನಂತರ ಭತ್ತ ಖರೀದಿ ಮಾಡುವುದು ವಾಡಿಕೆ. ಆದರೆ ಈ ಬಾರಿ ದೀಪಾವಳಿ ಕಳೆದು 15 ದಿನಗಳಾದರೂ ಭತ್ತ ಖರೀದಿಗೆ ವರ್ತಕರು ಆಸಕ್ತಿ ತೋರುತ್ತಿಲ್ಲ. ಸರ್ಕಾರ ಬೆಂಬಲ ಬೆಲೆಯಡಿ ನೋಂದಣಿ ಮಾಡಿಕೊಳ್ಳಲು ತಿಳಿಸಿದ್ದಾರೆ. ಅಲ್ಲಿ ಗುಣಮಟ್ಟ ಕೇಳುತ್ತಾರೆ' ಎನ್ನುತ್ತಾರೆ ಸಣ್ಣಾಪುರದ ರೈತ ಶಾಂತಕುಮಾರ.

ಮಂಗಳವಾರ ರಾತ್ರಿ ಸುರಿದ ಮಳೆಯಿಂದಾಗಿ ರಾಯಚೂರು ತಾಲ್ಲೂಕಿನ ಚಂದ್ರಬಂಡಾ, ದೇವಸುಗೂರು ಹೋಬಳಿ, ಸಿಂಧನೂರು ತಾಲ್ಲೂಕಿನ ಗಾಂಧಿನಗರ, ಸಾಸಲಮರಿ ಕ್ಯಾಂಪ್, ಜವಳಗೇರಾ, ಪಗಡದಿನ್ನಿ, ಕುರುಕುಂದಿ, ಹಂಚಿನಾಳ, ಹಂಚಿನಾಳ ಕ್ಯಾಂಪ್, ಉಪ್ಪಲದೊಡ್ಡಿ, ಕೋಳಬಾಳ, ಮಸ್ಕಿ ತಾಲ್ಲೂಕಿನ ಕಾಚಾಪುರ, ಸಿರವಾರ ತಾಲ್ಲೂಕಿನ ಶಿವನಗರ ಕ್ಯಾಂಪ್ ಹಾಗೂ ದೇವದುರ್ಗ ತಾಲ್ಲೂಕಿನ ಜಾಲಹಳ್ಳಿ ಹೋಬಳಿ ಗ್ರಾಮಗಳಲ್ಲಿ ಭತ್ತ ನೆಲಕಚ್ಚಿದೆ.

'ಹತ್ತಿ ಬಿಡಿಸುವುದಕ್ಕೆ ಕೂಲಿಕಾರರು ಸಿಗುವುದೇ ದುಬಾರಿಯಾಗಿತ್ತು. ಈಗ ಮಳೆ ಕಾರಣದಿಂದ ರೈತರು ಬೆಳೆ ನಷ್ಟ ಅನುಭವಿಸುವ ಸ್ಥಿತಿ ಬಂದಿದೆ. ಇದೇ ಸ್ಥಿತಿ ಮುಂದುವರಿದರೆ ಹತ್ತಿ ಕಪ್ಪಾಗುತ್ತದೆ' ಎಂದು ಜಾಲಿಬೆಂಚಿ ಗ್ರಾಮದ ಹತ್ತಿ ಬೆಳೆಗಾರ ಹುಲಿಗೆಪ್ಪ ಅಳಲು ತೋಡಿಕೊಂಡರು.

ಈರುಳ್ಳಿ ಬೆಳೆ ಹಾನಿ: ರಾಯಚೂರು ಜಿಲ್ಲೆಯ ಕವಿತಾಳ ಪಟ್ಟಣ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಸುರಿದ ಮಳೆಯಿಂದಾಗಿ ಈರುಳ್ಳಿ ಬೆಳೆಗೆ ಹಾನಿಯಾಗಿದೆ.

'ಕೊಳೆ ರೋಗದಿಂದ ಈರುಳ್ಳಿ ಭೂಮಿಯಲ್ಲಿಯೇ ಕೊಳೆಯುತ್ತಿದೆ. ಇದೀಗ ಉಳಿದ ಅಲ್ಪ ಸ್ವಲ್ಪ ಬೆಳೆಯೂ ಮಳೆಯಿಂದ ಹಾನಿಯಾಗಿದೆ' ಎಂದು ಮಸ್ಕಿ ತಾಲ್ಲೂಕಿನ ಕಾಚಾಪುರ ಗ್ರಾಮದ ರೈತ ಪೊತ್ನಾಳ ಈರಣ್ಣ ನಾಯಕ ಹೇಳಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.80	15,609	18,469
ಹಾರಂಗಿ	2,859	2,857.90	1,102	600
ಕಬಿನಿ	2,284	2,283.97	3,100	2,500
ಹೇಮಾವತಿ	2,922	2,909.52	6,887	2,316
ಲಿಂಗನಮಕ್ಕಿ	1,819	1,813.65	5,052	-
ಸೂಪಾ (ಮೀ)	564	555.35	2,135	2,135
ಮಾಣಿ	594.36	586.72	659	-
ತುಂಗಭದ್ರಾ	1,633	1,632.54	25,412	8,318
ಮಲಪ್ರಭಾ	2,079.50	2,076.40	6,976	2,694
ಘಟಪ್ರಭಾ	2,175	2,166.85	-	2,363
ಭದ್ರಾ	186	185.90	4,078	2,862
ಆಲಮಟ್ಟಿ (ಮೀ)	519.60	518.39	-	10,509
ನಾರಾಯಣಪುರ (ಮೀ)	492.25	491.57	9,760	7,131

* ನೆಲಮಟ್ಟದಿಂದ

1,335 ಹೆಕ್ಟೇರ್ ರಾಗಿ ಹಾನಿ

ಪ್ರಜಾವಾಣಿ ವಾರ್ತೆ

ಚಾಮರಾಜನಗರ/ಹಾಸನ: ಚಾಮರಾಜನಗರ ಜಿಲ್ಲೆಯಾದ್ಯಂತ ಕೆಲ ದಿನಗಳಿಂದ ನಿರಂತರವಾಗಿ ಸುರಿದ ಮಳೆಗೆ 1,566 ಹೆಕ್ಟೇರ್ (3,915 ಎಕರೆ) ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ.

ರಾಗಿ ಬೆಳೆಗೆ ಹೆಚ್ಚು ಹಾನಿಯಾಗಿದ್ದು, ಕಟಾವು ಸಾಧ್ಯವಾಗದೆ ಹಲವು ಕಡೆಗಳಲ್ಲಿ ತೆನೆಗಳು ನೆಲಕ್ಕೆ ಬಾಗಿವೆ. ಕೆಲವು ಕಡೆಗಳಲ್ಲಿ ತೆನೆಗಳಲ್ಲೇ ಮೊಳಕೆ ಬಂದಿದೆ. ಉತ್ತಮ ಇಳುವರಿಯ ನಿರೀಕ್ಷೆಯಲ್ಲಿದ್ದ ರೈತರು ನಷ್ಟದ ಸುಳಿಗೆ ಸಿಲುಕಿದ್ದಾರೆ.

ಜಿಲ್ಲೆಯಲ್ಲಿ ಮುಂಗಾರು ಅವಧಿಯಲ್ಲಿ 17,266 ಹೆಕ್ಟೇರ್ ಪ್ರದೇಶದಲ್ಲಿ ರಾಗಿ ಬೆಳೆಯಲಾಗಿತ್ತು. ಕೃಷಿ ಇಲಾಖೆಯ ಪ್ರಕಾರ, ಮಳೆಯಿಂದಾಗಿ 1,335 ಹೆಕ್ಟೇರ್ ಪ್ರದೇಶದಲ್ಲಿ ರಾಗಿ ನಷ್ಟವಾಗಿದೆ. ಆ ಪೈಕಿ, ಹನೂರು ತಾಲ್ಲೂಕಿನಲ್ಲೇ 1,100 ಹೆಕ್ಟೇರ್‌ನಲ್ಲಿ ಫಸಲು ನೀರು ಪಾಲಾಗಿದೆ. ಚಾಮರಾಜನಗರ ತಾಲ್ಲೂಕಿನಲ್ಲಿ 205 ಹೆಕ್ಟೇರ್ ಪ್ರದೇಶದಲ್ಲಿ ಹಾನಿಯಾಗಿದೆ. 120 ಹೆಕ್ಟೇರ್ ಕಡಲೆ, 91 ಹೆಕ್ಟೇರ್ ಜೋಳ, 10 ಹೆಕ್ಟೇರ್ ನೆಲಗಡಲೆ ಬೆಳೆ ನಷ್ಟವಾಗಿದೆ.

ನೆಲಕಚ್ಚಿದ ರಾಗಿ: ಹಾಸನ ಜಿಲ್ಲೆಯಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆಯಿಂದಾಗಿ ತೋಟ, ಗದ್ದೆ ಹಾಗೂ ಕೃಷಿ ಜಮೀನು ಜಲಾವೃತಗೊಂಡಿವೆ.

ಕಟಾವು ಹಂತದಲ್ಲಿರುವ ಹಾಗೂ ಕಟಾವು ಮಾಡಿರುವ ರಾಗಿ ಬೆಳೆ ನಾಶವಾಗಿದೆ. ಬೇಲೂರು ತಾಲ್ಲೂಕಿನಲ್ಲಿ, ಕೃಷಿ ಇಲಾಖೆ ಮಾಹಿತಿ ಪ್ರಕಾರ 19 ಸಾವಿರ ಹೆಕ್ಟೇರ್ ರಾಗಿ ಮತ್ತು ಸಾವಿರ ಹೆಕ್ಟೇರ್ ಮೆಕ್ಕೆಜೋಳ ನಾಶವಾಗಿದೆ.

ಮರಗಳು ಧರೆಗೆ: ಮೈಸೂರಿನ ಲಕ್ಷ್ಮೀಪುರಂ ಪೊಲೀಸ್ ಠಾಣೆ ಎದುರಿನ ಮನೆ ಮೇಲೆ ಬುಧವಾರ ನಸುಕಿನಲ್ಲಿ ಬೃಹತ್ ಗಾತ್ರದ ಮರ ಉರುಳಿದೆ. ಮನೆಗೆ ಭಾಗಶಃ ಹಾನಿಯಾಗಿದೆ.



ನಿರಂತರ ಮಳೆಯಿಂದಾಗಿ ರಾಗಿ ತೆನೆ ಮೊಳಕೆ ಒಡೆದಿರುವುದು

ಚಾವಣಿ ಕುಸಿತ; ವ್ಯಕ್ತಿ ಪಾರು

ಮೈಸೂರು: ಬುಧವಾರ ಸಂಜೆ ಸುರಿದ ಭಾರಿ ಮಳೆಗೆ ಇಲ್ಲಿನ ಅಗ್ರಹಾರದ ಉತ್ತರಾದಿಮಠದ ರಸ್ತೆಯಲ್ಲಿ ಮನೆ ಚಾವಣಿ ಕುಸಿದು ಮಣ್ಣಿನ ರಾಶಿಯಲ್ಲಿ ಸಿಲುಕಿದ್ದ ರಾಮನಾಥ್ (72) ಎಂಬುವವರನ್ನು ಜಿಲ್ಲಾ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಸಿಬ್ಬಂದಿ ಬುಧವಾರ ರಾತ್ರಿ ರಕ್ಷಿಸಿದರು.

'ಅವಿವಾಹಿತರಾಗಿದ್ದ ಅವರು ಒಬ್ಬರೇ ವಾಸವಿದ್ದರು. ಪ್ರಥಮ ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದೊಯ್ಯಲಾಗಿದೆ' ಎಂದು ಜಿಲ್ಲಾ ಮುಖ್ಯ ಅಗ್ನಿಶಾಮಕ ಅಧಿಕಾರಿ ರಮೇಶ್ ತಿಳಿಸಿದರು.

ನಿರಂತರ ಮಳೆ: ಕೊಳೆಯುತ್ತಿವೆ ಬೆಳೆಗಳು

ಹಿರಿಯೂರು: ಐದಾರು ದಿನಗಳಿಂದ ಎಡೆಬಿಡದೆ ಸುರಿಯುತ್ತಿರುವ ಮಳೆಗೆ ತಾಲ್ಲೂಕಿನಲ್ಲಿ 17 ಮನೆಗಳಿಗೆ ಹಾನಿಯಾಗಿದ್ದು, ಹಲವೆಡೆ ಕಟಾವಿಗೆ ಬಂದಿದ್ದ ಬೆಳೆಗಳು ನೀರಿನಲ್ಲಿ ಕೊಳೆಯುತ್ತಿವೆ.

ದೇವರಕೊಟ್ಟ ಗ್ರಾಮದಲ್ಲಿ ಎರಡು ಎಕರೆಯಲ್ಲಿ ಕಟಾವಿಗೆ ಬಂದಿದ್ದ ಭತ್ತ ಸಂಪೂರ್ಣ ಕೊಳೆತುಹೋಗಿದೆ. ಹೊಸದುರ್ಗ ತಾಲ್ಲೂಕಿನಲ್ಲಿ ಕಟಾವಿಗೆ ಬಂದಿದ್ದ ಪ್ರಮುಖ ಬೆಳೆಗಳಿಗೆ ಹಾನಿಯಾಗಿದೆ. ಮೆಕ್ಕೆಜೋಳ, ಹತ್ತಿ, ಕಡಲೆ ಬೆಳೆಗಳಿಗೂ ಹಾನಿಯಾಗಿದೆ. ಹಿಹೊಸದುರ್ಗ ತಾಲ್ಲೂಕಿನಲ್ಲಿ 10, ಶ್ರೀರಾಂಪುರದಲ್ಲಿ 4 ಮನೆಗಳಿಗೆ ಹಾನಿಯಾಗಿದೆ.

ಚಳ್ಳಕೆರೆ ತಾಲ್ಲೂಕಿನಲ್ಲಿ ಏಳು ಕುರಿಗಳು ಸಿಡಿಲು ಬಡಿದು ಮೃತಪಟ್ಟಿವೆ. ಹೊಸದುರ್ಗ ತಾಲ್ಲೂಕಿನಲ್ಲಿ 10 ಕುರಿಗಳು ನೀರಿನಲ್ಲಿ ಮುಳುಗಿವೆ. 23 ಕುರಿಗಳು ನೀರಿನಲ್ಲಿ ಕೊಚ್ಚಿ ಹೋಗಿವೆ.

ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ಮಲೇಬೆನ್ನೂರು ಹೋಬಳಿ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ಮಂಗಳವಾರ ತಡರಾತ್ರಿ ಸುರಿದ ಮಳೆಗೆ 500 ಎಕರೆ ಭತ್ತ ನೆಲ ಕಚ್ಚಿದೆ. ಹೊನ್ನಾಳಿ ತಾಲ್ಲೂಕಿನ ಬೇಲಿಮಲ್ಲೂರು ಗ್ರಾಮದಲ್ಲಿ ನಾಲ್ಕು ಮನೆಗಳಿಗೆ ಮಳೆ ನೀರು ನುಗ್ಗಿತ್ತು. ಇದರಿಂದ ಆಕ್ರೋಶಗೊಂಡ ಜನ ಬೇಲಿಮಲ್ಲೂರು-ನಂದಿಗುಡಿ ಮುಖ್ಯ ರಸ್ತೆಯನ್ನು ಬಂದ್ ಮಾಡಿ ಪ್ರತಿಭಟನೆ ನಡೆಸಿದರು. ಚನ್ನಗಿರಿ ತಾಲ್ಲೂಕಿನಲ್ಲಿ ಮಳೆಯಿಂದ 6 ಮನೆಗಳಿಗೆ ಭಾಗಶಃ ಹಾನಿಯಾಗಿದೆ.

ಕಲಬುರಗಿ: ಹೈಕೋರ್ಟ್ ಮೊರೆ ಹೋಗಿದ್ದ ಕಾಂಗ್ರೆಸ್

ಪ್ರತಿಕ್ರಿಯೆ ಸಲ್ಲಿಸಲು ಸರ್ಕಾರ, ಪರಿಷತ್ ಸದಸ್ಯರಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಲಬುರಗಿ ದಕ್ಷಿಣ ವಿಧಾನಸಭಾ ಮತಕ್ಷೇತ್ರದ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಸೇರ್ಪಡೆ ಮಾಡಲು ಬಿಜೆಪಿಯ ಏಳು ಜನ ವಿಧಾನ ಪರಿಷತ್ ಸದಸ್ಯರು ಅರ್ಜಿ ಸಲ್ಲಿಸಿದ್ದನ್ನು ಪ್ರಶ್ನಿಸಿ ಕಲಬುರಗಿ ಮಹಾನಗರ ಪಾಲಿಕೆಯ ಕಾಂಗ್ರೆಸ್ ಸದಸ್ಯರು ಸಲ್ಲಿಸಿರುವ ರಿಟ್ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್‌ನ ಕಲಬುರಗಿ ಪೀಠವು, ಈ ಬಗ್ಗೆ ಪ್ರತಿಕ್ರಿಯೆ ಸಲ್ಲಿಸಲು ಈ ಏಳೂ ವಿಧಾನ ಪರಿಷತ್ ಸದಸ್ಯರಿಗೆ ಹಾಗೂ ಸರ್ಕಾರಕ್ಕೆ ನೋಟಿಸ್ ನೀಡಲು ಸೂಚಿಸಿತು.

'ಮೇಯರ್, ಉಪಮೇಯರ್ ಹಾಗೂ ಸ್ಥಾಯಿ ಸಮಿತಿ ಅಧ್ಯಕ್ಷರ ಚುನಾವಣೆಯಲ್ಲಿ ಮತ ಚಲಾಯಿಸುವ ಉದ್ದೇಶದಿಂದ ಕಲಬುರಗಿ ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸಲು ಬಿಜೆಪಿಯ ವಿಧಾನ ಪರಿಷತ್ ಸದಸ್ಯರಾದ ಲಕ್ಷ್ಮಣ ಸವದಿ, ತುಳಸಿ ಮುನಿರಾಜುಗೌಡ, ಭಾರತಿ ಶೆಟ್ಟಿ, ಪ್ರತಾಪ ಸಿಂಹ ನಾಯಕ್, ಲೆಹರ್ ಸಿಂಗ್, ರಘುನಾಥ ಮಲ್ಕಾಪುರೆ, ಡಾ. ತಳವಾರ ಸಾಬಣ್ಣ ಅವರು ಅರ್ಜಿ ಸಲ್ಲಿಸಿದ್ದಾರೆ. ಅವರ ಹೆಸರನ್ನು ಮತದಾರರ ಪಟ್ಟಿಯಲ್ಲಿ ಸೇರಿಸಲು ಅವಕಾಶ ನೀಡಬಾರದು' ಎಂದು ಮಹಾನಗರ ಪಾಲಿಕೆಯ ಕಾಂಗ್ರೆಸ್ ಸದಸ್ಯರಾದ ವರ್ಷಾ ಜಾನೆ ಹಾಗೂ ತೃಪ್ತಿ ಲಾಖೆ ಅವರು ರಿಟ್ ಅರ್ಜಿ ಸಲ್ಲಿಸಿದ್ದರು.


ಬುಧವಾರ ಅರ್ಜಿಯ ವಿಚಾರಣೆ ಕೈಗೆತ್ತಿಕೊಂಡ ನ್ಯಾಯಮೂರ್ತಿ ಎಂ.ಐ. ಅರುಣ್ ಅವರಿದ್ದ ಪೀಠ, ಇದೇ 29ಕ್ಕೆ ಪ್ರತಿಕ್ರಿಯೆ ಸಲ್ಲಿಸುವಂತೆ ಸರ್ಕಾರದ ಪರ ವಕೀಲರಿಗೆ ಸೂಚಿಸಿತು. ಅರ್ಜಿದಾರರ ಪರವಾಗಿ ಹೈಕೋರ್ಟ್‌ನ ಹಿರಿಯ ವಕೀಲ ಎ.ಎಸ್. ಪೊನ್ನಣ್ಣ ವಾದ ಮಂಡಿಸಿದರು.

'ಪ್ರಾದೇಶಿಕ ಆಯುಕ್ತರ ನಿರ್ಧಾರದ ವಿರುದ್ಧ ದೂರು': 'ಮಹಾನಗರ ಪಾಲಿಕೆಯ ಮೇಯರ್, ಉಪಮೇಯರ್ ಚುನಾವಣೆಯನ್ನು ಮುಂದೂಡುವ ಅಗತ್ಯವೇ ಇರಲಿಲ್ಲ. ಸಕಾಲಕ್ಕೆ ಚುನಾವಣೆಗಳು ನಡೆಯಬೇಕು ಎಂದು ಭಾರತ ಚುನಾವಣಾ ಆಯೋಗವು 2016ರಲ್ಲಿ ಹೊರಡಿಸಿರುವ ಕೈಪಿಡಿಯಲ್ಲಿ ತಿಳಿಸಿದೆ. ಕಲಬುರಗಿ ಪ್ರಾದೇಶಿಕ ಆಯುಕ್ತರು ಸರ್ಕಾರದ ಒತ್ತಡಕ್ಕೆ ಮಣಿದು ಚುನಾವಣೆ ಮುಂದಕ್ಕೆ ಹಾಕಿದ್ದಾರೆ' ಎಂದು ಕೆಪಿಸಿಸಿ ವಕ್ತಾರ ಡಾ. ಶರಣಪ್ರಕಾಶ ಪಾಟೀಲ ಆರೋಪಿಸಿದರು.

'ಈ ಕುರಿತು ಚುನಾವಣಾ ಆಯೋಗದ ಅಧಿಕಾರಿಗಳೊಂದಿಗೆ ಮಾತನಾಡಿದ್ದೇವೆ. ಚುನಾವಣೆ ಮುಂದೂಡುವಂತೆ ಯಾವುದೇ ನಿರ್ದೇಶನ ನೀಡಿಲ್ಲ ಎಂದು ಹೇಳಿದ್ದಾರೆ. ಹೀಗಾಗಿ, ನ್ಯಾಯಬದ್ಧವಾಗಿ ಕೆಲಸ ಮಾಡುವಲ್ಲಿ ವಿಫಲರಾಗಿರುವ ಪ್ರಾದೇಶಿಕ ಆಯುಕ್ತರ ವಿರುದ್ಧ ಆಯೋಗಕ್ಕೆ ದೂರು ನೀಡಲಿದ್ದೇವೆ' ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಗ್ರೂಪ್-ಸಿ ತಾಂತ್ರಿಕೇತರ ಹುದ್ದೆ

ಕರ್ನಾಟಕದ ಸಾಂಸ್ಕೃತಿಕ ಇತಿಹಾಸ



ಭಾಗ-3

ಕರ್ನಾಟಕ ಲೋಕ ಸೇವಾ ಆಯೋಗವು ಗ್ರೂಪ್ ಸಿ ವೃಂದದ ತಾಂತ್ರಿಕೇತರ ಹುದ್ದೆಗಳ ನೇಮಕಕ್ಕಾಗಿ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗೆ ಸಾಮಾನ್ಯ ಜ್ಞಾನ ವಿಷಯದಲ್ಲಿ 'ಕರ್ನಾಟಕದ ಸಾಮಾಜಿಕ ಮತ್ತು ಸಾಂಸ್ಕೃತಿಕ ಇತಿಹಾಸ' ವಿಭಾಗದಲ್ಲಿ ಸಾಂಸ್ಕೃತಿಕ ಇತಿಹಾಸ ವಿಷಯದ ಕುರಿತ ಬಹುಆಯ್ಕೆ ಪ್ರಶ್ನೆಗಳು.

1. ಈ ಕೆಳಗಿನ ಯಾವ ದೇವಾಲಯದಲ್ಲಿ ಪಂಚತಂತ್ರದ ಕಥೆಗಳು ಶಿಲ್ಪದಲ್ಲಿ ಮೂಡಿ ಬಂದಿವೆ ಹಾಗೂ ಮೊಲ, ಆಮೆ, ನರಿ, ಕೋತಿ, ಹಂಸಗಳ ಕಥೆಯನ್ನು ಸುಂದರವಾಗಿ ಕೆತ್ತಲಾಗಿದೆ?

ಎ. ಇಟಗಿಯ ಮಹಾದೇವ

ಬಿ. ಬೆಳ್ಳಿಗಾವಿಯ ತ್ರಿಪುರಾಂತಕ ದೇವಾಲಯ

ಸಿ. ಲಕ್ಕುಂಡಿಯ ಬ್ರಹ್ಮ ಜಿನಾಲಯ

ಡಿ. ಗದಗಿನ ಸರಸ್ವತಿ ದೇವಾಲಯ

ಉತ್ತರ: ಬಿ (ಇದು ಕಲ್ಯಾಣ ಚಾಲುಕ್ಯರ ಕೊಡುಗೆಯಾಗಿದೆ)

2. ನಮ್ಮ ನಾಡದೇವತೆಯ ದೇವಾಲಯಗಳನ್ನು ಎಲ್ಲೆಲ್ಲಿ ನೋಡಬಹುದು?

ಎ. ಉತ್ತರ ಕನ್ನಡದ ಭುವನಗಿರಿ ಮತ್ತು ಹಂಪಿ

ಬಿ. ಮಂಗಳೂರು ಮತ್ತು ಹಂಪಿ

ಸಿ. ಉತ್ತರ ಕನ್ನಡದ ಭುವನಗಿರಿ ಮತ್ತು ಹುಮ್ನಾಬಾದ್

ಡಿ. ಚಾಮರಾಜ ನಗರ ಮತ್ತು ಧರ್ಮಸ್ಥಳ

ಉತ್ತರ:ಎ

3. …………… ದೇವಾಲಯದ ದಕ್ಷಿಣದ ಬಾಗಿಲನ್ನು 'ಶುಕ್ರವಾರದ ಬಾಗಿಲು' ಎಂದೇ ಕರೆಯುತ್ತಾರೆ. ಅಲ್ಲದೇ ಇದನ್ನು 'ಸ್ವರ್ಗದ ಬಾಗಿಲು' ಎಂದೂ ಕರೆಯುವುದು ವಾಡಿಕೆ.

ಎ. ಬೇಲೂರಿನ ಚೆನ್ನಕೇಶವ ದೇವಾಲಯ

ಬಿ. ಹಂಪಿಯ ವಿರೂಪಾಕ್ಷ ದೇವಾಲಯ

ಸಿ. ಶೃಂಗೇರಿಯ ವಿದ್ಯಾಶಂಕರ ದೇವಾಲಯ

ಡಿ. ಸೋಮನಾಥಪುರದ ಕೇಶವ ದೇವಾಲಯ

ಉತ್ತರ: ಎ

4. ದೇವಾಲಯದ ಗೋಡೆಯೊಂದರ ಮೇಲೆ ಶಿಲ್ಪದಲ್ಲಿರುವ ವರ್ಣನೆ ಹೀಗಿದೆ

ಕುದುರೆ ಸವಾರರು ಹಾಕಿರುವ ಬೂಟುಗಳು, ಉದ್ದವಾದ ನಿಲುವಂಗಿ, ರಥದ ಚಕ್ರಗಳಿಗಿರುವ ಸ್ಪ್ರಿಂಗ್ ಮಾದರಿಯ ರಚನೆಯನ್ನು ಶಿಲ್ಪಕಲಾಕೃತಿಯಲ್ಲಿ ಮೂಡಿ ಬಂದ ರೀತಿ ನೋಡಿದರೆ ಆಧುನಿಕ ಕಾಲವನ್ನು ಅದು ನೆನಪಿಸುತ್ತದೆ, ಯೋಧರು ಉದ್ದವಾದ ಕೊಳವೆಯನ್ನು ಹಿಡಿದು ನೋಡುವ ದೃಶ್ಯದ ಶಿಲ್ಪಗಳ ಚಿತ್ರಣವು ಆ ಕಾಲದಲ್ಲಿಯೇ ದೂರದರ್ಶಕ ಉಪಯೋಗದಲ್ಲಿತ್ತೇನೋ ಎಂಬಂತೆ ಭಾಸವಾಗುತ್ತದೆ.

ಮೇಲಿನ ವರ್ಣನೆಯು ಯಾವ ದೇವಾಲಯದಲ್ಲಿರುವ ಶಿಲ್ಪ ಕಲಾಕೃತಿಗಳ ಬಗ್ಗೆ ತಿಳಿಸುತ್ತದೆ?

ಎ. ಹಂಪಿಯ ವಿರೂಪಾಕ್ಷ ದೇವಾಲಯ

ಬಿ. ಹಳೆಬೀಡಿನ ಹೊಯ್ಸಳೇಶ್ವರ ದೇವಾಲಯ

ಸಿ. ಬಾದಾಮಿಯ ಭೂತನಾಥ ದೇವಾಲಯ

ಡಿ. ಐಹೊಳೆಯ ಲಾಡ್ ಖಾನ್ ಮಂದಿರ

ಉತ್ತರ: ಬಿ

5. ಕೆಳಗಿನ ಹೇಳಿಕೆಗಳನ್ನು ಗಮನಿಸಿ

1. ಹೊಯ್ಸಳರ ಕಾಲದ ದೊಡ್ಡಗೆದ್ದವನಹಳ್ಳಿಯ ಲಕ್ಷ್ಮಿ ದೇವಾಲಯವು ಬೇಲೂರಿನ ಚೆನ್ನಕೇಶವ ದೇವಾಲಯಕ್ಕಿಂತ 4 ವರ್ಷ ಮೊದಲು ನಿರ್ಮಿಸಿದ ದೇವಾಲಯವಾಗಿದ್ದು ನಾಲ್ಕು ಗರ್ಭಗೃಹಗಳನ್ನು ಹೊಂದಿರುವ ಚತುರ್ (4) ಕೂಟ ದೇವಾಲಯವಾಗಿದೆ.
2. ಐಹೊಳೆಯಲ್ಲಿರುವ ಲಾಡ್‌ಖಾನ್ ಮಂದಿರಕ್ಕೆ ಆ ಹೆಸರು ಬರಲು ಕಾರಣ ದೇವಾಲಯದ ಹತ್ತಿರದಲ್ಲಿದ್ದ ಗುಡಿಸಲಿನಲ್ಲಿ ಒಬ್ಬ ಮುಸಲ್ಮಾನ ವಾಸಿಸುತ್ತಿದ್ದ. ಹೀಗಾಗಿ ಅದಕ್ಕೆ ಆ ಹೆಸರೇ ರೂಢಿಯಾಯಿತು. ಆದರೆ ಇದೊಂದು ಶಿವ ದೇವಾಲಯವಾಗಿದೆ.
3. ಐಹೊಳೆಯ ಪಕ್ಕದಲ್ಲಿ ಒಂದು ಚಿಕ್ಕ ಗುಡ್ಡವಿದೆ. ಅದರ ಮೇಲೆ ಎದ್ದು ಕಾಣುವ ದೇವಾಲಯವೇ ಮೇಗುತಿ ಗುಡಿ. ಇದನ್ನು 2ನೇ ಪುಲಕೇಶಿ ಕಾಲದ ರವಿ ಕೀರ್ತಿ ಕಟ್ಟಿಸಿದ. ಇದು ಗುಡ್ಡದ ಮೇಲಿರುವುದರಿಂದ ಜನರು ಮೇಲ್‌ಗುಡಿ ಎಂದು ಕರೆಯುತ್ತಿದ್ದರು. ಕಾಲಾನಂತರದಲ್ಲಿ ಅದೂ ಮೇಗುತಿ ಗುಡಿಯಾಗಿ ಜನರ ಬಾಯಲ್ಲಿ ಜನಜನಿತವಾಯಿತು.
4. ಮಲಪ್ರಭಾ ನದಿಯ ದಂಡೆಯ ಮೇಲೆ ಸ್ಥಿತ ಕಿಸವೊಳಲು ಎಂಬ ಪಟ್ಟಣವು ಪಟ್ಟದಕಲ್ಲು ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಇದು ಯುನೆಸ್ಕೋ ವಿಶ್ವ ಪರಂಪರಾ ತಾಣಗಳ ಪಟ್ಟಿಯಲ್ಲಿರುವ ಕರ್ನಾಟಕದ ಸಾಂಸ್ಕೃತಿಕ ಕೇಂದ್ರ. ಇಲ್ಲಿರುವ ಲೋಕೇಶ್ವರ ದೇವಾಲಯ ಪ್ರಸಿದ್ಧವಾದದ್ದು. ಇದನ್ನು ಇತ್ತೀಚೆಗೆ ವಿರೂಪಾಕ್ಷ ದೇವಾಲಯ ಎಂದು ಕರೆಯಲಾಗುತ್ತದೆ. ಈ ದೇವಾಲಯವನ್ನು ಅನಿವಾರಿತ ಗುಂಡ ಎಂಬ ಶಿಲ್ಪಿಯ ನೇತೃತ್ವದಲ್ಲಿ ಕಟ್ಟಲಾಯಿತು.

ಮೇಲಿನ ಹೇಳಿಕೆಗಳಲ್ಲಿ ಯಾವೆಲ್ಲಾ ಹೇಳಿಕೆಗಳು ಸರಿಯಾಗಿವೆ?

ಎ. ಹೇಳಿಕೆ 2, 3 ಮತ್ತು 4 ಮಾತ್ರ ಸರಿಯಾಗಿದೆ

ಬಿ. ಹೇಳಿಕೆ 1, 3 ಮತ್ತು 4 ಮಾತ್ರ ಸರಿಯಾಗಿದೆ

ಸಿ. ಹೇಳಿಕೆ 1 ರಿಂದ 4ರ ತನಕ ಎಲ್ಲವೂ ಸರಿಯಾಗಿದೆ

ಡಿ. ಮೇಲಿನ ಯಾವ ಹೇಳಿಕೆಯೂ ಸರಿಯಾಗಿಲ್ಲ.

ಉತ್ತರ: ಸಿ

6. ಭುವನೇಶ್ವರಿ ಹೊಯ್ಸಳರ ವಾಸ್ತು ಶಿಲ್ಪದ ವೈಶಿಷ್ಟ್ಯವಾಗಿದೆ. ಹಾಗಾದರೆ ಭುವನೇಶ್ವರಿ ಎಂದರೆ…

ಎ. ಹೊಯ್ಸಳ ದೇವಾಲಯಗಳ ನವರಂಗದ ಮೇಲ್ಛಾವಣಿಯಲ್ಲಿನ ನಾಲ್ಕು ಕಂಬಗಳ ಮಧ್ಯೆ ನಿರ್ಮಿಸಲಾದ ಅಲಂಕಾರಕ್ಕೆ ಭುವನೇಶ್ವರಿ ಎಂದು ಹೆಸರು.

ಬಿ. ಲೇಥ್ ಯಂತ್ರದಿಂದ ನಿರ್ಮಿಸಿದಂತೆ ನುಣುಪಾಗಿ, ನಾಜೂಕಾಗಿ ಕಡೆದ ಕಂಬಗಳೆಲ್ಲ ಮೇಲ್ನೋಟಕ್ಕೆ ಒಂದೇ ರೀತಿ ಕಂಡರೂ ಕೂಡ ಒಂದು ಇನ್ನೊಂದರಂತೆ ಇರುವುದಿಲ್ಲ. ಅವುಗಳಿಗೆ ಭುವನೇಶ್ವರಿಗಳು ಎಂದು ಹೆಸರು.

ಸಿ. ಹೊಯ್ಸಳ ಕಾಲದ ದೇವಾಲಯಗಳು ಸಾಮಾನ್ಯವಾಗಿ 3 ರಿಂದ 5 ಅಡಿಗಳ ಎತ್ತರದ ನಕ್ಷತ್ರಾಕಾರದ ಜಗಲಿಯ ಮೇಲೆ ನಿರ್ಮಿಸಲಾಗಿದೆ. ಅವುಗಳಿಗೆ ಭುವನೇಶ್ವರಿಗಳು ಎಂದು ಹೆಸರು

ಡಿ. ಮೇಲಿನ ಯಾವುದೂ ಅಲ್ಲ.

ಉತ್ತರ: ಎ

7. ಯಾವ ದೇವಸ್ಥಾನವನ್ನು 'ದೇವಾಲಯ ಚಕ್ರವರ್ತಿ' ಎಂದು ಕಲ್ಯಾಣ ಚಾಲುಕ್ಯರ ಕಾಲದ ಶಾಸನವೊಂದು ತಿಳಿಸುತ್ತದೆ?

ಎ. ಕುಕ್ಕನೂರಿನ ನವಲಿಂಗ ದೇವಾಲಯ

ಬಿ. ಲಕ್ಕುಂಡಿಯ ಕಾಶಿವಿಶ್ವೇಶ್ವರ ದೇವಾಲಯ

ಸಿ. ಬಾದಾಮಿಯ ಭೂತನಾಥ ದೇವಾಲಯ

ಡಿ. ಇಟಗಿಯ ಮಹಾದೇವ ದೇವಾಲಯ

ಉತ್ತರ: ಡಿ

8. ಕೆಳಗಿನ ಹೇಳಿಕೆಗಳನ್ನು ಗಮನಿಸಿ

1. ಪ್ರಸ್ತುತ ಕರ್ನಾಟಕದಲ್ಲಿರುವ 3 ಸ್ಥಳಗಳು ಯುನೆಸ್ಕೋ ವಿಶ್ವ ಪರಂಪರಾ ಪಟ್ಟಿಯಲ್ಲಿದ್ದು ಅದರಲ್ಲಿ ಎರಡು ಸಾಂಸ್ಕೃತಿಕ ಕರ್ನಾಟಕಕ್ಕೆ ಸೇರಿದ ಪಟ್ಟದಕಲ್ಲು ಮತ್ತು ಹಂಪಿ ಎನ್ನೋದು ವಿಶೇಷವಾಗಿದೆ
2. ಐಹೊಳೆಯನ್ನು 'ವಾಸ್ತುಶಿಲ್ಪದ ಪ್ರಯೋಗಶಾಲೆ' ಎಂದಿದ್ದಾರೆ. ಯಾಕೆಂದರೆ ಇಲ್ಲಿ 70ಕ್ಕೂ ಹೆಚ್ಚು ಸಣ್ಣ ಪುಟ್ಟ ದೇವಾಲಯಗಳು ದೊರಕಿವೆ. ಇಲ್ಲಿನ ವಿವಿಧ ದೇವಾಲಯಗಳಲ್ಲಿ ಅನೇಕ ತರಹದ ಪ್ರಯೋಗಗಳನ್ನು ನಡೆಸಿ ವಿಜಯ ಸಾಧಿಸಿದ ಬಾದಾಮಿ ಚಾಲುಕ್ಯರ ಕಾಲದ ಶಿಲ್ಪಕಾರರು ಆ ಸಾಮ್ರಾಜ್ಯದ ಇತರ ನಗರಗಳಾದ ಪಟ್ಟದಕಲ್ಲು ಮತ್ತು ಬಾದಾಮಿಯಲ್ಲಿ ದೊಡ್ಡ ದೇವಾಲಯಗಳನ್ನು ಕಟ್ಟಲು ಪ್ರಾರಂಭಿಸಿದರು. ಐಹೊಳೆಯಲ್ಲಿ ಕಟ್ಟಿದ ಕಟ್ಟಡಗಳ ಅನುಭವವು ಮಾಗಿ ಪರಿಪಕ್ವವಾದ ಶಿಲ್ಪಕಲೆಯು ಪಟ್ಟದಕಲ್ಲಿನಲ್ಲಿ ಅರಳಿರುವುದನ್ನು ನೋಡುತ್ತೇವೆ.
3. ಬಾದಾಮಿಯಲ್ಲಿ ಭೂತನಾಥ ದೇವಾಲಯದ ಉತ್ತರಕ್ಕೆ ಮುಖ ಮಾಡಿದ ದೊಡ್ಡ ಕಲ್ಲು ಗುಡ್ಡೆಯನ್ನು ಕೊರೆದು ಗುಹಾಲಯಗಳನ್ನು ನಿರ್ಮಿಸಲಾಗಿದೆ. ನಾಲ್ಕು ಗುಹಾಲಯಗಳಿವೆ. ಇದರ ಪಕ್ಕದಲ್ಲಿ ಅಗತ್ಸ್ಯತೀರ್ಥ ಎಂಬ ಕೆರೆಯೂ ಇದೆ.
4. ಐಹೊಳೆಯಲ್ಲಿ ಮೇಗುತಿ ದೇವಾಲಯದ ಎದುರಿನಲ್ಲಿ ಉತ್ತರಕ್ಕಿರುವ ಚಿಕ್ಕ ಗುಡ್ಡದಲ್ಲಿ ಗುಹಾಲಯಗಳನ್ನು ನಿರ್ಮಿಸಲಾಗಿದೆ. ಮೊದಲ ಗುಹೆಯು ಶಿವ ದೇವಾಲಯವಾಗಿದೆ. ಎರಡನೇ ಗುಹೆಯಲ್ಲಿ ನಟರಾಜನ ವಿಗ್ರಹವಿದೆ. ಇದು ಹತ್ತು ಕೈಗಳನ್ನು ಹೊಂದಿದ್ದು ಹಾವುಗಳನ್ನು ಹಿಡಿದುಕೊಂಡಿದೆ, ಹತ್ತು ಕೈ ಉಳ್ಳ ವಿಗ್ರಹವನ್ನು ಜನರು ತಪ್ಪಾಗಿ ಅರ್ಥೈಸಿ ಅದನ್ನು 'ಹತ್ತು ಕೈಗಳ ರಾವಣ ಗುಡಿ' ಎಂದು ಕರೆಯುತ್ತಾರೆ. ಕಾಲಾನಂತರದಲ್ಲಿ ಜನಸಾಮಾನ್ಯರ ಬಾಯಲ್ಲಿ 'ರಾವಳಗುಡಿ' ನಂತರ 'ರಾವಳಪಿಡಿ' ಎಂದಾಗಿ ಹೆಸರು ಪಡೆಯಿತು. ಆದರೆ ಈ ಗುಹೆಯ ಮುಖ್ಯ ಭಾಗದಲ್ಲಿ ಶಿವಲಿಂಗ ಹಾಗೂ ಎದುರಿಗೆ ನಂದಿ ವಿಗ್ರಹ ಇರೋದನ್ನು ಗಮನಿಸಿದರೆ ಇದೊಂದು ಪಕ್ಕಾ ಶಿವ ದೇವಾಲಯವಾಗಿದೆ.

ಮೇಲಿನ ಹೇಳಿಕೆಗಳಲ್ಲಿ ಯಾವೆಲ್ಲಾ ಹೇಳಿಕೆಗಳು ಸರಿಯಾಗಿವೆ?

ಎ. ಹೇಳಿಕೆ 1, 2 ಮತ್ತು 4 ಮಾತ್ರ ಸರಿಯಾಗಿದೆ

ಬಿ. ಹೇಳಿಕೆ 1, 3 ಮತ್ತು 4 ಮಾತ್ರ ಸರಿಯಾಗಿದೆ

ಸಿ. ಹೇಳಿಕೆ 1 ರಿಂದ 4ರತನಕ ಎಲ್ಲವೂ ಸರಿಯಾಗಿದೆ

ಡಿ. ಮೇಲಿನ ಯಾವ ಹೇಳಿಕೆಯೂ ಸರಿಯಾಗಿಲ್ಲ.

ಉತ್ತರ: ಸಿ

9. ವಿಜಯನಗರ ಕಾಲದಲ್ಲಿ ಯಾವ ದೇವಾಲಯವು ರಾಜ ಪರಿವಾರದವರ ಪೂಜೆಗಾಗಿಯೇ ಬಳಸಲು ಕೃಷ್ಣದೇವರಾಯನು ಕಟ್ಟಿಸಿದ್ದನು?

ಎ. ವಿರೂಪಾಕ್ಷ ದೇವಾಲಯ

ಬಿ. ವಿಜಯ ವಿಠಲ ದೇವಾಲಯ

ಸಿ. ಹಜಾರ ರಾಮಸ್ವಾಮಿ ದೇವಾಲಯ

ಡಿ. ಬಾಲಕೃಷ್ಣ ದೇವಾಲಯ

ಉತ್ತರ: ಸಿ

10. ಮಹಾನವಮಿ ದಿಬ್ಬವನ್ನು 1513ರ ಹೊತ್ತಿಗೆ ಉದಯಗಿರಿಯನ್ನು ಗೆದ್ದು ಬಂದ ಕೃಷ್ಣ ದೇವರಾಯ ಕಟ್ಟಿಸಿದ. ಇಲ್ಲಿ ವಿಜಯನಗರದ ಕಾಲದಲ್ಲಿ ನಾಡಹಬ್ಬ ಮಹಾನವಮಿಯನ್ನು ಆಚರಿಸಲಾಗುತ್ತಿತ್ತು. ಹಾಗಾದರೆ ಇದು ಹಂಪಿಯಲ್ಲಿ ಯಾವ ದೇವಾಲಯದ ಹತ್ತಿರದಲ್ಲಿದೆ?

ಎ. ಹಜಾರ ರಾಮಸ್ವಾಮಿ ದೇವಾಲಯ

ಬಿ. ವಿರೂಪಾಕ್ಷ ದೇವಾಲಯ

ಸಿ. ಬಾಲಕೃಷ್ಣ ದೇವಾಲಯ

ಡಿ. ಗಾಣಗಿತ್ತಿ ದೇವಾಲಯ

ಉತ್ತರ: ಎ

11. ಕೆಳಗಿನ ಹೇಳಿಕೆಗಳನ್ನು ಗಮನಿಸಿ

1. ಮಹಾರಾಷ್ಟ್ರದ ಔರಂಗಾಬಾದ್ ಜಿಲ್ಲೆಯಲ್ಲಿರುವ ಎಲ್ಲೋರವು ಯುನೆಸ್ಕೋ ವಿಶ್ವಪಾರಂಪರಿಕ ತಾಣದ ಪಟ್ಟಿಗೆ ಸೇರಿದೆ. ಅಲ್ಲಿ 34 ಗುಹಾಲಯಗಳನ್ನು ನೋಡಬಹುದು. ಈ ಗುಹೆಗಳಲ್ಲಿ 15ನೇ ಗುಹೆಯಾದ ದಶಾವತಾರ ಗುಹೆಯು ಅತಿ ವಿಶಾಲವಾಗಿದ್ದು, 2 ಅಂತಸ್ತುಗಳನ್ನು ಒಳಗೊಂಡಿದೆ. ಇಲ್ಲಿಯೇ ದಂತಿದುರ್ಗನ ಶಾಸನವೂ ಇದೆ.
2. ಎಲ್ಲೋರದ ಗುಹೆಗಳಲ್ಲಿ 16ನೇ ಗುಹೆಯೇ ಪ್ರಸಿದ್ಧ ಕೈಲಾಸನಾಥ ದೇವಾಲಯವಾಗಿದೆ. ಇದು ರಾಷ್ಟ್ರಕೂಟರ ಸ್ಮಾರಕ ಕಟ್ಟಡಗಳಲ್ಲಿ ಅತ್ಯುತ್ತಮವಾದದ್ದು.
3. ಪ್ರಸ್ತುತ ಮಹಾರಾಷ್ಟ್ರದ ಔರಂಗಾಬಾದ್ ಬಳಿ ಎಲ್ಲೋರದ ದೇವಾಲಯವನ್ನು ಕನ್ನಡಿಗ ರಾಷ್ಟ್ರಕೂಟ ದೊರೆ 1ನೇ ಕೃಷ್ಣ ಕಟ್ಟಿಸಿದ್ದ ಎಂಬುದು ಹೆಮ್ಮೆಯ ಸಂಗತಿ
4. ಮುಂಬೈಯಿಂದ 7 ಮೈಲು ದೂರದಲ್ಲಿರುವ ನಡುಗಡ್ಡೆಯೇ ಎಲಿಫೆಂಟಾ. 'ಘಾರಾಪುರಿ' ಅಥವಾ ಗೋರವಪುರಿ ಎಂಬುದು ಅದರ ಪ್ರಾಚೀನ ಹೆಸರು. ಅಲ್ಲಿ ಮೂರು ಮುಖಗಳುಳ್ಳ ಶಿವನ ಭವ್ಯ ಶಿಲ್ಪವಿದೆ. ಈ ಮೂರು ಮುಖಗಳು ಶಿವನ ಮೂರು ಸ್ವರೂಪವನ್ನು ಸಂಕೇತಿಸುತ್ತವೆ. ಆ ಸ್ವರೂಪಗಳೆಂದರೆ, ಭಯಂಕರವಾದ ಭೈರವ ರೂಪ, ಶಾಂತವಾದ ಶಿವರೂಪ ಹಾಗೂ ಅರ್ಧನಾರೀಶ್ವರ ರೂಪ. ಇದೂ ಕೂಡಾ ರಾಷ್ಟ್ರಕೂಟರ ಕೊಡುಗೆಯಾಗಿದೆ.

ಮೇಲಿನ ಹೇಳಿಕೆಗಳಲ್ಲಿ ಯಾವೆಲ್ಲಾ ಹೇಳಿಕೆಗಳು ಸರಿಯಾಗಿವೆ?

ಎ. ಹೇಳಿಕೆ 1, 3 ಮತ್ತು 4 ಮಾತ್ರ ಸರಿಯಾಗಿದೆ

ಬಿ. ಹೇಳಿಕೆ 1 ರಿಂದ 4ರತನಕ ಎಲ್ಲವೂ ಸರಿಯಾಗಿದೆ

ಸಿ. ಹೇಳಿಕೆ 1 ರಿಂದ 3ರ ತನಕ ಮಾತ್ರ ಸರಿಯಾಗಿದೆ

ಡಿ. ಮೇಲಿನ ಯಾವ ಹೇಳಿಕೆಯೂ ಸರಿಯಾಗಿಲ್ಲ.

ಉತ್ತರ: ಬಿ

ಮಾಹಿತಿ : Spardha Bharati UPSC ಯೂಟ್ಯೂಬ್ ಚಾನೆಲ್



ಓದಿದರೆ ಸಾಲದು ಬರೆದಿಟ್ಟುಕೊಳ್ಳಿ..

ಸಂದರ್ಶನ: ಶಿ.ಗು. ಹಿರೇಮಠ

ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಮಲ್ಲಿನಾಯಕನದೊಡ್ಡಿ ಗ್ರಾಮದ ಚಂದ್ರಶೇಖರ ಅವರು ಬೆಂಗಳೂರಿನಲ್ಲಿ ವಾಣಿಜ್ಯ ಇಲಾಖೆಯಲ್ಲಿ ಸಹಾಯಕ ಆಯುಕ್ತರಾಗಿ ಸೇವೆ ಸಲ್ಲಿಸಿ ಸದ್ಯ ರಾಯಚೂರು ಜಿಲ್ಲೆಯ ವಾಣಿಜ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅಪ್ಪ ಮತ್ತು ಅಮ್ಮ ಅನಕ್ಷರಸ್ಥರು. ಆದರೆ ಇದು ಓದಿಗೆ ತೊಡಕಾಗಲಿಲ್ಲ. ಯಾವುದೇ ಸರ್ಕಾರಿ ನೌಕರಿ ಹಿಡಿಯಬೇಕು, ಉನ್ನತ ಸಾಧನೆ ಮಾಡಬೇಕು ಎಂಬ ಕನಸನ್ನು ಹೊಂದಿರದ ಒಬ್ಬ ವಿದ್ಯಾರ್ಥಿ ಕೆಎಎಸ್ ಪಾಸ್ ಮಾಡಿದ್ದು ಹೇಗೆ?



ಚಂದ್ರಶೇಖರ

• ನಿಮ್ಮ ಪ್ರಾಥಮಿಕ ಶಿಕ್ಷಣದ ಬಗ್ಗೆ ಹೇಳುತ್ತೀರಾ?

ಮಲ್ಲಿನಾಯಕನದೊಡ್ಡಿ ಶೈಕ್ಷಣಿಕವಾಗಿ ತುಂಬಾ ಹಿಂದುಳಿದ ಗ್ರಾಮ. ಮನೆಯಲ್ಲಿಯೂ ಕೂಡ ಶೈಕ್ಷಣಿಕವಾಗಿ ಪೂರಕ ವಾತಾವರಣವಿರಲಿಲ್ಲ. ಹೀಗಾಗಿ ದನ– ಕರು, ಹೊಲಗದ್ದೆ ಇವುಗಳ ಮಧ್ಯೆ ಶಾಲೆಗೆ ಹೋಗಬೇಕಿತ್ತು. ಪೂರ್ವ ಪ್ರಾಥಮಿಕ ಶಿಕ್ಷಣ ಮಲ್ಲಿನಾಯಕನದೊಡ್ಡಿಯಲ್ಲಿ ಆಯಿತು. ನಮ್ಮದು ಏಕೋಪಾಧ್ಯಾಯ ಶಾಲೆ. ಅರಕೇರಾ ಗ್ರಾಮದಲ್ಲಿ 5ನೇ ತರಗತಿಗೆ ಪ್ರವೇಶ ಪಡೆದ ಮೇಲೆ ಸರ್ಕಾರಿ ವಸತಿ ನಿಲಯಕ್ಕೆ ಸೇರಿದೆ. ಉಚಿತ ಹಾಸ್ಟೆಲ್ ಸೌಲಭ್ಯ ದೊರೆತಿದ್ದರಿಂದ 10ನೇ ತರಗತಿಯವರೆಗೆ ಅಧ್ಯಯನ ಮುಂದುವರೆಸಲು ಸಹಾಯವಾಯಿತು. ಹಾಸ್ಟೆಲ್ ಸೌಕರ್ಯ ಇಲ್ಲದೇ ಹೋಗಿದ್ದರೆ ಅಧ್ಯಯನ ಅಪೂರ್ಣವಾಗುತ್ತಿತ್ತು.

ಮುಂದೆ ದೇವದುರ್ಗದಲ್ಲಿ ಬಸವ ಕಾಲೇಜಿನಲ್ಲಿ ವಿಜ್ಞಾನ ವಿಷಯದಲ್ಲಿ ಪಿಯುಸಿ ಮತ್ತು ರಾಯಚೂರಿನ ಎಲ್.ಯು.ಡಿ ಪದವಿ ಮಹಾವಿದ್ಯಾಲಯದಲ್ಲಿ ಬಿ.ಎಸ್‌ಸಿ ಪದವಿ ಪೂರೈಸಿದೆ.

• ಸ್ಪರ್ಧಾತ್ಮಕ ಪರೀಕ್ಷೆಗೆ ಓದಬೇಕು ಎಂದು ಅನಿಸಿದ್ದು ಯಾವಾಗ?

ನಾನು ಸರ್ಕಾರಿ ನೌಕರಿ ಪಡೆಯಬೇಕೆಂಬ ಅಥವಾ ಉನ್ನತ ಹುದ್ದೆ ಅಲಂಕರಿಸಬೇಕೆಂಬ ಕನಸೇ ಇಟ್ಟುಕೊಂಡಿರಲಿಲ್ಲ. ಪ್ರೌಢಶಾಲೆಯ ವಾರ್ಷಿಕೋತ್ಸವ ನಡೆದಾಗ ಅಂದಿನ ರಾಯಚೂರು ಜಿಲ್ಲಾ ಎಸ್‌ಪಿಯಾಗಿದ್ದ ಅರುಣ ಚಕ್ರವರ್ತಿ ಅವರ ಭಾಷಣ ನನ್ನ ಮನ ತಟ್ಟಿತು. ಮುಂದೆ ಪಿಯುಸಿ ಅಧ್ಯಯನ ಮಾಡುವಾಗ ದೇಶದ ಐಎಎಸ್ ಟಾಪರ್ ವಿಜಯಲಕ್ಷ್ಮಿ ಬಿದರಿ ಅವರ ಸಂದರ್ಶನವನ್ನು ಓದಿದೆ. ಅದು ನನಗೆ ತುಂಬಾ ಹಿಡಿಸಿತಲ್ಲದೆ ಓದುವ ಆಸಕ್ತಿ ಕೆರಳಿಸಿತು. ಆಗಲೇ ನನಗೆ ಸ್ಪರ್ಧಾ ಮನೋಭಾವನೆ ಟಿಸಿಲೊಡೆಯಿತು.

• ತಾವು ಪದವಿ ಪೂರೈಸಿದ ನಂತರ ವಿವಿಧ ಹುದ್ದೆ ನಿಭಾಯಿಸಿದಿರಿ. ಅವುಗಳ ಮಧ್ಯೆ ಕೆಎಎಸ್ ತಯಾರಿ ಹೇಗೆ ನಡೆಯಿತು ?

2011ರಲ್ಲಿ ನಾನು ಮೊದಲ ಬಾರಿ ಕೆಎಎಸ್ ಪರೀಕ್ಷೆ ಬರೆದೆ. ನಿರಂತರ ಅಧ್ಯಯನ, ದಿನ ಪತ್ರಿಕೆ, ನಿಯತಕಾಲಿಕೆಗಳನ್ನು ಕೊಂಡು ಓದಲು ಶುರು ಮಾಡಿದೆ. ಆದರೆ 2011ರ ಪರೀಕ್ಷೆಯಲ್ಲಿ ನಾನು ಆಯ್ಕೆಯಾಗಲಿಲ್ಲ. 2014ರಲ್ಲಿ ಎರಡನೇ ಪಯತ್ನಕ್ಕೆ ಕೈ ಹಾಕಿದೆ. 2008ರಲ್ಲಿ ಪದವಿ ಮುಗಿದ ನಂತರ ಮೂರು ತಿಂಗಳು ಕಾಲ ರಿಸರ್ವ್ ಪೊಲೀಸ್ ಕೆಲಸ ಮಾಡಿದೆ. ಓದನ್ನು ಮುಂದುವರೆಸಬೇಕೆಂದು ಪೊಲೀಸ್ ಹುದ್ದೆ ತೊರೆದೆ. ಮುಂದೆ ಏನು ಮಾಡಬೇಕೆಂಬ ಗೊಂದಲ ಉಂಟಾಯಿತು. ಆಗ ಬಿಎಡ್ ಪೂರೈಸಿದೆ. ತರುವಾಯ ಸಿವಿಲ್ ಪೊಲೀಸ್ ಹುದ್ದೆಗೆ ಆಯ್ಕೆಯಾದೆ. ಬೆಂಗಳೂರಿನ ಚಿಕ್ಕಪೇಟೆಯಲ್ಲಿ ಪೊಲೀಸ್ ಕಾರ್ಯ; ನಂತರ ಮೊರಾರ್ಜಿ ಶಾಲಾ ಶಿಕ್ಷಕನಾಗಿ ಅಲ್ಲಿ ಒಂದು ವರ್ಷ ಸೇವೆ. 2013 ರಲ್ಲಿ ಗಂಗಾವತಿ ತಾಲ್ಲೂಕಿನ ಗುಂಡೂರ ಗ್ರಾಮದಲ್ಲಿ ಪ್ರೌಢಶಾಲಾ ಶಿಕ್ಷಕನಾಗಿ ಆಯ್ಕೆಯಾದೆ. ಜೊತೆಯಲ್ಲೇ ಅಧ್ಯಯನವೂ ಸಾಗಿತು.

• ಎರಡನೇ ಪ್ರಯತ್ನದಲ್ಲಿ ತಾವು ಕೆಎಎಸ್ ಉತ್ತೀರ್ಣರಾದಿರಿ. ತಯಾರಿ ಹೇಗಿತ್ತು ?

ಓದಿನ ಪೂರಕ ವಾತಾವರಣವನ್ನು ನಾನೇ ಕಲ್ಪಿಸಿಕೊಂಡೆ. ನಾನು 2010ರ ಕೆಎಎಸ್ ಅಧಿಕಾರಿ ಕೃಷ್ಣ ಶಾವಂತಗೇರ ಸರ್ ಅವರನ್ನು ಭೇಟಿಯಾದೆ. ಅವರಿಂದ ಸಾಕಷ್ಟು ಕಲಿತೆ. ನನ್ನಲ್ಲಿರುವ ದೋಷಗಳನ್ನು ಅವರು ತೊಡೆದು ಹಾಕಿದರು. ಕೆಎಎಸ್ ಪರೀಕ್ಷೆಗೆ ಅಣಿಯಾಗಲು ತುಂಬಾ ನೆರವಾದರು. ಅವರ ಮಾರ್ಗದರ್ಶನ ನನಗೆ ಮಹತ್ವದ ಮೈಲಿಗಲ್ಲಾಯಿತು.

• ನೀವು ವಿಜ್ಞಾನ ಪದವೀಧರರು. ಕನ್ನಡ ಸಾಹಿತ್ಯ ಓದಲು ಹೇಗೆ ಸಾಧ್ಯವಾಯಿತು ?

ನಾನು 6ನೇ ತರಗತಿ ಓದುವಾಗ ಕನ್ನಡ ಮೇಷ್ಟ್ರು ಶೇಖರಗೌಡ ಅವರ ಕನ್ನಡ ಪಾಠ ನನಗೆ ಮಾದರಿಯಾಯಿತು. ನಾನು ಒಂದು ಬಾರಿ ಕೆಎಎಸ್ ಪರೀಕ್ಷೆ ಬರೆದಿದ್ದರಿಂದ ಪೂರ್ವಭಾವಿ ಪರೀಕ್ಷೆಗೆ ಹೆಚ್ಚು ಒತ್ತು ಕೊಡದೇ ಮುಖ್ಯ ಪರೀಕ್ಷೆಗೆ ಸಿದ್ಧತೆ ನಡೆಸಿದೆ. ಪ್ರಚಲಿತ ವಿದ್ಯಮಾನಕ್ಕೆ ನಿತ್ಯ ದಿನಪತ್ರಿಕೆ ಓದುವುದು ನನ್ನ ಹವ್ಯಾಸವಾಗಿತ್ತು. ಮುಖ್ಯ ಪರೀಕ್ಷೆಯಲ್ಲಿ ನಾನು ಕನ್ನಡ ಸಾಹಿತ್ಯ ಆಯ್ಕೆ ಮಾಡಿಕೊಂಡೆ. ನಾನು ವಿಜ್ಞಾನ ಓದಿದ್ದರೂ ಕನ್ನಡ ಸಾಹಿತ್ಯ ಆಯ್ಕೆ ಮಾಡಿಕೊಂಡಾಗ ನನಗೆ ಅಳುಕಿತ್ತು. ಆದರೆ ಸಾಹಿತ್ಯ ಓದುತ್ತಾ ಹೋದಂತೆ ನನಗೆ ತುಂಬಾ ರುಚಿ ಹತ್ತಿತು. ಕನ್ನಡ ಸಾಹಿತ್ಯದಲ್ಲಿ ವಚನಗಳು, ದಾಸ ಸಾಹಿತ್ಯ, ಸಣ್ಣಕಥೆ, ಜಾನಪದ, ಕವಿ ಪರಿಚಯ ನನಗೆ ತುಂಬಾ ಹಿಡಿಸಿತು. ಕನ್ನಡ ಮಾಧ್ಯಮದಲ್ಲಿ ಓದಿದ್ದರಿಂದ ಮತ್ತಷ್ಟು ಅನುಕೂಲವಾಯಿತು. ಸಾಹಿತ್ಯ ಓದಿದ ನಂತರ ಟಿಪ್ಪಣೆ ಮಾಡಿ, ಅದೇ ಓದಿಕೊಳ್ಳುತ್ತಿದ್ದೆ.

• ಸ್ಪರ್ಧಾರ್ಥಿಗಳಿಗೆ ನೀವು ಕೊಡುವ ಸಲಹೆ ಏನು ?

ವಿದ್ಯಾರ್ಥಿಗಳಲ್ಲಿ ಓದು ಕಡಿಮೆಯಾದರೂ ನಿರಂತರತೆ ಕಾಪಾಡಿಕೊಳ್ಳಬೇಕು. ನಾಲ್ಕಾರು ಪುಸ್ತಕ ಓದಿಕೊಳ್ಳುವುದಕ್ಕಿಂತ ಒಂದೇ ಪುಸ್ತಕವನ್ನು ನಾಲ್ಕಾರು ಬಾರಿ ಓದಿಕೊಳ್ಳಬೇಕು. ಪುಸ್ತಕಗಳೆಲ್ಲವೂ ಮೌಲಿಕವಾದವು. ಇದನ್ನೇ ಓದಿಕೊಳ್ಳಬೇಕು ಎಂಬ ಮಾನದಂಡ ಬೇಕಿಲ್ಲ. ತರಬೇತಿ ಪಡೆಯಬೇಕು, ರಜೆ ಹಾಕಬೇಕು ಅಂತೇನಿಲ್ಲ. ಆತ್ಮವಿಶ್ವಾಸ ಮತ್ತು ಓದುವ ಪ್ರಜ್ಞೆಯನ್ನು ಜೀವಂತವಾಗಿಟ್ಟುಕೊಳ್ಳಬೇಕು. ಎಷ್ಟು ಗಂಟೆ ಓದಿದೆ ಎನ್ನುವುದಕ್ಕಿಂತ ಎಷ್ಟೊಂದು ಅರ್ಥ ಮಾಡಿಕೊಂಡೆ ಎಂಬುದನ್ನು ಮನಗಾಣಬೇಕು. ಬರಿ ಓದುವುದಕ್ಕಿಂತ ಬರೆದಿಟ್ಟುಕೊಳ್ಳುತ್ತಾ ಹೋದರೆ ಪರಿಪೂರ್ಣತೆ ಉಂಟಾಗುತ್ತದೆ.

ಪ್ರಜಾವಾಣಿ ಉದ್ಯೋಗ ವಾರ್ತೆ

ಡಿಪ್ಲೊಮಾ ಆದವರಿಗೆ ಬಿಎಸ್‌ಎನ್‌ಎಲ್‌ನಲ್ಲಿ ಹುದ್ದೆಗಳು

ಭಾರತ್ ಸಂಚಾರ್ ನಿಗಮ್ ಲಿಮಿಟೆಡ್ (ಬಿಎಸ್‌ಎನ್‌ಎಲ್) ನಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿ ಆಹ್ವಾನಿಸಿದೆ. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಹುದ್ದೆ: ಅಪ್ರೆಂಟಿಸ್

ಹುದ್ದೆಗಳ ಸಂಖ್ಯೆ: 27

ಸ್ಥಳ: ಭೋಪಾಲ್

ವಿದ್ಯಾರ್ಹತೆ: ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳು ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಡಿಪ್ಲೊಮಾ ಮುಗಿಸಿರಬೇಕು.

ವಯೋಮಿತಿ: ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳಿಗೆ 25 ವರ್ಷ ಮೀರಿರಬಾರದು.

ಆಯ್ಕೆ ಪ್ರಕ್ರಿಯೆ: ಅಭ್ಯರ್ಥಿಗಳನ್ನು ಎರಡು ಹಂತದಲ್ಲಿ ಆಯ್ಕೆ ಮಾಡಲಾಗುತ್ತದೆ. ಮೊದಲನೇ ಹಂತ ದಾಖಲಾತಿ ಪರಿಶೀಲನೆ, ವೈಯಕ್ತಿಕ ಪರಿಶೀಲನೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ನವೆಂಬರ್ 20, 2021

ಹೆಚ್ಚಿನ ಮಾಹಿತಿಗೆ: bsnl.co.in

ಐಸಿಎಂಆರ್‌ನಲ್ಲಿ ಹುದ್ದೆಗಳು

ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್ (ಐಸಿಎಂಆರ್) ತನ್ನಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಿದೆ. ಆಸಕ್ತರು ಅರ್ಜಿ ಸಲ್ಲಿಸಬಹುದು.

ಹುದ್ದೆ: ಅಡ್ಮಿನಿಸ್ಟ್ರೇಟಿವ್ ಆಫೀಸರ್, ಲ್ಯಾಬ್ ಅಸಿಸ್ಟೆಂಟ್, ರಿಸರ್ಚ್ ಅಸೋಸಿಯೇಟ್, ರಿಸರ್ಚ್ ಅಸಿಸ್ಟೆಂಟ್, ಪ್ರಾಜೆಕ್ಟ್ ಅಡ್ಮಿನಿಸ್ಟ್ರೇಟರ್, ಲ್ಯಾಬೊರೇಟರಿ ಟೆಕ್ನಿಶಿಯನ್

ಹುದ್ದೆಗಳ ಸಂಖ್ಯೆ: 8

ಸ್ಥಳ: ಭುವನೇಶ್ವರ

ವಿದ್ಯಾರ್ಹತೆ: ಈ ಮೇಲಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳು ಕಡ್ಡಾಯವಾಗಿ ಬಿಎಸ್‌ಸಿ, ಬಿಕಾಂ, ಎಂಎಸ್‌ಸಿ, ಪಿಎಚ್‌ಡಿ, ಡಿಎಂಟಿಎಲ್ ಮುಗಿಸಿರಬೇಕು.

ಆಯ್ಕೆ ಪ್ರಕ್ರಿಯೆ: ಕೌಶಲ ಪರೀಕ್ಷೆ, ಲಿಖಿತ ಪರೀಕ್ಷೆ ಹಾಗೂ ವೈಯಕ್ತಿಕ ಸಂದರ್ಶನ

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ನವೆಂಬರ್ 22, 2021

ಹೆಚ್ಚಿನ ಮಾಹಿತಿಗೆ: www.icmr.gov.in

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ನೀವು ಮಾಹಿತಿಯನ್ನು ಹೇಗೆ ಸಂಗ್ರಹಿಸುತ್ತೀರಿ, ನಿರ್ವಹಿಸುತ್ತೀರಿ ಮತ್ತು ಬಳಸುತ್ತೀರಿ ಎಂಬುದು ನಿಮ್ಮ ಗೆಲುವು ಅಥವಾ ಸೋಲನ್ನು ನಿರ್ಧರಿಸುತ್ತದೆ.

–ಬಿಲ್ ಗೇಟ್ಸ್

ಕನ್ನಡ ವಿ.ವಿ.ಯಲ್ಲಿ 'ಭ್ರಷ್ಟಾಚಾರ' ನಾಡು–ನುಡಿಗೆ ಎಸಗಿದ ದ್ರೋಹ

ನಾಡು–ನುಡಿಯ ವಿವೇಕದ ಪ್ರತಿರೂಪವಾಗಿ ಜ್ಞಾನಗಂಗೋತ್ರಿಯಂತೆ ಕಾರ್ಯನಿರ್ವಹಿಸಬೇಕಾಗಿದ್ದ ಹಂಪಿಯ ಕನ್ನಡ ವಿಶ್ವವಿದ್ಯಾಲಯವು ಭ್ರಷ್ಟಾಚಾರದ ಗಂಗೋತ್ರಿಯ ರೂಪದಲ್ಲಿ ಸುದ್ದಿಯಲ್ಲಿರುವುದು ದುರದೃಷ್ಟಕರ. ಮುಂಬಡ್ತಿ, ಪಿಂಚಣಿ ಬಿಡುಗಡೆ, ಪ್ರೊಬೇಷನರಿ ಅವಧಿ ಪೂರ್ಣಗೊಂಡಿರುವುದರ ಘೋಷಣೆ ಸೇರಿದಂತೆ ವಿವಿಧ ಕೆಲಸಗಳಿಗೆ ಲಂಚ–ಕಮಿಷನ್ ಕೇಳಲಾಗುತ್ತಿದೆ ಎಂದು ವಿಶ್ವವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಬೀದಿಗಿಳಿದು ಪ್ರತಿಭಟಿಸಿದ್ದಾರೆ. ಆದಾಯ ತೆರಿಗೆ, ಹಿಂದಿನ ಬಾಕಿ ಹೆಸರಿನಲ್ಲಿ ನಿವೃತ್ತ ನೌಕರರ ಒಪ್ಪಿಗೆಯಿಲ್ಲದೆ ಪಿಂಚಣಿ ಮೊತ್ತದಲ್ಲಿ ಕಡಿತ ಮಾಡಲಾಗುತ್ತಿದೆ ಎಂದು ವಿಶ್ರಾಂತ ಕುಲಪತಿ ಹಾಗೂ ಪ್ರಾಧ್ಯಾಪಕರು ರಾಜ್ಯಪಾಲರಿಗೆ ಪತ್ರ ಬರೆದಿದ್ದಾರೆ. ಶಿಷ್ಯವೇತನ ಮಂಜೂರಾತಿಗೆ ದಾಖಲೆಗಳ ಮೇಲೆ ಸಹಿ ಮಾಡುವುದಕ್ಕೂ ಹಣ ಕೇಳಲಾಗುತ್ತಿದೆ ಎಂದು ವಿದ್ಯಾರ್ಥಿಗಳು ಆರೋಪಿಸಿದ್ದಾರೆ. 36 ತಿಂಗಳಿಂದ ಸ್ಥಗಿತಗೊಂಡಿರುವ ಶಿಷ್ಯವೇತನ (ಫೆಲೋಶಿಪ್) ಬಿಡುಗಡೆ ಮಾಡಬೇಕೆಂದು ಸಂಶೋಧನಾ ವಿದ್ಯಾರ್ಥಿಗಳು ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ನಡೆಸಿದ್ದರು. 'ಫೆಲೋಶಿಪ್ ಕೊಡಿ, ಇಲ್ಲವೇ ವಿಷ ಕೊಡಿ' ಎಂಬ ವಿದ್ಯಾರ್ಥಿಗಳ ಘೋಷಣೆ ಪರಿಸ್ಥಿತಿ ಗಂಭೀರವಾಗಿರುವುದನ್ನು ಸೂಚಿಸುವಂತಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ನೀಡಬೇಕಿದ್ದ ಸಹಾಯಧನವನ್ನು ಸರ್ಕಾರ ಕಾಲಕಾಲಕ್ಕೆ ಬಿಡುಗಡೆ ಮಾಡಿದ್ದರೂ ವಿದ್ಯಾರ್ಥಿಗಳ ಖಾತೆಗೆ ಅದು ಜಮೆ ಆಗಿಲ್ಲ. ಸಹಾಯಧನ ನೀಡದಿರುವ ಮೂಲಕ ಪರಿಶಿಷ್ಟ ವಿದ್ಯಾರ್ಥಿಗಳನ್ನು ಉನ್ನತ ಶಿಕ್ಷಣದಿಂದ ವಂಚಿಸಲಾಗುತ್ತಿದೆ ಎನ್ನುವ ಗಂಭೀರ ಆರೋಪವನ್ನೂ ವಿದ್ಯಾರ್ಥಿಗಳು ಮಾಡಿದ್ದಾರೆ. ಯುಜಿಸಿ ನಿಯಮಕ್ಕೆ ವಿರುದ್ಧವಾಗಿ 17 ಬೋಧಕ ಸಿಬ್ಬಂದಿಯ ನೇಮಕಾತಿ ಪ್ರಕ್ರಿಯೆ ನಡೆದಿದೆ ಎನ್ನುವ ವರದಿಗಳೂ ಇವೆ. ಹಂಪಿ ವಿಶ್ವವಿದ್ಯಾಲಯದಲ್ಲಿ ಎಲ್ಲವೂ ಸರಿಯಿಲ್ಲ ಎನ್ನುವುದನ್ನು ಈ ಘಟನೆಗಳು ತೋರಿಸುತ್ತವೆ. ಕನ್ನಡಕ್ಕಾಗಿ ಕಟ್ಟಿರುವ ಈ ವಿಶ್ವವಿದ್ಯಾಲಯದಲ್ಲಿ ಅವ್ಯವಹಾರಗಳು ಈ ಪರಿ ನಡೆದಿವೆ ಎಂದಾದರೆ ಅವು ನಾಡು–ನುಡಿಗೆ ಬಗೆದ ದ್ರೋಹವೇ ಸರಿ.



ಕಳಂಕಕ್ಕೆ ಒಳಗಾಗಿರುವ ವಿಶ್ವವಿದ್ಯಾಲಯವನ್ನು ಭ್ರಷ್ಟಾಚಾರದಿಂದ ಮುಕ್ತಗೊಳಿಸುವುದನ್ನು ಸರ್ಕಾರ ಆದ್ಯತೆಯ ವಿಷಯವಾಗಿ ಪರಿಗಣಿಸಬೇಕು

ಕನ್ನಡ ವಿಶ್ವವಿದ್ಯಾಲಯ ರೂಪುಗೊಳ್ಳುವುದರ ಹಿಂದೆ ಕನ್ನಡ ಪ್ರಜ್ಞೆಯನ್ನು ವಿಶ್ವಪ್ರಜ್ಞೆಯಾಗಿಸುವ ಉದಾತ್ತ ಉದ್ದೇಶವಿತ್ತು; ಕನ್ನಡ ನಾಡು–ನುಡಿ, ಸಂಸ್ಕೃತಿ ಮತ್ತು ಜನಜೀವನದ ವಿಶಿಷ್ಟವಾದ ಅಂತರಂಗ ಮತ್ತು ಬಹಿರಂಗ ಸಂಪತ್ತಿನ ಕುರಿತು ಅಧ್ಯಯನ ಮಾಡುವ ಮತ್ತು ಅದರ ಫಲಿತಗಳನ್ನು ವಿಶ್ವದಾದ್ಯಂತ ಪಸರಿಸುವ ಆಶಯವಿತ್ತು. ಕನ್ನಡ ಕಟ್ಟುವ ಉದ್ದೇಶಗಳು ಕಾರ್ಯರೂಪಕ್ಕೆ ಬರುವುದಕ್ಕೆ ಅಗತ್ಯವಾದ ಸಂಶೋಧನಾ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಕಮಿಷನ್ ದಂಧೆ ಶುರುವಾಗಿರುವುದು ವಿಶ್ವವಿದ್ಯಾಲಯ ಸ್ಥಾಪನೆಯ ಮೂಲ ಉದ್ದೇಶವನ್ನೇ ವಿರೂಪಗೊಳಿಸುವಂತಿದೆ. ಸಂಶೋಧನಾ ವಿದ್ಯಾರ್ಥಿಗಳು ಅರ್ಧವಾರ್ಷಿಕ ಪ್ರಗತಿ ಪರಿಶೀಲನಾ ವರದಿ ಸಲ್ಲಿಸುವುದರ ಜೊತೆಗೆ, ಪ್ರಗತಿ ವರದಿ ಶುಲ್ಕವನ್ನೂ ತುಂಬಬೇಕು. ಶಿಷ್ಯವೇತನ ಪಾವತಿ ಆಗದಿರುವುದರಿಂದ ವಿದ್ಯಾರ್ಥಿಗಳ ಅಧ್ಯಯನ ಮತ್ತು ಜೀವನ ಎರಡಕ್ಕೂ ತೊಡಕಾಗುತ್ತದೆ. ಹಿಂದುಳಿದ ಪ್ರದೇಶ ಮತ್ತು ಸಮುದಾಯಗಳಿಂದ ಕನಸುಗಳನ್ನು ಹೊತ್ತು ವಿಶ್ವವಿದ್ಯಾಲಯಕ್ಕೆ ಬರುವ ಹಲವು ವಿದ್ಯಾರ್ಥಿಗಳು ಜೀವನ ನಿರ್ವಹಣೆಗೆ ಫೆಲೋಶಿಪ್ ಅನ್ನೇ ನೆಚ್ಚಿಕೊಂಡಿರುತ್ತಾರೆ. ಅಂಥ ವಿದ್ಯಾರ್ಥಿಗಳ ಭವಿಷ್ಯದ ಜೊತೆ ಚೆಲ್ಲಾಟವಾಡುವ ಅಧಿಕಾರಿಗಳಲ್ಲಿ ಕನ್ನಡದ ಬಗೆಗಿನ ಕಾಳಜಿಯಿರಲಿ, ಕಿಂಚಿತ್ ಮಾನವೀಯತೆಯೂ ಇದ್ದಂತಿಲ್ಲ. ಆರೋಪಗಳ ಬಗ್ಗೆ ಸಿಂಡಿಕೇಟ್‌ನಿಂದ ತನಿಖೆ ನಡೆಸುವುದಾಗಿ ಕುಲಪತಿ ಹೇಳಿದ್ದಾರೆ. ಆದರೆ, ವಿಶ್ವವಿದ್ಯಾಲಯದ ಭಾಗವಾಗಿರುವ ಸಿಂಡಿಕೇಟ್‌ನಿಂದ ಪಾರ ದರ್ಶಕ ತನಿಖೆ ನಡೆಯುತ್ತದೆಂದು ನಂಬುವುದು ಕಷ್ಟ. ಸಂಬಳ ಬಿಡುಗಡೆ ಮಾಡಲು ಲಂಚ ಪಡೆದಿರುವ ಆರೋಪವನ್ನು ಸ್ವತಃ ಕುಲಪತಿಗಳೇ ಎದುರಿಸುತ್ತಿದ್ದಾರೆ. ಪ್ರೊಬೇಷನರಿ ಅವಧಿ ಪೂರ್ಣಗೊಂಡಿದೆ ಎಂದು ಘೋಷಿಸಲು ಎಂಟು ತಿಂಗಳ ಸಂಬಳವನ್ನು ನೀಡುವಂತೆ ಬೇಡಿಕೆ ಇಟ್ಟಿದ್ದಾರೆ ಎನ್ನುವ ಆರೋಪವೂ ಇದೆ. ಹಾಗಾಗಿಯೇ, ಲಂಚ ಮತ್ತು ಕಮಿಷನ್ ದಂಧೆ ವಿರುದ್ಧ ನ್ಯಾಯಾಂಗ ತನಿಖೆ ನಡೆಸ ಬೇಕೆಂದು ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯು ಕುಲಸಚಿವರಿಗೆ ಪತ್ರ ಬರೆದು ಒತ್ತಾಯಿಸಿದ್ದಾರೆ.

ಹಂಪಿ ವಿಶ್ವವಿದ್ಯಾಲಯವು ಕನ್ನಡ ಮತ್ತು ಕನ್ನಡಿಗರ ಸಂವೇದನೆಗಳ ಮೂರ್ತರೂಪ. ಆ ಕಾರಣ ದಿಂದಲೇ ವಿಶ್ವವಿದ್ಯಾಲಯದ ಅನುದಾನವನ್ನು ಸರ್ಕಾರ ಕಡಿತಗೊಳಿಸಿದಾಗ, ಆ ನಿರ್ಧಾರದ ವಿರುದ್ಧ ನಾಡಿನ ಪ್ರಜ್ಞಾವಂತರು ದನಿಯೆತ್ತಿದ್ದರು. ಹೊಸ ಕಾರ್ಯಕ್ರಮ, ಸಂಶೋಧನೆಗಳಿಗೆ ಅಡಚಣೆಯಾಗ ದಂತೆ ಅನುದಾನ ಬಿಡುಗಡೆ ಮಾಡಲು ಸರ್ಕಾರದ ಮೇಲೆ ಸಾರ್ವಜನಿಕ ಒತ್ತಡ ಹೇರಲಾಗಿತ್ತು. ಆಡಳಿತ ಪಕ್ಷದೊಂದಿಗೆ ನಂಟು ಹೊಂದಿರುವ ಉದ್ಯಮಿಯೊಬ್ಬರಿಗೆ 'ನಾಡೋಜ' ಗೌರವ ನೀಡಿ ದಾಗ ಸಾಂಸ್ಕೃತಿಕ ವಲಯದಲ್ಲಿ ವಿರೋಧ ವ್ಯಕ್ತವಾಗಿತ್ತು. ಸಿಂಡಿಕೇಟ್ ಸದಸ್ಯರ ಆಯ್ಕೆಯಲ್ಲಿ ರಾಜಕೀಯ ಒಲವುನಿಲುವುಗಳು ಮುಖ್ಯವಾಗುತ್ತಿರುವ ಬಗ್ಗೆ ಆತಂಕ ವ್ಯಕ್ತವಾಗಿತ್ತು. ಇವೆಲ್ಲ ಕಾಳಜಿ ಮತ್ತು ಆತಂಕಗಳು ಹಂಪಿ ವಿಶ್ವವಿದ್ಯಾಲಯದೊಂದಿಗೆ ಕನ್ನಡಪ್ರೇಮಿಗಳ ಹೃದಯಸಂವಾದವನ್ನು ಸೂಚಿಸುವಂತಿವೆ. ಕನ್ನಡ ವಿಶ್ವವಿದ್ಯಾಲಯವು ನೈತಿಕತೆಯ ಮಾದರಿಯಂತೆ ಇರಬೇಕೆನ್ನುವುದು ಕನ್ನಡಿಗರ ಅಪೇಕ್ಷೆ. ಪ್ರಸ್ತುತ ಕಳಂಕಕ್ಕೆ ಒಳಗಾಗಿರುವ ವಿಶ್ವವಿದ್ಯಾಲಯವನ್ನು ಭ್ರಷ್ಟಾಚಾರದಿಂದ ಮುಕ್ತ ಗೊಳಿಸುವುದನ್ನು ಸರ್ಕಾರ ಆದ್ಯತೆಯ ವಿಷಯವಾಗಿ ಪರಿಗಣಿಸಬೇಕು. ಉನ್ನತ ಮಟ್ಟದ ತನಿಖೆ ಕಾಲಮಿತಿಯಲ್ಲಿ ನಡೆಯುವಂತೆ ನೋಡಿಕೊಳ್ಳಬೇಕು ಹಾಗೂ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು. ಈ ತನಿಖೆಯ ಫಲಿತಾಂಶವು ಕನ್ನಡ ವಿಶ್ವವಿದ್ಯಾಲಯವನ್ನು ಸ್ವಚ್ಛಗೊಳಿಸುವುದರ ಜೊತೆಗೆ, ಇತರೆ ವಿಶ್ವ ವಿದ್ಯಾಲಯಗಳಿಗೆ ಪಾಠವೂ ಆಗಬೇಕು.

ದಿನದ ಟ್ವೀಟ್

ಸೂಕ್ತ ಆರೋಗ್ಯಕ್ಕೆ ಸೂಕ್ತ ಕಾಳಜಿ

ಅವಧಿಪೂರ್ವ ಅಥವಾ ಕಡಿಮೆ ತೂಕ ಹೊಂದಿದ ಶಿಶುಗಳು ಜನಿಸಿದಾಗ 'ಕಾಂಗರೂ ತಾಯಿ' ಆರೈಕೆ ಮಾಡುವುದರಿಂದ ಆಗುವ ಪರಿಣಾಮ: ಶಿಶುಮರಣ ಪ್ರಮಾಣವನ್ನು ಶೇ 40ರಷ್ಟು ಕಡಿಮೆ ಮಾಡುತ್ತದೆ, ಹೈಪೋಥರ್ಮಿಯಾವನ್ನು (ಉಷ್ಣತೆ ತಗ್ಗುವುದು) ಶೇ 70ಕ್ಕಿಂತಲೂ ಹೆಚ್ಚು ಪ್ರಮಾಣದಲ್ಲಿ ತಗ್ಗಿಸುತ್ತದೆ, ತೀವ್ರವಾದ ಸೋಂಕು ಉಂಟಾಗುವಿಕೆಯು ಶೇ 65ರಷ್ಟು ಕಡಿಮೆಯಾಗುತ್ತದೆ. #WorldPrematurityDay

ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ)

ಕಿಡಿನುಡಿ



ಪ್ರತಾಪ್ ಸಿಂಹ ಅವರು ನನ್ನನ್ನು ಮರಿ ಖರ್ಗೆ ಎಂದಿದ್ದಾರೆ. ನನ್ನ ತಂದೆಯ ಬಗ್ಗೆ ನನಗೆ ಹೆಮ್ಮೆ ಇದೆ. ಬಿ.ವೈ.ವಿಜಯೇಂದ್ರ ಅವರಿಗೆ ಮರಿ ಯಡಿಯೂರಪ್ಪ ಎಂದು ಹೇಳುವ ಧೈರ್ಯ ನಿಮಗೆ ಇದೆಯೇ? ಜಯ್ ಶಾ ಅವರಿಗೆ ಚೋಟಾ ಶಾ ಎನ್ನುವ ಧೈರ್ಯ ಇದೆಯೇ?

ಪ್ರಿಯಾಂಕ್ ಖರ್ಗೆ, ಕಾಂಗ್ರೆಸ್ ಶಾಸಕ

25 ವರ್ಷಗಳ ಹಿಂದೆ

ಸೋಮವಾರ, 18-11-1996

• ರಾವ್– ಕೇಸರಿ ಮಧ್ಯೆ ಬಿಕ್ಕಟ್ಟು ಉಲ್ಬಣ

ನವದೆಹಲಿ, ನ. 17 (ಯುಎನ್‌ಐ)– ಪ್ರಧಾನಿ ಎಚ್.ಡಿ. ದೇವೇಗೌಡ ಅವರ ಸರ್ಕಾರಕ್ಕೆ ಮಾಜಿ ಪ್ರಧಾನಿ ಪಿ.ವಿ. ನರಸಿಂಹ ರಾವ್ ಅವರು ಸಂಪೂರ್ಣ ಬೆಂಬಲ ವ್ಯಕ್ತಪಡಿಸಿರುವುದಕ್ಕೆ ಕಾಂಗ್ರೆಸ್ ನಾಯಕರು ದಿಗ್ಭ್ರಮೆ ವ್ಯಕ್ತಪಡಿಸಿದ್ದಾರೆ.

ರಾವ್ ಅವರ ಹೇಳಿಕೆಯಿಂದ ಪಕ್ಷದ ಅಧ್ಯಕ್ಷ ಸೀತಾರಾಂ ಕೇಸರಿ ಹಾಗೂ ಸಂಸದೀಯ ಪಕ್ಷದ ಮುಖಂಡ ರಾವ್ ಅವರ ಮಧ್ಯೆ ಭಿನ್ನಾಭಿಪ್ರಾಯ ಹೆಚ್ಚಿದೆ ಎಂಬುದನ್ನು ಕಾಂಗ್ರೆಸ್‌ನ ಉಳಿದ ನಾಯಕರು ಒಪ್ಪಿಕೊಂಡಿದ್ದಾರೆ.

• ಸೌಂದರ್ಯ ಸ್ಪರ್ಧೆಗೆ ಪ್ರತಿಭಟನೆ: ಬಂಧನ

ಬೆಂಗಳೂರು, ನ. 17– ವಿಶ್ವಸುಂದರಿ ಸ್ಪರ್ಧೆಯನ್ನು ಪ್ರತಿಭಟಿಸಿ, ವಿವಿಧ ದೇಶಗಳ ಸುಂದರಿಯರು ತಂಗಿರುವ ಪಂಚತಾರಾ ಹೋಟೆಲ್ ಕಡೆಗೆ ನುಗ್ಗಲು ಯತ್ನಿಸಿದ ಎಡಪಂಥೀಯ ಸಂಘಟನೆಗಳ ಸಾವಿರಕ್ಕೂ ಹೆಚ್ಚು ಕಾರ್ಯಕರ್ತರನ್ನು ಪೊಲೀಸರು ಬಂಧಿಸಿ ಆನಂತರ ಬಿಡುಗಡೆ ಮಾಡಿದರು.

50 ವರ್ಷಗಳ ಹಿಂದೆ

ಗುರುವಾರ, 18-11-1971

• ಸಂಪುಟದ ಮಿತಿಗೆ ಸರ್ಕಾರದ ಶಾಸನ ಇಷ್ಟರಲ್ಲೇ ಸಂಭವ

ನವದೆಹಲಿ, ನ. 17– ಪಕ್ಷಾಂತರ ಕುರಿತ ಸಮಿತಿಯ ಅಧ್ಯಕ್ಷ ಮತ್ತು ಇತರ ಆರು ಸದಸ್ಯರು ಅಂಗೀಕರಿಸಿರುವ ಸೂತ್ರಕ್ಕೆ ತಕ್ಕಂತೆ ಸಚಿವ ಸಂಪುಟದ ಗಾತ್ರವನ್ನು ಮಿತಗೊಳಿಸಲು ಸರ್ಕಾರ ಶಾಸನವೊಂದನ್ನು ತರಲು ಉದ್ದೇಶಿಸಿದೆ.

ಕೇಂದ್ರದಲ್ಲಿ ಸಚಿವರ ಸಂಖ್ಯೆ ಲೋಕಸಭೆಯಲ್ಲಿ ಸದಸ್ಯರ ಸಂಖ್ಯೆಯ ಶೇ 11ರಷ್ಟನ್ನು ಮೀರಬಾರದು, ವಿಧಾನಸಭೆ ಮಾತ್ರವೇ ಇರತಕ್ಕ ರಾಜ್ಯಗಳಲ್ಲಿ ಸಚಿವರ ಸಂಖ್ಯೆ ವಿಧಾನಸಭೆಯ ಸದಸ್ಯ ಸಂಖ್ಯೆಯ ಶೇ 10ರಷ್ಟನ್ನು ಮೀರಬಾರದು. ಮೇಲ್ಮನೆ ಇರುವೆಡೆ ವಿಧಾನಸಭೆಯ ಸಂಖ್ಯೆಯ ಶೇ 11ರಷ್ಟನ್ನು ಮೀರಬಾರದು ಎಂಬುದು ಶಿಫಾರಸು.

• ಧರ್ಮಸ್ಥಳ ಸಮ್ಮೇಳನ: ಸಮನ್ವಯ ಸಾಹಿತ್ಯ ಸೃಷ್ಟಿಗೆ ವಿ.ಸೀ ಕರೆ

ಮಂಗಳೂರು, ನ. 17– 'ಪೂರ್ವ– ಪಶ್ಚಿಮ, ಉತ್ತರ– ದಕ್ಷಿಣ ಬೇರೆ ಬೇರೆ ಅಲ್ಲ. ಇವಕ್ಕೆಲ್ಲಾ ಹೊಂದುವ ಸಾಹಿತ್ಯ ಇಂದು ಹುಟ್ಟಬೇಕು' ಎಂದು ಹಿರಿಯ ಸಾಹಿತಿ ಪ್ರೊ. ವಿ. ಸೀತಾರಾಮಯ್ಯ ಅವರು ತಿಳಿಸಿದರು.

ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ ಅವರು ಮಾತನಾಡಿದರು.

ಫ್ರ್ಯಾಂಚೈಸಿ ಕ್ರಿಕೆಟ್ ರಂಗು, ಹಣದ ಝಣಝಣವಷ್ಟೇ ಕ್ರಿಕೆಟ್ ಅಲ್ಲ

ದೇಶಕ್ಕಾಗಿ ಆಡುವ ಪಾಠ



ವಿಶ್ಲೇಷಣೆ

ಗಿರೀಶ ದೊಡ್ಡಮನಿ

ಪೋರ್ಚುಗಲ್‌ನ ಫುಟ್‌ಬಾಲ್ ತಾರೆ ಕ್ರಿಸ್ಟಿಯಾನೊ ರೊನಾಲ್ಡೊ ತಾವು ಒಪ್ಪಂದ ಮಾಡಿಕೊಂಡಿರುವ ಫ್ರ್ಯಾಂಚೈಸಿಗಳಿಂದ ಪಡೆಯುವ ಆದಾಯ ಸಾವಿರ ಕೋಟಿ ರೂಪಾಯಿಗೂ ಹೆಚ್ಚು. ಅವರಷ್ಟೇ ಅಲ್ಲ, ಅರ್ಜೆಂಟಿನಾದ ಲಯೊನೆಲ್ ಮೆಸ್ಸಿ, ಬ್ರೆಜಿಲ್‌ನ ನೇಮರ್ ಸೇರಿದಂತೆ ಇನ್ನೂ ಹಲವಾರು ಫುಟ್‌ಬಾಲ್ ದಿಗ್ಗಜರು ಫ್ರ್ಯಾಂಚೈಸಿ ಲೀಗ್‌ಗಳಲ್ಲಿ ಮಿಂಚುತ್ತಾರೆ. ಅಪಾರ ಹಣ ಗಳಿಸುತ್ತಾರೆ.

ಆದರೆ, ತಮ್ಮ ದೇಶದ ತಂಡಗಳಿಗೆ ಆಡುವ ಸಂದರ್ಭ ಬಂದಾಗ ಹಣ, ಖ್ಯಾತಿಗಳನ್ನು ಮೈದಾನದ ಹೊರಗಿಟ್ಟು ಕಣಕ್ಕಿಳಿಯುತ್ತಾರೆ. ಬೆವರು ಸುರಿಸಿ ತಂಡದ ಗೆಲುವಿಗೆ ಶ್ರಮಿಸುತ್ತಾರೆ. ಸೋತರೂ ಇತಿಹಾಸದ ಪುಟಗಳಲ್ಲಿ ರೋಚಕ ಹೋರಾಟದ ಹೆಜ್ಜೆಗುರುತು ಮೂಡಿಸುತ್ತಾರೆ. ದೇಶಕ್ಕಾಗಿ ಆಡುವಾಗ ಯಾವುದೇ ರಾಜಿ ಮಾಡಿಕೊಳ್ಳುವುದಿಲ್ಲ. ಆದರೆ ಭಾರತದ ಕ್ರಿಕೆಟಿಗರು ಇಂತಹ ಬದ್ಧತೆಯನ್ನು ತೋರುವಲ್ಲಿ ಎಡವುತ್ತಿದ್ದಾರೆಯೇ?

ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ಈಚೆಗೆ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಹೀನಾಯ ಸೋಲು ಅನುಭವಿಸಿದ ನಂತರ ಭಾರತ ತಂಡ ಇಂತಹದ್ದೊಂದು ಟೀಕೆಗೆ ಒಳಗಾಗುತ್ತಿದೆ. ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವಾಗ ತೋರುವ ಆಸಕ್ತಿಯನ್ನು ವಿಶ್ವಕಪ್ ಹಂತದ ಟೂರ್ನಿಗಳಲ್ಲಿ ತೋರುತ್ತಿಲ್ಲ ಎನ್ನುವ ಆರೋಪಗಳು ಕೇಳಿಬರುತ್ತಿವೆ. 1983ರ ವಿಶ್ವಕಪ್ ವಿಜೇತ ತಂಡದ ನಾಯಕ ಕಪಿಲ್ ದೇವ್, 'ಭಾರತದ ಕ್ರಿಕೆಟಿಗರು ರಾಷ್ಟ್ರೀಯ ತಂಡಕ್ಕಾಗಿ ಆಡುವುದಕ್ಕೆ ಪ್ರಾಶಸ್ತ್ಯ ನೀಡಬೇಕು. ಆದರೆ ದೇಶಕ್ಕಿಂತ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಗೆ ಆದ್ಯತೆ ಕೊಟ್ಟರೆ ಏನಾಗುತ್ತದೆ ಎನ್ನುವುದನ್ನು ಈಗ ನೋಡಿದ್ದೇವೆ. ದೇಶಕ್ಕಾಗಿ ಆಡುವುದು ದೊಡ್ಡ ಹೆಮ್ಮೆ ಎನ್ನುವುದನ್ನು ಆಟಗಾರರು ತಿಳಿಯಬೇಕು' ಎಂದು ಕಿವಿಮಾತು ಹೇಳಿದ್ದಾರೆ.

ಇದು ಭಾರತ ತಂಡದ 'ಕೋಟ್ಯಧೀಶ' ಆಟಗಾರರು ಗಂಭೀರವಾಗಿ ಪರಿಗಣಿಸಬೇಕಾದ ಹೇಳಿಕೆ. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯೂ ಈ ಬಗ್ಗೆ ವೃತ್ತಿಪರ ಬದ್ಧತೆಯನ್ನು ತೋರಲು ಇದು ಸಕಾಲ. ಮಂಡಳಿಯು ಮೊದಲು 'ಕ್ರಿಕೆಟ್ ಇಂಡಿಯಾ' ಆಗಿ ಬದಲಾಗುವ ಅವಶ್ಯಕತೆ ಈಗ ಕಾಣುತ್ತಿದೆ.

ಏಕೆಂದರೆ, ಐಪಿಎಲ್ ಎರಡನೇ ಹಂತದ ಟೂರ್ನಿ ಮುಕ್ತಾಯವಾದ ಒಂದು ವಾರದ ನಂತರ ವಿಶ್ವಕಪ್ ಟೂರ್ನಿ ಆರಂಭವಾಗಿತ್ತು. ಈ ವರ್ಷದ ಜೂನ್ 3ರಿಂದ ದೇಶದಿಂದ ಹೊರಗಿದ್ದ ತಂಡವು ನಿರಂತರವಾಗಿ ಜೀವಸುರಕ್ಷಾ ವಲಯದಲ್ಲಿತ್ತು (ಬಯೋಬಬಲ್). ಇದು ಆಟಗಾರರನ್ನು ಮಾನಸಿಕವಾಗಿ ಮತ್ತು ದೈಹಿಕವಾಗಿ ಹೈರಾಣ ಮಾಡಿದ್ದನ್ನು ಸಂಪೂರ್ಣವಾಗಿ ಅಲ್ಲಗಳೆಯಲು ಸಾಧ್ಯವಿಲ್ಲ. ಇದನ್ನು ಮೊದಲೇ ಅರಿತು ಐಪಿಎಲ್ ಎರಡನೇ ಹಂತವನ್ನು, ವಿಶ್ವಕಪ್ ಟೂರ್ನಿಯ ನಂತರ ಆಯೋಜಿಸುವತ್ತ ಮನಸ್ಸು ಮಾಡಬೇಕಿತ್ತು. ವಿಶ್ವಕಪ್‌ನಲ್ಲಿ ಆಡುವ 16 ಆಟಗಾರರ ತಂಡವನ್ನು ಐಪಿಎಲ್ ಆರಂಭದ ಹೊತ್ತಿಗೆ ಪ್ರಕಟಿಸಲಾಗಿತ್ತು. ಅವರೆಲ್ಲರೂ ಐಪಿಎಲ್‌ನಿಂದ ಹೊರಗುಳಿದು ಅಭ್ಯಾಸ ನಡೆಸಬಹುದಿತ್ತು. ಇಂಗ್ಲೆಂಡ್, ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯಾದ ಕೆಲವು ಆಟಗಾರರು ಇದೇ ರೀತಿ ಮಾಡಿದ್ದರಲ್ಲವೇ?

'ವಿಶ್ವಕಪ್ ಟೂರ್ನಿಗೆ ಐಪಿಎಲ್ ಪೂರ್ವಭಾವಿ ಅಭ್ಯಾಸದ ವೇದಿಕೆಯಾಗುತ್ತದೆ' ಎಂದು ಹೇಳಿದ್ದವರೂ ಇದ್ದರು. ಆದರೆ, ಇದೀಗ ಭಾರತ ತಂಡದ ಸೋಲಿನಿಂದ ಬಿಸಿಸಿಐ ಪಾಠ ಕಲಿಯಬೇಕಿದೆ. ಐಪಿಎಲ್‌ನಿಂದ ಬರುವ ಆದಾಯ, ಹೊಸ ಫ್ರ್ಯಾಂಚೈಸಿಗಳ ಸೇರ್ಪಡೆ, ಮೆಗಾ ಹರಾಜು ಪ್ರಕ್ರಿಯೆಗೆ ತೋರುವ ಆಸಕ್ತಿಯನ್ನು ವಿಶ್ವಕಪ್ ಜಯಿಸುವ ತಂಡ ಕಟ್ಟುವತ್ತಲೂ ಗಮನ ಹರಿಸಬೇಕಿದೆ. ವೆಸ್ಟ್ ಇಂಡೀಸ್ ತಂಡದ ಆಟಗಾರರು ತಮ್ಮ ದೇಶಕ್ಕಿಂತಲೂ ಫ್ರ್ಯಾಂಚೈಸಿ ಲೀಗ್‌ಗಳಲ್ಲಿ ಆಡುವುದಕ್ಕೆ ಹೆಚ್ಚು ಆದ್ಯತೆ ಕೊಟ್ಟಿದ್ದರ ಪರಿಣಾಮ ಈಗ ಕಣ್ಣಿಗೆ ರಾಚುತ್ತಿದೆ. ನಾಲ್ಕು ದಶಕಗಳ ಹಿಂದೆ ಕೆರಿಬಿಯನ್ ತಂಡವೆಂದರೆ ಎಲ್ಲರಿಗೂ ಮೈನಡುಕ ಹುಟ್ಟುತ್ತಿತ್ತು. 2016ರಲ್ಲಿ ಟಿ20 ವಿಶ್ವಕಪ್ ಗೆದ್ದ ತಂಡ ಈ ಬಾರಿ ನೆಲಕಚ್ಚಿದ ರೀತಿ ಅಚ್ಚರಿ ಮೂಡಿಸುವಂತಹದ್ದು. ಐಪಿಎಲ್, ಕರಾಚಿ ಪ್ರೀಮಿಯರ್ ಲೀಗ್, ಕೆರಿಬಿಯನ್ ಲೀಗ್ ಇತ್ಯಾದಿ ಟೂರ್ನಿಗಳಲ್ಲಿ ವಿಂಡೀಸ್ ಆಟಗಾರರ ಅಬ್ಬರ ಮೇರೆ ಮೀರುತ್ತದೆ. ಆದರೆ ದೇಶಕ್ಕಾಗಿ ಆಡುವಾಗ ಆ ಹುರುಪು ಮಾಯವಾಗಿರುತ್ತದೆ. ಕನಿಷ್ಠ ಹೋರಾಟವೂ ಕಂಡುಬರುತ್ತಿಲ್ಲ. ಅಲ್ಲಿಯ ಕ್ರಿಕೆಟ್ ಆಡಳಿತದ ವೈಫಲ್ಯ ಇದರ ಹಿಂದಿದೆ. ದುಡ್ಡಿಗಾಗಿ ಆಟಗಾರರು ಲೀಗ್‌ಗಳತ್ತ ಮುಖ ಮಾಡುತ್ತಿದ್ದಾರೆ.


ಆದರೆ, ಕ್ರಿಕೆಟ್ ಲೋಕದ ದೊಡ್ಡಣ್ಣನಾಗಿ ಬೆಳೆದಿರುವ ಬಿಸಿಸಿಐಗೆ ಇಂತಹ ಸಮಸ್ಯೆಯಿಲ್ಲ. ಬರೀ ಟೆಸ್ಟ್ ಕ್ರಿಕೆಟ್‌ನಲ್ಲಿ ಆಡುವ ಚೇತೇಶ್ವರ್ ಪೂಜಾರ ಅವರಂತಹವರೂ ಕೋಟಿ ಕೋಟಿ ಗಳಿಸುತ್ತಾರೆ. ದೇಶಿ ಟೂರ್ನಿಗಳಲ್ಲಿ ಆಡುವವರಿಗೂ ಕೈತುಂಬಾ ಆದಾಯ. ಈ ಸಮೃದ್ಧಿ ಮುಂದುವರಿಯಲು ಐಪಿಎಲ್‌ನ ಆದಾಯವೂ ಬೇಕು ನಿಜ. ಆದರೆ ಅದೇ ಮುಖ್ಯವಾಗಬಾರದು. ಅದರ ಮೇಲೆ ಅವಲಂಬಿತವಾದರೆ ಮುಂದೊಂದು ದಿನ ಫ್ರ್ಯಾಂಚೈಸಿಗಳ ಕೈಗೆ ಇಡೀ ಕ್ರಿಕೆಟ್ ಆಡಳಿತ ಸಿಲುಕುವ ಅಪಾಯವೂ ಇದೆ.

ಆದ್ದರಿಂದ ದೇಶಕ್ಕಾಗಿ ಆಡುವುದಕ್ಕೆ ಆದ್ಯತೆ ನೀಡಲು ತಾರಾ ವರ್ಚಸ್ಸಿನ ಆಟಗಾರರೇ ಮುಂದಾಗಲು ಇದು ಸಕಾಲ. ದೇಶದ ಹಿತಕ್ಕಾಗಿ ಆಡುವುದರಿಂದ ಎಂತಹ ಗೌರವಾದರಗಳು ಲಭಿಸುತ್ತವೆ ಎನ್ನುವುದಕ್ಕೆ ಈ ಟೂರ್ನಿಯಲ್ಲಿ ಮಿಂಚಿದ ಆಸ್ಟ್ರೇಲಿಯಾದ ಡೇವಿಡ್ ವಾರ್ನರ್ ಉದಾಹರಣೆಯಾಗುತ್ತಾರೆ. ವಾರ್ನರ್ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡಕ್ಕೆ ಒಂದು ಬಾರಿ ಪ್ರಶಸ್ತಿ ಗೆದ್ದುಕೊಟ್ಟ ನಾಯಕ. ಆದರೆ, ಕಳೆದ ಆವೃತ್ತಿಯಲ್ಲಿ ಅವರನ್ನು ನಾಯಕ ಪಟ್ಟದಿಂದ ದಿಢೀರ್ ಕೆಳಗಿಳಿಸಿದ್ದಷ್ಟೇ ಅಲ್ಲ, ಎಂಟು ಪಂದ್ಯಗಳಲ್ಲಿ ಬೆಂಚ್‌ನಲ್ಲಿ ಕೂರಿಸಲಾಗಿತ್ತು. ಆದರೆ, ಅದೇ ವಾರ್ನರ್ ತಮ್ಮ ದೇಶದ ತಂಡಕ್ಕೆ ಟಿ20 ವಿಶ್ವಕಪ್ ಜಯದ ಕಾಣಿಕೆ ನೀಡಿದರು. 2018ರಲ್ಲಿ ದಕ್ಷಿಣ ಆಫ್ರಿಕಾ ಎದುರಿನ ಟೆಸ್ಟ್‌ನಲ್ಲಿ ಚೆಂಡು ವಿರೂಪ ಪ್ರಕರಣದಲ್ಲಿ ಇದೇ ವಾರ್ನರ್, ಸ್ಟೀವ್ ಸ್ಮಿತ್ ಮತ್ತು ಕ್ಯಾಮರೂನ್ ಬ್ಯಾಂಕ್ರಾಫ್ಟ್ ಶಿಕ್ಷೆಗೊಳಗಾಗಿದ್ದರು. ಆಗ ಸ್ಮಿತ್ ನಾಯಕರೂ ಆಗಿದ್ದರು. ಅಲ್ಲಿಂದೀಚೆಗೆ ಆಸ್ಟ್ರೇಲಿಯಾ ತಂಡ ನಿರಾಶೆಯನ್ನೇ ಹೆಚ್ಚಾಗಿ ಅನುಭವಿಸಿತ್ತು. ಭಾರತ ತಂಡದ ಎದುರು ತನ್ನ ನೆಲದಲ್ಲಿಯೇ ಎರಡು ಬಾರಿ ಟೆಸ್ಟ್ ಸರಣಿಗಳನ್ನು ಸೋತಿತ್ತು. ವಿಶ್ವ ಟೆಸ್ಟ್ ಸರಣಿಯ ಫೈನಲ್ ಪ್ರವೇಶಿಸಿರಲಿಲ್ಲ. 2019ರ ಏಕದಿನ ವಿಶ್ವಕಪ್ ಟೂರ್ನಿಯಲ್ಲಿಯೂ ವೈಫಲ್ಯ ಅನುಭವಿಸಿತ್ತು. ತನ್ನ ದೇಶದ ತಂಡವನ್ನು ಮತ್ತೆ ಜಯದ ಹಾದಿಗೆ ತರಲೇಬೇಕು ಮತ್ತು ತನ್ನ ಮೇಲಿನ ಕಳಂಕ ಅಳಿಸಿಕೊಳ್ಳಬೇಕು ಎಂಬ ಉತ್ಕಟ ಆಕಾಂಕ್ಷೆ ವಾರ್ನರ್ ಆಟದಲ್ಲಿ ಕಂಡುಬಂದಿದ್ದು ಸುಳ್ಳಲ್ಲ. ದೇಶಕ್ಕಾಗಿ ಆಡುವವರಿಗೆ ಇವತ್ತಲ್ಲ ನಾಳೆ ಯಶಸ್ಸು ಮತ್ತು ಖ್ಯಾತಿ ಅರಸಿ ಬಂದೇ ಬರುತ್ತವೆ ಎಂಬುದು ಇದರಿಂದ ಮತ್ತೊಮ್ಮೆ ಸಾಬೀತಾಗಿದೆ. ಐದು ಸಲ ಏಕದಿನ ವಿಶ್ವಕಪ್ ಗೆದ್ದ ಆಸ್ಟ್ರೇಲಿಯಾ ತಂಡದ ವೈಭವ ಮರುಕಳಿಸುವ ಲಕ್ಷಣಗಳು ಗೋಚರಿಸುತ್ತಿವೆ.

ಸಾಂಪ್ರದಾಯಿಕ ಕ್ರಿಕೆಟ್ ಮೂಲಕವೇ ತಾವೂ ಬೆಳೆದು ತಂಡದ ಬೆಳವಣಿಗೆಯಲ್ಲೂ ಪ್ರಮುಖ ಪಾತ್ರ ವಹಿಸಿದ್ದ ದಿಗ್ಗಜ ಕ್ರಿಕೆಟಿಗ ರಾಹುಲ್ ದ್ರಾವಿಡ್ ಈಗ ಭಾರತ ತಂಡದ ಮುಖ್ಯ ಕೋಚ್ ಆಗಿದ್ದಾರೆ. ಕ್ರಿಕೆಟ್ ಎಂದರೆ ಬರೀ ಐಪಿಎಲ್ ವೈಭವವಷ್ಟೇ ಅಲ್ಲ. ಹೊಡಿಬಡಿ ಆಟವಷ್ಟೇ ಅಲ್ಲ. ಆಟದಲ್ಲಿ ಸಭ್ಯತೆ, ಸಂಸ್ಕೃತಿ ಮತ್ತು ಜೀವನತತ್ವಗಳಿವೆ. ದೇಶಪ್ರೇಮವೂ ಇದೆ. ಜನರ ವಿಶ್ವಾಸವನ್ನು ಉಳಿಸಿಕೊಳ್ಳುವ ಹೊಣೆಯೂ ಇದೆ ಎಂಬ ಮೂಲಪಾಠವನ್ನೂ ನವಯುಗದ ಆಟಗಾರರಿಗೆ ತಿಳಿಸಿ ಕೊಡುವ ಹೊಣೆ ಅವರ ಮೇಲಿದೆ.



ಚುರುಮುರಿ



ಕಸಾಪ ಕಸರತ್ತು

• ಮಣ್ಣೆರಾಜು

'**ನವೆಂಬರ್** ಚಳಿಯಲ್ಲೂ ಕಸಾಪ ಚುನಾ ವಣೆಯ ಕಾವು ಇಲ್ಲ. ಬಹಿರಂಗ ಸಭೆಯ ಅಬ್ಬರವಿಲ್ಲ, ಬೈ ಎಲೆಕ್ಷನ್ ರೀತಿಯ ಬೈದಾಟವಿಲ್ಲ, ಚುನಾವಣೆ ಸಪ್ಪೆ ಅನ್ನಿಸುತ್ತಿಲ್ವೇ?' ಸುಮಿ ಕೇಳಿದಳು.

'ಇದು ಬಹಿರಂಗ ಸಭೆಯಲ್ಲಿ ಬೈದಾಡುವ ಎಲೆಕ್ಷನ್ ಅಲ್ಲ, ಕರಪತ್ರ ಕೊಟ್ಟು ಕರ ಮುಗಿದು ಮತ ಯಾಚಿಸುವ ಕನ್ನಡಿಗರ ಅಂತರಂಗದ ಚುನಾವಣೆ' ಎಂದ ಶಂಕ್ರಿ.

'ಕಸಾಪ ಅಭ್ಯರ್ಥಿಗಳು ಚುನಾವಣಾ ಪ್ರಚಾರ ಮಾಡ್ತಿದ್ದಾರೋ ಸರ್ಕಾರದ ವಿರುದ್ಧ ಚಳವಳಿ ಮಾಡ್ತಿದ್ದಾರೋ ಅರ್ಥವಾಗ್ತಿಲ್ಲ ಕಣ್ರೀ...' ಅಭ್ಯರ್ಥಿಗಳ ಕರಪತ್ರ ಓದಿ ಸುಮಿ ಹೇಳಿದಳು.

'ಕನ್ನಡದ ಕೆಲಸವೆಂದರೆ ಹೋರಾಟವೇ. ಯಾಕೀ ಅನುಮಾನ?'

'ಅಲ್ಲಾ, ಜಾರಿಹೋಗುತ್ತಿರುವ ಕನ್ನಡ ದಾರಿಗೆ ಬರಬೇಕು, ಗಡಿ ಬಿಕ್ಕಟ್ಟು ಇತ್ಯರ್ಥ ಆಗಬೇಕು, ಕನ್ನಡಿಗರಿಗೆ ಉದ್ಯೋಗ ನೀಡಬೇಕು ಎಂದೆಲ್ಲ ಸರ್ಕಾರವನ್ನು ಒತ್ತಾಯಿಸುವಂತಹ ವಿಚಾರಗಳೇ ಕರಪತ್ರಗಳಲ್ಲಿ ಕಾಣ್ತಿವೆ, ಅದ್ಕೆ ಕೇಳಿದೆ'.

'ನಾಡುನುಡಿ ರಕ್ಷಣೆ ಕಸಾಪದ ಆದ್ಯತೆ ಅಲ್ವಾ?'

'ಎಲ್ಲಾ ಸಾರ್ವಜನಿಕ ಚುನಾವಣೆಗಳಲ್ಲಿ ಅಭ್ಯರ್ಥಿಗಳು ರಸ್ತೆ- ಚರಂಡಿ ಮಾಡ್ತೀವಿ, ನೀರು, ಬೀದಿದೀಪದ ವ್ಯವಸ್ಥೆ ಮಾಡ್ತೀವಿ ಅನ್ನುವ ಹಾಗೆ ಪ್ರತೀ ಚುನಾವಣೆಯಲ್ಲೂ ಕಸಾಪ ಅಭ್ಯರ್ಥಿಗಳು ನಾಡು-ನುಡಿ ರಕ್ಷಣೆಯ ವಿಚಾರ ಬಿಟ್ಟು ಬೇರೆ ಹೇಳುತ್ತಿಲ್ಲವಲ್ಲಾ...'

'ನಾಡು, ನುಡಿ, ಗಡಿ ಸಮಸ್ಯೆ ಬಗೆಹರಿದಿಲ್ಲ. ಹಿಂದಿ ಹೇರಿಕೆ, ಇಂಗ್ಲಿಷ್ ಸೇರಿಕೆಯಿಂದ ಕನ್ನಡ ಕಷ್ಟಕ್ಕೆ ಸಿಕ್ಕಿದೆ'.

'ಮಹಿಳಾ ಸದಸ್ಯರ ಸಂಖ್ಯೆ ಹೆಚ್ಚಾಗಿ ಮಹಿಳೆಯರು ಕಸಾಪದ ಸಾರಥ್ಯ ವಹಿಸಿಕೊಳ್ಳುವ ಅವಕಾಶ ಸಿಕ್ಕಿದ್ದರೆ ಕನ್ನಡಕ್ಕೆ ಈ ಪರಿಸ್ಥಿತಿ ಬರುತ್ತಿರಲಿಲ್ಲವೇನೋ...'

'ಹೌದೇ?!'

'ಹೌದೂರೀ. ಮಕ್ಕಳಿಗೆ ತಾಯಿಯೇ ಮೊದಲ ಗುರು. ಮಕ್ಕಳನ್ನು ಇಂಗ್ಲಿಷ್ ಮೀಡಿಯಂಗೆ ಅಡ್ಮಿಟ್ ಮಾಡಬೇಕೆಂಬ ಮಾತೆಯರ ಮನಃಸ್ಥಿತಿ ಬದಲಾಗಿ ಮನೆಮನೆಯಲ್ಲೂ ಕನ್ನಡಪ್ರೇಮ ಇನ್ನಷ್ಟು ಜಾಗೃತಗೊಳ್ಳಲು ಸಾಧ್ಯವಾಗುತ್ತಿತ್ತೇನೋ...' ಎಂದಳು ಸುಮಿ.

ಸಂಗತ

ಹಿತ್ತಿಲೂ ಇಲ್ಲ ಮದ್ದಿನ ಗಿಡವೂ ಇಲ್ಲ!

ಹಿತವಾದ ಹಿತ್ತಿಲು ಇಲ್ಲದ ಮನೆಯಲ್ಲಿ ಖುಷಿಯಿಂದ ಬದುಕುವುದಾದರೂ ಹೇಗೆ?

• ಸದಾಶಿವ್ ಸೊರಟೂರು

ಬೆಂಗಳೂರಿನ ಒಂದು ಕಾಲೇಜಿಗೆ ಇತ್ತೀಚೆಗೆ ಉಪನ್ಯಾಸಕ್ಕೆಂದು ಹೋಗಿದ್ದೆ. ಏನನ್ನೋ ವಿವರಿಸುತ್ತಿದ್ದಾಗ ಮಾತಿನ ಮಧ್ಯೆ 'ಹಿತ್ತಿಲಗಿಡ ಮದ್ದಲ್ಲ' ಎಂದೆ. ಆ ಮಾತು ವಿದ್ಯಾರ್ಥಿಗಳ ಮೇಲೆ ಯಾವ ಪರಿಣಾಮವನ್ನೂ ಬೀರಿದಂತೆ ಕಾಣಲಿಲ್ಲ. ನನಗೆ ಅನುಮಾನ ಬಂದು 'ನಿಮಗೆ ಹಿತ್ತಿಲು ಗೊತ್ತಲ್ವ?' ಅಂತ ಕೇಳಿದೆ. ಇಡೀ ತರಗತಿ ಮೌನವಾಗಿತ್ತು. 'ನಾನೊಂದು ಕ್ಲೂ ಕೊಡ್ತೀನಿ ಆಗ ಹೇಳಬಹುದಾ?' ಅಂದೆ. ಇಡೀ ತರಗತಿ ತಲೆಯಾಡಿಸಿತು.

ಇದು ಮನೆಗೆ ಅಂಟಿಕೊಂಡೇ ಇರುತ್ತದೆ, ಮನೆಯ ಒಂದು ಭಾಗವೂ ಹೌದೆಂದೆ. ಒಬ್ಬನು ಎದ್ದು ನಿಂತು 'ಸರ್ ಹಿತ್ತಿಲು ಅಂದ್ರೆ ಪಾರ್ಕಿಂಗ್ ಲಾಟ್ ಇರಬಹುದಾ?' ಅಂದ. ನಾನು ಸುಸ್ತಾಗಿ ಹೋದೆ.

ಮನೆಗೆ ಆಪ್ತ ಗೆಳೆಯನಂತೆ ಇರುತ್ತಿದ್ದ ಹಿತ್ತಿಲ ಬಗ್ಗೆ ವಿವರಿಸಿದೆ. ಅಲ್ಲೇ ಬೆಳೆದುಕೊಳ್ಳುತ್ತಿದ್ದ ಕಾಯಿಪಲ್ಲೆ, ಅರಳುತ್ತಿದ್ದ ಬಗೆ ಬಗೆಯ ಹೂವುಗಳು, ಬೆಳೆದಿರುತ್ತಿದ್ದ ಒಂದೊ ಎರಡೊ ಮರಗಳು, ಹಣ್ಣಿನ ಗಿಡಗಳು, ತುಳಸಿ, ತುಂಬೆ, ಅರಿಶಿನದಂತಹ ಔಷಧೀಯ ಸಸ್ಯಗಳು, ಕೆಲವೊಂದು ಕಡೆ ಇರುತ್ತಿದ್ದ ಸಣ್ಣ ಬಾವಿ... ಹೀಗೆ ಮನೆಯನ್ನು ಹಿತವಾಗಿ ಸಲಹುವಂತೆ ಹಿತ್ತಿಲು ಮೈದಳೆದು ನಿಂತಿರುತ್ತಿದ್ದ ಬಗ್ಗೆ ಹೇಳಿದೆ.

ಸಂಜೆ ಹೊತ್ತಿಗೆ ಹಿತ್ತಿಲಲ್ಲಿ ಕೂತು ಒಂದು ದಿವ್ಯ ಏಕಾಂತವನ್ನು ಕಳೆಯಬಹುದಿತ್ತು. ಅಷ್ಟೊಂದು ಸೊಗಸಿರುತ್ತಿತ್ತು ಅದಕ್ಕೆ. ಈಗಲೂ ಬಹುತೇಕ ಹಳ್ಳಿಗಳಲ್ಲಿ ಹಿತ್ತಿಲುಗಳಿವೆ. ಆದರೆ ಅಲ್ಲಿಯೂ ಈಗ ಹಿತ್ತಿಲನ್ನು ಜಾಡಿಸಿ ನಗರದಲ್ಲಿ ಕಟ್ಟುವಂತಹ ಮನೆ ಕಟ್ಟಿಕೊಂಡು, ಸಂಜೆ ಮಹಡಿಯ ಮೇಲೆ, ಕಳೆದುಕೊಂಡ ಒಳ್ಳೆಯ ಕ್ಷಣಗಳನ್ನು ಹುಡುಕುವವರಂತೆ ನಿಂತಿರುತ್ತಾರೆ ಎಂಬುದನ್ನು ಹೇಳಿದೆ. ವಿದ್ಯಾರ್ಥಿಗಳ ಕಣ್ಣುಗಳು ಅರಳಿದ್ದವು.

ಇದು ಅವರ ತಪ್ಪಲ್ಲ. ಹಿತ್ತಿಲನ್ನು ಸಾಯಿಸಿ ಬೆಳೆಯುತ್ತಿರುವ ನಗರಗಳಿಂದ ಆದ ಈ ಬದಲಾವಣೆ ಅವರಿಗಾದರೂ ಹೇಗೆ ತಿಳಿಯಬೇಕು? ಒಂದು ಅಡಿ ಜಾಗವೂ ಅಮೂಲ್ಯವೇ ಆಗಿರುವಾಗ ನಗರಗಳಲ್ಲಿ ಒಂದು ಹಿತವಾದ ಹಿತ್ತಿಲು ನಿರ್ಮಿಸಿಕೊಳ್ಳುವುದು ಕಷ್ಟವೇ ಇರಬಹುದು. ಆದರೆ ಪ್ರಶ್ನೆ ಅದಲ್ಲ. ಹಿತ್ತಿಲಿಗೂ ಜಾಗ ಬಿಡದೆ ಕಟ್ಟಿದ ಮನೆಯಲ್ಲಾದರೂ ನೀವು ಹೇಗೆ ಬದುಕಿದ್ದೀರಿ ಎಂಬುದು.

ಮನೆಯ ಪ್ಲಾನ್ ಮಾಡುವಾಗ ಎಂಜಿನಿಯರ್‌ಗೆ ಎಲ್ಲಿಯೂ ಒಂದಿಂಚು ಜಾಗವೂ ವ್ಯರ್ಥವಾಗಬಾರದೆಂದು ತಾಕೀತು ಮಾಡುತ್ತೀರಿ. ಮನೆ ದೊಡ್ಡದಿರಬೇಕು, ಹಾಲ್ ವಿಶಾಲವಾಗಿರಬೇಕು, ಅಡುಗೆ ಕೋಣೆ ಸುಂದರವಾಗಿರಬೇಕು, ಡೈನಿಂಗ್ ಹಾಲ್ ಅಂತೂ ಕಡ್ಡಾಯ, ಮೂರು ಬೆಡ್ ರೂಮುಗಳು, ಎರಡು ಬಾಲ್ಕನಿಗಳು... ಹೀಗೆ ಎಲ್ಲವನ್ನೂ ಒಳಗೊಂಡಂತೆ ದಢೂತಿಯಾದ ಮನೆ ಕಟ್ಟುತ್ತೇವೆ. ಬೆಳಗ್ಗೆಯಿಂದ ರಾತ್ರಿಯವರೆಗೆ ಗಂಡ-ಹೆಂಡತಿ ಇಬ್ಬರೂ ಆಫೀಸ್‌ನಲ್ಲೋ ಯಾವುದೊ ವ್ಯವಹಾರದಲ್ಲೋ ಮುಳುಗಿರುತ್ತಾರೆ. ಇರುವ ಒಂದಿಬ್ಬರು ಮಕ್ಕಳು ಸ್ಕೂಲು, ಕಾಲೇಜು, ಸಂಗೀತ, ಈಜು, ನಾಟ್ಯ ಎಂದೆಲ್ಲ ಮನೆ ಸೇರಲು ರಾತ್ರಿಯೇ ಆಗಬೇಕು. ರಾತ್ರಿ ಮಲಗಿ ಎದ್ದು ಹೋಗಲು ಒಂದಿಂಚು ಜಾಗವೂ ವ್ಯರ್ಥವಾಗದಂತೆ ಮನೆ ಕಟ್ಟಿಸಿಕೊಳ್ಳುತ್ತೇವೆ. ಹಿತ್ತಿಲು ನಮಗೆ ವ್ಯರ್ಥವಾಗುವ ಜಾಗದಂತೆಯೇ ತೋರುತ್ತದೆ. ಅದಕ್ಕಿಂತ ಹೆಚ್ಚು ವ್ಯರ್ಥದ ಬದುಕನ್ನು ಕಳೆಯುತ್ತಿರುವುದು ನಮ್ಮ ಗಮನಕ್ಕೆ ಬರುವುದೇ ಇಲ್ಲ.

ಸುಂದರವಾದ ಕಿಚನ್ ಕಟ್ಟಿಸಿಕೊಂಡು ವಾರಕ್ಕೆ ಮೂರು ದಿನ ಹೋಟೆಲ್‌ನಲ್ಲಿ ತಿನ್ನುತ್ತೇವೆ. ಹಿತ್ತಿಲಿನ ಪಳೆಯುಳಿಕೆಯೋ ಅನ್ನುವಂತೆ ಮನೆಯ ಮುಂದೊಂದು ಒಂಟಿ ತುಳಸಿ ಗಿಡವಿದ್ದೀತು ಅಷ್ಟೆ! ಅದೊಂದು ನಗರದ ಬದುಕಿನ ರೂಪಕದಂತೆ ಕಾಣಿಸುತ್ತದೆ.



ಮುಂಬೈನಲ್ಲಿರುವ ಗೆಳೆಯ ಕುಂಡಗಳಲ್ಲಿ ಒಂದೆರಡು ಗಿಡಗಳನ್ನು ನೆಡಲು ಮಣ್ಣಿಗಾಗಿ ಪರದಾಡಿ ಕೊನೆಗೆ ಅಮೆಜಾನ್‌ನಲ್ಲಿ ಖರೀದಿಸಿದ. ಇದು ದಶಕದ ಹಿಂದಿನ ಕಥೆ. ಇತ್ತೀಚಿನ ಕೆಲವು ನಗರಗಳು ಹಿಡಿ ಮಣ್ಣು ಸಿಗದಷ್ಟು ಆಧುನೀಕರಣಗೊಂಡಿರುವುದು ನಿಗೂಢ ವಿಷಯವೇನಲ್ಲ. ಹಳ್ಳಿಗಳಲ್ಲೂ ಮನೆಯ ಮುಂದಿನ ಅಂಗಳಗಳು ಈಗ ಸಿಮೆಂಟಿನ ಹಾದಿಗಳಾಗಿವೆ. ಮಕ್ಕಳು ಮಣ್ಣಿನಲ್ಲಿ ಆಡುವುದು ದೂರದ ಮಾತು. ಇನ್ನು ಮಕ್ಕಳು ಮಣ್ಣು ತಿನ್ನುತ್ತಿದ್ದರು ಎಂಬುದು ಈಗಿನ ಮಕ್ಕಳಿಗೆ ತೀರಾ ಅಚ್ಚರಿಯ ಸುದ್ದಿಯೇ ಸರಿ.

ನಗರದ ಬದುಕು 'ಬಿಗ್‌ಬಾಸ್' ಮನೆಯಂತಾಗಿದೆ. ಬಾಳನ್ನು ಕೂಡ ಒಂದು ಟಾಸ್ಕ್‌ನಂತೆಯೇ ಸ್ವೀಕರಿಸಿ ನಟಿಸುತ್ತಿದ್ದೇವೆ. ನಾವು ಯಾರೂ ಸಹಜವಾಗಿ ಬದುಕುತ್ತಿಲ್ಲ. ಎಲ್ಲದರಲ್ಲೊಂದು ಕೃತಕತೆ ಇದೆ. ಹಣದ ಹಿಂದೆ, ಹೆಸರಿನ ಹಿಂದೆ, ಆಸ್ತಿಯ ಹಿಂದೆ ಆತುರದಲ್ಲಿ ಓಡುತ್ತಿದ್ದೇವೆ. ಆದರೆ ಅದ್ಯಾವುದೂ ನಮಗೆ ಖುಷಿ ಕೊಡುವುದಿಲ್ಲವೆಂಬುದು ಅರಿವಾಗುವ ಹೊತ್ತಿಗೆ ಬದುಕೇ ಮುಗಿದುಹೋಗಿರುತ್ತದೆ.

'ತೆರಣಿಯ ಹುಳು ತನ್ನ ಸ್ನೇಹದಿಂದ ಮನೆಯ ಮಾಡಿ ತನ್ನ ನೂಲು ತನ್ನನೆ ಸುತ್ತಿ ಸಾವಂತೆ...' ಅನ್ನುವ ಅಕ್ಕನ ವಚನ ಸದ್ಯದ ಬಾಳ್ವೆಗೆ ಹೋಲುತ್ತದೆ. ಆಧುನೀಕರಣದ ಹೆಸರಿನಲ್ಲಿ ನಾವು ಹೊಂದುತ್ತಿರುವ ಎಲ್ಲಾ ಸವಲತ್ತುಗಳು ನಮ್ಮನ್ನು ಬಂಧಿಸುತ್ತಿವೆ. ಅದು ನಾವೇ ಬಯಸಿ ಬಯಸಿ ಹಾಕಿಸಿಕೊಂಡ ಬೇಡಿ. ಅದರಿಂದಾಚೆ ಬರಲಾಗದೆ ಒದ್ದಾಡುತ್ತೇವೆ. ಒಂದೊಳ್ಳೆ ಬದುಕು ಅಲ್ಲಿಯೇ ಮುಗಿದು ಹೋಗುತ್ತದೆ. ಹಾಗಾಗದಂತೆ ಬದುಕಲು ಸಾಧ್ಯವಿದೆ. ಅದಕ್ಕೆ ನಾವು ಮನಸ್ಸು ಮಾಡಬೇಕಷ್ಟೆ.

ವಾಚಕರ ವಾಣಿ

ಜಾಹೀರಾತು ಸಾರುವ ಬೊಂಬೆಗಳೇ?

ಅಂಗನವಾಡಿ ಕಾರ್ಯಕರ್ತೆಯರಿಗೆ ಕೊಟ್ಟಿರುವ ಸಮವಸ್ತ್ರದ ಸೀರೆಯ ಅಂಚಿನುದ್ದಕ್ಕೂ 'ಪೋಷಣ್ ಅಭಿಯಾನ್' ಎಂದು ಸರ್ಕಾರದ ಜಾಹೀರಾತು ಮುದ್ರಿಸಿರುವುದು ನಿಜಕ್ಕೂ ಅವರಿಗೆ ಅಗೌರವ ತೋರುವ ಕೃತ್ಯ. ಗೌರವಧನಕ್ಕಾಗಿ ದುಡಿಯುತ್ತಿರುವ ಅಂಗನವಾಡಿ ಕಾರ್ಯಕರ್ತೆಯರನ್ನು ಜಾಹೀರಾತು ಸಾರುವ ಬೊಂಬೆಗಳಂತೆ ನೋಡುವುದು ಅಮಾನವೀಯ ನಡೆ. ಇದನ್ನು ಕೂಡಲೇ ರದ್ದುಗೊಳಿಸಬೇಕು. ಅಷ್ಟಕ್ಕೂ ಪ್ರಚಾರದ ಅವಶ್ಯಕತೆ ಇದ್ದರೆ, ಅವರಿಗೆ ಒಂದು ಸುಂದರವಾದ ಮುದ್ರಿತ ಬ್ಯಾಡ್ಜ್ ಅಥವಾ ಟೋಪಿಯನ್ನೊ, ಕಿಟ್ ಬ್ಯಾಗನ್ನೊ, ಕೊಡೆಯನ್ನೊ ಅಥವಾ ಅವರ ಶಿಬಿರದ ಟೆಂಟ್‌ಗಳಿಗೆ ಜಾಹೀರಾತನ್ನೋ ಮುದ್ರಿಸಿ ಕೊಡಬಹುದು.

ಸತೀಶ ಎಂ.ಎಸ್. ಭಟ್ಟ, ಬೆಂಗಳೂರು

ಹಸಿವು ನಿವಾರಣೆ: 'ಸುಪ್ರೀಂ' ಅತ್ಯುತ್ತಮ ನಡೆ

ಹಸಿವು ನಿವಾರಣೆಗಾಗಿ ಸಮುದಾಯ ಭೋಜನಾಲಯಗಳ ಸ್ಥಾಪನೆಗೆ ಸಂಬಂಧಿಸಿದಂತೆ ಯೋಜನೆ ರೂಪಿಸಲು ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಮೂರು ವಾರಗಳ ಗಡುವು ನೀಡಿರುವುದು ಒಂದು ಅತ್ಯುತ್ತಮ ನಡೆ. ಆದರೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಲಕ್ವ ಹೊಡೆಸಿಕೊಂಡಂತೆ ಶೋಚನೀಯ ಸ್ಥಿತಿ ತಲುಪಿವೆ. ಚುನಾವಣಾ ಸಂದರ್ಭಗಳನ್ನು ಹೊರತುಪಡಿಸಿ ಮಿಕ್ಕ ದಿನಗಳಲ್ಲಿ ಕಣ್ಣನ್ನೂ ಸೇರಿಸಿ ಮುಖಗವಸು ಹಾಕಿಕೊಂಡು ಕೂತುಬಿಡುತ್ತವೆ. ಸಾರ್ವಜನಿಕರ ದಿನನಿತ್ಯದ ಬಳಕೆಯ ಅಡುಗೆ ಅನಿಲದ ಸಬ್ಸಿಡಿಯನ್ನೇ ಕಿತ್ತುಕೊಂಡ ಸರ್ಕಾರ, ಜನರ ದೈನಂದಿನ ಬದುಕಿನ ಪದಾರ್ಥಗಳ ಮೇಲೆ ಗದಾಪ್ರಹಾರ ಮಾಡಿದೆ. ಸರ್ಕಾರದ ಇಂತಹ ಜಾಣನಡೆಯನ್ನು ಕೋರ್ಟ್ ಗಂಭೀರವಾಗಿ ಗಮನಿಸಿರುವುದು ಸರಿಯಾಗಿಯೇ ಇದೆ.

ಅಶ್ವತ್ಥ ಕಲ್ಲೇದೇವರಹಳ್ಳಿ, ಕುಂಕಾನಾಡು, ಕಡೂರು

ಪುಸ್ತಕದಿಂದ ದೊರೆತ ಅರಿವು...

ಗ್ರಂಥಾಲಯದ ಮಹತ್ವ ಕುರಿತಂತೆ ಡಾ. ಕೆ.ಎಸ್.ಪವಿತ್ರ ಅವರ ಲೇಖನ (ಸಂಗತ, ನ. 15) ಯೋಚನೆಗೆ ಹಚ್ಚುವಂತಿದೆ. ಗ್ರಂಥಾಲಯಗಳಿಗೆ ಹೋಗುವವರ ಸಂಖ್ಯೆ ಕ್ಷೀಣಿಸುತ್ತಿದ್ದು ಇದನ್ನು ಸರಿಪಡಿಸಲು ಮಕ್ಕಳಿರುವಾಗಲೇ ಓದುವ ಅಭ್ಯಾಸವನ್ನು ರೂಢಿಸಬೇಕು. ಆದರೆ ಈಗಿನ ಮಕ್ಕಳಲ್ಲಿ ಪಠ್ಯಪುಸ್ತಕದ ವಿಷಯ ಹೊರತುಪಡಿಸಿ ಹೊರಗಿನ ಜ್ಞಾನ ತೀರಾ ಕಮ್ಮಿ. ಪಠ್ಯಪುಸ್ತಕಗಳಿಗೆ ಹೊರತಾದ ಪುಸ್ತಕಗಳನ್ನು ಓದುವ ರೂಢಿಯನ್ನು ಮಕ್ಕಳಲ್ಲಿ ಬೆಳೆಸಬೇಕು. ಒಬ್ಬ ವ್ಯಕ್ತಿಯ ವ್ಯಕ್ತಿತ್ವದ ಬೆಳವಣಿಗೆಯಲ್ಲಿ, ಯೋಚನಾ ಸಾಮರ್ಥ್ಯದಲ್ಲಿ ಪುಸ್ತಕಗಳು ಪ್ರಮುಖ ಪಾತ್ರ ವಹಿಸುತ್ತವೆ. ಮಕ್ಕಳು ಪುಸ್ತಕಗಳಿಗಿಂತ ಮೊಬೈಲ್ ಫೋನ್‌ಗಳಲ್ಲೇ ಹೆಚ್ಚು ಸಮಯ ಕಳೆಯುತ್ತಿದ್ದಾರೆ. ಪೋಷಕರು ಪುಟ್ಟ ಮಕ್ಕಳಿಗೆ ಊಟ ಮಾಡಿಸುವಾಗ, ಅವು ಅಳುವಾಗ, ಹಟ ಹಿಡಿದಾಗ ಮೊಬೈಲ್ ಕೊಡುವ ಅಭ್ಯಾಸ ಮಾಡಿರುತ್ತಾರೆ. ಇದು ಮಕ್ಕಳ ಮಾನಸಿಕ ಮತ್ತು ದೈಹಿಕ ಬೆಳವಣಿಗೆ ಮೇಲೆ ಪರಿಣಾಮ ಬೀರುತ್ತದೆ ಹಾಗೂ ಅವರಲ್ಲಿ ಯೋಚನಾಶಕ್ತಿ ಕುಂದುವಂತೆ ಮಾಡುತ್ತದೆ.

ಮಕ್ಕಳು ಪೋಷಕರ ಮಾತು ಕೇಳುವುದು ವಿರಳ. ಆದರೆ ಅವರನ್ನು ಅನುಸರಿಸುತ್ತಾರೆ. ಪೋಷಕರು ಮೊಬೈಲ್ ಹಿಡಿದು ಕುಳಿತರೆ ಮಕ್ಕಳೂ ಅದೇ ಕೆಲಸ ಮಾಡುತ್ತಾರೆ. ಅದೇ ಪೋಷಕರು ಪುಸ್ತಕ ಹಿಡಿದು ಕುಳಿತರೆ ಮಕ್ಕಳೂ ಅದನ್ನು ಅನುಸರಿಸುತ್ತಾರೆ. 'ಪುಸ್ತಕದಿಂದ ದೊರೆತರಿವು ಮಸ್ತಕದಿ ತಳೆದ ಮಣಿ' ಎಂಬ ಡಿವಿಜಿ ಅವರ ಮಾತುಗಳನ್ನು ಮೊದಲು ಪೋಷಕರು ಅರಿಯಬೇಕಿದೆ.

ಬಿ.ಎಸ್.ಚೈತ್ರ, ಚಿತ್ರದುರ್ಗ

ವಾಸ್ತು: ಮೌಢ್ಯ ಅಳಿಯಲಿ

ವಾಸ್ತುವಿನ ವೈರುಧ್ಯಗಳ ಕುರಿತು ಬರೆದಿರುವ ನಳಿನಿ ಭೀಮಪ್ಪ ಅವರ ಲೇಖನ (ಸಂಗತ, ನ. 17) ಸಮಯೋಚಿತವಾಗಿದೆ. ಇಂದು ಪದವಿ ಓದಿದವರಲ್ಲೂ ವೈಜ್ಞಾನಿಕ ಮನೋಭಾವ ಬೆಳೆದಿರುವುದಿಲ್ಲ. ಮೌಢ್ಯ ಮನೆ ಮಾಡಿರುತ್ತದೆ. ಯಾರೋ ಹೇಳಿದ್ದನ್ನು, ಕೇಳಿದ್ದನ್ನು ಕೂಲಂಕಷವಾಗಿ ಪರಾಮರ್ಶಿಸದೇ ನಂಬಿ ಮೋಸ ಹೋಗುವವರ ಸಂಖ್ಯೆ ಹೆಚ್ಚಿದೆ. ಎಂಜಿನಿಯರಿಂಗ್ ಪದವಿ ಗಳಿಸಿದವರಲ್ಲೂ ಕೆಲವರು ತಮ್ಮ ಜ್ಞಾನವನ್ನು ಬಳಸಿ ಮೌಢ್ಯವನ್ನು ಅಳಿಸದೆ ವಾಸ್ತುವನ್ನು ನಂಬಿ ಸಮಾಜವನ್ನು ದಾರಿ ತಪ್ಪಿಸುತ್ತಿದ್ದಾರೆ. ಇದರಿಂದ ಜನ ಅನವಶ್ಯಕವಾದುದಕ್ಕೆ ಹಣ ವ್ಯಯಿಸಿ ಸಾಲಗಾರರಾಗುತ್ತಿದ್ದಾರೆ. ಆನಂತರ ಪರಿಹಾರಕ್ಕಾಗಿ ಜ್ಯೋತಿಷಿಗಳ ಮೊರೆ ಹೋಗುತ್ತಾರೆ. ಇದರಿಂದ ಅವರ ಸಮಯ ಮತ್ತು ಹಣ ಎರಡೂ ನಷ್ಟವಾಗುತ್ತದೆ ಹೊರತು ಲಾಭವಂತೂ ಆಗುವುದಿಲ್ಲ.

ಮನೆಗೆ ಸ್ವಚ್ಛ ಗಾಳಿ, ಬೆಳಕು ಸಾಕು. ಅದನ್ನು ಬಿಟ್ಟು ಜ್ಯೋತಿಷಿಗಳನ್ನು ನಂಬಿ ಅನನುಕೂಲವಾಗುವ ರೀತಿಯಲ್ಲಿ ಮನೆ ನಿರ್ಮಿಸಿಕೊಳ್ಳುವುದಲ್ಲ. ನಾವು ಕೊಳ್ಳುಬಾಕ ಸಂಸ್ಕೃತಿಯನ್ನು ಬಿಟ್ಟು ಸರಳ ಜೀವನ ನಡೆಸಬೇಕು. ಮನೆ-ಮನಸ್ಸು ಎರಡೂ ಚೆನ್ನಾಗಿರಬೇಕು. ಅಂದಾಗ ಮಾತ್ರ ನೆಮ್ಮದಿಯ ಜೀವನ ನಡೆಸಲು ಸಾಧ್ಯ.

ಜೆ.ಪಿ.ಅಗಸಿಮನಿ, ಸಿಂದೊಳ್ಳಿ, ಬೆಳಗಾವಿ

ನಾವು ಹೇಳಿದಂತೆ ಮಾಡಿ, ಆದರೆ...

ಕಲಬುರಗಿಯ ಮೇಯರ್, ಉಪಮೇಯರ್ ಚುನಾವಣೆಗೆ ಆಡಳಿತ ಪಕ್ಷವು ಗೆಲ್ಲಲೇಬೇಕೆಂಬ ಹಟಕ್ಕೆ ಬಿದ್ದು ಹಲವಾರು ವಾಮಮಾರ್ಗಗಳನ್ನು ಬಳಸುತ್ತಿದೆ. ಬೇರೆ ಕಡೆ ವಾಸ ಸ್ಥಳಗಳನ್ನು ಹೊಂದಿ, ಅಲ್ಲಿ ತಮ್ಮ ಗುರುತಿನ ಚೀಟಿ ಹೊಂದಿದ್ದರೂ 7 ಜನ ವಿಧಾನಪರಿಷತ್ ಸದಸ್ಯರು ತಾವು ನೋಡಲ್ ಜಿಲ್ಲೆಯನ್ನಾಗಿ ಕಲಬುರಗಿಯನ್ನೇ ಆಯ್ಕೆ ಮಾಡಿಕೊಂಡಿರುವುದಾಗಿ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ. ಜನಸಾಮಾನ್ಯರು ಹೊಸ ಗುರುತಿನ ಚೀಟಿ ಮಾಡಿಸುವಾಗ ಬೇರೆ ಎಲ್ಲಾದರೂ ಈಗಾಗಲೇ ಗುರುತಿನ ಚೀಟಿ ಇದ್ದ ಪಕ್ಷದಲ್ಲಿ ಅದನ್ನು ತೆಗೆಸಿ, ಹೊಸದಾಗಿ ತಾವು ಇರುವ ಸ್ಥಳದ ದಾಖಲೆ ನೀಡಬೇಕಾಗಿರುವುದು ನಿಯಮ. ಹಾಗೇನಾದರೂ ಆ ಏಳು ಜನ ನಿಯಮ ಪಾಲಿಸಿದ್ದಾರೆಯೇ? ಅದೂ ಹೊಸದಾಗಿ ಕಡಿಮೆ ಬಾಡಿಗೆ ನೀಡುತ್ತಿರುವ ಬಾಡಿಗೆ ಕರಾರು ಪತ್ರವನ್ನೂ ತೋರಿಸಿರುವುದು ವರದಿಯಾಗಿದೆ!

ಸರ್ಕಾರ ಇದಕ್ಕೆ ಸ್ಪಷ್ಟೀಕರಣ ನೀಡಬಹುದೆ? ಇದು ಯಾವ ರೀತಿಯ ಮೇಲ್ಪಂಕ್ತಿ ಎಂದು ತಿಳಿಯದಾಗಿದೆ. ಚುನಾವಣಾ ಸಮಯದಲ್ಲಿ ಅಕ್ರಮವಾಗಿ ಮತದಾರರ ಪಟ್ಟಿಗೆ ಸೇರ್ಪಡೆ ಮಾಡಿದ್ದಾರೆ ಎಂದು ಆರೋಪಿಸುವ ನೀವು ಮಾಡುತ್ತಿರುವುದಾದರೂ ಏನನ್ನು? ಕಾನೂನನ್ನು ತಾವು ತಮ್ಮಿಷ್ಟಕ್ಕೆ ರೂಪಿಸಿಕೊಂಡು 'ನಾವು ಹೇಳಿದಂತೆ ಮಾಡಿ, ನಾವು ಮಾಡಿದಂತೆ ಮಾಡಬೇಡಿ' ಎಂದು ಜನರಿಗೆ ಹೇಳುವಂತಾಗಿದೆ.

ಮಲ್ಲತ್ತಹಳ್ಳಿ ಡಾ. ಎಚ್. ತುಕಾರಾಂ, ಬೆಂಗಳೂರು


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಇ–ರಿಟೇಲ್ ಏರುಗತಿ


2025–26ನೇ ಸಾಲಿನ ವೇಳೆಗೆ ರಿಟೇಲ್ ಮಾರುಕಟ್ಟೆಯ ವಹಿವಾಟು ಶೇ 8–9ರಷ್ಟು ಏರಿಕೆಯಾಗಬಹುದು ಎಂದು ಅಂದಾಜಿಸಲಾಗಿದೆ. ಆದರೆ ಅದೇ ಅವಧಿಯಲ್ಲಿ ಇ–ರಿಟೇಲ್ ಮಾರುಕಟ್ಟೆಯ ವಹಿವಾಟು ಶೇ 25–30ರಷ್ಟು ಏರಿಕೆಯಾಗಲಿದೆ ಎಂದು ನಿರೀಕ್ಷಿಸಲಾಗಿದೆ

ದೇಶದಲ್ಲಿ ಇ–ರಿಟೇಲ್ ವಹಿವಾಟು ಏರಿಕೆಯಾಗುತ್ತಿದೆ. ಐದು ವರ್ಷಗಳಲ್ಲಿ ಇ–ರಿಟೇಲ್ ಮಾರುಕಟ್ಟೆಯ ವಹಿವಾಟಿನ ಗಾತ್ರ ಏರಿಕೆಯಾಗುತ್ತಲೇ ಇದೆ. ಆದರೆ 2020–21ನೇ ಸಾಲಿನ ಆರ್ಥಿಕ ವರ್ಷದಲ್ಲಿ ಭಾರಿ ಪ್ರಮಾಣದ ಏರಿಕೆ ಕಂಡಿದೆ. ಅದೇ ಆರ್ಥಿಕ ವರ್ಷದಲ್ಲಿ ರಿಟೇಲ್ (ಚಿಲ್ಲರೆ) ಮಾರುಕಟ್ಟೆಯ ವಹಿವಾಟು ಸ್ವಲ್ಪ ಕುಸಿದಿದೆ. ಮುಂದಿನ ವರ್ಷಗಳಲ್ಲಿ ಈ ಎರಡೂ ರೀತಿಯ ಮಾರುಕಟ್ಟೆಗಳು ಏರಿಕೆ ಕಾಣಲಿವೆ. ಆದರೆ ಇ–ರಿಟೇಲ್ ಮಾರುಕಟ್ಟೆಯ ಏರಿಕೆ ಪ್ರಮಾಣವು ಹೆಚ್ಚು ಇರಲಿದೆ ಎಂದು ಬೈನ್ ಅಂಡ್ ಕಂಪನಿ ತನ್ನ ಸಮೀಕ್ಷಾ ವರದಿಯಲ್ಲಿ ವಿವರಿಸಿದೆ

ರಿಟೇಲ್ ಮಾರುಕಟ್ಟೆ ಗಾತ್ರ (ಲಕ್ಷ ಕೋಟಿಗಳಲ್ಲಿ)




ಇ–ರಿಟೇಲ್ ಮಾರುಕಟ್ಟೆ ಗಾತ್ರ (ಲಕ್ಷ ಕೋಟಿಗಳಲ್ಲಿ)



ಬೆಳವಣಿಗೆ ಭಾರತದಲ್ಲೇ ಹೆಚ್ಚು


ವಿಶ್ವದ ಹಲವು ದೇಶಗಳಲ್ಲಿ, 2020–21ರಲ್ಲಿ ಇ–ರಿಟೇಲ್ ಮಾರುಕಟ್ಟೆ ಗಣನೀಯ ಪ್ರಮಾಣದಲ್ಲಿ ಬೆಳವಣಿಗೆ ದಾಖಲಿಸುತ್ತದೆ ಎಂದು ಆ ಆರ್ಥಿಕ ವರ್ಷದ ಆರಂಭದಲ್ಲಿ ನಿರೀಕ್ಷಿಸಲಾಗಿತ್ತು. ಆದರೆ ಈ ನಿರೀಕ್ಷೆಯನ್ನೂ ಮೀರಿ ಹಲವು ದೇಶಗಳಲ್ಲಿ ಇ–ರಿಟೇಲ್ ಮಾರುಕಟ್ಟೆ ದೊಡ್ಡ ಪ್ರಮಾಣದ ಬೆಳವಣಿಗೆ ದಾಖಲಿಸಿದೆ. ವಿಶ್ವದ ಪ್ರಮುಖ ದೇಶಗಳಿಗೆ ಹೋಲಿಸಿದರೆ, ಭಾರತದಲ್ಲಿ ಗರಿಷ್ಠಮಟ್ಟದ ಏರಿಕೆ ದಾಖಲಾಗಿದೆ.



ದಕ್ಷಿಣದ ರಾಜ್ಯಗಳಲ್ಲಿ ಅಧಿಕ

ದಕ್ಷಿಣ ಭಾರತದ ರಾಜ್ಯಗಳಾದ ಕರ್ನಾಟಕ, ತೆಲಂಗಾಣ, ಆಂಧ್ರಪ್ರದೇಶ, ಗೋವಾ ಮತ್ತು ಕೇರಳದಲ್ಲಿ ಖರೀದಿಗಾಗಿ ಇ–ರಿಟೇಲ್ ಮಾರುಕಟ್ಟೆ ಮೊರೆ ಹೋಗುವವರ ಸಂಖ್ಯೆ ಹೆಚ್ಚು. ಈಶಾನ್ಯ ಭಾರತದ ಅರುಣಾಚಲ ಪ್ರದೇಶ, ಸಿಕ್ಕಿಂ ಮತ್ತು ತ್ರಿಪುರಾದಲ್ಲೂ ಈ ಪ್ರಮಾಣ ಹೆಚ್ಚೇ ಇದೆ. ದೆಹಲಿ ಮತ್ತು ಹರಿಯಾಣದಲ್ಲಿಯೂ ಈ ಪ್ರಮಾಣ ಹೆಚ್ಚು.

ತಮಿಳುನಾಡು, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಒಡಿಶಾ, ಬಿಹಾರ, ಜಾರ್ಖಂಡ್, ಪಂಜಾಬ್, ಹಿಮಾಚಲ ಪ್ರದೇಶ, ಉತ್ತರಾಖಂಡ ರಾಜ್ಯಗಳಲ್ಲಿ ಇ–ರಿಟೇಲ್ ಖರೀದಿ ಸಾಧಾರಣ ಪ್ರಮಾಣದಲ್ಲಿದೆ. ಹಿಂದಿ ಭಾಷಾ ರಾಜ್ಯಗಳಲ್ಲಿ ಮತ್ತು ಜಮ್ಮು–ಕಾಶ್ಮೀರದಲ್ಲಿ ಇ–ರಿಟೇಲ್ ವಹಿವಾಟು ಕಡಿಮೆ ಮಟ್ಟದಲ್ಲಿದೆ.



ಮೆಟ್ರೊ ನಗರಗಳಲ್ಲಿ ಆನ್‌ಲೈನ್ ಖರೀದಿ

ದೇಶದ ಎಲ್ಲಾ ಮೆಟ್ರೊ ನಗರಗಳ ಪ್ರತೀ ಮೂವರಲ್ಲಿ ಒಬ್ಬ ವ್ಯಕ್ತಿ ವರ್ಷದಲ್ಲಿ ಒಮ್ಮೆಯಾದರೂ ಆನ್‌ಲೈನ್ ಖರೀದಿ ಮಾಡಿದ್ದಾರೆ


ಬೆಂಗಳೂರಿನಲ್ಲಿ ಪ್ರತೀ ಇಬ್ಬರಲ್ಲಿ ಒಬ್ಬ ವ್ಯಕ್ತಿ ವರ್ಷದಲ್ಲಿ ಒಮ್ಮೆಯಾದರೂ ಆನ್‌ಲೈನ್ ಖರೀದಿ ಮಾಡಿದ್ದಾರೆ

ಬೆಂಗಳೂರಿನಲ್ಲಿ 15ರಿಂದ 60 ವರ್ಷದೊಳಗಿನ ವ್ಯಕ್ತಿಗಳ ಪೈಕಿ ಪ್ರತೀ ಏಳು ಜನರಲ್ಲಿ ಐವರು ಕನಿಷ್ಠ ಒಮ್ಮೆಯಾದರೂ ಆನ್‌ಲೈನ್ ಖರೀದಿ ಮಾಡಿದ್ದಾರೆ


ಇ–ರಿಟೇಲ್ ವಹಿವಾಟಿನ ಸ್ವರೂಪ

- **ಡಿಜಿಟಲ್ ಪರಿಸರ:** ಡಿಜಿಟಲ್ ಮಾಧ್ಯಮಗಳ ಬಳಕೆದಾರರ ಸಂಖ್ಯೆ ಹೆಚ್ಚುತ್ತಿದೆ. ಇದನ್ನು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳಲು ಹಲವು ಕಂಪನಿಗಳು ಪ್ರಯತ್ನಿಸುತ್ತಿವೆ. ಫ್ಲಿಪ್‌ಕಾರ್ಟ್, ಅಮೆಜಾನ್, ರಿಲಯನ್ಸ್ ಜಿಯೊ ಮತ್ತು ಟಾಟಾ ಸಂಸ್ಥೆಗಳು ಹೆಚ್ಚು ಹೆಚ್ಚು ಗ್ರಾಹಕರನ್ನು ತಮ್ಮೆಡೆಗೆ ಸೆಳೆಯಲು ವಿವಿಧ ಡಿಜಿಟಲ್ ಸೇವೆಗಳನ್ನು ರೂಪಿಸಿವೆ
- **ಧ್ವನಿ ಮತ್ತು ಪ್ರಾದೇಶಿಕ ಭಾಷೆ:** ಭಾರತದ ಇಂಟರ್‌ನೆಟ್ ಬಳಕೆದಾರರು ಧ್ವನಿ ಆಧಾರಿತ ಸೇವೆ ಮತ್ತು ಪ್ರಾದೇಶಿಕ ಭಾಷೆಗಳನ್ನು ಹೆಚ್ಚಾಗಿ ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಧ್ವನಿ ಸೂಚನೆ ಆ್ಯಪ್‌ಗಳ ಬಳಕೆದಾರರ ಸಂಖ್ಯೆ 2021ರಲ್ಲಿ ಪ್ರತಿ ತಿಂಗಳು (ಮೇವರೆಗೆ) 50 ಲಕ್ಷದಿಂದ 60 ಲಕ್ಷದಷ್ಟು ಹೆಚ್ಚಾಗಿದೆ. ಪ್ರಾದೇಶಿಕ ಭಾಷೆಗಳಿಗೆ ಭಾಷಾಂತರಗೊಳ್ಳುವ ವೆಬ್ ಪುಟಗಳ ಸಂಖ್ಯೆ 2019ಕ್ಕೆ ಹೋಲಿಸಿದರೆ 2020ರಲ್ಲಿ ಒಂದೂವರೆ ಪಟ್ಟು ಹೆಚ್ಚಾಗಿದೆ
- **ವಿಡಿಯೊ ಕಾಮರ್ಸ್:** ಆನ್‌ಲೈನ್ ಮೂಲಕ ವಿಡಿಯೊ ವೀಕ್ಷಿಸುವವರ ಸಂಖ್ಯೆಯಲ್ಲಿ ಭಾರಿ ಹೆಚ್ಚಳ ಆಗಿದೆ. ಸಣ್ಣ ಸಣ್ಣ ಊರುಗಳಲ್ಲಿರುವವರು ಕೂಡ ವಿಡಿಯೊಗಳನ್ನು ತಯಾರಿಸಿ, ಅಂತರ್ಜಾಲದಲ್ಲಿ ಹಾಕುತ್ತಿದ್ದಾರೆ. ಅವರು ಈ ಮೂಲಕ ಹಣ ಗಳಿಸುವ ಸಾಧ್ಯತೆಯನ್ನೂ ಪರಿಶೀಲಿಸುತ್ತಿದ್ದಾರೆ
- **ಜಾಲತಾಣ ಬಳಕೆ:** ಚಿಲ್ಲರೆ ಮಾರಾಟಗಾರರಲ್ಲಿ ಹಲವರು ತಮ್ಮ ಸರಕುಗಳನ್ನು ನೇರವಾಗಿ ಗ್ರಾಹಕರಿಗೆ ತಲುಪಿಸಲು ಸಾಮಾಜಿಕ ಜಾಲತಾಣಗಳನ್ನು ಬಳಸುತ್ತಿದ್ದಾರೆ. ಇದು ದೇಶದ ಸಣ್ಣ ವರ್ತಕರು ಮತ್ತು ಮಹಿಳಾ ಉದ್ಯಮಿಗಳಿಗೆ ಶಕ್ತಿ ತುಂಬಿದೆ. ಹೀಗೆ ವ್ಯವಹಾರ ಮಾಡುವ ಐವರಲ್ಲಿ ಮೂವರು ಸಣ್ಣ ಪಟ್ಟಣಗಳವರು
- **ನೇರವಾಗಿ ಗ್ರಾಹಕರಿಗೆ:** ಹಲವು ಕಂಪನಿಗಳು ತಮ್ಮ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ತಲುಪಿಸಲು ಯತ್ನಿಸುತ್ತಿವೆ. ಹೀಗೆ ವ್ಯವಹರಿಸುವ ಬ್ರ್ಯಾಂಡ್‌ಗಳ ಸಂಖ್ಯೆಯು ಎರಡು ವರ್ಷಗಳಲ್ಲಿ ದುಪ್ಪಟ್ಟಾಗಿದೆ

ಬಳಕೆದಾರ–ಗ್ರಾಹಕರ ಸಂಖ್ಯೆ (ಕೋಟಿಗಳಲ್ಲಿ)



ಆನ್‌ಲೈನ್ ಖರೀದಿ ಹವ್ಯಾಸಗಳು



ಬಟ್ಟೆಗೆ ಹೆಚ್ಚು ಬೇಡಿಕೆ

ಭಾರತದಲ್ಲಿ ಇ–ರಿಟೇಲ್ ಮಾರುಕಟ್ಟೆಯ ಮೂಲಕ ಗ್ರಾಹಕರು ಅತಿಹೆಚ್ಚಾಗಿ ಖರೀದಿ ಮಾಡಿದ ವಸ್ತುಗಳ ಪೈಕಿ ಬಟ್ಟೆಗಳು ಮೊದಲ ಸ್ಥಾನದಲ್ಲಿವೆ. ಶೇ 98ರಷ್ಟು ಜನರು ಬಟ್ಟೆ ಖರೀದಿಗೆ ಆನ್‌ಲೈನ್ ಮೊರೆ ಹೋಗಿದ್ದಾರೆ

ಆಧಾರ: ಬೈನ್ ಅಂಡ್ ಕಂಪನಿಯ 'ಭಾರತದಲ್ಲಿ ಆನ್‌ಲೈನ್ ಖರೀದಿ–2021' ವರದಿ

ವರದಿ: ಜಯಸಿಂಹ ಆರ್., ಅಮೃತ ಕಿರಣ್ ಬಿ.ಎಂ., ಚೇತನ ಜೆ.ಕೆ.

ಪ್ರಜಾವಾಣಿ ಗ್ರಾಫಿಕ್ಸ್

ವೇದವ್ಯಾಸರ ಶಿವಪುರಾಣದ ಕುಮಾರಖಂಡಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 9

ದೇವತೆಗಳ ನಿಂದಿಸಿ ದುರ್ಬಲನಾದ ತಾರಕ

ವಿಷ್ಣು ಮತ್ತು ತಾರಕಾಸುರನ ನಡುವೆ ಯುದ್ಧ ನಡೆಯುತ್ತಿದ್ದಾಗ ಷಣ್ಮುಖನ ಬಳಿ ಬಂದ ಬ್ರಹ್ಮ 'ಇವರಿಬ್ಬರು ಯುದ್ಧ ಮಾಡುತ್ತಿರುವುದು ವ್ಯರ್ಥ. ನಾನು ವಿಷ್ಣುವಿನಿಂದ ಮರಣವಾಗದಂತೆ ತಾರಕನಿಗೆ ವರವನ್ನು ಕೊಟ್ಟಿರುವೆ. ಶಿವಪುತ್ರನಾದ ನಿನ್ನಿಂದ ಮಾತ್ರ ಪಾಪಿಯಾದ ತಾರಕಾಸುರನನ್ನು ಕೊಲ್ಲಲು ಸಾಧ್ಯ. ನೀನು ಹುಟ್ಟಿರುವುದೇ ತಾರಕನ ಸಂಹರಿಸಲು. ಶಿವಸುತನ ಹೊರತು ಬೇರಾರಿಂದಲೂ ಮರಣ ಬಾರದಂತೆ ತಾರಕನಿಗೆ ನಾನು ವರ ನೀಡಿದ್ದರಿಂದ ಇಂದ್ರ, ವಿಷ್ಣು ಮೊದಲಾದ ದೇವತೆಗಳು ನಿನ್ನ ನೇತೃತ್ವದಲ್ಲಿ ಯುದ್ಧಕ್ಕೆ ಬಂದಿದ್ದಾರೆ. ನೀನಿಲ್ಲದಿದ್ದರೆ ಅವರ್ಯಾರೂ ತಾರಕನೊಂದಿಗೆ ಕಾದಾಡಲು ಬರುತ್ತಿರಲಿಲ್ಲ. ನೀನೇನು ಬಾಲಕನಲ್ಲ, ಸರ್ವೇಶ್ವರನಾದ ಸ್ವಾಮಿ. ಈಗ ನೀನು ಮೂರು ಲೋಕವನ್ನೂ ಜಯಿಸಿ, ಗಹಗಹಿಸುತ್ತಿರುವ ಆ ದೈತ್ಯನನ್ನು ಕೊಂದು ಮೂರು ಲೋಕದವರನ್ನೂ ಸುಖಿಗಳನ್ನಾಗಿ ಮಾಡು' ಎಂದು ಕೋರಿದ.

ಬ್ರಹ್ಮನ ಮಾತಿನಿಂದ ಷಣ್ಮುಖನು ಪ್ರಸನ್ನವದನನಾಗಿ 'ನಿನ್ನ ಇಷ್ಟದಂತೆಯೇ ಆಗಲಿ' ಎಂದು ಹೇಳಿ, ವಿಮಾನದಿಂದ ಇಳಿದು ಕಾಲುನಡಿಗೆಯಲ್ಲೇ ರಣಾಂಗಣಕ್ಕೆ ಹೊರಟ. ಉರಿಯುವ ಬೆಂಕಿಯಂತಿದ್ದ ಅತಿ ಪ್ರಕಾಶಮಾನವಾದ ಶಕ್ತ್ಯಾಯುಧವನ್ನು ಕೈಯಲ್ಲಿ ಹಿಡಿದು ಬರುತ್ತಿದ್ದ ಶಿವಕುಮಾರ, ಅಪಾರವಾದ ತೇಜಸ್ಸಿನಿಂದ ಬೆಳಗುತ್ತಿದ್ದ. ಆತ ದೇವತೆಗಳ ಕಣ್ಣಿಗೆ ಸುಂದರ-ಮುಗ್ಧ ಬಾಲಕನಂತೆ ಕಾಣುತ್ತಿದ್ದರೆ, ರಾಕ್ಷಸರಿಗೆ ಅತಿ ಭಯಂಕರನಾಗಿ ಕಾಣುತ್ತಿದ್ದ. ಬಾಲಕನಾಗಿದ್ದರೂ ಯುದ್ಧಕ್ಕೆ ಹೆದರದೆ, ತನ್ನೆದುರಾಗಿ ಬರುತ್ತಿರುವ ಬಾಲಸುಬ್ರಹ್ಮಣ್ಯನನ್ನು ನೋಡಿ ತಾರಕಾಸುರ ಅಪಹಾಸ್ಯ ಮಾಡಿ ನಗುತ್ತಾ ದೈತ್ಯರಿಗೆ 'ಹೇಡಿ ದೇವತೆಗಳು ನನ್ನ ಎದುರಿಸುವ ಧೈರ್ಯವಿಲ್ಲದೆ, ಸಣ್ಣ ಹುಡುಗನನ್ನು ಮುಂದೆ ಬಿಟ್ಟಿದ್ದಾರ' ಅಂತ ಹೇಳಿ ಗಹಗಹಿಸಿದ.

ನಂತರ ಬಾಲಸುಬ್ರಹ್ಮಣ್ಯನ ನೇತೃತ್ವದಲ್ಲಿ ದೇವತೆಗಳು ನಿಂತಿರುವುದನ್ನು ಕಂಡು ಮತ್ತಷ್ಟು ಅಟ್ಟಹಾಸದಿಂದ ನಗುತ್ತಾ, ದೇವತೆಗಳೆಲ್ಲರನ್ನು ಕ್ಷುಲ್ಲಕವಾಗಿ ನಿಂದಿಸತೊಡಗಿದ. 'ಎಲೈ ದೇವತೆಗಳಿರಾ, ಯಃಕಶ್ಚಿತ್ ಬಾಲಕನನ್ನು ನನ್ನೊಡನೆ ಯುದ್ಧ ಮಾಡಲು ತಂದು ನಿಲ್ಲಿಸಿರುವಿರಲ್ಲಾ, ನಿಮಗೆ ನಾಚಿಕೆಯಾಗುವುದಿಲ್ಲವೇ? ವಿಷ್ಣು ಮತ್ತು ಶಿವ ಇಬ್ಬರೂ ವೇದಮಾರ್ಗಕ್ಕೆ ವಿರುದ್ಧವಾದ ಕೆಲಸ ಮಾಡಿದ್ದಾರೆ. ಅದರಲ್ಲು ವಿಷ್ಣು ಮೋಸಮಾಡುವವನು. ಮೋಸದಿಂದ ಬಲಿಯನ್ನು ನಿಗ್ರಹಿಸಿದ. ಮಧುಕೈಟಭರೆಂಬ ಅಸುರರನ್ನು ಧೂರ್ತತನದಿಂದ ಕೊಂದ. ದೇವಾಸುರರಿಗೆ ಅಮೃತವನ್ನು ಹಂಚುವಾಗ ಮೋಹಿನಿ ರೂಪ ಧರಿಸಿ ಪಂಕ್ತಿಭೇದ ಮಾಡಿ ವೇದಕ್ಕೆ ವಿರುದ್ಧವಾದ ಕೆಲಸ ಮಾಡಿದ. ಇನ್ನೂ ವಿಷ್ಣುವಿನ ಹಿರಿಯ ಅಣ್ಣನಾದ ಇಂದ್ರ ತನ್ನ ತಂಗಿಯ ಮಗ ಹಾಗೂ ಗುರುವೂ ಆದ ವಿಶ್ವರೂಪನೆಂಬ ಬ್ರಾಹ್ಮಣನ ತಲೆ ಕತ್ತರಿಸಿದ್ದಾನೆ. ವೀರಭದ್ರನೂ ದಕ್ಷಯಜ್ಞದಲ್ಲಿ ಅನೇಕ ಬ್ರಾಹ್ಮಣರನ್ನು ಕೊಂದು ಬ್ರಹ್ಮಹತ್ಯಾದೋಷವನ್ನು ಹೊತ್ತಿದ್ದಾನೆ. ಇಂಥವರು ನನ್ನನ್ನೇನು ಮಾಡಲಾರರು' ಅಂತ ಹೀನಾಯವಾಗಿ ಮೂದಲಿಸಿದ.

ತಾರಕ ದೇವತೆಗಳನ್ನು ನಿಂದೆಮಾಡಿ ತನ್ನ ಪುಣ್ಯದ ಫಲವನ್ನೆಲ್ಲಾ ಕಳೆದುಕೊಂಡು ದುರ್ಬಲನಾದ. ಯುದ್ಧದಲ್ಲಿ ಇಂದ್ರನ ವಜ್ರಾಯುಧದ ಏಟಿಗೆ ತಾರಕ ಕೆಳಗುರುಳಿದ. ನಂತರ ತಾರಕ ತನ್ನ ಶಕ್ತ್ಯಾಯುಧದಿಂದ ಹೊಡೆದು ಇಂದ್ರನನ್ನು ಕೆಳಗುರುಳಿದ. ಈ ಸಂದರ್ಭದಲ್ಲಿ ತಾರಕ ಕೆಳಬಿದ್ದ ಇಂದ್ರನಿಗೆ ವಜ್ರಾಯುಧದಿಂದ ಹೊಡೆದು ಮಹಾಪಾಪ ಮಾಡಿದ. ಇದರಿಂದ ತಾರಕಾಸುರನ ಶಕ್ತಿ ಮತ್ತಷ್ಟು ಕುಸಿಯಿತು. ಇಂದ್ರನ ರಕ್ಷಣೆಗೆ ವಿಷ್ಣು ಚಕ್ರಾಯುಧ ಪ್ರಯೋಗಿಸಿದ್ದರಿಂದ ತಾರಕ ಕೆಳಗುರುಳಿದ. ಮೇಲೆದ್ದ ತಾರಕ ಶಾಕ್ತ್ಯಾಯುಧದಿಂದ ವಿಷ್ಣುವಿಗೆ ಹೊಡೆದು ಕೆಳಗೆ ಬೀಳಿಸಿದ. ಕೆಳ ಬಿದ್ದ ವಿಷ್ಣುವಿಗೆ ಹೊಡೆಯಲು ಮುನ್ನುಗ್ಗುತ್ತಿದ್ದ ತಾರಕನ ಮೇಲೆ ವೀರಭದ್ರ ತ್ರಿಶೂಲದಿಂದ ತಿವಿದ. ಇದರಿಂದ ಕೆಳಬಿದ್ದ ತಾರಕ, ಮತ್ತೆ ಎದ್ದು ತನ್ನ ಶಕ್ತ್ಯಾಯುಧದಿಂದ ವೀರಭದ್ರನ ಎದೆಗೆ ಪ್ರಹಾರ ಮಾಡಿದ. ಕೋಪೋದ್ರಿಕ್ತನಾದ ವೀರಭದ್ರ 'ಕಾಲ' ಎಂಬ ತ್ರಿಶೂಲ ಪ್ರಯೋಗಿಸಲು ಮುಂದಾದಾಗ, ಷಣ್ಮುಖ ಮಧ್ಯಪ್ರವೇಶಿಸಿ ವೀರಭದ್ರನನ್ನು ತಡೆದ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ


9606038256

ಮಸೀದಿಯ ಮುಂದೆ ದೊಡ್ಡ ಸಮೂಹವೊಂದು ಕೇಸರಿ ಧ್ವಜ ಬೀಸುತ್ತಾ ಜೈ ಶ್ರೀರಾಮ್ ಎಂಬ ಘೋಷಣೆ ಕೂಗುತ್ತಿರುವ ವಿಡಿಯೊವೊಂದು ವೈರಲ್ ಆಗಿದೆ. ಮಹಾರಾಷ್ಟ್ರದ ಅಮರಾವತಿಯಲ್ಲಿ ಮುಸ್ಲಿಂ ಸಂಘಟನೆಗಳು ಆಯೋಜಿಸಿದ್ದ ರ‍್ಯಾಲಿ ವಿರೋಧಿಸಿ ಬಿಜೆಪಿ ಬಂದ್‌ಗೆ ಕರೆ ನೀಡಿತ್ತು. ವೈರಲ್ ಆಗಿರುವ ವಿಡಿಯೊ ಬಿಜೆಪಿ ನಡೆಸಿದ ಪ್ರತಿಭಟನೆಯದ್ದು ಎಂದು ಈ ವಿಡಿಯೊವನ್ನು ಬಿಂಬಿಸಲಾಗಿದೆ. ಪ್ರತಿಭಟನೆ ಬಳಿಕ ಅಮರಾವತಿಯಲ್ಲಿ ಕರ್ಫ್ಯೂ ಜಾರಿ ಮಾಡಲಾಗಿದೆ ಎಂದು ಹೇಳಲಾಗಿದೆ.



ಈ ವಿಡಿಯೊ ಕುರಿತು ಸುಳ್ಳು ಮಾಹಿತಿ ವೈರಲ್ ಆಗಿದೆ ಎಂದು ಲಾಜಿಕಲ್ ಇಂಡಿಯನ್ ವರದಿ ಮಾಡಿದೆ. 2019ರಲ್ಲಿ ಕರ್ನಾಟಕದ ಕಲಬುರಗಿಯಲ್ಲಿ ನಡೆದಿದ್ದ ರಾಮನವಮಿ ಮೆರವಣಿಗೆಯ ವಿಡಿಯೊ ಇದಾಗಿದೆ. 2019ರ ಏ.13ರಂದು ಈ ಕುರಿತು ಎಎನ್ಐ ಸುದ್ದಿ ಸಂಸ್ಥೆ ಟ್ವೀಟ್ ಮಾಡಿದೆ. ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವರಿಗೆ ಮುಸ್ಲಿಮರು ಪಾನಕ ಹಂಚಿರುವ ಕುರಿತೂ ಎಎನ್ಐ ಇದೇ ಟ್ವೀಟ್‌ನಲ್ಲಿ ಹೇಳಿದೆ.

ಗುಂಡಣ್ಣ



ದಿನ ಭವಿಷ್ಯ

ಗುರುವಾರ ನವೆಂಬರ್ 18, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಕಾರ್ತೀಕ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ವಿಶಾಖಾ ಚತುರ್ದಶೀ ಗಂ. 11-7 ಹ. 10-52) ಗುರುವಾರ ನಿತ್ಯ ನಕ್ಷತ್ರ ಭರಣಿ ಗಂ. 46-34 (ರಾ. 1-03) ವರೀಯನ್ ನಾಮ ಯೋಗ ಗಂ. 52-32 ವಣಿಜ ಕರಣ ಗಂ. 11-7 ವಿಷ ಗಂ. 7-41 ಅಮೃತ ಗಂ 32-54 : ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30 : ಸೂರ್ಯೋದಯ: 6-22 ಸೂರ್ಯಾಸ್ತ: 5-46 ಅದೃಷ್ಟ ಸಂಖ್ಯೆ 6

ಮೇಷ: ಅಪೇಕ್ಷಿತ ಗುರಿಯನ್ನು ಯಶಸ್ವಿಯಾಗಿ ತಲುಪಬಹುದು. ನೇರ ಹಾಗೂ ದಿಟ್ಟ ನಡವಳಿಕೆಯ ಅಗತ್ಯತೆ ಕಂಡುಬರುತ್ತಿದೆ. ಹೊಸ ಹೊಸ ಮಾರ್ಗಗಳ ಮೂಲಕ ಕಾರ್ಯಕ್ಷೇತ್ರದಲ್ಲಿ ಯಶಸ್ಸು.

ವೃಷಭ: ದೊಡ್ಡ ದೊಡ್ಡ ಯೋಜನೆಗಳನ್ನು ಯೋಚಿಸುವಿರಿ. ಸಾಕಾರಗೊಳಿಸುವಲ್ಲಿ ನಿಮ್ಮ ನಿರ್ಲಕ್ಷ ಸಲ್ಲದು. ಕಠಿಣ ಪರಿಶ್ರಮದಿಂದ ಮಾತ್ರ ಯಶಸ್ಸು ಸಾಧ್ಯ.

ಮಿಥುನ: ಕಾರ್ಯ ವೈಫಲ್ಯಗಳನ್ನು ಕಂಡರೂ ಧೃತಿಗೆಡಬೇಕಾಗಿಲ್ಲ. ಕಾರಣಗಳನ್ನು ಹುಡುಕಿ ಮುನ್ನಡೆದಲ್ಲಿ ಯಶಸ್ಸನ್ನು ಕಾಣುವಿರಿ. ಆರೋಗ್ಯದ ಬಗ್ಗೆ ಎಚ್ಚರ ಉತ್ತಮ.

ಕರ್ಕಾಟಕ: ಏಕಕಾಲದಲ್ಲಿ ಅನೇಕ ಕಾರ್ಯಗಳಲ್ಲಿ ಮಗ್ನರಾಗಲು ಯೋಚಿಸಬೇಡಿ. ಸಂಪನ್ಮೂಲಕ್ಕೆ ಅನುಗುಣವಾಗಿ ಕೆಲಸ ಕಾರ್ಯಗಳನ್ನು ಕೈಗೆತ್ತಿಕೊಳ್ಳಿ. ವ್ಯಾಪಾರಿಗಳಿಗೆ ಅತ್ಯುತ್ತಮವಾದ ಅವಕಾಶಗಳು ಒದಗಲಿದೆ.

ಸಿಂಹ: ಅವಿವಾಹಿತರಿಗೆ ಉತ್ತಮ ಅವಕಾಶ. ಪ್ರೇಮಿಗಳ ವಿಚಾರದಲ್ಲಿ ಹಿರಿಯರ ಸಮ್ಮತಿ ದೊರಕುವುದು. ಬಂಧುಬಾಂಧವರ ಸಹಕಾರದಿಂದ ಉತ್ತಮ ಫಲ.

ಕನ್ಯಾ: ಅವಸರದಿಂದ ಅವಘಡಗಳನ್ನು ತಂದುಕೊಳ್ಳುವ ಸಾಧ್ಯತೆ. ವ್ಯವಧಾನವಿರಲಿ. ವಾರಾಂತ್ಯದ ಸಂತೋಷ ಕೂಟಗಳಲ್ಲಿ ಭಾಗಿ. ವಾಹನ ಚಲಾವಣೆಗಳಲ್ಲಿ ಜಾಗ್ರತೆ ಉತ್ತಮ.

ತುಲಾ: ಬಯಕೆ ಮತ್ತು ವಾಸ್ತವಗಳ ನಡುವಿನ ವ್ಯತ್ಯಾಸ ಗುರುತಿಸಲು ಕಷ್ಟವಾಗಬಹುದು. ತಾಳ್ಮೆಯಿಂದ ಯೋಚಿಸಿ ನಿರ್ಧಾರ ತೆಗೆದುಕೊಳ್ಳುವುದು ಉತ್ತಮ. ಗುರುವಿನ ಆರಾಧನೆಯಿಂದ ಕಾರ್ಯದಲ್ಲಿ ಸಫಲ.

ವೃಶ್ಚಿಕ: ಬರುವ ಎಲ್ಲ ಅವಕಾಶಗಳನ್ನು ತ್ಯಜಿಸುವುದು ಉತ್ತಮವಲ್ಲ. ಸನ್ನಿಹಿತವಾದ ಬದಲಾವಣೆಗಳಿಗೆ ನಿಮ್ಮನ್ನು ಮುಕ್ತ ಮನಸ್ಸಿನಿಂದ ತೆರೆದುಕೊಳ್ಳುವುದು ಅತ್ಯವಶ್ಯ. ಉದ್ಯೋಗದಲ್ಲಿ ಬದಲಾವಣೆ ಸಾಧ್ಯತೆ.

ಧನು: ಹಣಕಾಸಿನ ವಿಚಾರದಲ್ಲಿ ನೀವು ಹೆಚ್ಚಿನ ಚಿಂತನೆ ನಡೆಸುವಿರಿ. ನಿವೃತ್ತರು ತಮ್ಮ ಮುಂದಿನ ಭವಿಷ್ಯಕ್ಕಾಗಿ ಆದಾಯದ ಮೂಲಗಳನ್ನು ಕಂಡುಕೊಳ್ಳುವಿರಿ. ಆಧ್ಯಾತ್ಮದತ್ತ ಒಲವು.

ಮಕರ: ವಿದ್ಯಾರ್ಥಿಗಳಿಗೆ ಸಿಹಿ ಸುದ್ದಿ. ಒತ್ತಡಗಳನ್ನು ಎದುರಿಸಬೇಕಾದೀತು. ಮಿತ್ರರ ಸಹಕಾರ ದೊರೆತು ಧೈರ್ಯದಿಂದ ಎದುರಿಸಿ ಉತ್ತಮ ಫಲ ಪಡೆಯುವಿರಿ. ದಿನವಿಡೀ ಒತ್ತಡಗಳು ಕಾಣಿಸಿಕೊಳ್ಳುವವು.

ಕುಂಭ: ಸೃಜನಶೀಲ ಕಾರ್ಯಗಳಲ್ಲಿ ಮಗ್ನರಾಗಿ ಯಶಸ್ಸು. ನಿಮ್ಮ ಕ್ಷಮತೆಯಿಂದ ಒತ್ತಡಗಳು ದೂರವಾಗಲಿವೆ. ಉನ್ನತ ಅಧಿಕಾರಿಗಳ ಮೆಚ್ಚುಗೆ ಗಳಿಸುವಿರಿ.

ಮೀನ: ವಿದ್ಯಾರ್ಥಿಗಳಿಗೆ, ತಾಂತ್ರಿಕ ತರಬೇತಿ ಪಡೆಯುತ್ತಿರುವವರಿಗೆ ಅತ್ಯಂತ ಮಹತ್ವದ ಕಾಲವಾಗಿದೆ. ಕಚೇರಿ ಕೆಲಸಗಳಲ್ಲಿ ಹೆಚ್ಚಿನ ನೈಪುಣ್ಯತೆಗಳಿಸುವ ಅವಕಾಶ. ಮೇಲಾಧಿಕಾರಿಗಳನ್ನು ಗೌರವದಿಂದ ಕಾಣಿರಿ.

ನಿಮ್ಮ ಜನ್ಮದಿನ 18-ನವೆಂಬರ್ ಈ ದಿನ ಅತ್ಯಂತ ಶುಭ ದಿನವಾಗಿದೆ. ಉತ್ತಮ ಕಾರ್ಯಯೋಜನೆ ರೂಪಿಸುವಲ್ಲಿ ಸಹಕಾರಿಯಾಗಿದೆ. ದೃಢ ನಿರ್ಧಾರದೊಂದಿಗೆ ಕೆಲಸ ಕಾರ್ಯಗಳಲ್ಲಿ ತೊಡಗಿ ಯಶಸ್ಸನ್ನು ಸಾಧಿಸುವಿರಿ. ಆರ್ಥಿಕ ಪ್ರಗತಿಯಿಂದಾಗಿ ಜೀವನ ನಿರ್ವಹಣೆಯಲ್ಲಿ ಉತ್ತಮ ಸ್ಥರವನ್ನು ಕಾಯ್ದುಕೊಳ್ಳುವಿರಿ.

ಬೆರಗಿನ ಬೆಳಕು



ಗುರುರಾಜ ಕರಜಗಿ

ನೈವೇದ್ಯ

ದೇವನೇನತಿಶಯಿತಮಾನಿಸನೆ ಭೋಗಕ್ಕೆ?|
ಹೂವುಣಿಸು ಮುಡುಪೊಡವೆಯವನಿಗಂ ಬೇಕೆ?||
ಅವುದೊಳ್ಳಿತೊ ತನಗೆ ನರನದನು ಪರಮಂಗೆ|
ನೈವೇದಿಪುದು ಸಾಜ – ಮಂಕುತಿಮ್ಮ ||500||

ಪದ-ಅರ್ಥ: ದೇವನೇನತಿಶಯಿತಮಾನಿಸನೆ = ದೇವನೇನು + ಅತಿಶಯಿತ (ಅತಿಶಯವಾದ, ಅಮಾನುಷವಾದ) + ಮಾನಿಸನೆ (ಮನುಷ್ಯನೆ), ಹೂವುಣಿಸು = ಹೂವು + ಉಣಿಸು (ನೈವೇದ್ಯ), ಮುಡುಪೊಡವೆಯವನಿಗಂ = ಮುಡುಪು + ಒಡವೆ + ಅವನಿಗಂ(ಅವನಿಗೂ), ಅವುದೊಳ್ಳಿತೊ = ಆವುದು + ಒಳ್ಳಿತೊ, ನೈವೇದಿಪುದು = ನೈವೇದ್ಯಮಾಡುವುದು, ಸಾಜ = ಸಹಜ.

ವಾಚ್ಯಾರ್ಥ: ಭೋಗದಲ್ಲಿ ದೇವರೇನು ಅತಿಮಾನುಷನೆ? ಹೂವು, ನೈವೇದ್ಯ, ಮುಡುಪು, ಒಡವೆಗಳು ಅವನಿಗೂ ಬೇಕೆ? ಮನುಷ್ಯ ತನಗೆ ಯಾವುದು ಹಿತವೊ, ಶ್ರೇಷ್ಠವೊ, ಅದನ್ನು ದೇವರಿಗೆ ಅರ್ಪಿಸುವುದು ಸಹಜ.

ವಿವರಣೆ: ನಾನೊಂದು ಜಾಹೀರಾತನ್ನು ಓದಿದ್ದೆ. ಅದರಲ್ಲಿ ಯಾವ ದೇವರಿಗೆ ಯಾವ ಪದಾರ್ಥ ಇಷ್ಟ ಮತ್ತು ಯಾವುದನ್ನು ನೈವೇದ್ಯ ಮಾಡಬೇಕು ಎಂದು ದಾಖಲಿಸಿದ್ದರು. ಗಣೇಶನಿಗೆ ಸಿಹಿತಿಂಡಿಗಳು ಇಷ್ಟ. ಅದರಲ್ಲೂ ಮೋತೀ ಚೂರು ಲಡ್ಡು ಮತ್ತು ಮೋದಕಗಳು ಅತ್ಯಂತ ಪ್ರೀತಿ. ಸರಸ್ವತಿಗೆ ಕಿಚಡಿ ಎಂದರೆ ಬಲುಪ್ರೀತಿ. ಅದರೊಂದಿಗೆ ಆಕೆಗೆ ಹಾಲು, ಪಂಚಾಮೃತ, ಮೊಸರು, ಬಿಳಿಬೆಣ್ಣೆ ನೈವೇದ್ಯ ಮುಖ್ಯ. ಶಿವನಿಗೆ ಪಾನ್ ಎಲೆಗಳು, ಧತೂರಾ ಮತ್ತು ಬಿಲ್ವಪತ್ರೆಗಳ ಅರ್ಪಣೆಯೊಂದಿಗೆ ಬೆಲ್ಲ, ಚಿರೋಟಿಗಳ ನೈವೇದ್ಯ ಅವಶ್ಯ. ಹನುಮಂತನಿಗೆ ಹಲ್ವಾ, ಪಂಚಕಜ್ಜಾಯ, ಬೆಲ್ಲದ ಉಂಡೆ, ಕೇಸರಿ ಅಕ್ಕಿ ಮತ್ತು ಬೇಸನ್ ಲಾಡೂ ನೈವೇದ್ಯವೇ ಸರಿ.

ಇನ್ನೊಂದೆಡೆಗೆ ತೀಕ್ಷ್ಣವಾದ ಎಚ್ಚರಿಕೆಯ ಮಾತೊಂದು ಗಾಬರಿ ಹುಟ್ಟಿಸುವಂತಿತ್ತು. ಅತಿಯಾದ ಹುಳಿ, ಅತಿಯಾದ ಕಾರ ಮತ್ತು ಅತಿ ಬಿಸಿಯಾದ ಖಾದ್ಯಗಳನ್ನು ನೈವೇದ್ಯ ಮಾಡಿದರೆ ಭಗವಂತನ ಅವಕೃಪೆ ಕಟ್ಟಿಟ್ಟದ್ದು. ನೈವೇದ್ಯವನ್ನು ತಾಮ್ರ, ಹಿತ್ತಾಳೆ ಅಥವಾ ಮುಖ್ಯವಾಗಿ ಬೆಳ್ಳಿಯ ಪಾತ್ರೆಗಳಲ್ಲಿಟ್ಟರೆ ಸರಿ. ಅಪ್ಪಿತಪ್ಪಿ ನೀವೇನಾದರೂ ಗಾಜಿನ, ಅಲ್ಯೂಮಿನಿಯಂ, ಸ್ಟೀಲ್ ಅಥವಾ ಪ್ಲಾಸ್ಟಿಕ್ ಪಾತ್ರೆಗಳಲ್ಲಿ ನೈವೇದ್ಯ ಇಟ್ಟಿರೋ, ದೇವರ ಕ್ರೂರದೃಷ್ಟಿ ತಪ್ಪಿದ್ದಲ್ಲ. ಹೀಗೆ ಹರಿಯುತ್ತದೆ ನೈವೇದ್ಯ ವಿಧಾನದ ಚಿಂತನಾ ಲಹರಿ. ಆದರೆ ಭಗವದ್ಗೀತೆಯಲ್ಲಿ ಬರುವ ಮಾತು ಬೇರೆ.

'ಪತ್ರಂ ಪುಷ್ಪಂ ಫಲಂ ತೋಯಂ ಯೋಮೇ ಭಕ್ತ್ಯಾ ಪ್ರಯಚ್ಛತಿ|
ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ'

'ಎಲೆ, ಹೂವು, ಹಣ್ಣು, ನೀರು ಇವು ಯಾವುದನ್ನಾದರೂ ಭಕ್ತಿಯಿಂದ ಸಮರ್ಪಿಸಿದ್ದನ್ನು ನಾನು ಸ್ವೀಕರಿಸುತ್ತೇನೆ'. ಇದು ಕೃಷ್ಣನ ಅಪೇಕ್ಷೆ. ಹಾಗಾದರೆ ನಾವೇಕೆ ಈ ಆಡಂಬರಗಳನ್ನು ಸೃಷ್ಟಿಮಾಡಿಕೊಂಡೆವು? ಇವು ಆಡಂಬರಗಳಲ್ಲ, ಗೌರವ ತೋರಿಸುವ ರೀತಿ. ಮನೆಗೆ ಯಾರಾದರೂ ಹಿರಿಯರು, ನಮ್ಮ ಅತ್ಯಂತ ಗೌರವಕ್ಕೆ ಪಾತ್ರರಾದವರು ಬಂದರೆ, ಶುದ್ಧವಾದ, ರುಚಿಯಾದ, ನಮಗೆ ತುಂಬ ಒಳ್ಳೆಯದು ಎನ್ನಿಸಿದ ವಸ್ತುಗಳನ್ನು ನೀಡುವುದಿಲ್ಲವೇ? ಭಗವಂತ ಎಲ್ಲರಿಗಿಂತ ದೊಡ್ಡವನಲ್ಲವೆ? ಆದ್ದರಿಂದ ಸರ್ವೋತ್ಕೃಷ್ಟವಾದದ್ದನ್ನೇ ಕೊಡಬೇಕು. ಕಗ್ಗ ಈ ಮಾತನ್ನೇ ಹೇಳುತ್ತದೆ. ದೇವರಿಗೆ ಏನೂ ಬೇಡ. ಎಲ್ಲವೂ ಅವನದೇ ಆಗಿರುವುದಾಗಿರುವಾಗ ಅವನಿಗೆ ಕೊಡುವುದೇನು? ಮನುಷ್ಯ ತನಗೆ ಯಾವುದು ಶ್ರೇಷ್ಠವೆನ್ನಿಸುತ್ತದೋ ಅದನ್ನೇ ನೈವೇದ್ಯವಾಗಿ ನೀಡುವುದು ಸಹಜವಾದದ್ದು. ❖

ಪದಬಂಧ 4781


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಸಡಿಲವಾದುದನ್ನು ಹೀಗನ್ನಿ (3)
3.ಉತ್ತರದ ಕಡೆಯವರ ವೇತನ (3)
5.ಅಕ್ಕರೆಯಿಂದ ನೀಡಿದ ಆಹ್ವಾನ (2)
6.ಗಂಡು ಕುರಿಯಿದು (3)
7.ನೆನಪಲ್ಲೇ ಇರುವ ಕಾರಣ (2)
9.ರಂಗೋಲಿಯಿಲ್ಲಿ ತಿರುವುಮುರುವಾಗಿದೆ (2)
11.ಯುದ್ಧದಲ್ಲಿ ರಕ್ಷಣೆಗಾಗಿ ತೊಡುವ ಅಂಗಿ (3)
13.ಧಾನ್ಯದ ಹೊಡೆಯಿದು (2)
14.ಅಗಲವಾದ ಹರಿವಾಣ (3)
15.ಮಳೆಗಾಲದಲ್ಲಿ ಭೂಮಿಗೆ ಬಡಿಯುವ ವಿದ್ಯುತ್ಪ್ರವಾಹ (3)

ಮೇಲಿಂದ ಕೆಳಕ್ಕೆ

1.ಅಕ್ಕ ತೋರಿದ ಪ್ರೀತಿ (3)
2.ಕೈಯಲ್ಲಿರುವ ಚಿಪ್ಪು (3)
3.ಸುಗಂಧಯುಕ್ತವಾದ ಜಲ (3)
4.ಸಾಗಿಸುವಿಕೆಗೊಂದು ಪರ್ಯಾಯ ಪದ (3)
5.ಖಡ್ಗದಿಂದ ಮಾಡುವ ಸಾಧನೆ (5)
8.ಕೂಲಂಕಷವಾಗಿ ಯೋಚಿಸುವಿಕೆ (5)
10.ಎಲೆ ಅಡಕೆಯ ಸಣ್ಣ ಚೀಲ (3)
11.ಚೋತ ಎಂದು ಹೀಗನ್ನಿ (3)
12.ಕಚೇರಿಯ ಸಿಪಾಯಿ (3)
13.ಅತಿಯಾದ ಬಯಕೆಯಿದು (3)



4780ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಉಪನಯನ 3.ಆಕಳು 5.ವಶೀಕರಣ 7.ನರೆ 9.ಒನಪು 11.ರುಚಿ 13.ರಕ್ತತಿಲಕ 15.ನಿಕಷ 16.ಪಾಶವೀವೃತ್ತಿ

ಮೇಲಿಂದ ಕೆಳಕ್ಕೆ: 1.ಉಪಮಾನ 2.ಯಲವ 4.ಕಲ್ಯಾಣ 6.ಕದಪು 8.ರೆಪ್ಪೆ 9.ಒಡತಿ 10.ನಾರು 12.ಚಿತ್ರಭಿತ್ತಿ 13.ರಸಿಕ 14.ಕಲ್ಪಶ

ಸುಡೊಕು 5167

	7	9			3		8	
	4			8			5	9
8			2	6		7		4
	8			2		1		5
		2	8		5		6	
5				3			2	
9		7	5					6
						9	4	
4	3		6		1		7	2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5166 ಸುಡೊಕು

9	2	8	3	6	7	4	5	1
3	6	4	9	1	5	8	7	2
5	7	1	2	4	8	9	6	3
7	4	2	6	3	9	1	8	5
8	3	9	5	7	1	2	4	6
1	5	6	8	2	4	3	9	7
2	8	5	1	9	6	7	3	4
4	9	3	7	5	2	6	1	8
6	1	7	4	8	3	5	2	9



ತಂತ್ರಜ್ಞಾನ ಶೃಂಗದಲ್ಲಿ 'ಗೇಯ್ಮಿಂಗ್ ಆನ್ ಎಜ್ ವಿದ್ 5ಜಿ' ಸಂವಾದಗೋಷ್ಠಿ

5ಜಿ, ಎಡ್ಜ್: ದತ್ತಾಂಶದ ಮಾಯಲೋಕ ಸೃಷ್ಟಿ

• ಅವಿನಾಶ್ ಬಿ.

ಬೆಂಗಳೂರು: ವಸ್ತುಗಳ ಅಂತರ್ಜಾಲ (ಐಒಟಿ), ಕೃತಕ ಬುದ್ಧಿಮತ್ತೆ (ಎಐ), ಮಷಿನ್ ಲರ್ನಿಂಗ್, ಧ್ವನಿ, ವಿಡಿಯೊ, ಅಪ್ಲಿಕೇಶನ್ ಮುಂತಾದ ಆಧುನಿಕ ತಂತ್ರಜ್ಞಾನಗಳನ್ನು ಬೆಸೆಯುವ 5ಜಿ ನೆಟ್‌ವರ್ಕ್ ತಂತ್ರಜ್ಞಾನವು, ಸದ್ಯೋಭವಿಷ್ಯದಲ್ಲಿ ಮಾನವನು ದತ್ತಾಂಶದ ಮೇಲೆ ಸಂಪೂರ್ಣವಾಗಿ ಅವಲಂಬಿಸುವಂತೆ ಮಾಡಲಿದೆ.

ಬೆಂಗಳೂರು ತಂತ್ರಜ್ಞಾನ ಶೃಂಗ 2021ರಲ್ಲಿ ಬುಧವಾರ 'ಗೇಯ್ಮಿಂಗ್ ಆನ್ ಎಜ್ ವಿದ್ 5ಜಿ' ಸಂವಾದಗೋಷ್ಠಿಯಲ್ಲಿ ಭಾಗವಹಿಸಿದವರ ಒಟ್ಟಾರೆ ಮಾತಿನ ಸಾರವಿದು. ಕಿಂಡ್ರಿಲ್ ಸಂಸ್ಥೆಯ ತಂತ್ರಜ್ಞ ಬೆಂಜಮಿನ್ ಬ್ರಿಲಾಟ್ ಅವರು ವಿದ್ವತ್ ಗೋಷ್ಠಿಗೆ ಚಾಲನೆ ನೀಡಿ, '5ಜಿ ತಂತ್ರಜ್ಞಾನವು ಭಾರಿ ಸಂಖ್ಯೆಯ ಯಾಂತ್ರಿಕ ಸಾಧನಗಳನ್ನು ಬೆಸೆದು, ವಿಳಂಬವಿಲ್ಲದೆ ಸಂಪರ್ಕ ಸಾಧಿಸಲು ನೆರವಾಗುತ್ತದೆ. ಭವಿಷ್ಯದ ಕಾರ್ಖಾನೆಗಳು ಸೆನ್ಸರ್‌ಗಳನ್ನು, ಆಗ್ಮೆಂಟೆಡ್ ರಿಯಾಲಿಟಿ, ಐಒಟಿಯಂತಹ ತಂತ್ರಜ್ಞಾನಗಳನ್ನು ಇನ್ನಷ್ಟು ವ್ಯಾಪಕವಾಗಿ ಬಳಸಲಿವೆ' ಎಂದರು.



ಬಿಟಿಎಸ್ 2021 ಶೃಂಗದಲ್ಲಿ ನಡೆದ 5ಜಿ ಮತ್ತು ಎಡ್ಜ್ ತಂತ್ರಜ್ಞಾನದ ಸಂವಾದಗೋಷ್ಠಿ

ಏರ್‌ಟೆಲ್ ಬಿಸಿನೆಸ್‌ನ ಮುಖ್ಯಸ್ಥ ಅಲೋಕ್ ಶುಕ್ಲಾ, ಟೆಲ್‌ಸ್ಟ್ರಾದ ನೆಟ್‌ವರ್ಕ್ ಮತ್ತು ಪ್ರಾಡಕ್ಟ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಸುನಿಲ್ ಮೆನನ್, ವಿಸ್ತಾರಾ-ಟಾಟಾ ಏರ್‌ಲೈನ್ಸ್ ಮುಖ್ಯ ಮಾಹಿತಿ ಅಧಿಕಾರಿ (ಸಿಐಒ) ವಿನೋದ್ ಭಟ್, ವಿರೆಸೆಂಟ್ ಇನ್ಫ್ರಾಸ್ಟ್ರಕ್ಚರ್‌ನ ಮುಖ್ಯ ತಂತ್ರಜ್ಞಾನ ಅಧಿಕಾರಿ (ಸಿಟಿಒ) ಕುಶಲ್ ವರ್ಷ್ನೆ ಭಾಗವಹಿಸಿದ ಈ ಸಂವಾದಗೋಷ್ಠಿಯನ್ನು ಕಿಂಡ್ರಿಲ್ ಇಂಡಿಯಾ ಸಂಸ್ಥೆಯ ಭಾರತೀಯ ಪಾಲುದಾರ ಸಂಜಯ್ ಸಾಹಿನಿ ನಡೆಸಿಕೊಟ್ಟರು.

5ಜಿ ತಂತ್ರಜ್ಞಾನವು ಇಂಟರ್ನೆಟ್ ಮೂಲಕ ದತ್ತಾಂಶ ವಿನಿಮಯದ ವೇಗ ಹೆಚ್ಚಿಸಲಿದೆ. ಸ್ಮಾರ್ಟ್ ಸಾಧನಗಳ ಸಂಖ್ಯೆ ಹೆಚ್ಚಾಗಲಿದ್ದು, ಸ್ವಯಂಚಾಲಿತ ವ್ಯವಸ್ಥೆಗೆ ಪೂರಕ ವಾತಾವರಣ ಸೃಷ್ಟಿಯಾಗಲಿದೆ ಎಂಬ ಮಾತು ಸಂವಾದದಲ್ಲಿ ಮಾರ್ದನಿಸಿತು.

ಜೊತೆಗೆ, ದತ್ತಾಂಶ ಸುರಕ್ಷತೆಯ ಬಗ್ಗೆ ಆತಂಕವೂ ವ್ಯಕ್ತವಾಯಿತು. 5ಜಿಯು ಕೈಗಾರಿಕೆಯ ಲಿಟ್ಮಸ್ ಪರೀಕ್ಷೆಯಲ್ಲಿ ಉತ್ತೀರ್ಣವಾಗಬೇಕಿದೆ. ದತ್ತಾಂಶ ಗೋಪ್ಯತೆ, ಸೈಬರ್ ಭದ್ರತೆಯ ಬೆದರಿಕೆಗಳನ್ನು ಎದುರಿಸಲು ಯಾವ ನೀತಿಗಳನ್ನು ರೂಪಿಸಲಾಗುತ್ತದೆ ಎಂಬುದನ್ನು ಕಾದುನೋಡಬೇಕಿದೆ ಎಂದರು ಸುನಿಲ್ ಮೆನನ್.

ಗೇಮಿಂಗ್ ಉದ್ಯಮಕ್ಕೆ ವೇಗ ದೊರೆಯಲಿದ್ದು, ಬ್ಲಾಕ್‌ಚೈನ್, ಕ್ರಿಪ್ಟೋಕರೆನ್ಸಿ, ಕ್ರಿಪ್ಟೋಮೈನಿಂಗ್ ಮುಂತಾದವುಗಳಿಗೆ ಅನುಕೂಲಕರ ವಾತಾವರಣ ಸೃಷ್ಟಿಯಾಗಲಿದೆ. ತಂತ್ರಜ್ಞಾನ ಕಾರ್ಯಗಳೆಲ್ಲವೂ ಕ್ಲೌಡ್ ಅನ್ನು ಅವಲಂಬಿಸುವ ಮೂಲಕ 5ಜಿ ತಂತ್ರಜ್ಞಾನವು 5ನೇ ಕೈಗಾರಿಕಾ ಕ್ರಾಂತಿಗೆ ಮುನ್ನುಡಿಯಾಗಲಿದೆ ಎಂದರು ಕುಶಲ್ ವರ್ಷ್ನೆ.

ಭಾರತದ ಅರ್ಥವ್ಯವಸ್ಥೆಯಲ್ಲಿ ಈಗಾಗಲೇ ಗಮನಾರ್ಹ ಪಾತ್ರ ವಹಿಸುತ್ತಿರುವ ದೂರಸಂಪರ್ಕ ಕ್ಷೇತ್ರವು ಮುಂದಿನ ದಿನಗಳಲ್ಲಿ ಇನ್ನಷ್ಟು ಕ್ರಾಂತಿಕಾರಕ ಬದಲಾವಣೆಗಳಿಗೆ ಸಾಕ್ಷಿಯಾಗಲಿದೆ. 5ಜಿ ಸೇವೆಗಳು ಈ ಪೈಕಿ ಹಲವು ಬದಲಾವಣೆಗಳಿಗೆ ಕಾರಣವಾಗಲಿವೆ ಎನ್ನುವ ಅಭಿಪ್ರಾಯ ವ್ಯಕ್ತವಾಯಿತು.

ವಿಮಾನವೇರುವ ಮುನ್ನ ಸ್ಪರ್ಶವಿಲ್ಲದೆಯೇ ತಪಾಸಣೆ

5ಜಿ ಎಂಬುದು ಇಂಟರ್ನೆಟ್ ವೇಗಕ್ಕೆ ಮಾತ್ರ ಸಂಬಂಧಿಸಿದ್ದಲ್ಲ. ಒಂದು ಚದರ ಕಿಲೋಮೀಟರ್ ವ್ಯಾಪ್ತಿಯಲ್ಲಿ ಲಕ್ಷಾಂತರ ಸಾಧನಗಳನ್ನು ಪರಸ್ಪರ ಬೆಸೆಯಲು ಸಾಧ್ಯವಾಗಿಸುತ್ತದೆ. ಎಜ್ ಹಾಗೂ 5ಜಿ ತಂತ್ರಜ್ಞಾನಗಳು ಮಿಳಿತಗೊಂಡರೆ ಅದೆಷ್ಟೋ ಕೆಲಸಗಳು ಸ್ವಯಂಚಾಲಿತವಾಗಿ ನಡೆಯಬಲ್ಲವು.

ಹೇಗೆ? ಉದಾಹರಣೆಗೆ, ವಿಮಾನ ನಿಲ್ದಾಣದಲ್ಲಿ ಭದ್ರತಾ ಪರಿಶೀಲನೆಗೆ ಈಗಿನಂತೆ ಕೌಂಟರ್‌ಗಳ ಸರತಿ ಸಾಲಿನಲ್ಲಿ ಕಾದು ನಿಲ್ಲಬೇಕಿಲ್ಲ. ಸುಮ್ಮನೇ ನಡೆದು ಹೋದರಾಯಿತು. ಕ್ಲೌಡ್ ಮೂಲಕ ಬೆಸೆದುಕೊಂಡಿರುವ, ವಿಭಿನ್ನ ಸಾಧನಗಳ ಸೆನ್ಸರ್‌ಗಳು ಎಲ್ಲ ರೀತಿಯ ತಪಾಸಣೆಯನ್ನೂ ಮಾಡಿ ಮುಗಿಸುತ್ತವೆ. ಪ್ರಯಾಣಿಕರು ಯಾವುದನ್ನೂ ಸ್ಪರ್ಶಿಸಬೇಕಿಲ್ಲ. ಮಿಲಿಸೆಕೆಂಡುಗಳ ಅಂತರದಲ್ಲಿ ತಪಾಸಣೆ ನಡೆದು, ಪ್ರಯಾಣಿಕನ ಪಿಎನ್‌ಆರ್ ನಂಬರ್‌ಗೆ ಸಂಬಂಧಿಸಿದ ಎಲ್ಲ ದತ್ತಾಂಶವೂ ಕೆಲವೇ ಕ್ಷಣಗಳೊಳಗೆ ಸಂಬಂಧಪಟ್ಟವರಿಗೆ ರವಾನೆಯಾಗುತ್ತದೆ.

ಅನುಮಾನಾಸ್ಪದವೇನಾದರೂ ಇದ್ದರೆ ಪತ್ತೆ ಮಾಡುವ ಕಾರ್ಯ ಕ್ಷಿಪ್ರವಾಗಿ ನಡೆದುಬಿಡುತ್ತದೆ ಮತ್ತು ಸಂಬಂಧಪಟ್ಟವರಿಗೆ ತಕ್ಷಣ ಸಂದೇಶ ರವಾನೆಯಾಗುತ್ತದೆ.

'ವಿಜ್ಞಾನ ಸಂಶೋಧನೆಗೆ ನೆರವು ಕ್ರೋಡೀಕರಿಸಿ'

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: 'ಸಾಕಷ್ಟು ಪ್ರತಿಭಾನ್ವಿತ ವಿಜ್ಞಾನಿಗಳನ್ನು ಹೊಂದಿರುವ ದೇಶ ನಮ್ಮದು. ಇದರ ಪೂರ್ಣ ಪ್ರಯೋಜನ ಪಡೆಯಲು ಜೀವವಿಜ್ಞಾನವೂ ಸೇರಿದಂತೆ ವಿಜ್ಞಾನದ ವಿವಿಧ ಸಂಶೋಧನಾ ಚಟುವಟಿಕೆಗೆ ನೆರವು ಹೆಚ್ಚಿಸಬೇಕಿದೆ. ವೈಯಕ್ತಿಕ ನೆಲೆಯ ನೆರವು, ಕಾರ್ಪೊರೇಟ್ ಸಂಸ್ಥೆಗಳ ಹೊಣೆಗಾರಿಕೆ ನಿಧಿ, ಸರ್ಕಾರದ ಅನುದಾನ... ಹೀಗೆ ಚದುರಿ ಹೋಗಿರುವ ಆರ್ಥಿಕ ನೆರವುಗಳನ್ನೆಲ್ಲ ಕ್ರೋಡೀಕರಿಸುವ ಅಗತ್ಯವಿದೆ' ಎಂದು ತಜ್ಞರು ಪ್ರತಿಪಾದಿಸಿದರು.

'ಬೆಂಗಳೂರು ತಂತ್ರಜ್ಞಾನ ಶೃಂಗ -2021'ದಲ್ಲಿ ಬುಧವಾರ 'ಭಾರತೀಯ ಜೀವ ವಿಜ್ಞಾನ ಕ್ಷೇತ್ರದಲ್ಲಿ ಸಂಶೋಧನೆಗಳ ಪುನರುತ್ತೇಜನ' ಕುರಿತ ಸಂವಾದದಲ್ಲಿ ತಜ್ಞರು ಅಭಿಪ್ರಾಯ ಹಂಚಿಕೊಂಡರು.

'ಸೀ6 ಎನರ್ಜಿ' ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಶ್ರಿಕುಮಾರ್ ಸೂರ್ಯನಾರಾಯಣ, 'ಮನುಕುಲದ ಹಿತಕ್ಕಾಗಿ ನಡೆಸುವ ಸಂಶೋಧನೆಗಳಿಗೆ ಉದಾರ ದೇಣಿಗೆ ನೀಡುವ ಪ್ರವೃತ್ತಿ ದೇಶದಲ್ಲಿ ಹೆಚ್ಚಬೇಕು. ವೈಯಕ್ತಿನ ನೆಲೆಯಲ್ಲಿ ಇಂತಹ ಚಟುವಟಿಕೆಯಲ್ಲಿ ತೊಡಗಿರುವ ಕೋಟ್ಯಧಿಪತಿಗಳು ನಮ್ಮಲ್ಲಿ ಅನೇಕರಿದ್ದಾರೆ. ಇಂತಹ ದೇಣಿಗೆಗಳ ಪ್ರಮಾಣ ಹೆಚ್ಚಬೇಕಾದರೆ ಕಾರ್ಪೊರೇಟ್ ಸಂಸ್ಥೆಗಳ ಸಾಮಾಜಿಕ ಹೊಣೆಗಾರಿಕೆ ನಿಧಿ ಬಳಕೆ ಕುರಿತ ಕೆಲವು ನಿರ್ಬಂಧಗಳನ್ನು ಸಡಿಲಗೊಳಿಸಿ ಅವುಗಳನ್ನೂ ಈ ದಿಕ್ಕಿನತ್ತ ಹರಿಸುವ ಕಾರ್ಯವಾಗಬೇಕು. ಆಗ ಈ ಕ್ಷೇತ್ರದಲ್ಲೂ ಮಹತ್ತರ ಸಂಶೋಧನೆಗಳನ್ನು ನಡೆಸಲು ಬಲಬರುತ್ತದೆ' ಎಂದು ಅಭಿಪ್ರಾಯಪಟ್ಟರು.

'ಭಾರತದಲ್ಲಿ ವೈಜ್ಞಾನಿಕ ಸಂಶೋಧನೆಗಳ ಮಹತ್ವ ತಿಳಿದು ಈ ಉದ್ದೇಶಕ್ಕೆ ನೆರವು ನೀಡುವವರಿದ್ದಾರೆ. ಇನ್ನು ಕೆಲವರು, ವೈಯಕ್ತಿಕ ನೆಲೆಯಲ್ಲಿ ಅನುಭವಿಸಿದ ನೋವುಗಳಿಂದಾಗಿ ನೆರವು ನೀಡುವುದುಂಟು. ಇದು ಇಷ್ಟಕ್ಕೇ ಸೀಮಿತವಾಗಬಾರದು. ಇತ್ತೀಚೆಗಂತೂ ದೇಶದಲ್ಲಿ ನವೋದ್ಯಮಗಳು ಸದ್ದು ಮಾಡುತ್ತಿವೆ. ಯಶಸ್ವಿ ನವೋದ್ಯಮಿಗಳೂ ತಮ್ಮ ವರಮಾನದ ಒಂದಂಶವನ್ನು ಇಂತಹ ಚಟುವಟಿಕೆಗಾಗಿ ಮೀಸಲಿಡಬೇಕು. ಮದರಾಸು ಐಐಟಿಯಲ್ಲಿ ಇಂತಹ ಪ್ರಯತ್ನಗಳು ನಡೆದಿವೆ. ಒಂದೂವರೆ ವರ್ಷದಲ್ಲಿ ₹ 300 ಕೋಟಿಗೂ ಅಧಿಕ ನೆರವನ್ನು ಒದಗಿಸಲಾಗಿದೆ. ದೇಶದಲ್ಲಿ ಜೀವವಿಜ್ಞಾನಕ್ಕೆ ಸಂಬಂಧಿಸಿದ ನವೋದ್ಯಮಗಳು ಇನ್ನಷ್ಟು ಸಂಖ್ಯೆಯಲ್ಲಿ ಹುಟ್ಟಿಕೊಳ್ಳಬೇಕು. ಅದಕ್ಕೆ ಅಗಾಧ ನೆರವಿನ ಅಗತ್ಯ ಇದೆ' ಎಂದರು.

ವೆಲ್‌ಕಂ ಟ್ರಸ್ಟ್‌ನ ಭಾರತೀಯ ಸಹ ಸಂಸ್ಥೆಯ ವಾಸನ್ ಸಂಬಂಧಮೂರ್ತಿ, 'ವೈಜ್ಞಾನಿಕ ಸಂಶೋಧನೆಗಳನ್ನು ನಡೆಸಿದರಷ್ಟೇ ಸಾಲದು. ಅವುಗಳ ಗುಣಮಟ್ಟದಲ್ಲೂ ಮಹತ್ತರ ಸುಧಾರಣೆ ತರಬೇಕಿದೆ. ಹೊಸತನದಿಂದ ಕೂಡಿದ ಅತ್ಯುತ್ತಮ ಆಲೋಚನೆಗಳನ್ನು ಗುರುತಿಸಿ ಉತ್ತೇಜನ ನೀಡುವ ಪರಿಪಾಠ ಹೆಚ್ಚಬೇಕು' ಎಂದರು.

ಪರ್ಡ್ಯೂ ವಿಶ್ವವಿದ್ಯಾಲಯದ ರಾಮಸ್ವಾಮಿ ಸುಬ್ರಹ್ಮಣ್ಯಂ, 'ವೈಜ್ಞಾನಿಕ ಸಂಶೋಧನೆಗಳಿಗೆ ಆರ್ಥಿಕ ನೆರವು ಒದಗಿಸುವವರು ಸಂಶೋಧನೆಯ ಗುಣಮಟ್ಟ ಕಾಪಾಡುವಿಕೆ, ಅವುಗಳ ಉದ್ದೇಶಕ್ಕೆ ಬದ್ಧರಾಗಿರುವುದು ಹಾಗೂ ವೈಫಲ್ಯಗಳನ್ನೂ ಮುಕ್ತಮನಸ್ಸಿನಿಂದ ಸ್ವೀಕರಿಸುವ ಧೋರಣೆಗಳನ್ನು ಹೊಂದಿರುವುದು ಬಲುಮುಖ್ಯ' ಎಂದರು.

ಇಗ್ನೈಟ್ ಲೈಫ್ ಸೈನ್ಸಸ್ ಫೌಂಡೇಷನ್ ಸಿಇಒ ಡಾ.ಸ್ವಾಮಿ ಸುಬ್ರಹ್ಮಣಿಯನ್ ಅವರು ಕಾರ್ಯಕ್ರಮ ನಡೆಸಿಕೊಟ್ಟರು.

'ವಿಜ್ಞಾನದ ಶಕ್ತಿಯ ಬಗ್ಗೆ ನಂಬಿಕೆ ಬೆಳೆಸಿ'

ಕ್ಯಾಕ್ಟಸ್ ಕಮ್ಯುನಿಕೇಷನ್ಸ್‌ನ ಸ್ಮಿತಾ ಜೈನ್, 'ಸಾಮಾಜಿಕ ಕ್ಷೇತ್ರಗಳಿಗೆ ಹೋಲಿಸಿದರೆ ನಮ್ಮ ದೇಶದಲ್ಲಿ ವೈಜ್ಞಾನಿಕ ಸಂಶೋಧನೆಗಳಿಗೆ ನೆರವು ಒದಗಿಸುವ ಪರಿಪಾಟ ತೀರಾ ಕಡಿಮೆಯೇ ಇದೆ. ಇದಕ್ಕೆ ವಿಜ್ಞಾನಿಗಳು ಬಳಸುವ ಪರಿಭಾಷೆ ಜನರಿಗೆ ಅರ್ಥವಾಗದೆ ಇರುವುದೂ ಇದಕ್ಕೆ ಕಾರಣ. ವಿಜ್ಞಾನ ಕ್ಷೇತ್ರದ ವಿಚಾರಗಳು ಹಾಗೂ ಸವಾಲುಗಳನ್ನು ಜನರಿಗೆ ನಿರಂತರವಾಗಿ ತಲುಪಿಸುತ್ತಿರಬೇಕು. ವಿಜ್ಞಾನದ ಶಕ್ತಿಯ ಬಗ್ಗೆ ಜನರಲ್ಲಿ ನಂಬಿಕೆ ಬೆಳೆಸಬೇಕಿದೆ' ಎಂದು ಅಭಿಪ್ರಾಯಪಟ್ಟರು.

'ವಿಜ್ಞಾನ ಬಗ್ಗೆ ಜನರಲ್ಲಿ ಆಸಕ್ತಿ ಕೆರಳಿಸಲು ವಿಜ್ಞಾನಿಗಳು ತಮ್ಮ ಪರಿಭಾಷೆಯನ್ನು ಬಿಟ್ಟು, ಜನರಿಗೆ ಅರ್ಥವಾಗುವ ಭಾಷೆಯಲ್ಲಿ ಸಂವಹನ ನಡೆಸಬೇಕು. ವೈಯಕ್ತಿಕ ನೆಲೆಯಲ್ಲಿ ಅನೇಕರು ಈ ಕಾರ್ಯದಲ್ಲಿ ತೊಡಗಿದ್ದಾರೆ. ಇದು ಸಾಲದು. ಇದೊಂದು ಅಭಿಯಾನದಂತೆ ನಡೆಯಬೇಕು. ಪರಿಣಾಮಕಾರಿ ಸಂವಹನದ ಕುರಿತು ಯುವವಿಜ್ಞಾನಿಗಳಿಗೆ ವಿಶೇಷ ತರಬೇತಿ ಒದಗಿಸಬೇಕಿದೆ' ಎಂದರು.

56 ನಗರ ಸ್ಥಳೀಯ ಸಂಸ್ಥೆಗೆ ಚುನಾವಣೆ ನಡೆಸಿ: ಹೈಕೋರ್ಟ್

ಒಂದನೇ ಪುಟದಿಂದ...

ಉಳಿದ 46 ಸ್ಥಳೀಯ ಸಂಸ್ಥೆಗಳಿಗೆ ಕರಡು ಮೀಸಲಾತಿ ಅಧಿಸೂಚನೆ ಹೊರಡಿಸಲಾಗಿದೆ. ಮುಂದಿನ ಏಳು ಕೆಲಸದ ದಿನಗಳಲ್ಲಿ ಎಲ್ಲಾ ಸ್ಥಳೀಯ ಸಂಸ್ಥೆಗಳ ಮೀಸಲಾತಿ ಅಧಿಸೂಚನೆ ಪ್ರಕಟಿಸಲಾಗುವುದು ಎಂದು ನ್ಯಾಯಪೀಠಕ್ಕೆ ಭರವಸೆ ನೀಡಿದರು.

ರಾಜ್ಯ ಚುನಾವಣಾ ಆಯೋಗದ ಪರ ಹಿರಿಯ ವಕೀಲ ಕೆ.ಎನ್.ಫಣೀಂದ್ರ, 'ಸರ್ಕಾರ ಒಂದೇ ಬಾರಿಗೆ ಎಲ್ಲಾ ಸ್ಥಳೀಯ ಸಂಸ್ಥೆಗಳ ಮೀಸಲಾತಿ ಪ್ರಕಟಿಸಿದರೆ ಏಕಕಾಲಕ್ಕೆ ಚುನಾವಣೆ ನಡೆಸಲು ಅನುಕೂಲವಾಗುತ್ತದೆ. ಸರ್ಕಾರ ಮೀಸಲಾತಿ ಅಧಿಸೂಚನೆ ಹೊರಡಿಸಿದ ನಂತರ ಆಯೋಗ ಚುನಾವಣಾ ದಿನಾಂಕ ಪ್ರಕಟಿಸಿ ಡಿಸೆಂಬರ್ ಅಂತ್ಯದೊಳಗೆ ಚುನಾವಣಾ ಪ್ರಕ್ರಿಯೆ ಮುಗಿಸಲಾಗುವುದು' ಎಂದು ಸಂಭಾವ್ಯ ವೇಳಾಪಟ್ಟಿಯನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು.

ಬೆಳಗಿನ ಕಲಾಪದಲ್ಲಿ ನ್ಯಾಯಪೀಠ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡ ಪರಿಣಾಮ ಮಧ್ಯಾಹ್ನದ ಕಲಾಪಕ್ಕೆ ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಖುದ್ದು ಹಾಜರಾಗಿದ್ದರು. ವಿಚಾರಣೆಯನ್ನು 2022ರ ಜನವರಿಗೆ ಮುಂದೂಡಿದೆ.

24ನೇ ಬೆಂಗಳೂರು ತಂತ್ರಜ್ಞಾನ ಶೃಂಗದ ಉದ್ಘಾಟನೆ

'ಮೇಧಾಶಕ್ತಿ'ಗೆ ಮಣೆ: ಬೊಮ್ಮಾಯಿ

ಎಸ್. ರವಿಪ್ರಕಾಶ್

ಬೆಂಗಳೂರು: ಜಾಗತಿಕ ಮಟ್ಟದ ವಿಜ್ಞಾನ, ತಂತ್ರಜ್ಞಾನ, ನಾವೀನ್ಯತೆ ಮತ್ತು ಸಂಶೋಧನಾ ಕ್ಷೇತ್ರದ ಅತ್ಯುತ್ತಮ 'ಮೇಧಾ ಶಕ್ತಿ'ಯುಳ್ಳವರು (ಬ್ರೇನ್ ಪವರ್) ಕರ್ನಾಟಕಕ್ಕೆ ಬಂದು ನೆಲೆಗೊಳ್ಳಬೇಕು. ಇಂತಹ ಮೇಧಾಶಕ್ತಿಯುಳ್ಳವರನ್ನು ಮುಕ್ತ ಮನಸ್ಸು ಮತ್ತು ಹೃದಯದಿಂದ ಸ್ವಾಗತಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

24 ನೇ ಬೆಂಗಳೂರು ತಂತ್ರಜ್ಞಾನ ಶೃಂಗದ ಉದ್ಘಾಟನೆ ಸಮಾರಂಭದಲ್ಲಿ ಮಾತನಾಡಿದ ಅವರು, ಜಗತ್ತಿನಲ್ಲಿ ದೊಡ್ಡ ಮಟ್ಟದ ಪರಿವರ್ತನೆಗಳಿಗೆ ಮೇಧಾಶಕ್ತಿಯೇ ಕಾರಣವಾಗಿದೆ. ಮೇಧಾಶಕ್ತಿಯನ್ನು ಗುರುತಿಸಿ, ಗೌರವಿಸಿ ಪ್ರೋತ್ಸಾಹಿಸುವ ಕೆಲಸ ಆಗಬೇಕಿದೆ. ಬೆಂಗಳೂರು ಮೇಧಾಶಕ್ತಿಯ ತಾಣವಾಗಬೇಕು ಎಂದರು.

'ಮಾನವ ನಿಸ್ಸಂದೇಹವಾಗಿ ಅದ್ವಿತೀಯ ಸೃಷ್ಟಿಕರ್ತ. ಆತ ತನ್ನ ಬುದ್ಧಿ ಸಾಮರ್ಥ್ಯವನ್ನು ಸಮರ್ಪಕವಾಗಿ ಬೆಳೆಸಿಕೊಂಡರೆ ಇನ್ನಷ್ಟು ಕ್ರಾಂತಿಕಾರಿ



ಬೆಂಗಳೂರು ತಂತ್ರಜ್ಞಾನ ಶೃಂಗದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್, ಉಪರಾಷ್ಟ್ರಪತಿ ಎಂ.ವೆಂಕಯ್ಯನಾಯ್ಡು ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ. ವರ್ಚ್ಯುವಲ್ ಮೂಲಕ ಮಾತನಾಡುತ್ತಿರುವ ಆಸ್ಟ್ರೇಲಿಯಾ ಪ್ರಧಾನಿ ಸ್ಕಾಟ್ ಮಾರಿಸನ್

ಸಂಶೋಧನೆ, ಆವಿಷ್ಕಾರಗಳನ್ನು ಮಾಡಲು ಸಾಧ್ಯವಿದೆ. ಯೋಚನೆಗಳು ಮತ್ತು ಅವಕಾಶಗಳಿಗೆ 'ಆಕಾಶವೇ ಮಿತಿ' ಎಂಬ ಮಾತು ಹಳೆಯದಾಗಿದೆ. ಆಕಾಶದ ವ್ಯಾಪ್ತಿಯನ್ನು ಮೀರಿ ಯೋಚಿಸಬೇಕು. ಈಗ ನಾವು 'ಜಾಗತಿಕ ನಾಗರಿಕ' ಪರಿಕಲ್ಪನೆ ನಿಜವಾಗುವ ಹಂತ ತಲುಪಿದ್ದೇವೆ' ಎಂದು ಬೊಮ್ಮಾಯಿ ಹೇಳಿದರು.

ಕೃಷಿಗೂ ಆಧುನಿಕ ತಂತ್ರಜ್ಞಾನ: ದೇಶದ ಕೃಷಿ ಸ್ಥಿತಿಯ ಸುಧಾರಣೆಗೆ ಆಧುನಿಕ ತಂತ್ರಜ್ಞಾನ, ನಾವೀನ್ಯತೆ, ಸಂಶೋಧನೆ ಮತ್ತು ಜ್ಞಾನದ ಬಳಕೆಯಾಗಬೇಕು ಎಂದು ಕಾರ್ಯಕ್ರಮ ಉದ್ಘಾಟಿಸಿದ ಉಪರಾಷ್ಟ್ರಪತಿ ಎಂ.ವೆಂಕಯ್ಯನಾಯ್ಡು ಹೇಳಿದರು.

> **ನವ ಕರ್ನಾಟಕದ ನಿರ್ಮಾಣದ ಮೂಲಕ ನವ ಭಾರತ ನಿರ್ಮಾಣಕ್ಕೆ ನಾಂದಿ ಹಾಡೋಣ. ಮೇಕ್ ಇನ್ ಕರ್ನಾಟಕ ಪ್ರಬಲವಾಗಬೇಕು**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ಜಗತ್ತು ಈಗ ಜ್ಞಾನಾಧಾರಿತವಾಗಿ ರೂಪುಗೊಳ್ಳುತ್ತಿದ್ದು, ಕೋವಿಡ್ ನಂತರ ಡಿಜಿಟಲೀಕರಣಗೊಳ್ಳುತ್ತಿದೆ. ಯಾವುದೇ ವಿಚಾರಕ್ಕೂ ಸಂಬಂಧಿಸಿದಂತೆ ಸರ್ಕಾರದ ನೀತಿಗಳು ಎಷ್ಟೇ ಚೆನ್ನಾಗಿದ್ದರೂ ಅಂತಿಮವಾಗಿ ತಂತ್ರಜ್ಞಾನದ ಲಾಭಗಳನ್ನು ಸಮಾಜದ ಕಟ್ಟಕಡೆಯ ಮನುಷ್ಯನಿಗೆ ತಲುಪಿಸಬೇಕಾದುದು ಮುಖ್ಯ ಎಂದರು.

ಪುನೀತ್‌ಗೆ ಸಂತಾಪ: ಇತ್ತೀಚೆಗೆ ನಿಧನರಾದ ಜನಪ್ರಿಯ ಚಲನಚಿತ್ರ ನಟ ಪುನೀತ್ ರಾಜ್‌ಕುಮಾರ್ ಅವರ ನಿಧನಕ್ಕೆ ವೆಂಕಯ್ಯನಾಯ್ಡು ಸಂತಾಪ ಸೂಚಿಸಿದರು. ಪುನೀತ್ ಅವರು ನಟರಾಗಿ ಕರ್ನಾಟಕ ಮಾತ್ರವಲ್ಲ ದೇಶ- ವಿದೇಶಗಳ ಜನರ ಮನಸ್ಸನ್ನು ಗೆದ್ದಿದ್ದರು. ಸದ್ದುಗದ್ದಲವಿಲ್ಲದೆ, ಬಡವರು ಮತ್ತು ಸಂಕಷ್ಟದಲ್ಲಿ ಇದ್ದವರಿಗೆ ನೆರವು ನೀಡಿದ್ದರು ಎಂದು ಸ್ಮರಿಸಿದರು.

'ಬೆಂಗಳೂರು ಸರಸ್ವತಿಯ ವಾಹನ ಹಂಸ'

'ನಾವೀನ್ಯತೆ ಎಂಬುದು ಜ್ಞಾನದ ದೇವತೆ ಸರಸ್ವತಿ ಇದ್ದಂತೆ. ಸರಸ್ವತಿಯ ವಾಹನ ಹಂಸ. ನಾವೀನ್ಯತೆಯ ನೆಲೆಯಾಗಿರುವ ಬೆಂಗಳೂರು ಸರಸ್ವತಿಯ ವಾಹನ ಇದ್ದಂತಿದೆ' ಎಂದು ಮುಖ್ಯಮಂತ್ರಿ ಬೊಮ್ಮಾಯಿ ವ್ಯಾಖ್ಯಾನಿಸಿದರು.

'ಹಂಸವು ಭಾರಿ ಗಾತ್ರ ಮತ್ತು ತೂಕದ ಪಕ್ಷಿಯಾಗಿದ್ದರೂ ಅತಿ ಎತ್ತರಕ್ಕೆ ಹಾರಬಲ್ಲದು. ಅದೇ ರೀತಿಯಲ್ಲಿ ಬೆಂಗಳೂರು ಎಂಬ ಹಂಸ ನಾವೀನ್ಯತೆಯನ್ನು ಜಗತ್ತಿನಲ್ಲಿ ಅತಿ ಎತ್ತರಕ್ಕೆ ಕೊಂಡೊಯ್ಯಬಲ್ಲದು' ಎಂದು ಅವರು ಬಣ್ಣಿಸಿದರು.

ಅಧ್ಯಕ್ಷ ಸ್ಥಾನದ ಚುನಾವಣೆ: ಸಾಹಿತಿಗಳಿಗಿಂತ ಜಾತಿ, ಧರ್ಮ, ಪಕ್ಷ ರಾಜಕಾರಣದ ಪ್ರಾಬಲ್ಯವೇ ಹೆಚ್ಚು

ಪಟ್ಟಭದ್ರರ ಕೈಯಲ್ಲೇ ಉಳಿದ ಕನ್ನಡ ಸಾಹಿತ್ಯ ಪರಿಷತ್

ಎಲ್ಲೆಲ್ಲಿ ಚುನಾವಣೆ ನಡೆಯಬೇಕಿದೆ

ನಗರಸಭೆ: ಗದಗ-ಬೆಟಗೇರಿ, ಹೊಸಪೇಟೆ, ಹೆಬ್ಬಗೋಡಿ.
ಪುರಸಭೆ: ಅಥಣಿ, ಅಣ್ಣಿಗೇರಿ, ಬಂಕಾಪುರ, ಜಿಗಣಿ, ಚಂದಾಪುರ, ಬಿಡದಿ, ಮಲೆಬೆನ್ನೂರು, ಕಾಪು, ಹಾರೋಗೇರಿ, ಮುಗಳಖೋಡ, ಮುನವಳ್ಳಿ, ಉಗಾರಖುರ್ದ, ಕಾರಟಗಿ, ಕುರೆಕುಪ್ಪ, ಹಗರಿಬೊಮ್ಮನಹಳ್ಳಿ, ಕುರಗೋಡು, ಮಸ್ಕಿ, ಕೆಂಭಾವಿ, ಕಕ್ಕೇರಾ.
ಪಟ್ಟಣ ಪಂಚಾಯಿತಿ: ನಾಯಕನಹಟ್ಟಿ, ವಿಟ್ಲ, ಕೋಟೆಕಾರು, ಎಂ.ಕೆ. ಹುಬ್ಬಳ್ಳಿ, ಕಂಕನವಾಡಿ, ನಾಗನೂರ, ಯಕ್ಸಾಂಬ, ಚೆನ್ನಮ್ಮ ಕಿತ್ತೂರು, ಅರಭಾವಿ, ಐನಾಪುರ, ಶೇಡಬಾಳ, ಚಿಂಚಲಿ, ಬೋರಗಾವ, ಕಲ್ಲೋಳಿ, ನಾಲತವಾಡ, ನಿಡಗುಂದಿ, ದೇವರಹಿಪ್ಪರಗಿ, ಆಲಮೇಲ, ಮನಗೂಳಿ, ಕೋಲ್ಹಾರ, ಕಮತಗಿ, ಬೆಳಗಲಿ, ಅಮೀನಗಡ, ಗುತ್ತಲ, ಜಾಲಿ, ತಾವರಗೇರಾ, ಕುಕನೂರ, ಭಾಗ್ಯನಗರ, ಕನಕಗಿರಿ, ಮರಿಯಮ್ಮನಹಳ್ಳಿ, ಕವಿತಾಳ, ತುರುವಿಹಾಳ, ಬಳಗಾನೂರ, ಸಿರವಾರ.

• ಸಚ್ಚಿದಾನಂದ ಕುರಗುಂದ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಜಾತಿ, ಧರ್ಮ, ಲಿಂಗ, ಪಕ್ಷಗಳ ರಾಜಕಾರಣ ಮೇಲುಗೈ ಸಾಧಿಸಿದೆ. ಇದರಿಂದ ಉದ್ದೇಶಿತ ಆಶಯ ಬದಿಗೆ ಸರಿದು ಜಾತಿ ರಾಜಕಾರಣ ತಾಂಡವವಾಡುತ್ತಿದೆ ಎಂಬ ಚರ್ಚೆ ಕಸಾಪ ಸದಸ್ಯರ ವಲಯದಲ್ಲಿ ನಡೆಯಲಾರಂಭಿಸಿದೆ.

ಅಧ್ಯಕ್ಷ ಸ್ಥಾನ ಕೆಲವೇ ಜಾತಿಗಳಿಗೆ ಸೀಮಿತವಾಗಿದೆ ಎನ್ನುವ ಚರ್ಚೆ ಮತ್ತೊಮ್ಮೆ ಮುನ್ನೆಲೆಗೆ ಬಂದಿದೆ. ಅಧ್ಯಕ್ಷ ಹುದ್ದೆಯನ್ನು ಹಿಂದುಳಿದ ವರ್ಗದವರು ಮತ್ತು ಪರಿಶಿಷ್ಟರು ವಹಿಸಲು ಸಾಧ್ಯವಾಗಿಲ್ಲ ಎನ್ನುವುದು ಸಾಹಿತ್ಯ ವಲಯದಲ್ಲಿ ಕೇಳಿ ಬರುತ್ತಿರುವ ಮಾತು. ಬ್ರಾಹ್ಮಣರು, ಲಿಂಗಾಯತರು, ಒಕ್ಕಲಿಗರೇ ಹೆಚ್ಚು ಬಾರಿ ಅಧಿಕಾರ ಅನುಭವಿಸಿದ್ದಾರೆ. ಉಳಿದ ವರ್ಗದವರು ಚುನಾವಣೆಯಲ್ಲಿ ಸ್ಪರ್ಧಿಸಿದರೂ ಜಾತಿ ಪ್ರಾಬಲ್ಯದಿಂದ ಆಯ್ಕೆಯಾಗುವುದು ಕಷ್ಟಸಾಧ್ಯ ಎನ್ನುವ ಅಭಿಪ್ರಾಯಗಳೂ ಇವೆ.

ಪುಢಾರಿಗಳು ಹೆಚ್ಚಾಗಿದ್ದಾರೆ: 'ಸಾಹಿತ್ಯ ಪರಿಷತ್‌ನಲ್ಲಿ ಸಾಹಿತಿಗಳನ್ನು ಹೊರತುಪಡಿಸಿ ಬೇರೆಯವರೆಲ್ಲರೂ ಇದ್ದಾರೆ. ಜಾತಿ, ಧರ್ಮ, ರಾಜಕಾರಣ ಸೇರಿದಂತೆ ಎಲ್ಲವೂ ಪ್ರವೇಶಿಸಿದೆ. ಹೀಗಾಗಿ, ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಯ 'ಮಿನಿ ರೂಪ' ಇದಾಗಿದೆ. ನಿಜವಾದ ಸಾಹಿತಿಗಳು ಹೊರಗೆ ಇದ್ದಾರೆ. ಜಿಲ್ಲಾ ಘಟಕಗಳು ಸಹ ಇದಕ್ಕೆ ಹೊರತಾಗಿಲ್ಲ. ಎಲ್ಲೆಡೆ ರಾಜಕೀಯ ಪುಢಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶಿಸುತ್ತಿದ್ದಾರೆ. ಕುರುಡರಲ್ಲಿ ಮೆಳ್ಳಗಣ್ಣು ಇರುವವರನ್ನು ಆಯ್ಕೆ ಮಾಡಬೇಕಾಗಿದೆ. ಅಧಿಕಾರ ಮತ್ತು ಹಣ ಸಾಹಿತಿಗಳನ್ನು ಹಾಳು ಮಾಡುತ್ತಿದೆ' ಎಂದು ಕವಿ ಸುಬ್ರಾಯ ಚೊಕ್ಕಾಡಿ ಬೇಸರ ವ್ಯಕ್ತಪಡಿಸಿದರು.



ಪಾವಿತ್ರ್ಯ ನಿರೀಕ್ಷಿಸುವುದೇ ತಪ್ಪು: 'ಪರಿಷತ್‌ಗೆ ಕನ್ನಡದ ಜಗತ್ತನ್ನು ಬೆಳಗಿಸುವವರು ಬರಬೇಕು. ಈಗ ಎಲ್ಲ ಕ್ಷೇತ್ರಗಳಲ್ಲೂ ಜಾತಿ, ಧರ್ಮದ ರಾಜಕಾರಣದ ಒಳಹೊಕ್ಕಿರುವಾಗ ಸಾಹಿತ್ಯ ಪರಿಷತ್ ಸಹ ಪವಿತ್ರ ಗಂಗೆಯಾಗಿ ಉಳಿಯುವುದು ಹೇಗೆ ಸಾಧ್ಯ? ಆದರೂ, ಪ್ರಸ್ತುತ ಸಂದಿಗ್ಧ ಸನ್ನಿವೇಶದಲ್ಲಿ ಪ್ರಜ್ಞಾವಂತರು ಆಯ್ಕೆಯಾಗಬೇಕು. ಸಾಹಿತ್ಯ ಪರಿಷತ್ ಆಡಳಿತ ಪಕ್ಷದ ವಕ್ತಾರನಂತೆ ವರ್ತಿಸಿರುವುದನ್ನು ನೋಡಿದ್ದೇವೆ. ಪರಿಷತ್ ತನ್ನ ಸ್ವಾಯತ್ತತೆ ಉಳಿಸಿಕೊಳ್ಳಬೇಕಾಗಿದೆ. ಇದುವರೆಗೆ ಮಹಿಳೆಯರು ಅಧ್ಯಕ್ಷರಾಗಿ ಆಯ್ಕೆಯಾಗಿಲ್ಲ. ಅವಿರೋಧವಾಗಿ ಮಹಿಳೆಯನ್ನು ಆಯ್ಕೆ ಮಾಡುವ ವಾತಾವರಣ ಸೃಷ್ಟಿಯಾದರೆ ಅದು ನಿಜಕ್ಕೂ ಕನ್ನಡಿಗರ ಪ್ರಬುದ್ಧತೆಯನ್ನು ಎತ್ತಿ ತೋರಿಸುತ್ತದೆ' ಎಂದು ವಿಮರ್ಶಕಿ ಎಂ.ಎಸ್. ಆಶಾದೇವಿ ಅಭಿಪ್ರಾಯಪಟ್ಟರು.

ಆವರಿಸಿದ ಜಾತಿ ಭೂತ: 'ಈಗ ಜಾತಿ ರಾಜಕೀಯ ಇಲ್ಲದೆಯೇ ಯಾವ ಚುನಾವಣೆಗಳು ನಡೆಯುತ್ತಿಲ್ಲ. ವಿಧಾನಸಭೆ, ಲೋಕಸಭೆ ಚುನಾವಣೆಯ ರೀತಿಯಲ್ಲಿ ಪರಿಷತ್ ಚುನಾವಣೆ ನಡೆಯುತ್ತಿದೆ. ಇಲ್ಲಿಯೂ ಪಕ್ಷ, ಜಾತಿ, ಧರ್ಮ ರಾಜಕಾರಣ ಇದೆ. ಜಾತಿ ಭೂತ ಎಲ್ಲ ಕ್ಷೇತ್ರಗಳಲ್ಲೂ ಆವರಿಸಿಕೊಂಡಿದೆ. ಜಾತಿ ಇಲ್ಲದೆಯೇ ಏನೂ ಇಲ್ಲ ಎನ್ನುವಂತಾಗಿದೆ. ಮಹಿಳೆಯರಿಗೆ ಇಲ್ಲಿ ಪ್ರಾತಿನಿಧ್ಯ ದೊರೆತಿಲ್ಲ. ಜಿಲ್ಲಾಧ್ಯಕ್ಷ ಸ್ಥಾನಗಳಿಗೂ ನಡೆಯುತ್ತಿರುವ ಚುನಾವಣೆಯಲ್ಲೂ ಇದೇ ರೀತಿಯ ವಾತಾವರಣ ಇದೆ' ಎಂದು ಕಾಂತಾವರ ಕನ್ನಡ ಸಂಘದ ಅಧ್ಯಕ್ಷರೂ ಆಗಿರುವ ಸಾಹಿತಿ ಡಾ.ನಾ.ಮೊಗಸಾಲೆ ಹೇಳಿದರು.

ಜಾತಿ ಬಲ ಮಾನದಂಡವಾಗಬಾರದು: 'ಯಾವುದೇ ಚುನಾವಣೆಯಲ್ಲೂ ಜಾತಿ ಪ್ರವೇಶಿಸಬಾರದು. ಜಾತಿ ಮತ್ತು ಹಣ ಮಾನದಂಡವಾಗಬಾರದು. ಸಾಹಿತ್ಯ ಮತ್ತು ಕನ್ನಡ ಸಂಸ್ಕೃತಿಗೆ ದುಡಿದವರನ್ನು ಆಯ್ಕೆ ಮಾಡಬೇಕು. ಸಾಹಿತ್ಯ ಪರಿಷತ್ತಿನ ಪ್ರಬುದ್ಧ ಸದಸ್ಯರು ಕನ್ನಡಕ್ಕಾಗಿ ದುಡಿದವರು ಮತ್ತು ದುಡಿಯುವವರನ್ನು ಆಯ್ಕೆ ಮಾಡುವ ವಿಶ್ವಾಸವಿದೆ' ಎಂದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷ ಡಾ.ಅಜ್ಜಕಳ ಗಿರೀಶ್ ಭಟ್ ಅಭಿಪ್ರಾಯಪಟ್ಟರು.

'ಪರಿಷತ್‌ಗೆ ಹೊಸ ಸ್ಪರ್ಶ'



ಕನ್ನಡ ಸಾಹಿತ್ಯ ಪರಿಷತ್ ಬಂಡವಾಳಶಾಹಿಗಳು ಮತ್ತು ಸ್ವಾರ್ಥಿಗಳ ಆಶ್ರಯ ತಾಣವಾಗಿದೆ. ಇದು ಕೇವಲ ಸಮ್ಮೇಳನಕ್ಕೇ ಸೀಮಿತಗೊಂಡಿದೆ. ಇದು ಸಾಹಿತಿಗಳು ಮತ್ತು ಚಿಂತಕರ ಚಾವಡಿಯಾಗಬೇಕು. ಹಣ ಬಲ ಇದ್ದವರಿಗೆ ಮಾತ್ರ ಅವಕಾಶ ಎನ್ನುವಂತಾಗಿದೆ. ಅಧ್ಯಕ್ಷನಾಗಿ ಆಯ್ಕೆಯಾದರೆ ಹೊಸ ಸ್ಪರ್ಶ ನೀಡಲಾಗುವುದು. ಸಮ್ಮೇಳನಗಳನ್ನು ವಿಚಾರ ಸಂಕಿರಣ ರೀತಿಯಲ್ಲಿ ಆಯೋಜಿಸಲಾಗುವುದು. ಸದಸ್ಯತ್ವಕ್ಕೂ ಮಾನದಂಡ ನಿಗದಿಪಡಿಸಲಾಗುವುದು. ಸಾಂಸ್ಕೃತಿಕ ಚಿಂತನೆಯುಳ್ಳವರನ್ನು ಸದಸ್ಯರನ್ನಾಗಿ ಮಾಡಲು ನಿಯಮಗಳನ್ನು ರೂಪಿಸಲಾಗುವುದು.

ವಾಲ್ಮೀಕಿ ಹ. ಯಕ್ಕರನಾಳ
ರಾಜ್ಯ ಘಟಕದ ಅಧ್ಯಕ್ಷ ಸ್ಥಾನದ ಅಭ್ಯರ್ಥಿ

'ಪ್ರತಿ ತಾಲ್ಲೂಕಿನಲ್ಲೂ ಕನ್ನಡ ಭವನ'



ಜಿಲ್ಲಾ ಘಟಕದ ಅಧ್ಯಕ್ಷ ಸ್ಥಾನಗಳಲ್ಲಿ ಶೇ 50ರಷ್ಟು ಮಹಿಳೆಯರಿಗೆ ಮೀಸಲಿಡಲಾಗುವುದು. ಅಧ್ಯಕ್ಷರ ಐದು ವರ್ಷದ ಅವಧಿಯನ್ನು ಮೂರು ವರ್ಷಕ್ಕೆ ಇಳಿಸಲಾಗುವುದು. ಪ್ರತಿ ತಾಲ್ಲೂಕಿನಲ್ಲೂ ಕನ್ನಡ ಭವನ ನಿರ್ಮಿಸಲು ಕ್ರಮಕೈಗೊಳ್ಳಲಾಗುವುದು. ಬಡ ಸಾಹಿತಿಗಳು ಮತ್ತು ಕಲಾವಿದರಿಗೆ ಅವಕಾಶ ಲಭಿಸುವಂತೆ ಕಾರ್ಯಕ್ರಮಗಳನ್ನು ರೂಪಿಸಲಾಗುವುದು. ಎಲ್ಲ ಸದಸ್ಯರ ಕೈಪಿಡಿ ತರಲಾಗುವುದು. ಸಾಹಿತ್ಯ ಪರಿಷತ್‌ನ ಮತದಾರರ ಪಟ್ಟಿಯಲ್ಲಿ ಕೆಲವರು ನಕಲಿ ಮತದಾರರು ಸೇರಿಕೊಂಡಿದ್ದಾರೆ. ಹೀಗಾಗಿ, ಮತದಾರರ ಪಟ್ಟಿಯನ್ನು ಪರಿಷ್ಕರಿಸಲಾಗುವುದು.

ಶರಬಸಪ್ಪ ಕಲ್ಲಪ್ಪ ದಾನಕೈ
ರಾಜ್ಯ ಘಟಕದ ಅಧ್ಯಕ್ಷ ಸ್ಥಾನದ ಅಭ್ಯರ್ಥಿ

'ಆಮೂಲಾಗ್ರ ಬದಲಾವಣೆ ತರಲಾಗುವುದು'



ಅಧ್ಯಕ್ಷನಾಗಿ ಆಯ್ಕೆಯಾದರೆ ಆಮೂಲಾಗ್ರವಾಗಿ ಬದಲಾವಣೆ ತರಲಾಗುವುದು. ಅಧ್ಯಕ್ಷ ಸ್ಥಾನದ ಅವಧಿಯನ್ನು ಮೂರು ವರ್ಷಕ್ಕೆ ಇಳಿಸಲಾಗುವುದು. ರಾಜ್ಯ ಘಟಕ ಮತ್ತು ಜಿಲ್ಲಾ ಘಟಕಗಳಿಗೆ ಅಧ್ಯಕ್ಷರಾಗಿ ಆಯ್ಕೆಯಾದವರು ಮತ್ತೊಮ್ಮೆ ಸ್ಪರ್ಧಿಸದಂತೆ ಬೈಲಾಗೆ ತಿದ್ದುಪಡಿ ಮಾಡಲಾಗುವುದು.ಪ್ರತಿ ಜಿಲ್ಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ ಒಂದು ಶಾಲೆಯನ್ನು ದತ್ತು ತೆಗೆದುಕೊಂಡು ಆದರ್ಶ ಶಾಲೆಯಾಗಿ ಅಭಿವೃದ್ಧಿಪಡಿಸಲಾಗುವುದು. ಸಾಹಿತ್ಯ ಪರಿಷತ್ ಗಂಜಿ ಕೇಂದ್ರವಾಗಬಾರದು. ಸಾಹಿತ್ಯವೇ ಪರಿಷತ್‌ನ ಆತ್ಮವಾಗಬೇಕು.

ವೈ. ರೇಣುಕ
ರಾಜ್ಯ ಘಟಕದ ಅಧ್ಯಕ್ಷ ಸ್ಥಾನದ ಅಭ್ಯರ್ಥಿ

'ಕಾರ್ಪೊರೇಟ್ ಮಾದರಿಯಲ್ಲಿ ಪರಿಷತ್ ಅಭಿವೃದ್ಧಿ'



ಜಡ್ಡುಗಟ್ಟಿರುವ ವ್ಯವಸ್ಥೆ ಇರುವ ಪರಿಷತ್ ಅನ್ನು ಕಾರ್ಪೊರೇಟ್ ಮಾದರಿಯಲ್ಲಿ ಬೆಳೆಸಬೇಕಾಗಿದೆ. ಸಮ್ಮೇಳನ ಮತ್ತು ಪುಸ್ತಕ ಪ್ರಕಟಣೆ ಬಿಟ್ಟು ಮಹತ್ವದ ಯೋಜನೆಗಳನ್ನು ಪರಿಷತ್ ರೂಪಿಸಿಲ್ಲ. ವಿದೇಶಗಳಲ್ಲಿ ಸಮ್ಮೇಳನಗಳನ್ನು ಆಯೋಜಿಸುವ ಉದ್ದೇಶ ಇದೆ. ಸಮ್ಮೇಳನಗಳನ್ನು ಆಯೋಜಿಸಲು ಸರ್ಕಾರದ ಮೇಲೆ ಅವಲಂಬನೆಯಾಗುವ ಬದಲು ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿ ಬಳಸಿಕೊಳ್ಳಬೇಕು. ಬೈಲಾಗೆ ತಿದ್ದುಪಡಿ ತಂದು, ಅಧ್ಯಕ್ಷರ ಆಯ್ಕೆಯ ಜತೆಗೆ ಪದಾಧಿಕಾರಿಗಳನ್ನು ಚುನಾವಣೆ ಮೂಲಕ ಆಯ್ಕೆ ಮಾಡುವ ಯೋಜನೆ ರೂಪಿಸಲಾಗುವುದು

ಶಿವರುದ್ರಯ್ಯ ಸ್ವಾಮಿ, ರಾಜ್ಯ ಘಟಕದ ಅಧ್ಯಕ್ಷ ಸ್ಥಾನದ ಅಭ್ಯರ್ಥಿ

ಸಂವಿಧಾನದ ಅನುಚ್ಛೇದ 16(4), 1995ರ ಸರ್ಕಾರದ ಗೆಜೆಟ್ ನೋಟಿಫಿಕೇಶನ್‌ಗಿಲ್ಲ ಕಿಮ್ಮತ್ತು

ಮೀಸಲಾತಿ ನಿಯಮ ಗಾಳಿಗೆ ತೂರಿ ಬೋಧಕ ಹುದ್ದೆ ನೇಮಕ

• ಶಶಿಕಾಂತ ಎಸ್. ಶೆಂಬೆಳ್ಳಿ

ಹೊಸಪೇಟೆ (ವಿಜಯನಗರ): ಇಲ್ಲಿನ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ 17 ಬೋಧಕ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಸರ್ಕಾರದ ಮೀಸಲಾತಿ ನಿಯಮಗಳಿಗೆ ಸಂಪೂರ್ಣ ತದ್ವಿರುದ್ಧವಾಗಿರುವುದು ಗೊತ್ತಾಗಿದೆ.

ಸಂವಿಧಾನದ ಅನುಚ್ಛೇದ 16 (4)ರ ಪ್ರಕಾರ, ನೇಮಕಾತಿಯಲ್ಲಿ ಶೇ 50ರಷ್ಟು ನೇರ ಮೀಸಲಾತಿ ಕೊಡಬೇಕು. 1995ರಲ್ಲಿ ರಾಜ್ಯ ಸರ್ಕಾರ ಹೊರಡಿಸಿರುವ ಗೆಜೆಟ್ ಅಧಿಸೂಚನೆ ಕೂಡ ಇದನ್ನೇ ಹೇಳುತ್ತದೆ. ಆದರೆ, ಅದರ ಪಾಲನೆಯಾಗಿಲ್ಲ.

ಸರ್ಕಾರದ ಆದೇಶದ ಪ್ರಕಾರ, ಕನ್ನಡ ವಿಶ್ವವಿದ್ಯಾಲಯದಲ್ಲಿ ನೇಮಕಾತಿ ಮಾಡಲು ಉದ್ದೇಶಿಸಿರುವ ಒಟ್ಟು 17 ಹುದ್ದೆಗಳ ಪೈಕಿ 9 ಹುದ್ದೆಗಳು ಸಾಮಾನ್ಯ ವರ್ಗಗಳಿಗೆ, ಮಿಕ್ಕುಳಿದ 8 ಹುದ್ದೆಗಳು ಮೀಸಲು ವರ್ಗಕ್ಕೆ ಮೀಸಲಿಡಬೇಕು. ಪರಿಶಿಷ್ಟ ಜಾತಿ-3, ಪರಿಶಿಷ್ಟ ಪಂಗಡ ಅಥವಾ ಪ್ರವರ್ಗ-1ಕ್ಕೆ 1 ಹುದ್ದೆ, 2ಎ-2, 3ಎ-1, 3ಬಿ-1 ಹುದ್ದೆ ಮೀಸಲಿಡಬೇಕು. ಆದರೆ, ವಿಶ್ವವಿದ್ಯಾಲಯದ ಅಧಿಸೂಚನೆ ಪ್ರಕಾರ, ಒಟ್ಟು 17 ಹುದ್ದೆಗಳಲ್ಲಿ 14 ಸಾಮಾನ್ಯ, ಪರಿಶಿಷ್ಟ ಜಾತಿ, ಪ್ರವರ್ಗ-1, ಪ್ರವರ್ಗ-2ಕ್ಕೆ ತಲಾ ಒಂದೊಂದು ಹುದ್ದೆ ಮೀಸಲಿಡಲಾಗಿದೆ. ಇದು ಸರ್ಕಾರದ ಆದೇಶದ ನೇರಾನೇರ ಉಲ್ಲಂಘನೆ ಎಂಬ ಆಕ್ಷೇಪಗಳು ಕೇಳಿಬರುತ್ತಿವೆ.

ರೋಸ್ಟರ್ ಬಿಂದುವಿಗಿಲ್ಲ ಬೆಲೆ: 1991ರಿಂದ ಇದುವರೆಗೆ ವಿಶ್ವವಿದ್ಯಾಲಯದಲ್ಲಿ 87 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಆರಂಭದಲ್ಲಿ 66 ಹುದ್ದೆಗಳನ್ನು ಸರ್ಕಾರವೇ ನೇರ ಸೃಜನೆ ಮಾಡಿದೆ. ಏಳು ಪರಿವರ್ತಿತ ಹುದ್ದೆಗಳಿವೆ. 66 ಹುದ್ದೆಗಳ ನೇರ ನೇಮಕಾತಿ ಬಳಿಕ 2018ರಲ್ಲಿ 21 ಹುದ್ದೆಗಳಿಗೆ ಅರ್ಜಿ ಕರೆಯಲಾಗಿತ್ತು. ಈ ಪೈಕಿ 9 ಹುದ್ದೆಗಳನ್ನು ತುಂಬಲಾಗಿದೆ. ಮಿಕ್ಕುಳಿದ ಹುದ್ದೆಗಳಿಗೆ ಅರ್ಜಿ ಬರದ ಕಾರಣ ತುಂಬಿರಲಿಲ್ಲ.

ಇದುವರೆಗೆ 87 ಹುದ್ದೆಗಳಿಗೆ ಅರ್ಜಿ ಕರೆದು, ತುಂಬುವ ಪ್ರಕ್ರಿಯೆ ನಡೆಸಿದ್ದರಿಂದ ರೋಸ್ಟರ್ ಬಿಂದು ಕೂಡ ಅದೇ ಸಂಖ್ಯೆಗೆ ನಿಂತಿದೆ. ಈಗ 88ನೇ ಬಿಂದುವಿನ ಪ್ರಕಾರ, ಮೀಸಲು ನಿಯಮ ಅನುಸರಿಸಬೇಕು. ಆದರೆ, ಅದನ್ನು ಅನುಸರಿಸುತ್ತಿಲ್ಲ. 2018ರಲ್ಲಿ ಭರ್ತಿಯಾಗದ ಹುದ್ದೆಗಳನ್ನು ಹಾಲಿ ಅಧಿಸೂಚನೆಯಲ್ಲಿ ಪ್ರತ್ಯೇಕ ತೋರಿಸಬೇಕು. ಅವುಗಳನ್ನು ತೋರಿಸಿದರೆ ಆ ಹುದ್ದೆಗಳು ಬ್ಯಾಕ್‌ಲಾಗ್‌ಗೆ ಒಳಪಡುತ್ತಿದ್ದವು. ಅವುಗಳನ್ನು ತೋರಿಸಿಲ್ಲ. ವಿಶ್ವವಿದ್ಯಾಲಯವು ರೋಸ್ಟರ್ ಲೆಡ್ಜರ್ ಕೂಡ ನಿರ್ವಹಿಸಿಲ್ಲ ಎಂಬ ಆರೋಪ ಇದೆ.

'ಯಾವುದೇ ನೇಮಕಾತಿಯಲ್ಲಿ ಸಾಮಾನ್ಯ ವರ್ಗದ ಹುದ್ದೆಗಳನ್ನು ಮೊದಲು ಭರ್ತಿ ಮಾಡಬೇಕು. ಅನಂತರ ಮೀಸಲಾತಿ ಹುದ್ದೆಗಳನ್ನು ತುಂಬಬೇಕು. ಒಂದುವೇಳೆ ಹುದ್ದೆ ಭರ್ತಿಯಾಗದಿದ್ದಲ್ಲಿ 'ಮಿಸ್ಸಿಂಗ್ ರೋಸ್ಟರ್' ಅನುಸರಿಸಬೇಕು. ಆದರೆ, ಆರಂಭದಿಂದಲೂ ಸಾಮಾನ್ಯ ವರ್ಗದ ಹುದ್ದೆಗಳನ್ನು ಭರ್ತಿ ಮಾಡಿಲ್ಲ ಎಂದು ವಿಶ್ವವಿದ್ಯಾಲಯವು ಹೇಳುತ್ತಿದೆ. ಸಾಮಾನ್ಯ ವರ್ಗದಲ್ಲಿ ನೇಮಕಗೊಂಡ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಇತರೆ ಹಿಂದುಳಿದ ವರ್ಗದವರನ್ನು ಅವರ ಮೀಸಲಾತಿ ವರ್ಗಗಳಲ್ಲಿಯೇ ನೇಮಕ ಮಾಡಲಾಗಿದೆ ಎಂದು ಸುಳ್ಳು ಮಾಹಿತಿ ನೀಡಲಾಗುತ್ತಿದೆ. ಆದರೆ, ವಾಸ್ತವದಲ್ಲಿ ಅವರು ಸಾಮಾನ್ಯ ವರ್ಗದಡಿ ನೇಮಕಗೊಂಡಿದ್ದಾರೆ' ಎಂದು ಸಾಮಾಜಿಕ ಕಾರ್ಯಕರ್ತ ಸೋಮಶೇಖರ್ ಬಣ್ಣದಮನೆ ತಿಳಿಸಿದ್ದಾರೆ.

'ಮಿಸ್ಸಿಂಗ್ ರೋಸ್ಟರ್', ಮೀಸಲಾತಿ ಬಯಸುವ ವರ್ಗಗಳಿಗೆ ಅನ್ವಯವಾಗುತ್ತದೆಯೇ ಹೊರತು ಸಾಮಾನ್ಯ ವರ್ಗಗಳಿಗೆ ಆಗುವುದಿಲ್ಲ. ಈಗಾಗಲೇ ಕೆಲ ಅಭ್ಯರ್ಥಿಗಳಿಂದ ಹಣದ ಹೊಂದಾಣಿಕೆ ಆಗಿರುವುದರಿಂದ ಅವರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದಲೇ ತಪ್ಪು ಮೀಸಲಾತಿ ಅಧಿಸೂಚನೆ ಪ್ರಕಟಿಸಲಾಗಿದೆ. ಸಾಮಾನ್ಯ ವರ್ಗದಲ್ಲಿ ಹೆಚ್ಚು ಹುದ್ದೆಗಳಿದ್ದರೆ ಸಹಜವಾಗಿಯೇ ಅಭ್ಯರ್ಥಿಗಳು ಹೆಚ್ಚಾಗುತ್ತಾರೆ. ಹೆಚ್ಚಿನ ಹಣಕ್ಕೆ ಬೇಡಿಕೆ ಇಡಬಹುದು ಎಂಬ ಲೆಕ್ಕಾಚಾರ ಇದರ ಹಿಂದಿದೆ' ಎಂದು ಆರೋಪಿಸಿದ್ದಾರೆ.

> **ಬೋಧಕ ಹುದ್ದೆಗೆ ಒಬ್ಬ ಅಭ್ಯರ್ಥಿಯಿಂದ ತಲಾ ₹50 ಲಕ್ಷ ಹಣ ಪಡೆಯಲಾಗಿದೆ. ಅವರಿಗೆ ಅನುಕೂಲ ಮಾಡಿಕೊಡಲೆಂದೆ ಮೀಸಲಾತಿ ತಿರುಚಲಾಗಿದೆ.**
> **ಸೋಮಶೇಖರ್ ಬಣ್ಣದಮನೆ,** ಸಾಮಾಜಿಕ ಕಾರ್ಯಕರ್ತ

> **ವೈಜ್ಞಾನಿಕವಾಗಿ ಮೀಸಲಾತಿ ಅನ್ವಯ ಹುದ್ದೆಗಳನ್ನು ತುಂಬಲಾಗುತ್ತಿದೆ. ಈಗ ತಪ್ಪಾದರೂ ಮುಂದೆ ಪುನಃ ಸರಿಪಡಿಸಿ ತುಂಬಬಹುದು.**
> **ಪ್ರೊ. ಎ. ಸುಬ್ಬಣ್ಣ ರೈ,** ಕುಲಸಚಿವ, ಹಂಪಿ ಕನ್ನಡ ವಿಶ್ವವಿದ್ಯಾಲಯ

'ಮಹಿಳಾ ಮೀಸಲಾತಿಯೂ ಇಲ್ಲ'

ಸಮತಲ ಮೀಸಲಾತಿ ಪ್ರಕಾರ, ಒಟ್ಟು 17 ಹುದ್ದೆಗಳಲ್ಲಿ ಶೇ 33ರಷ್ಟು ಮಹಿಳೆಯರಿಗೆ ಮೀಸಲಿಡಬೇಕು. ಹೀಗೆ ಮಾಡಿದರೆ ಕನಿಷ್ಠ 5 ಹುದ್ದೆ ಮಹಿಳೆಯರಿಗೆ ಮೀಸಲಿಡಬೇಕಾಗುತ್ತದೆ. ಆದರೆ, ಒಂದು ಹುದ್ದೆ ಮೀಸಲಿಡಲಾಗಿದೆ. ಅಭಿವೃದ್ಧಿ ಅಧ್ಯಯನ ವಿಭಾಗದಲ್ಲಿ ಈಗಾಗಲೇ ಇಬ್ಬರು ಮಹಿಳೆಯರಿದ್ದಾರೆ. ಆದರೆ, ಮತ್ತೆ ಅದೇ ವಿಭಾಗದಲ್ಲಿ ಹುದ್ದೆ ತುಂಬಲಾಗುತ್ತಿದೆ. ಸರ್ಕಾರದ ಮೀಸಲಾತಿ ಪ್ರಕಾರ, 2, 5, 8, 12, 15, 18 ಬಿಂದುಗಳನ್ವಯ ಹುದ್ದೆಗಳನ್ನು ಮಹಿಳೆಯರಿಗೆ ಮೀಸಲಿಡುವುದು ಕಡ್ಡಾಯ. ಆದರೆ, ಅದನ್ನು ಪಾಲಿಸಿಲ್ಲ. ಇದನ್ನು ಪ್ರಶ್ನಿಸಿ ಎ. ಶಿವಮ್ಮ, ಪ್ರಕಾಶ್ ಬಿ. ಹುಗ್ಗಿ ಸೇರಿದಂತೆ 7 ಮಹಿಳಾ ಅಭ್ಯರ್ಥಿಗಳು ಹೈಕೋರ್ಟ್‌ನ ಧಾರವಾಡ ಪೀಠದ ಮೊರೆ ಹೋಗಿದ್ದಾರೆ.

ಪಕ್ಷದಿಂದ ಸಂದೇಶ್ ನಾಗರಾಜ್, ಜಿ.ಟಿ.ದೇವೇಗೌಡ ಬಹುದೂರ

ಅಭ್ಯರ್ಥಿಗಾಗಿ ಜೆಡಿಎಸ್ ಪರದಾಟ!

• ಕೆ.ಓಂಕಾರ ಮೂರ್ತಿ

ಮೈಸೂರು: ಮೈಸೂರು–ಚಾಮರಾಜನಗರ ದ್ವಿಸದಸ್ಯ ಕ್ಷೇತ್ರದ ಐದೂ ಚುನಾವಣೆಗಳಲ್ಲಿ ಗೆದ್ದಿದ್ದರೂ ಈ ಬಾರಿ ಅಭ್ಯರ್ಥಿ ಕಂಡುಕೊಳ್ಳಲು ಜೆಡಿಎಸ್ ಪರದಾಡುತ್ತಿದೆ.

ಸತತ ಎರಡು ಬಾರಿ ಗೆದ್ದಿರುವ ಸಂದೇಶ್ ನಾಗರಾಜ್ ಬಿಜೆಪಿಯತ್ತ ವಾಲಿದ್ದರೆ, ಪತ್ನಿ ಅಥವಾ ಪುತ್ರನನ್ನು ಕಣಕ್ಕಿಳಿಸುವಂತೆ ವರಿಷ್ಠರು ಮಾಡಿರುವ ಮನವಿಗೆ ಶಾಸಕ ಜಿ.ಟಿ.ದೇವೇಗೌಡ ಒಪ್ಪುತ್ತಿಲ್ಲ. ಇಬ್ಬರೂ ಪಕ್ಷದ ಚಟುವಟಿಗಳಿಂದ ಬಹುದೂರ ಉಳಿದಿದ್ದಾರೆ.

ಈ ಭಾಗದಲ್ಲಿ ಪ್ರಭಾವಿ ನಾಯಕರಾಗಿರುವ ಜಿ.ಟಿ.ದೇವೇಗೌಡ ಅವರ ಪತ್ನಿ ಲಲಿತಾ ಅಥವಾ ಪುತ್ರ ಜಿ.ಡಿ.ಹರೀಶ್ ಗೌಡ ಅವರಿಗೆ ಟಿಕೆಟ್ ನೀಡಿ ಪಕ್ಷದಲ್ಲೇ ಉಳಿಸಿಕೊಳ್ಳುವ ಪ್ರಯತ್ನಕ್ಕೆ ಸದ್ಯ ಪೂರಕ ಸನ್ನಿವೇಶಗಳಿಲ್ಲ. ಸ್ಪರ್ಧಿಸುವ ಸಾಧ್ಯತೆಯನ್ನು ಸ್ವತಃ ಜಿ.ಟಿ.ದೇವೇಗೌಡ ತಳ್ಳಿ ಹಾಕಿದ್ದಾರೆ. ಸ್ಥಳೀಯವಾಗಿ ಶಾಸಕ ಸಾ.ರಾ.ಮಹೇಶ್ ಅವರಿಗೆ ಎಚ್.ಡಿ.ಕುಮಾರಸ್ವಾಮಿ ನೀಡುತ್ತಿರುವ ಮಹತ್ವದಿಂದ ಅವರು ಕೆರಳಿದ್ದಾರೆ. ಇನ್ನು ಸಂದೇಶ್ ನಾಗರಾಜ್ ಈ ಬಾರಿ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದಾರೆ.

ಅಭ್ಯರ್ಥಿಯನ್ನು ಹುಡುಕಾಡುವ ಜವಾಬ್ದಾರಿಯನ್ನು ಪಕ್ಷದ ವರಿಷ್ಠರು ಸಾ.ರಾ.ಮಹೇಶ್ ಅವರ ಹೆಗಲಿಗೆ ಹಾಕಿದ್ದಾರೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ವರುಣಾ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದ ಅಭಿಷೇಕ್, ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ ಮಾಜಿ ಅಧ್ಯಕ್ಷ ವಿವೇಕಾನಂದ, ಜಿಲ್ಲಾ ಪಂಚಾಯಿತಿ ಸದಸ್ಯರಾಗಿದ್ದ ಬೀರಿಹುಂಡಿ ಬಸವಣ್ಣ, ಸಾ.ರಾ.ಮಹೇಶ್ ಸಹೋದರ ಸಾ.ರಾ. ನಂದೀಶ್, ಕೆ.ಆರ್.ನಗರ ಮುಖಂಡ ಎಚ್.ಎನ್.ರವಿ ಹಾಗೂ ಜಿಲ್ಲಾ ಘಟಕದ ಅಧ್ಯಕ್ಷ ನರಸಿಂಹಸ್ವಾಮಿ ಅವರು ಹೆಸರು ಕೇಳಿಬರುತ್ತಿದ್ದರೂ ಪಕ್ಷದ ವರಿಷ್ಠರು ಒಪ್ಪಿಲ್ಲ.

ಈ ಭಾಗದಲ್ಲಿ ಪಕ್ಷದ ಬೇರು ಬಲಿಷ್ಠವಾಗಿಯೇ ಇದೆ. ಮಹಾನಗರ ಪಾಲಿಕೆ ಸೇರಿದಂತೆ ನಗರಸಭೆ, ಪಟ್ಟಣ ಪಂಚಾಯಿತಿ, ಪುರಸಭೆಯಲ್ಲಿ ಅಧಿಕ ಸದಸ್ಯರಿದ್ದಾರೆ. ಈ ಪಕ್ಷದ ಬೆಂಬಲಿತ ಗ್ರಾಮ ಪಂಚಾಯಿತಿ ಸದಸ್ಯರೂ ಹೆಚ್ಚಿದ್ದಾರೆ. ಅಲ್ಲದೇ, 1988ರಿಂದ ಈ ಕ್ಷೇತ್ರಕ್ಕೆ ನಡೆದ ಐದೂ ಚುನಾವಣೆಗಳಲ್ಲಿ ಜನತಾ ಪರಿವಾರವೇ ಗೆದ್ದಿದೆ.

'ಮೇಲ್ಮನೆ ಸ್ಪರ್ಧೆ ವಿಚಾರವಾಗಿ ನಿಖಿಲ್ ಕುಮಾರಸ್ವಾಮಿ ಅವರು ಜಿ.ಟಿ. ದೇವೇಗೌಡರೊಡನೆ ಮಾತನಾಡಿದ್ದಾರೆ. ಹಲವು ಮುಖಂಡರ ಮೂಲಕ ಅವರಲ್ಲಿ ಮನವಿ ಮಾಡಲಾಗಿದೆ. ಆದರೆ, ಎರಡೂ ಕಾಲನ್ನು ಪಕ್ಷದಿಂದ ಹೊರಗಿಟ್ಟಿದ್ದಾರಂತೆ. ಏನು ಮಾಡುವುದು?' ಎಂದು ಸಾ.ರಾ.ಮಹೇಶ್ ಕೇಳಿದರು.

ಮುಖ್ಯಾಂಶಗಳು

- ಜನತಾ ಪರಿವಾರಕ್ಕೆ ಸತತ ಗೆಲುವು
- ಜಿಟಿಡಿ ಕುಟುಂಬಕ್ಕೆ ಟಿಕೆಟ್ ನೀಡಲು ಪ್ರಯತ್ನ
- ಎರಡೂ ಚುನಾವಣೆಯಲ್ಲಿ ಗೆದ್ದಿದ್ದ ಸಂದೇಶ್ ನಾಗರಾಜ್

ಮೈಸೂರು–ಚಾಮರಾಜನಗರ ಕ್ಷೇತ್ರ: ಜನತಾ ಪರಿವಾರದಿಂದ ಗೆದ್ದವರು

1988	ವಿ.ಎಚ್.ಗೌಡ	ಜನತಾ ಪಕ್ಷ
1997	ವೈ.ಮಹೇಶ್	ಜನತಾದಳ
2003	ಚಿದಾನಂದ	ಜೆಡಿಎಸ್
2009 2015	ಸಂದೇಶ್ ನಾಗರಾಜ	ಜೆಡಿಎಸ್

ಸಾ.ರಾ ಅವಮಾನಿಸಿದ್ದಾರೆ: ಜಿಟಿಡಿ

'ನನ್ನನ್ನು ಮೈಸೂರು ಜಿಲ್ಲಾ ಜೆಡಿಎಸ್ ಅಧ್ಯಕ್ಷರನ್ನಾಗಿ ಮಾಡಬೇಕೆಂದು 3 ವರ್ಷಗಳ ಹಿಂದೆ ಹಲವರು ಒತ್ತಾಯಿಸಿದ್ದರು. ಎಚ್.ಡಿ.ದೇವೇಗೌಡರು ಮನೆಗೆ ಕರೆಸಿಕೊಂಡಿದ್ದರು. ಆಗ ಸಾ.ರಾ.ಮಹೇಶ್, ಯಾವುದೇ ಕಾರಣಕ್ಕೆ ಅವರನ್ನು ಅಧ್ಯಕ್ಷರನ್ನಾಗಿ ಮಾಡಬೇಡಿ' ಎಂದರು. ಕುಮಾರಸ್ವಾಮಿ, ರೇವಣ್ಣ ತುಟಿಪಿಟಿಕ್ ಎನ್ನಲಿಲ್ಲ. ನನ್ನನ್ನು ಕರೆದು ಏಕೆ ಅವಮಾನಿಸುತ್ತಿದ್ದೀರಿ ಎಂದು ಬಾಗಿಲು ಬಡಿದು ಹೊರಟೆ. ಈಗಲೂ ನನ್ನ ಕುಟುಂಬದವರಿಗೆ ಮೇಲ್ಮನೆ ಟಿಕೆಟ್ ನೀಡುವ ವಿಚಾರವಾಗಿ ಸಾ.ರಾ.ಮಹೇಶ್, ಜನರಿಗೆ ತಪ್ಪು ಮಾಹಿತಿ ರವಾನಿಸಿ ನನ್ನನ್ನು ಅವಮಾನಿಸುತ್ತಿದ್ದಾರೆ' ಎಂದು ಜಿ.ಟಿ.ದೇವೇಗೌಡ 'ಪ್ರಜಾವಾಣಿ'ಗೆ ತಿಳಿಸಿದರು.



ಪತ್ನಿ ಲಲಿತಾ ದೇವೇಗೌಡ ಅವರನ್ನು ಕಣಕ್ಕಿಳಿಸುವಂತೆ ಜೆಡಿಎಸ್‌ನ ಕೆಲವರು ಕೇಳಿದರು. ಕುಟುಂಬದ ಯಾರೂ, ಯಾವುದೇ ಪಕ್ಷದಿಂದ ಮೇಲ್ಮನೆಗೆ ಸ್ಪರ್ಧಿಸಲ್ಲ

ಜಿ.ಟಿ.ದೇವೇಗೌಡ, ಜೆಡಿಎಸ್ ಶಾಸಕ



ಯಾರನ್ನೂ ಅವಮಾನಿಸುವ ಉದ್ದೇಶ ಇಲ್ಲ. ಐದಾರು ಆಕಾಂಕ್ಷಿಗಳಿದ್ದು, 2–3 ದಿನಗಳಲ್ಲಿ ಅಂತಿಮಗೊಳಿಸುತ್ತೇವೆ

ಸಾ.ರಾ.ಮಹೇಶ್, ಜೆಡಿಎಸ್ ಶಾಸಕ

ಲಕ್ಷ್ಮಿ ಹೆಬ್ಬಾಳಕರ ಸಹೋದರನಿಗೆ ಕಾಂಗ್ರೆಸ್ ಟಿಕೆಟ್: ಸತೀಶ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಜಿಲ್ಲೆಯ ಸ್ಥಳೀಯ ಸಂಸ್ಥೆಗಳಿಂದ ವಿಧಾನ-ಪರಿಷತ್‌ಗೆ ನಡೆಯಲಿರುವ ಚುನಾವಣೆಯಲ್ಲಿ ಚನ್ನರಾಜ ಹಟ್ಟಿಹೊಳಿ ಅವರನ್ನು ಪಕ್ಷದ ಅಭ್ಯರ್ಥಿಯನ್ನಾಗಿಸಲು ವರಿಷ್ಠರು ಹಾಗೂ ಜಿಲ್ಲೆಯ ಎಲ್ಲ ಕಾಂಗ್ರೆಸ್ ನಾಯಕರು ತೀರ್ಮಾನಿಸಿದ್ದೇವೆ. ಅಧಿಕೃತವಾಗಿ ಪ್ರಕಟವಾದ ನಂತರ, ನ.22ರಂದು ಅವರು ಸರಳ ರೀತಿಯಲ್ಲಿ ನಾಮಪತ್ರ ಸಲ್ಲಿಸಲಿದ್ದಾರೆ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ತಿಳಿಸಿದರು.

ಜಿಲ್ಲೆಯ ಯಮಕನಮರಡಿಯ ಹುಣಸಿಕೊಳ್ಳ ಮಠದ ಸಮುದಾಯ ಭವನದಲ್ಲಿ ಬುಧವಾರ ನಡೆದ ಯಮಕನಮರಡಿ ಮತಕ್ಷೇತ್ರದ ಗ್ರಾಮ ಪಂಚಾಯಿತಿ ಸದಸ್ಯರ ಸಭೆಯಲ್ಲಿ ಪ್ರಚಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ಒಂದು ಸ್ಥಾನಕ್ಕಾಗಿ ಮಾತ್ರ ಸ್ಪರ್ಧಿಸಲು ಪಕ್ಷ ತೀರ್ಮಾನಿಸಿದೆ. ಗೆಲ್ಲುವ ಅವಕಾಶವೂ ಇದೆ' ಎಂದರು.

'ಕಳೆದ ವಿಧಾನಪರಿಷತ್ ಚುನಾವಣೆಯಲ್ಲಿ ನಾಲ್ಕೂವರೆ ಸಾವಿರಕ್ಕಿಂತ ಹೆಚ್ಚು ಮತಗಳನ್ನು ಪಡೆದರೂ ಕಾಂಗ್ರೆಸ್ ಅಭ್ಯರ್ಥಿ ಸೋಲಬೇಕಾಯಿತು. ಮತಗಳ ವಿಭಜನೆ ಆಗ ಕಾರಣವಾಯಿತು. ಹೀಗಾಗಿ, ಈ ಬಾರಿ ಒಬ್ಬರೇ ಅಭ್ಯರ್ಥಿ ಕಣಕ್ಕಿಳಿಸುತ್ತಿದ್ದೇವೆ. 3 ಸಾವಿರಕ್ಕಿಂತ ಹೆಚ್ಚು ಮತಗಳನ್ನು (ಪ್ರಥಮ ಪ್ರಾಶಸ್ತ್ಯ) ಪಡೆದರೆ ನಾವು ಜಯ ಗಳಿಸಲಿದ್ದೇವೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಚನ್ನರಾಜ, ಕೆಪಿಸಿಸಿ ವಕ್ತಾರರೂ ಆಗಿರುವ ಗ್ರಾಮೀಣ ಕ್ಷೇತ್ರದ ಶಾಸಕಿ ಲಕ್ಷ್ಮಿ ಹೆಬ್ಬಾಳಕರ ಸಹೋದರ.



ಸತೀಶ ಜಾರಕಿಹೊಳಿ



ಚನ್ನರಾಜ ಹಟ್ಟಿಹೊಳಿ

ಮತ ವಿಭಜನೆ:

ಇದಕ್ಕೂ ಮುನ್ನ ಬೆಳಗಾವಿಯಲ್ಲಿ ಮಾತನಾಡಿದ್ದ ಸತೀಶ, 'ಈ ಚುನಾವಣೆಯಲ್ಲಿ ಲಖನ್ ಜಾರಕಿಹೊಳಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದರೆ ಕಾಂಗ್ರೆಸ್ ಮತ್ತು ಬಿಜೆಪಿಯಲ್ಲಿ ಮತ ವಿಭಜನೆ ಆಗುವ ಸಾಧ್ಯತೆ ಇದೆ' ಎಂದರು.

'ಲಖನ್ ಸದ್ಯ ಬಿಜೆಪಿ ಜೊತೆ ಗುರುತಿಸಿಕೊಂಡಿದ್ದಾರೆ. ಅವರು ನಮ್ಮೊಂದಿಗೆ ಇಲ್ಲ. ಯಾರ್‍ಯಾರು ಸ್ಪರ್ಧಿಸುತ್ತಾರೆ ಎನ್ನುವುದು ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾದ ನ.23ರ ನಂತರ ಸ್ಪಷ್ಟವಾಗಲಿದೆ' ಎಂದು ಪ್ರತಿಕ್ರಿಯಿಸಿದರು.

ಮಹಾನಗರಪಾಲಿಕೆ ಚುನಾವಣೆಯಲ್ಲಿ ಹೆಚ್ಚಿನ ಸ್ಥಾನ ಪಡೆಯದಿರುವ ಕುರಿತು ಬಿಡುಗಡೆ ಮಾಡಿರುವ ವಿಡಿಯೊ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ವಿಡಿಯೊದಲ್ಲಿ ನಾನು ಯಾರ ಹೆಸರನ್ನೂ ಪ್ರಸ್ತಾಪಿಸಿಲ್ಲ. ನೋವನ್ನು ಹೇಳಿದ್ದೇನೆ. ಪದೇ ಪದೇ ಹೀಗಾದರೆ ಪಕ್ಷ ಕಟ್ಟುವುದು ಕಷ್ಟ. ನೋಡಿದ್ದು, ಕೇಳಿದ್ದನ್ನು ಮಾತನಾಡಿದ್ದೇನೆ. ಪಾಲಿಕೆಯಲ್ಲಿ ಇನ್ನೂ 10 ಸ್ಥಾನ ಗೆಲ್ಲಬಹುದಿತ್ತು. ಲೋಕಸಭಾ ಕ್ಷೇತ್ರದ ಉಪ ಚುನಾವಣೆಯಲ್ಲೂ ಇನ್ನೂ 10ಸಾವಿರ ಮತ ಗಳಿಸಬಹುದಿತ್ತು. ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳಬೇಕಾಗುತ್ತದೆ. ಇಲ್ಲಿನ ಬೆಳವಣಿಗೆಗಳನ್ನು, ವೀಕ್ಷಕರು ಸಹ ಪಕ್ಷದ ನಾಯಕರ ಗಮನಕ್ಕೆ ತಂದಿದ್ದಾರೆ' ಎಂದು ಪ್ರತಿಕ್ರಿಯಿಸಿದರು.

ಬಿಜೆಪಿ ಮುಖಂಡರ ಅಸಮಾಧಾನ

ಖಾನಾಪುರ: ಪಟ್ಟಣದಲ್ಲಿ ಬುಧವಾರ ನಡೆದ ವಿಧಾನ ಪರಿಷತ್ ಚುನಾವಣೆಯ ಪ್ರಚಾರ ಸಭೆಯಲ್ಲಿ ಮಾಜಿ ಶಾಸಕ, ಎಂಇಎಸ್ ಮುಖಂಡ ಅರವಿಂದ ಪಾಟೀಲ ಮತ್ತು ಶಾಸಕ ರಮೇಶ ಜಾರಕಿಹೊಳಿ ಭಾಗವಹಿಸಿ ಬಿಜೆಪಿ ಅಭ್ಯರ್ಥಿಗಳ ಪರ ಮತಯಾಚಿಸಿದ್ದು ತಾಲ್ಲೂಕಿನ ಕೆಲ ಬಿಜೆಪಿ ಮುಖಂಡರ ಅಸಮಾಧಾನಕ್ಕೆ ಕಾರಣವಾಗಿದೆ.

ತಾಲ್ಲೂಕಿನ ಹಲವು ಗ್ರಾಮ ಪಂಚಾಯ್ತಿಗಳ ಅಧ್ಯಕ್ಷರು, ಸದಸ್ಯರು ಮತ್ತು ಸ್ಥಳೀಯ ಪಟ್ಟಣ ಪಂಚಾಯ್ತಿ ಸದಸ್ಯರು ಸಭೆಯಲ್ಲಿ ಭಾಗವಹಿಸಿದ್ದರು. ಆದರೆ ಎಂಇಎಸ್ ಮುಖಂಡ ಅರವಿಂದ ಪಾಟೀಲ ಅವರು ಸಭೆಯ ನೇತೃತ್ವ ವಹಿಸಿದ್ದಕ್ಕಾಗಿ ಬಿಜೆಪಿಯ ತಾಲ್ಲೂಕು ಮುಖಂಡರು ಸಭೆಯಿಂದ ದೂರವುಳಿದಿದ್ದರು.

ಸಭೆಯಲ್ಲಿ ಮಾತನಾಡಿದ ಜಾರಕಿಹೊಳಿ, ಚುನಾವಣೆಗೆ ಬಿಜೆಪಿಯಿಂದ ಹಾಲಿ ಸದಸ್ಯ ಮಹಾಂತೇಶ ಕವಟಗಿಮಠ ಮತ್ತು ತಮ್ಮ ಸಹೋದರ ಲಖನ್ ಜಾರಕಿಹೊಳಿ ಸ್ಪರ್ಧಿ-ಸಲಿದ್ದು, ಇವರಿಬ್ಬರಿಗೂ ಮತ ನೀಡುವಂತೆ ಕೋರಿದರು. ಮಾಜಿ ಶಾಸಕ ಅರವಿಂದ ಪಾಟೀಲ, ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳಿಗೆ ಮತ ನೀಡುವಂತೆ ಮನವಿ ಮಾಡಿದರು.


ಕುಟುಂಬ ರಾಜಕಾರಣದ ಸುತ್ತ 'ದಳ' ಗಿರಕಿ

• ಕೆ.ಎಸ್.ಸುನಿಲ್

ಹಾಸನ: ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಯಲ್ಲೂ ಜೆಡಿಎಸ್ ಕುಟುಂಬ ರಾಜಕಾರಣಕ್ಕೆ ಜೋತು ಬಿದ್ದಿದೆ.

ರಾಜ್ಯಸಭೆ ಸದಸ್ಯ ಎಚ್.ಡಿ. ದೇವೇಗೌಡರ ಕುಟುಂಬದ ಮತ್ತೊಂದು ಕುಡಿ, ಶಾಸಕ ಎಚ್.ಡಿ.ರೇವಣ್ಣ ಪುತ್ರ ಡಾ.ಸೂರಜ್ ಜೆಡಿಎಸ್ ಅಭ್ಯರ್ಥಿಯಾಗಲಿದ್ದಾರೆ.

ದೇವೇಗೌಡರ ಮಕ್ಕಳಾದ ಎಚ್.ಡಿ.ರೇವಣ್ಣ, ಎಚ್.ಡಿ.ಕುಮಾರಸ್ವಾಮಿ ಶಾಸಕರು, ಮೊಮ್ಮಗ ಪ್ರಜ್ವಲ್ ರೇವಣ್ಣ ಸಂಸದ. ಮತ್ತೊಬ್ಬ ಸೊಸೆ ಭವಾನಿ ರೇವಣ್ಣ ಜಿಲ್ಲಾ ಪಂಚಾಯಿತಿ ಸದಸ್ಯರಾಗಿದ್ದರು. ನಿಖಿಲ್ ಕುಮಾರಸ್ವಾಮಿ ಮಂಡ್ಯದಲ್ಲಿ ಚುನಾವಣೆಗೆ ನಿಂತು ಸೋತಿದ್ದರು. ಲೋಕಸಭೆ ಚುನಾವಣೆಯಲ್ಲಿ ತವರು ಕ್ಷೇತ್ರವನ್ನು ಮೊಮ್ಮಗನಿಗೆ ಬಿಟ್ಟುಕೊಟ್ಟ ದೇವೇಗೌಡರು ತುಮಕೂರಿನಲ್ಲಿ ನಿಂತು ಸೋಲುಂಡ ಬಳಿಕ ರಾಜ್ಯಸಭೆಗೆ ಆಯ್ಕೆಯಾಗಿದ್ದರು.



ಎಚ್.ಡಿ.ರೇವಣ್ಣ

ಚುನಾವಣೆಯಲ್ಲಿ ದೇವೇಗೌಡರ ಕುಟುಂಬದವರೇ ಸ್ಪರ್ಧಿಸಲಿದ್ದಾರೆ ಎಂದು ಗೊತ್ತಾಗುತ್ತಿದ್ದಂತೆಯೇ ಅಸಮಾಧಾನ ಶುರುವಾಗಿತ್ತು. ಗೌಡರು ಹಿರಿಯರಾಗಿರುವುದರಿಂದ ವಿರೋಧಿಸುತ್ತಿಲ್ಲ ಎಂದು ಮುಖಂಡರೇ ಹೇಳುತ್ತಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಪರ, ವಿರೋಧ ಚರ್ಚೆ ಶುರುವಾಗಿದೆ. ಪಕ್ಷ ಸಂಘಟನೆಗೆ ಶ್ರಮಿಸಿದವರಿಗೆ ಅವಕಾಶ ನೀಡಬೇಕಿತ್ತು ಎನ್ನುವ ಅಭಿಪ್ರಾಯವೂ ಕೇಳಿ ಬಂದಿದೆ.

'ಸಂವಿಧಾನದಲ್ಲಿ ನಿರ್ದಿಷ್ಟವಾಗಿ ಇಂಥವರೇ ರಾಜಕೀಯಕ್ಕೆ ಬರಬೇಕು ಎಂದು ಗೆರೆ ಎಳೆಯಲಾಗಿದೆಯೇ?' ಎನ್ನುವ ಮೂಲಕ ಎಚ್.ಡಿ.ಕುಮಾರಸ್ವಾಮಿ ಕುಟುಂಬ ರಾಜಕಾರಣವನ್ನು ಸಮರ್ಥಿಸಿಕೊಂಡಿದ್ದಾರೆ.

ಭವಾನಿ ರೇವಣ್ಣ ಹೆಸರು ಸ್ಪರ್ಧಾಕಾಂಕ್ಷಿಗಳ ಪಟ್ಟಿಯಲ್ಲಿ ಮುಂಚೂಣಿಯಲ್ಲಿತ್ತಾದರೂ ಕುಟುಂಬ ಸದಸ್ಯರು ಸೂರಜ್‌ಗೆ ನೆಲೆ ಕಲ್ಪಿಸಲೆಂದೇ ಪರಿಷತ್ ಚುನಾವಣೆಗೆ ಅಖಾಡ ಸಜ್ಜುಗೊಳಿಸಲು ತೀರ್ಮಾನಿಸಿದ್ದಾರೆ.

ಕಳೆದ ಬಾರಿಯೇ ಭವಾನಿ ಅವರು ಸ್ಪರ್ಧೆಗಿಳಿಯಬೇಕು ಎಂಬ ಒತ್ತಡವಿತ್ತು. ಆದರೆ, ಪಟೇಲ್ ಶಿವರಾಂ ಪರ ದೇವೇಗೌಡರು ಒಲವು ವ್ಯಕ್ತಪಡಿಸಿದ್ದರು.

ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಅಭಿಮಾನಿಗಳ ಸಂಘವುಳ್ಳ ಸೂರಜ್ ಎಚ್‌ಡಿಸಿಸಿ ಬ್ಯಾಂಕ್ ನಿರ್ದೇಶಕರು. ಭವಾನಿ, ಸೂರಜ್ ಹೆಸರನ್ನು ಮುಂಚೂಣಿಗೆ ತಂದು ವಿಧಾಸಭಾ ಕ್ಷೇತ್ರವಾರು ಸಭೆ ಆಯೋಜಿಸುತ್ತಿರುವುದರಿಂದ ಬೆಂಬಲ ವ್ಯಕ್ತವಾಗುವ ಸಾಧ್ಯತೆ ಇದೆ.

ಕುಟುಂಬ ರಾಜಕಾರಣ ಆರೋಪದ ಮಧ್ಯೆಯೇ ಸೂರಜ್ ಸ್ಪರ್ಧೆಯನ್ನು ಸಮರ್ಥಿಸಿಕೊಳ್ಳಬಹುದು ಎಂಬುದು ಪಕ್ಷದೊಳಗಿನ ಲೆಕ್ಕಾಚಾರ.

ಡಾ.ಸೂರಜ್ ಜೆಡಿಎಸ್ ಅಭ್ಯರ್ಥಿ

ವಿಧಾನ ಪರಿಷತ್ ಚುನಾವಣೆಗೆ ನ. 19ರಂದು ಜೆಡಿಎಸ್ ಅಭ್ಯರ್ಥಿಯಾಗಿ ಎಚ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಡಾ.ಸೂರಜ್ ರೇವಣ್ಣ ನಾಮಪತ್ರ ಸಲ್ಲಿಸಲಿದ್ದಾರೆ. ದೇವೇಗೌಡ, ಎಚ್.ಡಿ. ರೇವಣ್ಣ, ಕಿರಿಯ ಸಹೋದರ ಪ್ರಜ್ವಲ್ ಸ್ಪರ್ಧಿಸಿದ ಚುನಾವಣೆಗಳಲ್ಲಿ ಸಕ್ರಿಯವಾಗಿ ಪ್ರಚಾರದಲ್ಲಿ ಸೂರಜ್ ತೊಡಗಿದ್ದಾರೆ. ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಿರುವ ರೇವಣ್ಣ, ವಿಧಾನಸಭಾ ಕ್ಷೇತ್ರವಾರು ಅಭಿಪ್ರಾಯ ಸಂಗ್ರಹ ನೆಪದಲ್ಲಿ ಪ್ರಚಾರವನ್ನೂ ಮಾಡುತ್ತಿದ್ದಾರೆ.

ಭವಾನಿ ಅವರಿಗೆ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡುವ ಬಗ್ಗೆ ನಿರ್ಧರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.



ಸೂರಜ್ ರೇವಣ್ಣ

ಬಿರುಸು ಪಡೆಯದ ಚುನಾವಣೆ

ಬಳ್ಳಾರಿ – ವಿಜಯನಗರ ಸ್ಥಳೀಯ ಸಂಸ್ಥೆಗಳ ಕ್ಷೇತ್ರ • ಟಿಕೆಟ್‌ಗೆ ಪೈಪೋಟಿ ಇಲ್ಲ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ವಿಧಾನ ಪರಿಷತ್‌ಗೆ ಬಳ್ಳಾರಿ ಮತ್ತು ವಿಜಯನಗರ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಡಿಸೆಂಬರ್ 10ರಂದು ನಡೆಯುವ ಚುನಾವಣೆಗೆ 25 ದಿನಗಳು ಮಾತ್ರ ಉಳಿದಿದ್ದರೂ ಇನ್ನೂ 'ಖದರ್' ಬಂದಿಲ್ಲ. ಮಂಗಳವಾರದಿಂದ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭವಾದರೂ, ರಾಜಕೀಯ ಪಕ್ಷಗಳು ಮತ್ತು ಅವುಗಳ ನಾಯಕರು ಮೈಕೊಡವಿಕೊಂಡು ಎದ್ದಿಲ್ಲ...

ಮೇಲ್ಮನೆ ಚುನಾವಣೆ ಆಗಿದ್ದರಿಂದಲೋ ಏನೋ ಅಷ್ಟೊಂದು ಉತ್ಸಾಹ ಕಾಣುತ್ತಿಲ್ಲ. ಬಿಜೆಪಿ, ಕಾಂಗ್ರೆಸ್ ಟಿಕೆಟ್‌ಗೆ ಪೈಪೋಟಿ ಕಂಡುಬರುತ್ತಿಲ್ಲ. 'ಟಿಕೆಟ್ ಕೇಳೋಣ, ಸಿಕ್ಕರೆ ಚೊಲೋ, ಸಿಗದಿದ್ದರೆ ಇನ್ನೂ ಚೊಲೋ' ಎಂಬ ಭಾವನೆ ಆಕಾಂಕ್ಷಿಗಳಲ್ಲಿ ಇದ್ದಂತಿದೆ. 'ಚುನಾವಣೆಗೆ ಸ್ಪರ್ಧಿಸಿ, ಜೇಬಿಗೆ ಹೊರೆ ಮಾಡಿಕೊಳ್ಳುವುದು ಬೇಡ' ಎಂಬ ಲೆಕ್ಕಾಚಾರ ಹಲವರಿಗೆ ಇರಬಹುದು ಎಂಬ ಮಾತುಗಳು ಕೇಳಿಬರುತ್ತಿವೆ.

ಬಳ್ಳಾರಿ– ವಿಜಯನಗರ ಸ್ಥಳೀಯ ಸಂಸ್ಥೆಗಳ ಕ್ಷೇತ್ರವನ್ನು 2015ರಿಂದ ವಿಧಾನ ಪರಿಷತ್ತಿನಲ್ಲಿ ಪ್ರತಿನಿಧಿಸಿರುವ ಕಾಂಗ್ರೆಸ್‌ನ ಕೆ.ಸಿ. ಕೊಂಡಯ್ಯ ಈ ಮಾತಿಗೆ ಅಪವಾದ. ಆರು ತಿಂಗಳು ಮೊದಲೇ 'ಅಖಾಡ'ಕ್ಕೆ ಇಳಿದಿರುವ ಅವರು, ಸದ್ದುಗದ್ದಲವಿಲ್ಲದೆ 100ಕ್ಕೂ ಹೆಚ್ಚು ಗ್ರಾಮ ಪಂಚಾಯಿತಿ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ಪ್ರಚಾರ ಮುಗಿಸಿದ್ದಾರೆ.

ಗಣಿ ಉದ್ಯಮಿ, ಮರಾಠ ಸಮಾಜದ ಅನಿಲ್ ಲಾಡ್, ವಿಧಾನ-ಪರಿಷತ್‌ನ ಮಾಜಿ ಸದಸ್ಯ, ಕುರುಬ ಜಾತಿಗೆ ಸೇರಿದ ಕೆ.ಎಸ್.ಎಲ್ ಸ್ವಾಮಿ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ, ದಲಿತ ಸಮುದಾಯದ ಮುಂಡರಗಿ ನಾಗರಾಜ್ ಕಾಂಗ್ರೆಸ್ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿದ್ದಾರೆ. ಕುರುಬರು ಹಾಗೂ ದಲಿತರು ತಮ್ಮ ಸಮುದಾಯಕ್ಕೇ ಟಿಕೆಟ್ ಕೊಡಬೇಕು ಎಂದು ಕೇಳಿದ್ದಾರೆ. ಕುರುಬರಲ್ಲಿ ಪ್ರಬಲ ಅಭ್ಯರ್ಥಿಗಳು ಇಲ್ಲ. ದಲಿತ ಸಮಾಜಕ್ಕೆ ಸೇರಿದ ಭೀಮಾನಾಯ್ಕ್ ಹಗರಿ ಮತ್ತು ಪರಮೇಶ್ವರ ನಾಯ್ಕ್ ಹಡಗಲಿ ವಿಧಾನಸಭಾ ಕ್ಷೇತ್ರ ಪ್ರತಿನಿಧಿಸಿದ್ದಾರೆ. ಇದರಿಂದಾಗಿ ಈ ಜಾತಿಗೆ ಟಿಕೆಟ್ ಕೊಡುವ ಸಾಧ್ಯತೆ ಕಡಿಮೆ ಎಂದೂ ಕಾಂಗ್ರೆಸ್ ವಲಯದಲ್ಲಿ ಹೇಳಲಾಗುತ್ತಿದೆ.

ಕೊಂಡಯ್ಯನವರ ವಿರುದ್ಧ ಸ್ಪರ್ಧಿಸಿ ಸೋತ, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಚನ್ನಬಸವನಗೌಡ ಪಾಟೀಲ್, ಗಣಿ ಉದ್ಯಮಿ ಸತೀಶ್ ರೆಡ್ಡಿ, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ದಮ್ಮೂರು ಶೇಖರ್ ಮತ್ತು ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ರಾಮಲಿಂಗಪ್ಪ ಅವರು ಬಿಜೆಪಿ ಟಿಕೆಟ್‌ಗಾಗಿ ಪ್ರಯತ್ನ ನಡೆಸಿದ್ದಾರೆ.

ಚನ್ನಬಸವನಗೌಡ, ಸತೀಶ್‌ರೆಡ್ಡಿ ಲಿಂಗಾಯತರು. ದಮ್ಮೂರು ಶೇಖರ್ ಹಾಗೂ ರಾಮಲಿಂಗಪ್ಪ ಕುರುಬರು. ಈ ಕ್ಷೇತ್ರದಲ್ಲಿ ವಾಲ್ಮೀಕಿ, ದಲಿತರು, ಲಿಂಗಾಯತರು ಮತ್ತು ಕುರುಬ ಜಾತಿ ಅನುಕ್ರಮವಾಗಿ ಪ್ರಬಲವಾಗಿವೆ. ರಾಯಚೂರಿನಲ್ಲಿ ಕುರುಬರಿಗೆ ಟಿಕೆಟ್ ಕೊಟ್ಟರೆ ಇಲ್ಲಿ ಲಿಂಗಾಯತರಿಗೆ, ಅಲ್ಲಿ ಲಿಂಗಾಯತರನ್ನು ಪರಿಗಣಿಸಿದರೆ, ಇಲ್ಲಿ ಕುರುಬರಿಗೆ ಟಿಕೆಟ್ ಸಿಗಲಿದೆ ಎಂದು ಬಿಜೆಪಿಯಲ್ಲಿ ವಿಶ್ಲೇಷಿಸಲಾಗುತ್ತಿದೆ.

ಜಾತಿ ನೆಲೆಯಲ್ಲಿ ನೋಡಿದರೆ ಕೊಂಡಯ್ಯ ಅತೀ ಕಡಿಮೆ ಸಂಖ್ಯೆಯಲ್ಲಿರುವ ನೇಕಾರ ಪದ್ಮಸಾಲಿ ಸಮಾಜದವರು. ಆದರೂ ಇಲ್ಲಿ ಗೆಲ್ಲುತ್ತಿದ್ದಾರೆ.

'ಇದಕ್ಕೆ ಎಲ್ಲ ಜಾತಿ, ಪಕ್ಷಗಳು ಮತ್ತು ನಾಯಕರ ಜತೆ ಅವರ ಒಡನಾಟವೇ ಕಾರಣ. ಅವರ ಮನೆಗೆ ಯಾರೇ ಹೋದರೂ ಯಾವ ಪಕ್ಷದವರೆಂದು ಕೇಳದೆ ಕೆಲಸ ಮಾಡಿಕೊಡುತ್ತಾರೆ' ಎನ್ನುವ ಮಾತನ್ನು ಅವರ ವಿರೋಧಿಗಳೂ ಹೇಳುತ್ತಾರೆ.

2016ರ ಪರಿಷತ್ ಚುನಾವಣೆಯಲ್ಲಿ ಚನ್ನಬಸವನಗೌಡ ಪಾಟೀಲ್ ವಿರುದ್ಧ ಕೊಂಡಯ್ಯ 3,600 ಮತಗಳ ಅಂತರದಿಂದ ಆಯ್ಕೆ ಆಗಿದ್ದರು. ಆಗ, ಅವರಿಗೆ ಕಾಂಗ್ರೆಸ್ ಟಿಕೆಟ್ ಸಿಗುವುದೋ, ಇಲ್ಲವೋ ಎಂಬ ವಾತಾವರಣವಿತ್ತು. ಕಾಂಗ್ರೆಸ್ ಹಿರಿಯ ಮುಖಂಡ ಮಲ್ಲಿಕಾರ್ಜುನ ಖರ್ಗೆ ಹಿಡಿದ ಪಟ್ಟಿನಿಂದಾಗಿ ಕೊನೆ ಗಳಿಗೆಯಲ್ಲಿ ಟಿಕೆಟ್ ಸಿಕ್ಕಿತು. ಈ ಸಲವೂ ಬಹುತೇಕ ಅವರಿಗೇ ಕಾಂಗ್ರೆಸ್ ಟಿಕೆಟ್ ಎನ್ನುವ ವಾತಾವರಣವಿದೆ. ಆದರೂ, ಕಾಂಗ್ರೆಸ್ ಹೈಕಮಾಂಡ್ ಹೇಗೆ ಯೋಚಿಸುವುದೋ ಎಂದು ಹೇಳುವುದು ಕಷ್ಟ.

4,663 ಮತದಾರರು

11 ವಿಧಾನಸಭೆ ಮತ್ತು 3 ಲೋಕಸಭಾ ಕ್ಷೇತ್ರಗಳನ್ನು ಒಳಗೊಂಡಿರುವ ಬಳ್ಳಾರಿ– ವಿಜಯನಗರ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಲ್ಲಿ 235 ಗ್ರಾಮ ಪಂಚಾಯಿತಿ, ನಾಲ್ಕು ಪುರಸಭೆ, ಆರು ಪಟ್ಟಣ ಪಂಚಾಯಿತಿ, ಒಂದು ನಗರಸಭೆ, ಒಂದು ನಗರಪಾಲಿಕೆ ಸೇರಿದಂತೆ ಒಟ್ಟು 247 ಸ್ಥಳೀಯ ಸಂಸ್ಥೆಗಳಿವೆ.

ಒಟ್ಟು 4,663 ಮತದಾರರಿದ್ದು, 2,194 ಪುರುಷರು ಹಾಗೂ 2,468 ಮಹಿಳೆಯರಿದ್ದಾರೆ.

ಮುಖ್ಯಾಂಶಗಳು

- ರಾಜಕೀಯ ಪಕ್ಷಗಳಲ್ಲಿ ಕಾಣದ ಉತ್ಸಾಹ
- ಆರು ತಿಂಗಳು ಮೊದಲೇ 'ಅಖಾಡ'ಕ್ಕೆ ಇಳಿದ ಕೆ.ಸಿ.ಕೊಂಡಯ್ಯ



ಕೆ.ಸಿ. ಕೊಂಡಯ್ಯ



ಉಡುಪಿಯ ಕೃಷ್ಣ ಮಠದಲ್ಲಿ ಬುಧವಾರ ತೆಪ್ಪೋತ್ಸವದೊಂದಿಗೆ 2ನೇ ದಿನದ ಲಕ್ಷ ದೀಪೋತ್ಸವ ಹಾಗೂ ರಥೋತ್ಸವ ನಡೆಯಿತು.

ಕೃಷ್ಣಮಠದಲ್ಲಿ ಲಕ್ಷ ದೀಪೋತ್ಸವ ಸಂಭ್ರಮ

ಉಡುಪಿ: ಇಲ್ಲಿನ ಕೃಷ್ಣ ಮಠದಲ್ಲಿ ಬುಧವಾರ ತೆಪ್ಪೋತ್ಸವದೊಂದಿಗೆ 2ನೇ ದಿನದ ಲಕ್ಷ ದೀಪೋತ್ಸವ ಹಾಗೂ ರಥೋತ್ಸವ ನಡೆಯಿತು. ಪರ್ಯಾಯ ಪೀಠಾಧೀಶರಾದ ಈಶಪ್ರಿಯ ತೀರ್ಥ ಸ್ವಾಮೀಜಿ, ಕೃಷ್ಣಾಪುರ ಮಠದ ವಿದ್ಯಾ ಸಾಗರ ತೀರ್ಥ ಸ್ವಾಮೀಜಿ, ಕಾಣಿಯೂರು ಮಠದ ವಿದ್ಯಾವಲ್ಲಭ ತೀರ್ಥ ಸ್ವಾಮೀಜಿ, ಶೀರೂರು ಮಠದ ವೇದವರ್ಧನ ತೀರ್ಥ ಸ್ವಾಮೀಜಿ ಧಾರ್ಮಿಕ ವಿಧಿ ವಿಧಾನಗಳಲ್ಲಿ ಪಾಲ್ಗೊಂಡಿದ್ದರು.

ಉತ್ಥಾನ ದ್ವಾದಶಿ ನಿಮಿತ್ತ ಕೃಷ್ಣ-ಮಠದಲ್ಲಿ ನ.19ರವರೆಗೆ ತೆಪ್ಪೋತ್ಸವ, ಲಕ್ಷ ದೀಪೋತ್ಸವ ಹಾಗೂ ರಥೋತ್ಸವ ನಡೆಯಲಿದೆ. ರಥಬೀದಿಯ ಸುತ್ತಲೂ ಮರದ ದಳಿಗಳಲ್ಲಿ ದೀಪಗಳನ್ನು ಬೆಳಗಿಸಲಾಗುತ್ತದೆ. ರಾತ್ರಿಯಾಗುತ್ತಿದ್ದಂತೆ ರಥಬೀದಿ ಹಣತೆಗಳಿಂದ ಕಂಗೊಳಿಸುತ್ತದೆ. 300ಕ್ಕೂ ಅಧಿಕ ಗೂಡುದೀಪಗಳ ಅಲಂಕಾರ ರಥಬೀದಿಯ ಅಂದವನ್ನು ಹೆಚ್ಚಿಸುತ್ತದೆ.

ದ್ವಿತೀಯ ಪಿಯು: ಮಧ್ಯ ವಾರ್ಷಿಕ ಪರೀಕ್ಷೆ ಮುಂದೂಡುವ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯುಸಿ ತರಗತಿಯ ವಿದ್ಯಾರ್ಥಿಗಳಿಗೆ ಪದವಿಪೂರ್ವ ಶಿಕ್ಷಣ ಇಲಾಖೆ ಇದೇ 29ರಿಂದ ನಡೆಸಲು ಉದ್ದೇಶಿಸಿದ್ದ ರಾಜ್ಯಮಟ್ಟದ ಮಧ್ಯ ವಾರ್ಷಿಕ ಪರೀಕ್ಷೆಯನ್ನು ಮುಂದೂಡುವ ಸಾಧ್ಯತೆ ಇದೆ.

ಈ ಪರೀಕ್ಷೆಯನ್ನು ಆತುರದಿಂದ ನಡೆಸಲಾಗುತ್ತಿದೆ ಮತ್ತು ಯಾವುದೇ ರೀತಿಯ ಪೂರ್ವಭಾವಿ ಸಿದ್ಧತೆಗಳನ್ನು ಕೈಗೊಳ್ಳದೆಯೇ ಅವೈಜ್ಞಾನಿಕವಾಗಿ ನಡೆ-ಸಲಾಗುತ್ತಿದೆ ಎಂದು ವಿಧಾನ ಪರಿಷತ್‌ನ ಬಿಜೆಪಿಯ ಸದಸ್ಯರು ಸೇರಿದಂತೆ ಹಲವು ಸಂಘಟನೆಗಳ ಮುಖಂಡರು ಆಕ್ಷೇಪ ವ್ಯಕ್ತಪಡಿಸಿದ್ದರು.

ಹೊಸ ವೇಳಾಪಟ್ಟಿ ಅನ್ವಯ ಡಿಸೆಂಬರ್ 13ರಿಂದ 24ರವರೆಗೆ ಪ್ರಥಮ ಹಾಗೂ ದ್ವಿತೀಯ ಪಿಯು ತರಗತಿಗಳಿಗೆ ಏಕಕಾಲಕ್ಕೆ ಮಧ್ಯಂತರ ಪರೀಕ್ಷೆಗಳನ್ನು ನಡೆಸಲು ಉದ್ದೇಶಿಸ-ಲಾಗಿದೆ.

ಕಾಲೇಜು ಹಂತದಲ್ಲೇ ಮೌಲ್ಯಮಾಪನ ಕಾರ್ಯ ಕೈಗೊಂಡು 'ಎಸ್‌ಎಟಿಎಸ್' ಪೋರ್ಟಲ್‌ನಲ್ಲಿ ವಿದ್ಯಾರ್ಥಿಗಳ ಅಂಕಗಳನ್ನು ಕಡ್ಡಾಯವಾಗಿ ನಮೂದಿಸುವಂತೆ ಪ್ರಾಂಶುಪಾಲರಿಗೆ ಸೂಚಿಸಲಾಗಿದೆ.

ಈ ಬಗ್ಗೆ ಬುಧವಾರ ಪದವಿಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರು ಎಲ್ಲ ಜಿಲ್ಲೆಗಳ ಉಪನಿರ್ದೇಶಕರ ಜತೆ ಸಭೆ ನಡೆಸಿ ವೇಳಾ ಪಟ್ಟಿಯ ಬಗ್ಗೆ ಚರ್ಚಿಸಿದ್ದಾರೆ. ಮಧ್ಯಂತರ ಪರೀಕ್ಷೆಗೆ ಸಂಬಂಧಿಸಿದಂತೆ ಇಲಾಖೆ ನಿಗದಿಪಡಿಸಿದ ಪಠ್ಯಕ್ರಮಗಳನ್ನು ಪೂರ್ಣಗೊಳಿಸಬೇಕು ಎಂದು ಸೂಚಿಸಲಾಗಿದೆ.

'ಪರೀಕ್ಷೆ ಮುಂದೂಡುವ ಬಗ್ಗೆ ಚರ್ಚೆಗಳಾಗಿವೆ. ಮುಂದೂಡುವ ಸಾಧ್ಯತೆ ಇದೆ. ಈ ಬಗ್ಗೆ ಗುರುವಾರ ಸ್ಪಷ್ಟ ನಿರ್ಧಾರ ಕೈಗೊಂಡು ಸುತ್ತೋಲೆ ಹೊರಡಿಸಲಾಗುವುದು' ಎಂದು ಪದವಿಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕಿ ಆರ್. ಸ್ನೇಹಲ್ ತಿಳಿಸಿದ್ದಾರೆ.

ವಿಶಿಷ್ಟ ದೂರದರ್ಶಕ ಬಳಸಿ ಗ್ರಹ ಪತ್ತೆ

ಅಹಮದಾಬಾದ್ ಫಿಸಿಕಲ್ ರಿಸರ್ಚ್ ಲ್ಯಾಬೊರೇಟರಿಯ ವಿಜ್ಞಾನಿಗಳ ಸಾಧನೆ

ಬೆಂಗಳೂರು (ಪಿಟಿಐ): ಅಹಮದಾಬಾದ್‌ನ ಫಿಸಿಕಲ್ ರಿಸರ್ಚ್ ಲ್ಯಾಬೊರೇಟರಿಯ (ಪಿಆರ್‌ಎಲ್) ವಿಜ್ಞಾನಿಗಳು ನಮ್ಮ ಸೌರಮಂಡಲದ ಗುರು ಗ್ರಹಕ್ಕಿಂತ ದೊಡ್ಡದಾಗಿರುವ, ಅನ್ಯ ಸೌರಮಂಡಲದ ಗ್ರಹವೊಂದನ್ನು ಪತ್ತೆ ಮಾಡಿದ್ದಾರೆ.

ಮೌಂಟ್ ಅಬುವಿನಲ್ಲಿ ಇರುವ ಪಿಆರ್‌ಎಲ್‌ನ 1.2 ಮೀಟರ್ ದೂರ-ದರ್ಶಕದಲ್ಲಿ, ಆಪ್ಟಿಕಲ್ ಫೈಬರ್‌ಫೆಡ್ ಸ್ಪೆಕ್ಟ್ರೊಗ್ರಾಫ್ (ಪರಸ್) ಅನ್ನು ಬಳಸಿಕೊಂಡು ಈ ಅನ್ಯ ಸೌರಮಂಡಲದ ಗ್ರಹವನ್ನು ಪತ್ತೆ ಮಾಡಲಾಗಿದೆ. ಪರಸ್ ಸ್ಪೆಕ್ಟ್ರೊಗ್ರಾಫ್ ಅನ್ನು ಬಳಸಿಕೊಂಡು ಆ ಗ್ರಹದ ಗಾತ್ರ ಮತ್ತು ದ್ರವ್ಯರಾಶಿಯನ್ನು ಲೆಕ್ಕ ಮಾಡಲಾಗಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಹೇಳಿದೆ.

ಭೂಮಿಯಿಂದ 725 ಜ್ಯೋತಿರ್ವರ್ಷಗಳಷ್ಟು ದೂರದಲ್ಲಿರುವ ನಕ್ಷತ್ರವನ್ನು ಈ ಗ್ರಹವು ಸುತ್ತುತ್ತಿದೆ. ಹೆನ್ರಿ ಡ್ರೇಪರ್‌ನ ಪಟ್ಟಿಯಲ್ಲಿ ಈ ನಕ್ಷತ್ರವನ್ನು ಎಚ್‌ಡಿ 82139 ಎಂದು ಹೆಸರಿಸಲಾಗಿದೆ. ಅದನ್ನು ಸುತ್ತುತ್ತಿರುವ ದೈತ್ಯ ಗ್ರಹವನ್ನು ಟಿಒಐ 1789ಬಿ ಎಂದು ಕರೆಯಲಾಗಿದೆ. ಟಿಒಐ 1789ಬಿ ಗ್ರಹದ ದ್ರವ್ಯರಾಶಿಯು, ನಮ್ಮ ಸೌರಮಂಡಲದ ಗುರು ಗ್ರಹದ ದ್ರವ್ಯರಾಶಿಗಿಂತ ಶೇ 70ರಷ್ಟು ಹೆಚ್ಚು. ಟಿಒಐ 1789ಬಿ ಗ್ರಹವು, ನಮ್ಮ ಗುರುಗ್ರಹಕ್ಕಿಂತ 1.4 ಪಟ್ಟು ಹೆಚ್ಚು ದೊಡ್ಡದು.

2020ರ ಡಿಸೆಂಬರ್‌ನಿಂದ 2021ರ ಮಾರ್ಚ್‌ವರೆಗೆ ನಡೆಸಿದ ಅಧ್ಯಯನದಲ್ಲಿ ಈ ಗ್ರಹದ ಗಾತ್ರ ಮತ್ತು ದ್ರವ್ಯರಾಶಿಯನ್ನು ಲೆಕ್ಕ ಹಾಕಲಾಗಿದೆ. ಜರ್ಮನಿಯ ಸ್ಪೆಕ್ಟ್ರೊಗ್ರಾಫ್ ಮತ್ತು ಪಿಆರ್‌ಎಲ್‌ನ 43 ಸೆಂ.ಮೀ.ನ ದೂರದರ್ಶಕವನ್ನು ಬಳಸಿಕೊಂಡು, ಪರಸ್ ಸ್ಪೆಕ್ಟ್ರೊಗ್ರಾಫ್‌ನಲ್ಲಿ ಲೆಕ್ಕಹಾಕಲಾದ ಗಾತ್ರ ಮತ್ತು ದ್ರವ್ಯರಾಶಿಯನ್ನು ದೃಢಪಡಿಸಿಕೊಳ್ಳಲಾಗಿದೆ ಎಂದು ಇಸ್ರೊ ಹೇಳಿದೆ.

ಟಿಒಐ 1789ಬಿ ಗ್ರಹವು, ಎಚ್‌ಡಿ 82139 ನಕ್ಷತ್ರವನ್ನು ಪ್ರತಿ 3.2 ದಿನಕ್ಕೊಮ್ಮೆ ಸುತ್ತಿಬರುತ್ತದೆ. ಅಲ್ಲದೆ ಈ ಗ್ರಹವು ನಕ್ಷತ್ರಕ್ಕೆ ಅತ್ಯಂತ ಸಮೀಪವಿದೆ. ನಮ್ಮ ಸೂರ್ಯ ಮತ್ತು ಬುಧ ಗ್ರಹದ ನಡುವಣ ಅಂತರದ 10ನೇ 1ರಷ್ಟು ದೂರವಷ್ಟೇ, ಈ ಗ್ರಹ ಮತ್ತು ನಕ್ಷತ್ರದ ನಡುವಿನ ಅಂತರ ಎಂದು ಇಸ್ರೊ ಹೇಳಿದೆ.

ಪರಸ್, ಭಾರತದಲ್ಲಿನ ಮೊದಲ ಆಪ್ಟಿಕಲ್ ಫೈಬರ್‌ಫೆಡ್ ಸ್ಪೆಕ್ಟ್ರೊಗ್ರಾಫ್ ಆಗಿದೆ. ಇದನ್ನು ಬಳಸಿಕೊಂಡು 2018ರಲ್ಲಿ, ಭೂಮಿಯಿಂದ 600 ಜ್ಯೋತಿರ್ವರ್ಷ-ಗಳಷ್ಟು ದೂರದಲ್ಲಿರುವ ಕೆ2–236ಬಿ ಎಂಬ ಅನ್ಯ ಸೌರಮಂಡಲದ ಗ್ರಹವನ್ನು ಪತ್ತೆ ಮಾಡಲಾಗಿತ್ತು.

ಮುಖ್ಯಾಂಶಗಳು

- ಆಪ್ಟಿಕಲ್ ಫೈಬರ್‌ಫೆಡ್ ಸ್ಪೆಕ್ಟ್ರೊಗ್ರಾಫ್ ಬಳಸಿಕೊಂಡು ಅಳತೆ ಕಾರ್ಯ
- 2018ರಲ್ಲಿಯೂ ಒಂದು ಗ್ರಹವನ್ನು ಪತ್ತೆ ಮಾಡಲಾಗಿತ್ತು

'ಎರಡೂ ರೀತಿಯ ಭಾರತ' ಹೊತ್ತಿಸಿದ ಕಿಡಿ

ಒಂದನೇ ಪುಟದಿಂದ...

ವೀರ್ ದಾಸ್ ಹೇಳಿದ್ದು

ದೇಶವನ್ನು ಅಪಮಾನಿಸುವುದು ನನ್ನ ಉದ್ದೇಶವಲ್ಲ. ಇದು ವಿಭಿನ್ನ ಕೆಲಸಗಳನ್ನು ಮಾಡುವ ಎರಡು ಪ್ರತ್ಯೇಕ ಭಾರತದ ದ್ವಂದ್ವದ ಕುರಿತಾದ ವಿಡಂಬನೆಯ ವಿಡಿಯೊ ಆಗಿದೆ. ಎಲ್ಲ ದೇಶಗಳಲ್ಲೂ ಒಳ್ಳೆಯದು ಮತ್ತು ಕೆಟ್ಟದ್ದು ಸಾಮಾನ್ಯ. ಇದೇನೂ ಗುಟ್ಟಲ್ಲ. ನಾವು ಶ್ರೇಷ್ಠರು ಎಂಬುದನ್ನು ಎಂದಿಗೂ ಮರೆಯಬಾರದು ಎಂದು ವೀಡಿಯೊ ಮನವಿ ಮಾಡುತ್ತದೆ. ನಮ್ಮನ್ನು ಶ್ರೇಷ್ಠರನ್ನಾಗಿಸುವುದರ ಮೇಲೆ ಗಮನ ಕೇಂದ್ರೀಕರಿ-ಸುವುದನ್ನು ಎಂದಿಗೂ ನಿಲ್ಲಿಸಬಾರದು ಎಂಬುದು ನನ್ನ ಮಾತಿನ ತಾತ್ಪರ್ಯ. ತಿರುಚಿದ ವಿಡಿಯೊಗಳನ್ನು ಹಂಚಿಕೊಳ್ಳಬೇಡಿ.

ದಾಸ್ ವಿರುದ್ಧ ದೂರು ದಾಖಲು

ವೀರ್ ದಾಸ್ ವಿರುದ್ಧ ಮುಂಬೈ ಹಾಗೂ ದೆಹಲಿಯ ಪೊಲೀಸ್ ಠಾಣೆಗಳಲ್ಲಿ ದೂರು ದಾಖಲಾಗಿದೆ. ದೆಹಲಿ ಬಿಜೆಪಿ ಘಟಕದ ಉಪಾಧ್ಯಕ್ಷ ಆದಿತ್ಯ ಝಾ ಹಾಗೂ ಮುಂಬೈ ವಕೀಲ ಅಶುತೋಷ್ ಜೆ ದುಬೆ ಅವರು ದೂರು ದಾಖಲಿಸಿದ್ದಾರೆ. ದಾಸ್ ಅವರು ಅಂತರರಾಷ್ಟ್ರೀಯ ವೇದಿಕೆಯಲ್ಲಿ ಭಾರತವನ್ನು ಹೀಯಾಳಿಸುವ ಹೇಳಿಕೆ ನೀಡುವ ಮೂಲಕ ದೇಶದ ವರ್ಚಸ್ಸಿಗೆ ಧಕ್ಕೆ ತಂದಿದ್ದಾರೆ ಎಂದು ಝಾ ಆರೋಪಿಸಿದ್ದಾರೆ.

ಸಿಬಲ್, ತರೂರ್, ಮೊಯಿತ್ರಾ ಬೆಂಬಲ

ಕಾಂಗ್ರೆಸ್ ಮುಖಂಡರಾದ ಕಪಿಲ್ ಸಿಬಲ್, ಶಶಿ ತರೂರ್, ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಅವರೂ ದಾಸ್ ಅವರ ಹೇಳಿಕೆಯನ್ನು ಸಮರ್ಥಿಸಿಕೊಂಡಿದ್ದಾರೆ. 'ಎರಡು ರೀತಿಯ ಭಾರತವಿದೆ ಎಂಬುದರಲ್ಲಿ ಅನುಮಾನವಿಲ್ಲ. ಒಬ್ಬ ಭಾರತೀಯನು ಇದರ ಬಗ್ಗೆ ಜಗತ್ತಿನ ಮುಂದೆ ಹೇಳುವುದುನ್ನು ನಾವು ಇಷ್ಟಪಡುವುದಿಲ್ಲ. ನಾವು ಅಸಹಿಷ್ಣುಗಳು ಮತ್ತು ಕಪಟಿಗಳು' ಎಂದು ಎಂದು ಸಿಬಲ್ ಟ್ವೀಟ್ ಮಾಡಿದ್ದಾರೆ.

ಲಕ್ಷಾಂತರ ಜನರ ಪರವಾಗಿ ವೀರ್ ದಾಸ್ ಮಾತನಾಡಿದ್ದಾರೆ ಎಂದು ಶಶಿ ತರೂರ್ ಹೇಳಿದ್ದಾರೆ. 'ಸ್ಟ್ಯಾಂಡ್‌ಅಪ್ ಎಂಬುದರ ನೈಜ ಅರ್ಥವನ್ನು ದಾಸ್ ತಿಳಿದುಕೊಂಡಿದ್ದಾರೆ. ಸ್ಟ್ಯಾಂಡ್‌ಅಪ್ ಎಂಬುದು ಕೇವಲ ದೈಹಿಕವಲ್ಲ, ಅದು ನೈತಿಕ' ಎಂದಿದ್ದಾರೆ.

'ಎರಡು ರೀತಿಯ ಭಾರತ'ದ ಬಗ್ಗೆ ಸತ್ಯ ಮಾತನಾಡಲು ಧೈರ್ಯ ತೋರಿದ ದಾಸ್ ಅವರನ್ನು ಮಹುವಾ ಮೊಯಿತ್ರಾ ಶ್ಲಾಘಿಸಿದ್ದಾರೆ. 'ಒಬ್ಬರು ನಗಿಸುತ್ತಿದ್ದರೆ, ಉಳಿದವರು ಪೊಲೀಸರಿಗೆ ದೂರು ನೀಡುತ್ತಿದ್ದಾರೆ' ಎಂದು 'ಎರಡು ರೀತಿಯ ಭಾರತ' ಎಂಬುದಕ್ಕೆ ಹೋಲಿಕೆ ಮಾಡಿದ್ದಾರೆ.

ಸಿಂಘ್ವಿ, ಕಂಗನಾ ವಿರೋಧ

ಕಾಂಗ್ರೆಸ್ ನಾಯಕ ಸಿಂಘ್ವಿ ಅವರು ವೀರ್ ದಾಸ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. 'ಕೆಲವು ವ್ಯಕ್ತಿಗಳ ದುಷ್ಕೃತ್ಯಗಳನ್ನು ಸಾಮಾನ್ಯೀಕರಿಸುವುದು ಮತ್ತು ಇಡೀ ರಾಷ್ಟ್ರವನ್ನು ಪ್ರಪಂಚದ ಮುಂದೆ ನಿಂದಿಸುವುದು ಸರಿಯಲ್ಲ' ಎಂದು ಹೇಳಿದ್ದಾರೆ. 'ದಾಸ್ ಮಾತು ಮೆದು ಭಯೋತ್ಪಾದನೆ' ಎಂದು ಆರೋಪಿಸಿರುವ ಬಾಲಿವುಡ್ ನಟಿ ಕಂಗನಾ ರನೌತ್, ಅವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಫಿನ್‌ಟೆಕ್ ಉದ್ಯಮಕ್ಕೆ ಉತ್ತೇಜನ

ಒಂದನೇ ಪುಟದಿಂದ...

ಫಿನ್‌ಟೆಕ್ ವಲಯದಲ್ಲಿ ಕನಿಷ್ಠ 10 ಯೂನಿಕಾರ್ನ್‌ಗಳನ್ನು (₹ 7,435 ಕೋಟಿಗಿಂತ ಹೆಚ್ಚಿನ ಬಂಡವಾಳ ಮೌಲ್ಯ ಹೊಂದಿರುವ ನವೋದ್ಯಮ) ಹುಟ್ಟುಹಾಕುವ ಉದ್ದೇಶವನ್ನು ಹೊಂದಲಾಗಿದೆ ಎಂದು ಗುಪ್ತ ಹೇಳಿದರು. ಫಿನ್‌ಟೆಕ್ ಉದ್ಯಮ ವಲಯದಲ್ಲಿ ಹೂಡಿಕೆಯನ್ನು ಇನ್ನಷ್ಟು ಆಕರ್ಷಿಸುವ ಉದ್ದೇಶವನ್ನು ಕೆಡಿಇಎಂ ಹೊಂದಿದೆ.

ದೇಶದ ಹಣಕಾಸು ತಂತ್ರಜ್ಞಾನ ಕಂಪನಿಗಳು ಸ್ಮಾರ್ಟ್‌ಫೋನ್ ಮೂಲಕ ಹಣ ಪಾವತಿ ಮಾಡುವುದು, ಪೇಮೆಂಟ್ಸ್ ಬ್ಯಾಂಕ್ ಖಾತೆ ತೆರೆಯುವುದು, ಸ್ಮಾರ್ಟ್‌ಫೋನ್ ಮೂಲಕವೇ ಡಿಮ್ಯಾಟ್ ಖಾತೆ ತೆರೆಯುವುದು, ಅಲ್ಲಿಂದಲೇ ಷೇರುಗಳಲ್ಲಿ ಹೂಡಿಕೆ ಮಾಡುವುದು ಮುಂತಾದ ಸೇವೆಗಳನ್ನು ಒದಗಿಸುತ್ತಿವೆ. ₹ 100ರಷ್ಟು ಕನಿಷ್ಠ ಮೊತ್ತವನ್ನು ಬಳಸಿಯೂ ಮ್ಯೂಚುವಲ್ ಫಂಡ್‌ಗಳಲ್ಲಿ ವ್ಯವಸ್ಥಿತವಾಗಿ ಹಣ ಹೂಡಿಕೆ ಮಾಡುವ ಸೇವೆಗಳನ್ನು ಹೊಸಕಾಲದ ಈ ಕಂಪನಿಗಳು ಒದಗಿಸುತ್ತಿವೆ.

ದೇಶದ ಫಿನ್‌ಟೆಕ್ ಕಂಪನಿಗಳು ದೇಶ–ವಿದೇಶಗಳಿಂದ ಹೂಡಿಕೆದಾರರನ್ನು ಆಕರ್ಷಿಸುತ್ತಿವೆ. ಫಿನ್‌ಟೆಕ್ ಕಂಪನಿ ಪೇಟಿಎಂ, ಐಪಿಒ (ಆರಂಭಿಕ ಸಾರ್ವಜನಿಕ ಕೊಡುಗೆ) ಮೂಲಕ ತನ್ನ ಷೇರುಗಳನ್ನು ಸಾರ್ವಜನಿಕರಿಗೆ, ಸಾಂಸ್ಥಿಕ ಹೂಡಿಕೆದಾರರಿಗೆ ಮಾರಾಟ ಮಾಡಿ ಈಚೆಗೆ ₹ 18,300 ಕೋಟಿ ಬಂಡವಾಳ ಸಂಗ್ರಹಿಸಿದೆ. ಫಿನ್‌ಟೆಕ್ ವಲಯದ ಇನ್ನೊಂದು ಪ್ರಮುಖ ಕಂಪನಿ ಮೊಬಿಕ್ವಿಕ್ ಕೂಡ ಐಪಿಒ ಮೂಲಕ ಬಂಡವಾಳ ಸಂಗ್ರಹಿಸುವ ಗುರಿ ಹೊಂದಿದೆ ಎಂಬ ವರದಿಗಳು ಇವೆ.

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ


ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ಮುಂಬೈ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಘೋಷಣೆ

ಪರಮ್ ಬೀರ್ ಸಿಂಗ್ ‘ಘೋಷಿತ ಅಪರಾಧಿ’

ಮುಂಬೈ (ಪಿಟಿಐ): ಸುಲಿಗೆ ಪ್ರಕರಣದಲ್ಲಿ ಮಾಜಿ ಪೊಲೀಸ್ ಕಮಿಷನರ್, ಐಪಿಎಸ್ ಅಧಿಕಾರಿ, ಪರಮ್ ಬೀರ್ ಸಿಂಗ್ ಅವರನ್ನು ‘ಘೋಷಿತ ಅಪರಾಧಿ’ ಎಂದು ಮುಂಬೈ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಬುಧವಾರ ಘೋಷಿಸಿದೆ.

ನಗರದ ಗೋರೆಗಾಂವ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದಲ್ಲಿ ಮಾಜಿ ಸಹಾಯಕ ಪೊಲೀಸ್ ಇನ್‌ಸ್ಪೆಕ್ಟರ್ ಸಚಿನ್ ವಾಜೆ ಕೂಡ ಆರೋಪಿಯಾಗಿದ್ದಾರೆ. ಸಿಂಗ್ ಅಲ್ಲದೆ, ಸಹ ಆರೋಪಿಗಳಾದ ವಿನಯ್ ಸಿಂಗ್ ಮತ್ತು ರಿಯಾಜ್ ಭಟ್ಟಿ ಘೋಷಿತ ಅಪರಾಧಿಗಳೆಂದು ಹೆಚ್ಚುವರಿ ಮುಖ್ಯ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಎಸ್. ಬಿ. ಭಾಜಿಪಾಲೆ ಅವರು ಘೋಷಿಸಿದ್ದಾರೆ.



ಪರಮ್ ಬೀರ್ ಸಿಂಗ್

ಪರಮ್ ಬೀರ್ ಸಿಂಗ್ ವಿರುದ್ಧ ಜಾಮೀನುರಹಿತ ವಾರಂಟ್ ಜಾರಿ ಮಾಡಿದರೂ ಅವರು ಪತ್ತೆಯಾಗಿಲ್ಲ ಎಂದು ಪ್ರಕರಣದ ತನಿಖೆ ನಡೆಸುತ್ತಿರುವ ಮುಂಬೈ ಪೊಲೀಸರ ಅಪರಾಧ ವಿಭಾಗವು ನ್ಯಾಯಾಲಯದ ಘೋಷಣೆಗೆ ಕೋರಿತ್ತು.

ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ ಸೆಕ್ಷನ್ 82ರ ಅಡಿಯಲ್ಲಿ, ನ್ಯಾಯಾಲಯವು ಆರೋಪಿಯ ವಿರುದ್ಧ ಹೊರಡಿಸಲಾದ ವಾರಂಟ್ ಅನ್ನು ಕಾರ್ಯಗತಗೊಳಿಸಲು ಸಾಧ್ಯವಾಗದಿದ್ದಲ್ಲಿ ಹಾಜರಾಗಲು ಅಗತ್ಯವಿರುವ ಘೋಷಣೆಯನ್ನು ಪ್ರಕಟಿಸಬಹುದು.

ಮಹಾರಾಷ್ಟ್ರದ ಗೃಹ ಸಚಿವ ಅನಿಲ್ ದೇಶಮುಖ್ ಅವರ ವಿರುದ್ಧ ಪರಮ್ ಬೀರ್ ಸಿಂಗ್ ಭ್ರಷ್ಟಾಚಾರದ ಆರೋಪ ಮಾಡಿದ್ದರು. ನಂತರ ಈ ಆರೋಪವನ್ನು ನಿರಾಕರಿಸಿದ್ದರು.

‘ಪಾಲುದಾರಿಕೆಯಲ್ಲಿ ನಡೆಸುತ್ತಿದ್ದ ಬಾರ್ ಮತ್ತು ರೆಸ್ಟೋರೆಂಟ್ ಮೇಲಿನ ದಾಳಿಯನ್ನು ತಡೆಯುವ ಸಲುವಾಗಿ ಪರಮ್ ಬೀರ್ ಸಿಂಗ್ ತಮ್ಮಿಂದ ₹ 9 ಲಕ್ಷ ಸುಲಿಗೆ ಮಾಡಿದ್ದಾರೆ. ಅಲ್ಲದೇ, ಸುಮಾರು ₹ 2.92 ಲಕ್ಷ ಮೌಲ್ಯದ ಎರಡು ಸ್ಮಾರ್ಟ್‌ಫೋನ್‌ಗಳನ್ನು ಖರೀದಿಸುವಂತೆ ಒತ್ತಾಯಿಸಿದ್ದಾರೆ’ ಎಂದು ರಿಯಲ್ ಎಸ್ಟೇಟ್ ಡೆವಲಪರ್ ಮತ್ತು ಹೋಟೆಲ್ ಉದ್ಯಮಿ ಬಿಮಲ್ ಅಗರವಾಲ್ ಅವರು ಆರೋಪಿಸಿದ್ದರು.

ಅನಿಲ್ ದೇಶಮುಖ್ ಪ್ರಕರಣದ ವಿಚಾರಣೆ ನಡೆಸುತ್ತಿದ್ದ ನ್ಯಾಯಾಧೀಶರ ವರ್ಗಾವಣೆ

ಮುಂಬೈ (ಪಿಟಿಐ): ಅಕ್ರಮ ಹಣ ವರ್ಗಾವಣೆ ಪ್ರಕರಣ ಸೇರಿದಂತೆ ಸಂಸದರು ಮತ್ತು ಶಾಸಕರಿಗೆ ಸಂಬಂಧಿಸಿದ ವಿವಿಧ ಪ್ರಕರಣಗಳ ವಿಚಾರಣೆ ನಡೆಸುತ್ತಿದ್ದ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಎಚ್.ಎಸ್. ಸತ್‌ಭಾಯ್ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಯವತ್‌ಮಾಲ್ ಜಿಲ್ಲೆಗೆ ವರ್ಗಾಯಿಸಿ ಬಾಂಬೆ ಹೈಕೋರ್ಟ್ ಆದೇಶಿಸಿದೆ.

ಬಹುಕೋಟಿ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಮಹಾರಾಷ್ಟ್ರದ ಮಾಜಿ ಗೃಹ ಸಚಿವ ಅನಿಲ್ ದೇಶಮುಖ್ ಅವರಿಗೆ 14 ದಿನಗಳ ನ್ಯಾಯಾಂಗ ಬಂಧನದ ಆದೇಶವನ್ನು ಸತ್‌ಭಾಯ್ ಅವರು ಸೋಮವಾರ ಹೊರಡಿಸಿದ್ದರು.

ಅಲ್ಲದೆ ‘ಸದನ್’ ಹಗರಣಕ್ಕೆ ಸಂಬಂಧಿಸಿದಂತೆ ಮಹಾರಾಷ್ಟ್ರದ ಸಚಿವ ಛಗನ್ ಭುಜಬಳ್ ವಿರುದ್ಧದ ಪ್ರಕರಣವನ್ನು ವಜಾಗೊಳಿಸಿದ್ದರು. ಸಹಕಾರಿ ಬ್ಯಾಂಕ್‌ನಲ್ಲಿ ವಂಚನೆ ಆರೋಪದಡಿಯಲ್ಲಿ ಶಿವಸೇನೆಯ ಮಾಜಿ ಸಂಸದ ಆನಂದ್ ಅಡ್ಸುಲ್ ಅವರ ನಿರೀಕ್ಷಣಾ ಜಾಮೀನು ಅರ್ಜಿ, ಎನ್‌ಸಿಪಿ ನಾಯಕ, ಮಹಾರಾಷ್ಟ್ರದ ಮಾಜಿ ಸಚಿವ ಏಕನಾಥ್ ಖಾಡ್ಸೆ ಅವರ ವಿರುದ್ಧದ ಪುಣೆ ಭೂ ವ್ಯವಹಾರ ಪ್ರಕರಣದ ವಿಚಾರಣೆಯನ್ನೂ ಅವರು ನಡೆಸುತ್ತಿದ್ದರು.

ಪೂರ್ವ ಮಹಾರಾಷ್ಟ್ರದಲ್ಲಿರುವ ಯವತ್‌ಮಾಲ್ ಜಿಲ್ಲೆಯು ಮುಂಬೈನಿಂದ 685 ಕಿ.ಮೀ ದೂರದಲ್ಲಿದೆ.

ಕರ್ತಾರ್‌ಪುರ ಕಾರಿಡಾರ್ ಬಳಕೆಗೆ ಮುಕ್ತ

ಡೇರಾ ಬಾಬಾ ನಾನಕ್ (ಪಂಜಾಬ್): ಕೋವಿಡ್–19ನಿಂದಾಗಿ ಮುಚ್ಚಲಾಗಿದ್ದ ಕರ್ತಾರ್‌ಪುರ ಕಾರಿಡಾರ್ ಅನ್ನು 20 ತಿಂಗಳ ಬಳಿಕ ಬುಧವಾರ ಸಾರ್ವಜನಿಕರಿಗೆ ಮುಕ್ತಗೊಳಿಸಲಾಯಿತು. 28 ಸಿಖ್ ಯಾತ್ರಿಕರನ್ನು ಒಳಗೊಂಡ ಮೊದಲ ತಂಡವು ಕರ್ತಾರ್‌ಪುರ ಕಾರಿಡಾರ್ ಮೂಲಕ ಪಾಕಿಸ್ತಾನದಲ್ಲಿರುವ ಗುರುದ್ವಾರ ದರ್ಬಾರ್ ಸಾಹಿಬ್‌ಗೆ ತೆರಳಿದರು.

ಕರ್ತಾರ್‌ಪುರ ಕಾರಿಡಾರ್ ಅನ್ನು ಬುಧವಾರದಿಂದ ತೆರೆಯುವುದಾಗಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಂಗಳವಾರ ತಿಳಿಸಿದ್ದರು.

ತ್ರಿಪುರಾ: ಪತ್ರಕರ್ತೆಯರ ವಿರುದ್ಧ ಪ್ರಕರಣ ರದ್ಧತಿಗೆ ಎನ್‌ಡಬ್ಲ್ಯೂಎಫ್ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತ್ರಿಪುರಾದಲ್ಲಿ ಇಬ್ಬರು ಪತ್ರಕರ್ತೆಯರ ವಿರುದ್ಧ ಪ್ರಕರಣ ದಾಖಲಿಸಿರುವುದನ್ನು ನ್ಯಾಷನಲ್ ವುಮೆನ್ಸ್ ಫ್ರಂಟ್ (ಎನ್‌ಡಬ್ಲ್ಯೂಎಫ್) ತೀವ್ರವಾಗಿ ಖಂಡಿಸಿದೆ.

ಮುಸ್ಲಿಂ ಸಮುದಾಯದ ಮೇಲೆ ಸಂಘ ಪರಿವಾರ ನಡೆಸಿದ ಹಲ್ಲೆ ಬಗ್ಗೆ ಮಾಡಿದ ವರದಿಯಿಂದ ಬೆದರಿಕೆ, ಕಿರುಕುಳ ಎದುರಿಸುತ್ತಿರುವ ಇಬ್ಬರು ಮಹಿಳಾ ಪತ್ರಕರ್ತೆಯರಿಗೆ ನ್ಯಾಷನಲ್ ವುಮೆನ್ಸ್ ಫ್ರಂಟ್ ಬೆಂಬಲ ನೀಡಿದೆ.

ರಾಜ್ಯದಲ್ಲಿ ಮುಸ್ಲಿಂ ಮಸೀದಿಗಳು ಮತ್ತು ಆಸ್ತಿಗಳ ಮೇಲಿನ ವಿಧ್ವಂಸಕ ದಾಳಿಗಳ ಕುರಿತು ಘಟನಾ ಸ್ಥಳದಿಂದಲೇ ಎಚ್‌ಡಬ್ಲ್ಯು ನ್ಯೂಸ್ ನೆಟ್‌ವರ್ಕ್‌ನ ಪತ್ರಕರ್ತರಾದ ಸಮೃದ್ಧಿ ಸಕುನಿಯಾ ಮತ್ತು ಸ್ವರ್ಣಾ ಝಾ ವರದಿ ಮಾಡಿದ್ದರು.

ಪೊಲೀಸರು ಈ ಕೂಡಲೇ ಇಬ್ಬರು ಮಹಿಳಾ ಪತ್ರಕರ್ತರ ವಿರುದ್ಧ ದಾಖಲಾಗಿರುವ ಪ್ರಕರಣಗಳನ್ನು ಹಿಂಪಡೆದು ಅವರಿಗೆ ನಿರ್ಭಯವಾಗಿ ಕಾರ್ಯನಿರ್ವಹಿಸಲು ಸಹಕಾರ ನೀಡಬೇಕು ಎಂದು ವುಮೆನ್ಸ್ ಫ್ರಂಟ್ ಪ್ರಕಟಣೆಯಲ್ಲಿ ಒತ್ತಾಯಿಸಿದೆ.

ಪತ್ರಿಕಾ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವ ತ್ರಿಪುರಾ ರಾಜ್ಯ ಸರ್ಕಾರದ ಪ್ರಯತ್ನಗಳ ವಿರುದ್ಧ ಎಲ್ಲಾ ಭಾರತೀಯರು ಧ್ವನಿ ಎತ್ತಬೇಕು ಎಂದೂ ಮನವಿ ಮಾಡಲಾಗಿದೆ.

ಪಿಡಿಪಿ ಮುಖ್ಯಸ್ಥೆ ಮುಫ್ತಿ ನೇತೃತ್ವದಲ್ಲಿ ಪ್ರತಿಭಟನೆ

ನಾಗರಿಕರ ಹತ್ಯೆ: ಲೆಫ್ಟಿನೆಂಟ್ ಗವರ್ನರ್ ಮಧ್ಯಪ್ರವೇಶಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಶ್ರೀನಗರ/ ಜಮ್ಮು: ಶ್ರೀನಗರದ ಹೈದರ್‌ಪೋರಾದಲ್ಲಿ ಭದ್ರತಾ ಪಡೆಗಳ ಗುಂಡಿಗೆ ಬಲಿಯಾದ ನಾಗರಿಕರ ಮೃತದೇಹಗಳನ್ನು ಅವರ ಕುಟುಂಬ ಸದಸ್ಯರಿಗೆ ಹಸ್ತಾಂತರಿಸಬೇಕು ಎಂದು ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿ (ಪಿಡಿಪಿ) ಹಾಗೂ ನ್ಯಾಷನಲ್ ಕಾನ್ಫರೆನ್ಸ್ ಪಕ್ಷ ಒತ್ತಾಯಿಸಿದೆ.

ಈ ಕುರಿತು ಟ್ವೀಟ್ ಮಾಡಿರುವ ನ್ಯಾಷನಲ್ ಕಾನ್ಫರೆನ್ಸ್ ಅಧ್ಯಕ್ಷ ಫಾರೂಕ್ ಅಬ್ದುಲ್ಲಾ, ಹೈದರಾಪೋರಾದ ಎನ್‌ಕೌಂಟರ್‌ನಲ್ಲಿ ಹತ್ಯೆಯಾದ ಇಬ್ಬರು ನಾಗರಿಕರ ಮೃತದೇಹಗಳನ್ನು ಹಸ್ತಾಂತರಿಸಲು ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಮಧ್ಯಸ್ಥಿಕೆ ವಹಿಸಬೇಕು ಎಂದು ಆಗ್ರಹಿಸಿದ್ದಾರೆ.

ಉಗ್ರವಾದದ ಹೆಸರಿನಲ್ಲಿ ಕೇಂದ್ರ ಸರ್ಕಾರ ಅಮಾಯಕರನ್ನು ಕೊಲ್ಲುತ್ತಿದೆ ಎಂದು ಆರೋಪಿಸಿ ಹಾಗೂ ಹತ್ಯೆಯಾದ ನಾಗರಿಕರ ಶವಗಳನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಬೇಕು ಎಂದು ಒತ್ತಾಯಿಸಿ ಜಮ್ಮುವಿನಲ್ಲಿ ಬುಧವಾರ ಪಿಡಿಪಿ ಮುಖ್ಯಸ್ಥೆ ಮೆಹಬೂಬ ಮುಫ್ತಿ ಅವರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.



ಉಗ್ರವಾದದ ಹೆಸರಿನಲ್ಲಿ ಅಮಾಯಕರನ್ನು ಭದ್ರತಾ ಪಡೆಗಳು ಹತ್ಯೆ ಮಾಡುತ್ತಿವೆ ಎಂದು ಆರೋಪಿಸಿ ಜಮ್ಮುವಿನಲ್ಲಿ ಬುಧವಾರ ಪಿಡಿಪಿ ಮುಖ್ಯಸ್ಥೆ ಮೆಹಬೂಬ ಮುಫ್ತಿ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು

ಸೋನಿಯಾ ಭೇಟಿಯಾದ ಉಮ್ಮನ್ ಚಾಂಡಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇರಳದ ಕಾಂಗ್ರೆಸ್ ಆಂತರಿಕ ಕಲಹ ದೆಹಲಿಯನ್ನು ತಲುಪಿದೆ. ರಾಜ್ಯದಲ್ಲಿನ ಪಕ್ಷದ ನಾಯಕತ್ವದ ಬಗ್ಗೆ ಪಕ್ಷದ ಪ್ರಧಾನ ಕಾರ್ಯದರ್ಶಿ ಉಮ್ಮನ್ ಚಾಂಡಿ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಬುಧವಾರ ಭೇಟಿ ಮಾಡಿ ಚುನಾವಣೆಯು ಘೋಷಣೆಯಾಗುವ ದೃಷ್ಟಿಯಿಂದ ಪಕ್ಷದ ಪುನಶ್ಚೇತನಕ್ಕೆ ಮುಂದಾಗದಂತೆ ಒತ್ತಾಯಿಸಿದ್ದಾರೆ.



ಇದಕ್ಕೂ ಮುನ್ನ ಪಕ್ಷದ ಹಿರಿಯ ನಾಯಕ ಎ.ಕೆ. ಆಂಟನಿ, ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಮತ್ತು ಕೇರಳದ ಪಕ್ಷದ ಉಸ್ತುವಾರಿ ತಾರಿಖ್ ಅನ್ವರ್ ಅವರನ್ನು ಭೇಟಿಯಾಗಿ ಚುನಾವಣೆಗೂ ಮುನ್ನ ಪಕ್ಷದ ಪರಿಷ್ಕರಣೆ ಮಾಡುವುದಕ್ಕೂ ಮೊದಲು ಪಕ್ಷದ ನಾಯಕತ್ವ ತಮ್ಮನ್ನು ಸಂಪರ್ಕಿಸಬೇಕು ಎಂದು ಮನವಿ ಮಾಡಿದರು. ಚಾಂಡಿ ಅವರು ಸೋನಿಯಾ ಅವರ ಮುಂದೆ ತಮ್ಮ ಈ ಬೇಡಿಕೆಗಳನ್ನು ಪುನರುಚ್ಚರಿಸಿದರು. ಪಕ್ಷದ ನೂತನ ಮುಖ್ಯಸ್ಥ ಕೆ.ಸುಧಾಕರನ್ ಮತ್ತು ವಿರೋಧ ಪಕ್ಷದ ನಾಯಕ ವಿ.ಡಿ.ಸತೀಸನ್ ಅವರು ಸಾಂಸ್ಥಿಕ ವಿಷಯಗಳ ಬಗ್ಗೆ ಸಾಕಷ್ಟು ಚರ್ಚೆ ನಡೆಸುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು ಎಂದು ಮೂಲಗಳು ಹೇಳಿವೆ.

ರಾಜ್ಯದಲ್ಲಿ ಕಾಂಗ್ರೆಸ್‌ನ ಚಾಂಡಿ ಮತ್ತು ರಮೇಶ್ ಚೆನ್ನಿತ್ತಾಲ ಬಣಗಳು ಪಕ್ಷದ ಹೊಸ ನಾಯಕತ್ವ ತಮ್ಮನ್ನು ಪಕ್ಕಕ್ಕೆ ಸರಿಸುತ್ತಿದೆ ಎಂದು ಭಾವಿಸಿವೆ. ಇಬ್ಬರೂ ಈಗ ಹೊಸ ನಾಯಕತ್ವದ ವಿರುದ್ಧ ಕೈಜೋಡಿಸಿದ್ದಾರೆ. ಚುನಾವಣಾ ವೇಳಾಪಟ್ಟಿಯನ್ನು ಘೋಷಿಸಿದ ಮತ್ತು ಸದಸ್ಯತ್ವ ಅಭಿಯಾನವನ್ನು ಪ್ರಾರಂಭಿಸಿದ ಸಮಯದಲ್ಲಿ ಪಕ್ಷದ ಪುನಶ್ಚೇತನ ನಡೆಸುವುದು ವ್ಯರ್ಥ ಕೆಲಸ ಎಂದು ಚಾಂಡಿ ಅವರು ಸೋನಿಯಾ ಮೇಲೆ ಪ್ರಭಾವ ಬೀರಲು ಯತ್ನಿಸಿದರು ಎಂದು ಮೂಲಗಳು ತಿಳಿಸಿವೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಮತ್ತೂ ಐದು ಸ್ಥಾನ ಕುಸಿತ

ಲಂಚ: 82ನೇ ಸ್ಥಾನದಲ್ಲಿ ಭಾರತ

ನವದೆಹಲಿ (ಪಿಟಿಐ) : ವ್ಯವಹಾರ ಕುದುರಿಸಲು ಲಂಚ ಪಡೆಯುವ ದೇಶಗಳ ಜಾಗತಿಕ ಪಟ್ಟಿಯಲ್ಲಿ ಭಾರತವು ಈ ವರ್ಷ 82ನೇ ಸ್ಥಾನದಲ್ಲಿದೆ. ಈ ಪಟ್ಟಿಯಲ್ಲಿ ಕಳೆದ ವರ್ಷ 77ನೇ ಸ್ಥಾನದಲ್ಲಿದ್ದ ಭಾರತ ಈ ವರ್ಷ ಮತ್ತೂ ಐದು ಸ್ಥಾನಗಳ ಕುಸಿತ ಕಂಡಿದೆ.



ಲಂಚ ನಿಗ್ರಹ ಗುಣಮಟ್ಟ ನಿಗದಿಪಡಿಸುವ ಸಂಸ್ಥೆ ‘ಟ್ರೇಸ್’, 194 ದೇಶಗಳು, ಸ್ವಾಯತ್ತ, ಅರೆ ಸ್ವಾಯತ್ತ ಪ್ರದೇಶಗಳಲ್ಲಿ ವ್ಯವಹಾರ ಕುದುರಿಸಲು ಕೊಡಬೇಕಿರುವ ಲಂಚದ ಕುರಿತು ವಿವಿಧ ಮಾನದಂಡಗಳ ಮೂಲಕ ಅಳೆದು ಶ್ರೇಯಾಂಕ ನಿಗದಿಪಡಿಸುತ್ತದೆ.

ಪ್ರಸಕ್ತ ವರ್ಷದ ದತ್ತಾಂಶದ ಪ್ರಕಾರ ಉತ್ತರ ಕೊರಿಯಾ, ತುರ್ಕಮೆನಿಸ್ತಾನ್, ವೆನಿಜುವೆಲಾ, ಎರಿಟ್ರಿಯಾ ದೇಶಗಳಲ್ಲಿ ಅತಿ ಹೆಚ್ಚು ವ್ಯವಹಾರ ಕುದುರಿಸುವ ಲಂಚ ತಾಂಡವಾಡುತ್ತಿದ್ದರೆ, ಡೆನ್ಮಾರ್ಕ್, ನಾರ್ವೆ, ಫಿನ್ಲೆಂಡ್, ಸ್ವೀಡನ್, ನ್ಯೂಜಿಲೆಂಡ್‌ಗಳಲ್ಲಿ ಇದು ಕಡಿಮೆಯಿದೆ.

2020ರಲ್ಲಿ ಭಾರತವು 45 ಅಂಕ ಗಳಿಸಿದ್ದರೆ, ಈ ವರ್ಷ 44 ಅಂಕಕ್ಕೆ ಕುಸಿದಿದೆ.

ಸರ್ಕಾರದ ಜತೆಗಿನ ವ್ಯವಹಾರ ಸಂವಹನಗಳು, ಲಂಚ ತಡೆ, ಸರ್ಕಾರ ಮತ್ತು ನಾಗರಿಕ ಸೇವೆಯಲ್ಲಿ ಪಾರದರ್ಶಕತೆ ಹಾಗೂ ಮಾಧ್ಯಮ ಪಾತ್ರವನ್ನು ಒಳಗೊಂಡಿರುವ ನಾಗರಿಕ ಸಮಾಜದ ಮೇಲ್ವಿಚಾರಣೆಯ ಸಾಮರ್ಥ್ಯವನ್ನು ಆಧರಿಸಿ ‘ಟ್ರೇಸ್’ ಸಂಸ್ಥೆಯು ಲಂಚ ಅಪಾಯದ ಅಂಕಗಳನ್ನು ನೀಡುತ್ತದೆ.

ಭಾರತವು ತನ್ನ ನೆರೆ ರಾಷ್ಟ್ರಗಳಾದ ಪಾಕಿಸ್ತಾನ, ಚೀನಾ, ನೇಪಾಳ ಮತ್ತು ಬಾಂಗ್ಲಾದೇಶಕ್ಕಿಂತ ಉತ್ತಮ ಸ್ಥಿತಿಯಲ್ಲಿದೆ. ಭೂತಾನ್ 62ನೇ ಸ್ಥಾನವನ್ನು ಪಡೆದುಕೊಂಡಿದೆ ಎಂದು ಅಂಕಿಅಂಶಗಳು ತೋರಿಸಿವೆ.

ರಾಜ್ಯ ಕೋವಿಡ್ ಅಂಕಿ–ಅಂಶ


29,92,584 ▲	ಒಟ್ಟು ಸೋಂಕಿತರು (29,92,276 ನಿನ್ನೆಯ ವಿವರ)
7,409 ▼	ಸಕ್ರಿಯ ಪ್ರಕರಣಗಳು
29,46,985 ▲	ಗುಣಮುಖರಾದವರು
38,161 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	308	▲
ಗುಣಮುಖ	384	▼
ಸಾವು	08	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಲಸಿಕೆ: ಎರಡೂ ಡೋಸ್ ಪಡೆದವರ ಸಂಖ್ಯೆ ಅಧಿಕ



ನವದೆಹಲಿ (ಪಿಟಿಐ): ದೇಶದಲ್ಲಿ ಕೋವಿಡ್ ಲಸಿಕೆಯನ್ನು ಪಡೆಯಲು ಅರ್ಹರಾದವರಲ್ಲಿ ಒಂದು ಡೋಸ್ ಪಡೆದವರಿಗಿಂತ ಎರಡು ಡೋಸ್‌ಗಳನ್ನು ಪಡೆದವರ ಸಂಖ್ಯೆ ಇದೇ ಮೊದಲ ಬಾರಿಗೆ ಅಧಿಕವಾಗಿರುವುದು ದಾಖಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಬುಧವಾರ ಹೇಳಿದರು.

ಒಂದು ಡೋಸ್ ಪಡೆದವರ ಸಂಖ್ಯೆ 37,45,68,477 ಇದ್ದರೆ ಎರಡೂ ಡೋಸ್ ಪಡೆದವರ ಸಂಖ್ಯೆ 38,11,55,604 ಇದೆ ಎಂದು ಸಚಿವರು ತಿಳಿಸಿದರು.

‘ಜನರ ಪಾಲ್ಗೊಳ್ಳುವಿಕೆ’ ಎಂಬ ಧ್ಯೇಯದಿಂದ ಕೂಡಿದ ಪ್ರಧಾನಿ ನರೇಂದ್ರ ಮೋದಿಯವರ ದೂರದೃಷ್ಟಿ, ಸರ್ಕಾರದಲ್ಲಿ ಜನರು ಹೊಂದಿರುವ ವಿಶ್ವಾಸ ಹಾಗೂ ಪ್ರಸಕ್ತ ನಡೆಯುತ್ತಿರುವ ‘ಹರ್ ಘರ್ ದಸ್ತಕ್’ ಅಭಿಯಾನದಿಂದಾಗಿ ಈ ಸಾಧನೆ ಸಾಧ್ಯವಾಗಿದೆ’ ಎಂದು ಅವರು ಹೇಳಿದ್ದಾರೆ.

ಬುಧವಾರ ಬೆಳಿಗ್ಗೆ 7ಕ್ಕೆ ಸಿದ್ಧಪಡಿಸಲಾದ ತಾತ್ಕಾಲಿಕ ವರದಿ ಪ್ರಕಾರ, ದೇಶದಲ್ಲಿ ಈ ವರೆಗೆ 113.68 ಕೋಟಿ ಡೋಸ್‌ಗಳನ್ನು ನೀಡಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಮೂಲಗಳು ಹೇಳಿವೆ.

ಯುವಕರನ್ನು ಐಎಸ್‌ಗೆ ಸೆಳೆದಿದ್ದ ವ್ಯಕ್ತಿ ತಪ್ಪಿತಸ್ಥ

ಕೊಚ್ಚಿ (ಪಿಟಿಐ): ಕೇರಳದ ಕಾಸರಗೋಡಿನ ಯುವಕರು ಐಎಸ್ ಉಗ್ರ ಸಂಘಟನೆ ಸೇರಲು ಕಾರಣನಾಗಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಚುಕೋರ ನಶೀದುಲ್ ಹಮ್‌ಜಾಫರ್ ತಪ್ಪಿತಸ್ಥ ಎಂದು ಎರ್ನಾಕುಲಂನ ಎನ್‌ಐಎ ವಿಶೇಷ ನ್ಯಾಯಾಲಯ ಬುಧವಾರ ತೀರ್ಪು ನೀಡಿದೆ.

ಭಾರತೀಯ ದಂಡ ಸಂಹಿತೆಯ ಸೆಕ್ಷನ್‌ಗಳು, ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ ಅಡಿಯಲ್ಲಿ ಹಮ್‌ಜಾಫರ್‌ನನ್ನು ತಪ್ಪಿತಸ್ಥ ಎಂದು ನ್ಯಾಯಾಲಯ ಘೋಷಿಸಿರುವುದಾಗಿ ಎನ್‌ಐಎ (ರಾಷ್ಟ್ರೀಯ ತನಿಖಾ ಸಂಸ್ಥೆ) ತಿಳಿಸಿದೆ.

2016ರ ಮೇ ಹಾಗೂ ಜುಲೈ ಅವಧಿಯಲ್ಲಿ ಕಾಸರಗೋಡಿನ 14 ಮಂದಿ ಯುವಕರು ತಮ್ಮ ಕುಟುಂಬದವರೊಂದಿಗೆ ದೇಶ ತೊರೆದಿದ್ದಲ್ಲದೆ ಐಎಸ್ ಸಂಘಟನೆ ಸೇರಿದ್ದರು ಎಂದು ಎನ್‌ಐಎ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಇಂಡೊನೇಷ್ಯಾ ಮಾಸ್ಟರ್ಸ್: ಧ್ರುವ್–ಸಿಕ್ಕಿ ಜೋಡಿಗೆ ಗೆಲುವು; ಅಶ್ವಿನಿ ಪೊನ್ನಪ್ಪ–ಸುಮಿತ್‌ಗೆ ನಿರಾಸೆ

ಶ್ರೀಕಾಂತ್, ಪ್ರಣಯ್ ಶುಭಾರಂಭ



ಕಿದಂಬಿ ಶ್ರೀಕಾಂತ್ –ರಾಯಿಟರ್ಸ್ ಚಿತ್ರ



ಎಚ್.ಎಸ್.ಪ್ರಣಯ್ –ಪಿಟಿಐ ಚಿತ್ರ

ಬಾಲಿ (ಪಿಟಿಐ): ಭಾರತದ ಕಿದಂಬಿ ಶ್ರೀಕಾಂತ್ ಮತ್ತು ಎಚ್.ಎಸ್.ಪ್ರಣಯ್ ಅವರು ಇಂಡೊನೇಷ್ಯಾ ಮಾಸ್ಟರ್ಸ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಶುಭಾರಂಭ ಮಾಡಿದ್ದಾರೆ. ಧ್ರುವ್ ಕಪಿಲಾ ಮತ್ತು ಎನ್.ಸಿಕ್ಕಿ ರೆಡ್ಡಿ ಜೋಡಿ ಮಿಶ್ರ ಡಬಲ್ಸ್‌ನಲ್ಲಿ ಜಯ ಗಳಿಸಿದ್ದಾರೆ.

ವಿಶ್ವ ಕ್ರಮಾಂಕದಲ್ಲಿ 71ನೇ ಸ್ಥಾನದಲ್ಲಿರುವ ಫ್ರಾನ್ಸ್‌ನ ಕ್ರಿಸ್ಟೊ ಪೊಪೊವ್ ಅವರ ಕಠಿಣ ಸವಾಲನ್ನು ಮೆಟ್ಟಿನಿಂತ ಶ್ರೀಕಾಂತ್ 21-18, 15-21, 21-16ರಲ್ಲಿ ಜಯ ಗಳಿಸಿದರು. ಒಂದು ತಾಸು ಮತ್ತು 15 ನಿಮಿಷಗಳ ಕಾಲ ಹಣಾಹಣಿ ನಡೆಯಿತು.

2017ರಲ್ಲಿ ಇಂಡೊನೇಷ್ಯಾ ಓಪನ್‌ನ ಚಾಂಪಿಯನ್ ಆಗಿದ್ದ ಶ್ರೀಕಾಂತ್ ಮುಂದಿನ ಹಂತದಲ್ಲಿ ಸ್ಥಳೀಯ ಆಟಗಾರ ಆರನೇ ಶ್ರೇಯಾಂಕಿತ ಜೊನೊಥನ್ ಕ್ರಿಸ್ಟಿ ಅವರನ್ನು ಎದುರಿಸುವರು.

ಪ್ರಣಯ್, ಮಲೇಷ್ಯಾದ ಲ್ಯೂ ಡ್ಯಾರೆನ್ ಎದುರು 22-20, 21-19ರಲ್ಲಿ ಗೆದ್ದು ಎರಡನೇ ಸುತ್ತು ಪ್ರವೇಶಿಸಿದರು. ಎರಡನೇ ಶ್ರೇಯಾಂಕಿತ ಆಟಗಾರ, ಒಲಿಂಪಿಕ್ ಚಾಂಪಿಯನ್ ಡೆನ್ಮಾರ್ಕ್‌ನ ವಿಕ್ಟರ್ ಅಕ್ಸೆಲ್ಸನ್ ಎರಡನೇ ಸುತ್ತಿನಲ್ಲಿ ಪ್ರಣಯ್‌ಗೆ ಎದುರಾಳಿ.

ಧ್ರುವ ಕಪಿಲಾ ಮತ್ತು ಎನ್.ಸಿಕ್ಕಿ ರೆಡ್ಡಿ ಜೋಡಿ ಅಮೋಘ ಆಟದ ಮೂಲಕ ಮಿಂಚಿದರು. ಮಿಶ್ರ ಡಬಲ್ಸ್‌ನಲ್ಲಿ ಅವರು ಎರಡನೇ ಶ್ರೇಯಾಂಕದ ಮತ್ತು ವಿಶ್ವದ ಐದನೇ ಕ್ರಮಾಂಕದ ಇಂಡೊನೇಷ್ಯಾ ಜೋಡಿ ಪ್ರವೀಣ್ ಜೋರ್ಡಾನ್ ಹಾಗೂ ಮೇಲಾತಿ ದೇವ ಒಕ್ತವ್ಯಂತಿ ಎದುರು 21-11, 22-20ರಲ್ಲಿ ಗೆದ್ದರು.

ಬಿ.ಸಾಯಿ ಪ್ರಣೀತ್ ಮತ್ತು ಪರುಪಳ್ಳಿ ಕಶ್ಯಪ್ ಮೊದಲ ಸುತ್ತಿನಲ್ಲೇ ಸೋತು ಹೊರಬಿದ್ದರು. ಪ್ರಣೀತ್ 21-16, 14-21, 20-22ರಲ್ಲಿ ಇಂಡೊನೇಷ್ಯಾದ ಶೇಸರ್ ಹಿರೇನ್ ರುಸ್ತವಿಟೊ ಎದುರು ಸೋತರೆ ಕಶ್ಯಪ್ ಡೆನ್ಮಾರ್ಕ್‌ನ ಹನ್ಸ್ ಕ್ರಿಸ್ಟಿಯನ್ ಸೋಲ್ಬರ್ಗ್‌ಗೆ 10-21, 19-21ರಲ್ಲಿ ಮಣಿದರು.

ವೆಂಕಟ್ ಗೌರವ್ ಪ್ರಸಾದ್ ಮತ್ತು ಜೂಹಿ ದೇವಾಂಗಣ್ 15-21, 12-21ರಲ್ಲಿ ಹಾಂಕಾಂಗ್‌ನ ಚಾಂಗ್ ತಕ್ ಚಿಂಗ್ ಮತ್ತು ನಂಗ್ ವಿಂಗ್ ಯಂಗ್ ಎದುರು ಸೋತರು. ಬಿ.ಸುಮಿತ್ ರೆಡ್ಡಿ ಮತ್ತು ಅಶ್ವಿನಿ ಪೊನ್ನಪ್ಪ 15-21, 16-21ರಲ್ಲಿ ಇಂಡೊನೇಷ್ಯಾದ ಹಫೀಜ್ ಫೈಜಲ್ ಮತ್ತು ಗ್ಲೋರಿಯಾ ಇಮಾನ್ಯುಯೆಲ್ ಎದುರು ಸೋತರು.

246 ಸಾಧಕರಿಗೆ ಎಸ್‌ಎಐ ಪ್ರಶಸ್ತಿ

ನವದೆಹಲಿ (ಪಿಟಿಐ): ಇದೇ ಮೊದಲ ಬಾರಿಗೆ ಭಾರತ ಕ್ರೀಡಾ ಪ್ರಾಧಿಕಾರವು 246 ಕ್ರೀಡಾ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಿತು.

ಬುಧವಾರ 162 ಅಥ್ಲೀಟ್‌ಗಳು ಮತ್ತು 84 ಕೋಚ್‌ಗಳಿಗೆ ಈ ಪ್ರಶಸ್ತಿಗಳನ್ನು ನೀಡಲಾಗಿದೆ. ಒಟ್ಟು ₹ 85.02 ಲಕ್ಷ ನಗದು ಬಹುಮಾನ ನೀಡಲಾಯಿತು.

ಕಾರ್ಯಕ್ರಮದಲ್ಲಿ ಹಾಜರಿದ್ದ ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್, ‘ಪುರಸ್ಕೃತರಿಗೆ ಅಭಿನಂದನೆಗಳು. ಕ್ರೀಡಾಪಟುಗಳಿಗೆ ಸೌಲಭ್ಯಗಳನ್ನು ಇನ್ನೂ ಹೆಚ್ಚು ಪ್ರಮಾಣದಲ್ಲಿ ವಿಸ್ತರಿಸಲಾಗುವುದು’ ಎಂದರು.

ರಾಷ್ಟ್ರ ಮಟ್ಟದಲ್ಲಿ ಸಾಧಕರಿಗೆ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಪ್ರಶಸ್ತಿ ವಿಜೇತರಿಗೆ ವಿಶೇಷ ಬ್ಲೇಜರ್ ಗಳು, ಸ್ಮರಣಿಕೆಗಳನ್ನು ನೀಡಲಾಯಿತು.

ರಾಜ್ಯ ತಂಡಕ್ಕೆ ಚಿನ್ಮಯ್ ನಾಯಕ

ಬೆಂಗಳೂರು: ಚಿನ್ಮಯ್ ಎನ್. ಅಮ್ಮಣಗಿ ಅವರು ಕೂಚ್ ಬೆಹಾರ್ ಟ್ರೋಫಿ 19 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯಲ್ಲಿ ಕರ್ನಾಟಕ ತಂಡವನ್ನು ಮುನ್ನಡೆಸಲಿದ್ದಾರೆ.

ಇದೇ 29ರಿಂದ ಡಿಸೆಂಬರ್ 30ರ ವರೆಗೆ ವಿಶಾಖಪಟ್ಟಣದಲ್ಲಿ ನಡೆಯಲಿರುವ ಟೂರ್ನಿಗೆ ತಂಡವನ್ನು ರಾಜ್ಯ ಕ್ರಿಕೆಟ್ ಸಂಸ್ಥೆ ಬುಧವಾರ ಪ್ರಕಟಿಸಿದೆ.

ತಂಡ: ಆದಿತ್ಯ ನಾಯರ್, ಚೈತನ್ಯ ಎಸ್, ಚಿನ್ಮಯ್ ಅಮ್ಮಣಗಿ (ನಾಯಕ), ಹರ್ಷಿಲ್ ಡಿ, ಜಾಸ್ಪರ್ ಇ.ಜೆ, ಕರಣ್ ಉಮೇಶ್ (ವಿಕೆಟ್ ಕೀಪರ್), ಮಿತೇಶ್ ಕುಮಾರ್, ಮೊಹಸಿನ್ ಖಾನ್, ರಘುವೀರ್ ಪಿ (ವಿಕೆಟ್ ಕೀಪರ್), ರಾಹುಲ್ ಪ್ರಸನ್ನ, ರಾಜೇಂದ್ರ ಡಂಗನವರ್, ರಾಜ್‌ವೀರ್ ವಾದ್ವಾ, ಸಂತೋಷ್ ಅಶ್ವಿನ್, ಶಶಿಕುಮಾರ್, ಶಿಖರ್ ಶೆಟ್ಟಿ, ಶ್ರೇಯಸ್ ಎಸ್.ಪಿ, ಸ್ಮರಣ್ ಆರ್, ತಿಪ್ಪಾರೆಡ್ಡಿ, ವಿಶಾಲ್ ಓಣಾಟ್, ಯಶೋವರ್ಧನ್ ಪರಾಂತಪ್. ಕೋಚ್‌ಗಳು: ನಿಖಿಲ್ ಹಲ್ದೀಪುರ ಮತ್ತು ಎನ್.ಸಿ.ಅಯ್ಯಪ್ಪ; ಮ್ಯಾನೇಜರ್: ಎಸ್.ಎ.ಸತೀಶ್.

ಉಗ್ರರ ಮೇಲೆ ಕ್ರಮ ಕೈಗೊಳ್ಳದ ಪಾಕ್: ಭಾರತ ತಿರುಗೇಟು

ವಿಶ್ವಸಂಸ್ಥೆ: ಜಮ್ಮು ಮತ್ತು ಕಾಶ್ಮೀರದ ವಿಷಯವನ್ನು ಕೆದಕಿದ ಪಾಕಿಸ್ತಾನಕ್ಕೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತ ತಿರುಗೇಟು ಕೊಟ್ಟಿದೆ. ಸಕ್ರಿಯವಾಗಿ ಭಯೋತ್ಪಾದಕರನ್ನು ಬೆಂಬಲಿಸುವ ಮತ್ತು ಬೆಳೆಸುವ ಕೆಟ್ಟ ನೀತಿ ಮತ್ತು ಇತಿಹಾಸವನ್ನು ಪಾಕಿಸ್ತಾನ ಹೊಂದಿದೆ ಎಂದು ಭಾರತ ಹೇಳಿದೆ.

ಭಾರತದ ವಿರುದ್ಧ ಸುಳ್ಳು ಮತ್ತು ದುರುದ್ದೇಶಪೂರಿತ ಅಪಪ್ರಚಾರ ಮಾಡಲು ಪಾಕಿಸ್ತಾನದ ಪ್ರತಿನಿಧಿಯು ವಿಶ್ವಸಂಸ್ಥೆಯ ವೇದಿಕೆಯನ್ನು ಬಳಸುತ್ತಿರುವುದು ಇದೇ ಮೊದಲಲ್ಲ. ತನ್ನ ದೇಶದಲ್ಲಿ ಉಗ್ರರಿಗೆ ಉತ್ತೇಜನ ಮತ್ತು ಸಾಮಾನ್ಯ ಜನರು ಅದರಲ್ಲೂ ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯಗಳಂತಹ ಸಮಸ್ಯೆಗಳಿಂದ ವಿಶ್ವದ ಗಮನ ಬೇರೆಡೆ ಸೆಳೆಯಲು ಪಾಕಿಸ್ತಾನ ಈ ಕುತಂತ್ರ ಮಾಡುತ್ತಿದೆ’ಎಂದು ವಿಶ್ವಸಂಸ್ಥೆಯ ಭಾರತದ ಕಾಯಂ ಮಿಷನ್‌ನ ಕೌನ್ಸಿಲರ್ ಕಾಜಲ್ ಭಟ್ ಟೀಕಿಸಿದ್ದಾರೆ. ಮುಕ್ತ ಚರ್ಚೆಯಲ್ಲಿ ಪಾಕಿಸ್ತಾನದ ವಿಶ್ವಸಂಸ್ಥೆಯ ರಾಯಭಾರಿ ಮುನೀರ್ ಅಕ್ರಂ, ಜಮ್ಮು ಮತ್ತು ಕಾಶ್ಮೀರದ ಬಗ್ಗೆ ನೀಡಿದ ಹೇಳಿಕೆಗೆ ಅವರು ಪ್ರತಿಕ್ರಿಯಿಸಿದ್ದಾರೆ.

ಯಾವುದೇ ದ್ವಿಪಕ್ಷೀಯ ಮಹತ್ವದ ವಿಷಯಗಳ ಬಗ್ಗೆ ಶಿಮ್ಲಾ ಮತ್ತು ಲಾಹೋರ್ ಒಪ್ಪಂದದ ಅನ್ವಯ ಚರ್ಚೆಗೆ ಭಾರತ ಬದ್ಧತೆ ಹೊಂದಿದೆ. ಯಾವುದೇ ಅರ್ಥಪೂರ್ಣ ಮಾತುಕತೆಯನ್ನು ಭಯೋತ್ಪಾದನೆ, ಹಗೆತನ ಮತ್ತು ಹಿಂಸೆಯಿಲ್ಲದ ವಾತಾವರಣದಲ್ಲಿ ಮಾತ್ರ ನಡೆಸಬಹುದು. ಅಂತಹ ಅನುಕೂಲಕರ ವಾತಾವರಣ ನಿರ್ಮಿಸುವ ಜವಾಬ್ದಾರಿ ಪಾಕಿಸ್ತಾನದ ಮೇಲಿದೆ. ಅಲ್ಲಿಯವರೆಗೆ ಭಾರತವು ಗಡಿಯಾಚೆಗಿನ ಭಯೋತ್ಪಾದನೆಗೆ ಪ್ರತ್ಯುತ್ತರ ನೀಡಲು ದೃಢವಾದ ಮತ್ತು ನಿರ್ಣಾಯಕ ಕ್ರಮಗಳನ್ನು ತೆಗೆದುಕೊಳ್ಳುವುದನ್ನು ಮುಂದುವರಿಸುತ್ತದೆ’ಎಂದು ಅವರು ಹೇಳಿದ್ದಾರೆ.

ಅಕ್ರಮವಾಗಿ ಆಕ್ರಮಿಸಿಕೊಂಡಿರುವ ಎಲ್ಲ ಪ್ರದೇಶಗಳನ್ನು ಕೂಡಲೇ ತೆರವು ಮಾಡುವಂತೆ ಭಾರತವು ಪಾಕಿಸ್ತಾನಕ್ಕೆ ಒತ್ತಾಯಿಸಿದೆ.

ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್

ಎಂಇಜಿ–ಸೆಂಟರ್ ಎಫ್‌ಸಿಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎದುರಾಳಿಗಳ ಸವಾಲನ್ನು ದಿಟ್ಟವಾಗಿ ಎದುರಿಸಿದ ಎಂಇಜಿ–ಸೆಂಟರ್ ಎಫ್‌ಸಿ ತಂಡ ಕೆಎಸ್‌ಎಫ್‌ಎ ಮತ್ತು ಬೆಂಗಳೂರು ಜಿಲ್ಲಾ ಫುಟ್‌ಬಾಲ್ ಸಂಸ್ಥೆ ಆಯೋಜಿಸಿರುವ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಭರ್ಜರಿ ಜಯ ಗಳಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಹಣಾಹಣಿಯಲ್ಲಿ ಎಂಇಜಿ ತಂಡ 2–1ರಲ್ಲಿ ಬೆಂಗಳೂರು ಯುನೈಟೆಡ್ ಎಫ್‌ಸಿಯನ್ನು ಮಣಿಸಿತು.

25ನೇ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿ ಅವಕಾಶವನ್ನು ಗೋಲಾಗಿ ಪರಿವರ್ತಿಸಿದ ಶೇಕ್ ಮುಜೀಬ್ ಅವರು ಎಂಇಜಿಯ ಖಾತೆ ತೆರೆದರು. 45ನೇ ನಿಮಿಷದಲ್ಲಿ ಅರ್ಜುನ್ ಮಧು ಗಳಿಸಿದ ಗೋಲಿನೊಂದಿಗೆ ತಂಡದ ಮುನ್ನಡೆ ಹೆಚ್ಚಿತು. ಬೆಂಗಳೂರು ಯುನೈಟೆಡ್ ಪರ ವ್ಯಾಲೆಂಟೈನ್ ಒಡಿನಾಂಬ 61ನೇ ನಿಮಿಷದಲ್ಲಿ ಗೋಲು ಗಳಿಸಿ ಸೋಲಿನ ಅಂತರ ಕಡಿಮೆ ಮಾಡಿದರು.

ಗುರುವಾರ 1.45ಕ್ಕೆ ಎಫ್‌ಸಿ ಡೆಕ್ಕನ್ ಮತ್ತು ಎಎಸ್‌ಸಿ-ಸೆಂಟರ್ ಎಫ್‌ಸಿ ತಂಡಗಳ ನಡುವೆ ಪಂದ್ಯ ನಡೆಯಲಿದ್ದು 3.45ಕ್ಕೆ ಎಡಿಇ ಎಫ್‌ಸಿ ಮತ್ತು ಜವಾಹರ್ ಯೂನಿಯನ್ ಎಫ್‌ಸಿ ತಂಡಗಳು ಸೆಣಸಲಿವೆ.



ಬೆಂಗಳೂರು ಯುನೈಟೆಡ್ ಎಫ್‌ಸಿಯ ವ್ಯಾಲೆಂಟಿನ್ (ಎಡ) ಚೆಂಡಿನೊಂದಿಗೆ ಮುನ್ನುಗ್ಗಿದರು. ಎಂಇಜಿಯ ಲಾಲ್‌ಮಿಂಬ್ವಾಂಗ ಇದ್ದಾರೆ –ಪ್ರಜಾವಾಣಿ ಚಿತ್ರ

ಜಾಧವ್ ಪ್ರಕರಣ: ಮೇಲ್ಮನವಿ ಸಲ್ಲಿಕೆಗೆ ಹೊಸ ಕಾನೂನು

ಇಸ್ಲಾಮಾಬಾದ್: ಭಾರತದ ಕುಲಭೂಷಣ್ ಜಾಧವ್ ಅವರಿಗೆ ಪಾಕಿಸ್ತಾನದ ಮಿಲಿಟರಿ ನ್ಯಾಯಾಲಯ ನೀಡಿರುವ ಮರಣದಂಡನೆ ವಿರುದ್ಧ ಮರುಪರಿಶೀಲನಾ ಮೇಲ್ಮನವಿ ಸಲ್ಲಿಸುವ ಹಕ್ಕನ್ನು ನೀಡುವುದಕ್ಕಾಗಿ ಹೊಸ ಕಾನೂನನ್ನು ಇಲ್ಲಿನ ಸಂಸತ್ತಿನ ಜಂಟಿ ಅಧಿವೇಶನದಲ್ಲಿ ಬುಧವಾರ ಅಂಗೀಕರಿಸಲಾಯಿತು.

ಭಾರತೀಯ ನೌಕಾಪಡೆಯ ನಿವೃತ್ತ ಅಧಿಕಾರಿ ಜಾಧವ್ (51) ಅವರಿಗೆ 2017ರ ಏಪ್ರಿಲ್‌ನಲ್ಲಿ ಬೇಹುಗಾರಿಕೆ ಮತ್ತು ಭಯೋತ್ಪಾದನೆಯ ಆರೋಪದ ಮೇಲೆ ಮಿಲಿಟರಿ ನ್ಯಾಯಾಲಯ ಮರಣದಂಡನೆ ವಿಧಿಸಿತ್ತು. ಜಾಧವ್ ಅವರ ಮರಣದಂಡನೆ ಆದೇಶ ಪ್ರಶ್ನಿಸಿ ಭಾರತ ಅಂತರರಾಷ್ಟ್ರೀಯ ನ್ಯಾಯಾಲಯಕ್ಕೆ (ಐಸಿಜೆ) ಮೊರೆ ಹೋಗಿತ್ತು.

ಈ ಕುರಿತು ಮರುಪರಿಶೀಲಿಸುವಂತೆ ಹಾಗೂ ಮೇಲ್ಮನವಿ ಸಲ್ಲಿಸಲು ಅವಕಾಶ ಕಲ್ಪಿಸುವಂತೆ ಐಸಿಜೆ 2019 ರ ಜುಲೈನಲ್ಲಿ ತೀರ್ಪು ನೀಡಿತ್ತು.

ಇದೇ ವರ್ಷದ ಜೂನ್‌ನಲ್ಲಿ ಮಂಡಿಸಿದ್ದ ಹೊಸ ಕಾನೂನುಗಳನ್ನು ಅಂಗೀಕರಿಸಲು ಬುಧವಾರ ಸಂಸತ್ತಿನ ಜಂಟಿ ಅಧಿವೇಶನ ಕರೆಯಲಾಗಿತ್ತು. ಐಸಿಜೆ ತೀರ್ಪಿನ ಅಡಿಯಲ್ಲಿ ಹೊಸ ಕಾನೂನನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

ಕುಲ್ಗಾಮ್: ನಾಲ್ವರು ಉಗ್ರರ ಹತ್ಯೆ

ಶ್ರೀನಗರ: ದಕ್ಷಿಣ ಕಾಶ್ಮೀರದ ಕುಲ್ಗಾಮ್ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ನಡೆಸಿದ ಎರಡು ಪ್ರತ್ಯೇಕ ಕಾರ್ಯಾಚರಣೆಯಲ್ಲಿ ಉಗ್ರ ಸಂಘಟನೆ ಟಿಆರ್‌ಎಫ್ ಕಮಾಂಡರ್ ಅಫಾಕ್ ಸಿಕಂದರ್ ಸೇರಿ ನಾಲ್ವರು ಉಗ್ರರು ಹತರಾಗಿದ್ದಾರೆ.

ಕುಲ್ಗಾಮ್ ಜಿಲ್ಲೆಯ ಗೋಪ್ಲಪೋರಾ ಹಾಗೂ ಪೊಂಬೆ ಪ್ರದೇಶಗಳಲ್ಲಿ ಬುಧವಾರ ಭದ್ರತಾ ಪಡೆಗಳು ಹಾಗೂ ಉಗ್ರರ ನಡುವೆ ಗುಂಡಿನ ಚಕಮಕಿ ನಡೆದಿದೆ. ಈ ಗುಂಡಿನ ಚಕಮಕಿಯಲ್ಲಿ ಭದ್ರತಾ ಪಡೆಯ ಗುಂಡಿಗೆ ನಾಲ್ವರು ಉಗ್ರರು ಬಲಿಯಾಗಿದ್ದಾರೆ.

ಉಗ್ರರ ಸೆರೆ: ದಕ್ಷಿಣ ಕಾಶ್ಮೀರದ ಪುಲ್ವಾಮ ಜಿಲ್ಲೆಯಲ್ಲಿ ಬುಧವಾರ ಲಷ್ಕರ್–ಎ–ತೈಯಬಾ (ಎಲ್‌ಇಟಿ) ಸಂಘಟನೆಗೆ ಸೇರಿದ ಇಬ್ಬರು ಉಗ್ರರನ್ನು ಪೊಲೀಸರು ಬಂಧಿಸಿದ್ದಾರೆ. ಅಮಿರ್ ಬಸೀರ್ ಮತ್ತು ಮುಖ್ತಾರ್ ಭಟ್ ಬಂಧಿತ ಉಗ್ರರು.

ಲಂಕಾ: ಪ್ರತಿಭಟನೆ

ಕೊಲಂಬೊ: ಇಂಧನ ಮತ್ತು ಅಗತ್ಯ ವಸ್ತುಗಳ ಕೊರತೆ ವಿರೋಧಿಸಿ ಶ್ರೀಲಂಕಾದ ರಾಜಧಾನಿಯಲ್ಲಿ ಸಾವಿರಾರು ಜನರು ಪ್ರತಿಭಟನೆ ನಡೆಸಿದರು.


ಯುನೈಟೆಡ್ ಪೀಪಲ್ಸ್ ಫೋರ್ಸ್ ನೇತೃತ್ವದಲ್ಲಿ ಪ್ರತಿಭಟನೆ ನಡೆದಿದೆ. ದೇಶದ ಆರ್ಥಿಕ ಬಿಕ್ಕಟ್ಟಿಗೆ ಅಧ್ಯಕ್ಷ ಗೋಟಬಯ ರಾಜಪಕ್ಸೆ ಅವರ ಸರ್ಕಾರದ ನೀತಿಗಳೇ ಕಾರಣ ಎಂದು ಪ್ರತಿಭಟನಾನಿರತರು ಆರೋಪಿಸಿದರು.

ಡಿಕ್ಕಿ ತಪ್ಪಿಸಿದ ಭಾರತದ ಚಂದ್ರಯಾನ–2

ಬೆಂಗಳೂರು: ಚಂದ್ರನ ಸುತ್ತುತ್ತ ಶೋಧ ಕಾರ್ಯಾಚರಣೆಯಲ್ಲಿ ತೊಡಗಿರುವ ಬಾಹ್ಯಾಕಾಶ ನೌಕೆಗಳು ಒಂದಕ್ಕೊಂದು ಅಪ್ಪಳಿಸುವುದನ್ನು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೊ) ಮುನ್ನೆಚ್ಚರಿಕೆ ಕ್ರಮಗಳಿಂದಾಗಿ ತಪ್ಪಿಸಿದೆ. ಇಸ್ರೊದ ಚಂದ್ರಯಾನ–2 ಆರ್ಬಿಟರ್ ಮತ್ತು ನಾಸಾದ ಎಲ್‌ಆರ್‌ಒ (ಲೂನಾರ್ ರಿಕನೈಸನ್ಸ್ ಆರ್ಬಿಟರ್) ಡಿಕ್ಕಿಯಾಗುವ ಸಾಧ್ಯತೆ ಎದುರಾಗಿತ್ತು.

ಇಸ್ರೊ ಪ್ರಕಾರ, ಚಂದ್ರನ ಉತ್ತರ ಧ್ರುವದ ಸಮೀಪದಲ್ಲಿ 2021ರ ಅ. 20ರಂದು ಚಂದ್ರಯಾನ–2 ಆರ್ಬಿಟರ್ ಮತ್ತು ಎಲ್‌ಆರ್‌ಒ ಒಂದಕ್ಕೊಂದು ತೀರ ಹತ್ತಿರಕ್ಕೆ ಬರುವ ಮುನ್ಸೂಚನೆ ದೊರಕಿತ್ತು. ಇಸ್ರೊ ಮತ್ತು ನಾಸಾದ ಜೆಟ್ ಪ್ರೊಪಲ್ಷನ್ ಲ್ಯಾಬೊರೇಟರಿ (ಜೆಪಿಎಲ್) ಮಾಡಿದ ಲೆಕ್ಕಾಚಾರಗಳಲ್ಲಿ ಉಭಯ ಬಾಹ್ಯಾಕಾಶ ನೌಕೆಗಳ ಕಕ್ಷೆಗಳ ಅಂತರ 100 ಮೀಟರ್‌ಗೂ ಕಡಿಮೆಯಾಗುವುದನ್ನು ತಿಳಿಯಲಾಯಿತು. ಅ. 20ರಂದು ಬೆಳಿಗ್ಗೆ 11:15ಕ್ಕೆ (ಭಾರತೀಯ ಕಾಲಮಾನ) ಎರಡೂ ಬಾಹ್ಯಾಕಾಶ ನೌಕೆಗಳ ನಡುವಿನ ಅಂತರ ಮೂರು ಕಿ.ಮೀ.ಗೆ ಇಳಿಕೆಯಾಗುತ್ತಿತ್ತು. ವೇಗವಾಗಿ ಕಕ್ಷೆಯಲ್ಲಿ ಸುತ್ತುವ ಉಪಗ್ರಹಗಳು ಪ್ರತಿ ಸೆಕೆಂಡ್‌ಗೆ ಹಲವು ಕಿ.ಮೀ. ದೂರ ಕ್ರಮಿಸುವುದರಿಂದ 3 ಕಿ.ಮೀ ದೂರವು ಅತ್ಯಂತ ಕಡಿಮೆ ಅಂತರವೆಂದೇ ಪರಿಗಣಿಸಲಾಗುತ್ತದೆ.

ಷೇರುಪೇಟೆ ವಹಿವಾಟು ▼314



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,999
ಇಂದಿನ ಅಂತ್ಯ	17,898
▼	101
ದಿನದ ಕನಿಷ್ಠ	17,879

ವಿನಿಮಯ ದರ

$ ಡಾಲರ್	74.28
£ ಪೌಂಡ್	100.04
€ ಯುರೊ	84.16
¥ ಯೆನ್ (100ಕ್ಕೆ)	65

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹470
12 ಮೊಟ್ಟೆಗೆ	₹63
ಮೈಸೂರು	
100 ಮೊಟ್ಟೆಗೆ	₹465

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1360 (1370)
ಸೋಯಾ (ರಿಫೈನ್ಡ್)	₹1245 (1235)
ಸೂರ್ಯಕಾಂತಿ (ರಿಫೈನ್ಡ್)	₹1290 (1280)
ಪಾಮೋಲಿನ್	₹1194 (1175)

ವಾಕ್‌ಮೇಟ್ ಜಾಲತಾಣ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾದರಕ್ಷೆಗಳ ಪ್ರಮುಖ ಬ್ರ್ಯಾಂಡ್ ಆಗಿರುವ ವಾಕ್‌ಮೇಟ್‌ನ ಆನ್‌ಲೈನ್ ಜಾಲತಾಣ www. walkmate.co.inಗೆ ನಟ ಉಪೇಂದ್ರ ಅವರು ಬುಧವಾರ ಚಾಲನೆ ನೀಡಿದರು.

‘ವಾಕ್‌ಮೇಟ್‌ನೊಂದಿಗೆ 15 ವರ್ಷಗಳ ನಂಟು ಹೊಂದಿರುವುದು ಸಂತೋಷದ ವಿಷಯ. ಗುಣಮಟ್ಟ, ವಿನ್ಯಾಸ ಮತ್ತು ಹೊಸತನದಲ್ಲಿ ವಾಕ್‌ಮೇಟ್ ಹೆಚ್ಚು ಇಷ್ಟವಾಗುತ್ತದೆ’ ಎಂದು ಬ್ರ್ಯಾಂಡ್‌ನ ರಾಯಭಾರಿಯೂ ಆಗಿರುವ ಉಪೇಂದ್ರ ಹೇಳಿದರು. ವಾಕ್‌ಮೇಟ್ ಬ್ರ್ಯಾಂಡ್‌ನ ಹೊಸ ಜಾಹೀರಾತು ಚಿತ್ರವನ್ನು ಸಹ ಅವರು ಇದೇ ವೇಳೆ ಬಿಡುಗಡೆ ಮಾಡಿದರು.

ತನ್ನ ಎಲ್ಲ ಉತ್ಪನ್ನಗಳು ಗ್ರಾಹಕರಿಗೆ ಸುಲಭವಾಗಿ ಸಿಗುವಂತೆ ಮಾಡುವ ಉದ್ದೇಶದಿಂದ ಕಂಪನಿಯು ಈ ಜಾಲತಾಣವನ್ನು ರೂಪಿಸಿದ್ದು, ಜನರು ಇಲ್ಲಿಂದಲೂ ತಮ್ಮಿಷ್ಟದ ಉತ್ಪನ್ನಗಳನ್ನು ಖರೀದಿಸಬಹುದು ಎಂದು ಲೂನಾರ್ಸ್ ಎಕ್ಸ್‌ಪೋರ್ಟ್ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ರೋಶನ್ ಬಾಸ್ಟಿಯನ್ ಹೇಳಿದರು.

ಸದ್ಯ ವಾಕ್‌ಮೇಟ್ ಅನ್ನು ಪ್ರತಿ ದಿನ 1 ಲಕ್ಷ ಜನರು ಖರೀದಿಸುತ್ತಿದ್ದು, ಈ ಸಂಖ್ಯೆಯನ್ನು 10 ಲಕ್ಷಕ್ಕೆ ಹೆಚ್ಚಿಸುವ ಮೂಲಕ ರಾಜ್ಯದ ಬ್ರ್ಯಾಂಡ್ ಅನ್ನು ರಾಷ್ಟ್ರ ಮಟ್ಟದಲ್ಲಿ ಜನಪ್ರಿಯಗೊಳಿಸುವ ಗುರಿಯನ್ನು ಇಟ್ಟುಕೊಂಡಿದ್ದೇವೆ ಎಂದು ಅವರು ತಿಳಿಸಿದರು.


ಷೇರುಪೇಟೆಗಳಲ್ಲಿ ಸತತ ಎರಡನೇ ದಿನವೂ ನಕಾರಾತ್ಮಕ ವಹಿವಾಟು

ಲಾಭಗಳಿಕೆಗೆ ಸೆನ್ಸೆಕ್ಸ್, ನಿಫ್ಟಿ ಇಳಿಕೆ

ಮುಂಬೈ (ಪಿಟಿಐ): ಬ್ಯಾಂಕಿಂಗ್, ತೈಲ ಮತ್ತು ಅನಿಲ ಹಾಗೂ ಔಷಧ ವಲಯದ ಕಂಪನಿಗಳ ಷೇರುಗಳು ಬುಧವಾರದ ವಹಿವಾಟಿನಲ್ಲಿ ಲಾಭ ಗಳಿಕೆಗೆ ಒಳಗಾದವು. ಇದರಿಂದಾಗಿ ಷೇರುಪೇಟೆಗಳ ವಹಿವಾಟು ಎರಡನೇ ದಿನವೂ ಇಳಿಕೆ ಕಾಣುವಂತಾಯಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 314 ಅಂಶ ಇಳಿಕೆ ಕಂಡು 60,008ಕ್ಕೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 101 ಅಂಶ ಇಳಿಕೆ ಆಗಿ 17,898 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು.

ಬಿಎಸ್‌ಇಯಲ್ಲಿ ದಿನದ ವಹಿವಾಟಿನಲ್ಲಿ ಎಕ್ಸಿಸ್ ಬ್ಯಾಂಕ್ ಷೇರು ಹೆಚ್ಚಿನ ನಷ್ಟ ಕಂಡಿತು. ಬ್ಯಾಂಕ್ ಷೇರು ಮೌಲ್ಯವು ಶೇಕಡ 2ರಷ್ಟು ಇಳಿಕೆ ಆಯಿತು. ರಿಲಯನ್ಸ್ ಇಂಡಸ್ಟ್ರೀಸ್ ಷೇರು ಮೌಲ್ಯ ಶೇ 1.91ರಷ್ಟು, ಕೋಟಕ್ ಬ್ಯಾಂಕ್ ಷೇರು ಮೌಲ್ಯ ಶೇ 1.51ರಷ್ಟು ಮತ್ತು ಭಾರ್ತಿ ಏರ್‌ಟೆಲ್ ಷೇರು ಮೌಲ್ಯ ಶೇ 1.39ರಷ್ಟು ಇಳಿಕೆ ಕಂಡಿದೆ.



ಮುಖ್ಯಾಂಶಗಳು

- ಎಕ್ಸಿಸ್ ಬ್ಯಾಂಕ್ ಷೇರು ಮೌಲ್ಯ ಶೇ 2 ರಷ್ಟು ಇಳಿಕೆ
- ಹೂಡಿಕೆದಾರರಲ್ಲಿ ಆತಂಕ ಮೂಡಿಸಿದ ಜಾಗತಿಕ ಹಣದುಬ್ಬರದ ಏರಿಕೆ
- ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 9 ಪೈಸೆಗಳಷ್ಟು ಏರಿಕೆ

ಇಂಗ್ಲೆಂಡ್‌ನ ವಾರ್ಷಿಕ ಹಣದುಬ್ಬರ ದರವು ಅಕ್ಟೋಬರ್‌ನಲ್ಲಿ ಶೇ 3.1ರಿಂದ ಶೇ 4.2ಕ್ಕೆ ಏರಿಕೆ ಕಂಡಿದೆ. ಇದು ಜಾಗತಿಕ ಮಟ್ಟದಲ್ಲಿ ಹಣದುಬ್ಬರದ ಬಗ್ಗೆ ಹೂಡಿಕೆದಾರರ ಆತಂಕಕ್ಕೆ ಕಾರಣವಾಯಿತು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಮಿಡ್ ಕ್ಯಾಪ್ ಸೂಚ್ಯಂಕ ಶೇ 0.21ರಷ್ಟು ಇಳಿಕೆ ಕಂಡಿತು.

ರೂಪಾಯಿ ಮೌಲ್ಯ ಹೆಚ್ಚಳ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 9 ಪೈಸೆ ಹೆಚ್ಚಾಗಿ ಒಂದು ಡಾಲರ್‌ಗೆ ₹ 74.28ರಂತೆ ವಿನಿಮಯಗೊಂಡಿತು.

4ಜಿ ಡೌನ್‌ಲೋಡ್ ವೇಗ: ಮುಂಚೂಣಿಯಲ್ಲಿ ಜಿಯೊ

ನವದೆಹಲಿ (ಪಿಟಿಐ): 4ಜಿ ಡೌನ್‌ಲೋಡ್ ವೇಗಕ್ಕೆ ಸಂಬಂಧಿಸಿದಂತೆ ಜಿಯೊ ಕಂಪನಿಯು ಅಕ್ಟೋಬರ್‌ನಲ್ಲಿ ಮೊದಲ ಸ್ಥಾನದಲ್ಲಿದ್ದು, ಡೌನ್‌ಲೋಡ್ ವೇಗವು ಪ್ರತಿ ಸೆಕೆಂಡ್‌ಗೆ ಸರಾಸರಿ 21.9 ಮೆಗಾಬೈಟ್ ಇದೆ ಎಂದು ಟ್ರಾಯ್ ಮಾಹಿತಿ ನೀಡಿದೆ.

ಆದರೆ, ಭಾರ್ತಿ ಏರ್‌ಟೆಲ್ ಮತ್ತು ವೊಡಾಫೋನ್ ಐಡಿಯಾ ಕಂಪನಿಗಳ ಡೌನ್‌ಲೋಡ್ ವೇಗವು ಹೆಚ್ಚಾಗುತ್ತಿರುವುದರಿಂದ ಜಿಯೊ ನೆಟ್‌ವರ್ಕ್ ಜೊತೆಗಿನ ಅಂತರವು ಕಡಿಮೆ ಆಗುತ್ತಿದೆ ಎಂದು ತಿಳಿಸಿದೆ.

ಏರ್‌ಟೆಲ್ 4ಜಿ ಡೇಟಾ ಡೌನ್‌ಲೋಡ್ ವೇಗವು ಅಕ್ಟೋಬರ್‌ನಲ್ಲಿ 13.2 ಎಂಬಿಪಿಎಸ್ ಇದೆ. ವಿಐಎಲ್ 4ಜಿ ವೇಗವು 15.6 ಎಂಬಿಪಿಎಸ್ ಇದೆ.

ಅಕ್ಟೋಬರ್‌ನಲ್ಲಿ ವಿಐಎಲ್ 4ಜಿ ಅಪ್‌ಲೋಡ್ ವೇಗವು 7.6 ಎಂಬಿಪಿಎಸ್ ಇದ್ದು, ಮೊದಲ ಸ್ಥಾನ ಪಡೆದುಕೊಂಡಿದೆ. ಜಿಯೊ ಅಪ್‌ಲೋಡ್ ವೇಗವು 6.4 ಎಂಬಿಪಿಎಸ್ ಮತ್ತು ಏರ್‌ಟೆಲ್ ವೇಗವು 5.2 ಎಂಬಿಪಿಎಸ್ ಇದೆ.



ಚಿನ್ನ ₹ 402 ಇಳಿಕೆ



ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ಚಿನ್ನ, ಬೆಳ್ಳಿ ದರ ಇಳಿಕೆ ಕಂಡಿದೆ.

ಚಿನ್ನದ ದರವು 10 ಗ್ರಾಂಗೆ ₹ 402ರಷ್ಟು ಕಡಿಮೆ ಆಗಿ, ₹ 48,116ಕ್ಕೆ ತಲುಪಿದೆ.

ಬೆಳ್ಳಿಯ ಬೆಲೆಯು ಕೆ.ಜಿ.ಗೆ ₹ 528ರಷ್ಟು ಇಳಿಕೆ ಕಂಡು ₹ 65,218ರಂತೆ ಮಾರಾಟ ಆಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	540
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-42500
ಹಳತು	46000-51500
ಕಾರ್ಕಳ	
ಹೊಸತು	35000-42500
ಹಳತು	46000-51500
ಪುತ್ತೂರು	
ಕೋಕ	10500-26000
ಹೊಸತು	27500-42500
ಕುಮಟ	
ಬಿಳಿಗೋಟು	12019-18699
ಕೋಕ	21019-33339
ಹೊಸಚಾಲಿ	38099-40539
ಹಳೆಚಾಲಿ	45109-47599
ಫ್ಯಾಕ್ಟರಿ	12019-18699
ಶಿರಸಿ	
ಬೆಟ್ಟೆ	38699-45700
ಬಿಳಿಗೋಟು	25019-42999
ಚಾಲಿ	39799-48312
ರಾಶಿ	45699-49015
ರಾಮನಗರ ರೇಷ್ಮೆ	
ಮಿಶ್ರತಳಿ	270-530
ದ್ವಿತಳಿ	341-740

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ ಮುದ್ರೆಮನೆ	ಹಾಸನ ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	13600	---	222.05 ಸೆಂಟ್ಸ್
ಎಸಿ	---	5250	---	
ಆರ್‌ಪಿ	---	---	6300	ಲಂಡನ್
ಆರ್‌ಸಿ	---	3025	3700	2237 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

17-11-2021

ಜಾವಾ 70/80(ಹೊಸ)	10550-10600
ಜಾವಾ 80/90(ಹೊಸ)	10150-10200
ದಪ್ಪ ಮಧ್ಯಪ್ರದೇಶ(ಹೊಸ)	9000-9100
ದಪ್ಪ ಗುಜರಾತ್(ಹೊಸ)	8200-8300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1370 (1380)
ಒಂದು ವಾರದ ಡೆಲಿವರಿ	1365 (1375)
ಸೋಯಾ ಕಚ್ಚಾ	1190 (1175)
ಪಾಮ್ ವಾರದ ಡೆಲಿವರಿ	1192 (1173)
ಸೂರ್ಯಕಾಂತಿ ಎಣ್ಣೆ ಕಚ್ಚಾ	1205 (1190)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
48,975 (49,200)
ಬೆಳ್ಳಿ ಕೆ.ಜಿ 66,550 (66,950)

ಆವರಣದಲ್ಲಿ ಸೋಮವಾರದ ಧಾರಣೆ

ವೇದಾಂತ ಸಮೂಹದ ಪುನರ್‌ರಚನೆಗೆ ಸಿದ್ಧತೆ

ನವದೆಹಲಿ (ಪಿಟಿಐ): ಉದ್ಯಮಿ ಅನಿಲ್ ಅಗರ್ವಾಲ್ ಒಡೆತನದ ವೇದಾಂತ ಲಿಮಿಟೆಡ್ ಸಮೂಹವು ತನ್ನ ವಹಿವಾಟನ್ನು ಪುನರ್‌ರಚನೆ ಮಾಡುವುದಾಗಿ ಹೇಳಿದೆ. ಅದರ ಭಾಗವಾಗಿ ಅಲ್ಯುಮಿನಿಯಂ, ಕಬ್ಬಿಣ ಮತ್ತು ಉಕ್ಕು, ತೈಲ ಮತ್ತು ಅನಿಲಕ್ಕೆ ಸಂಬಂಧಿಸಿದ ವಹಿವಾಟುಗಳನ್ನು ಸಮೂಹದಿಂದ ಪ್ರತ್ಯೇಕಿಸಲಾಗುವುದು ಮತ್ತು ಷೇರುಪೇಟೆಯಲ್ಲಿ ಪ್ರತ್ಯೇಕವಾಗಿ ನೋಂದಾಯಿಸಲಾಗುವುದು ಎಂದು ಅದು ಹೇಳಿದೆ.

ವೇದಾಂತ ಲಿ. ಮತ್ತು ಪ್ರತ್ಯೇಕ ಕಂಪನಿಗಳಾಗಲಿರುವ ಮೂರು ಕಂಪನಿಗಳು ಸಮಾನಾಂತರವಾಗಿ ಕಾರ್ಯಾಚರಿಸಲಿವೆ ಎಂದು ಸಮೂಹದ ಅಧ್ಯಕ್ಷ ಅಗರ್ವಾಲ್ ತಿಳಿಸಿದ್ದಾರೆ. ಈ ಮೂರು ಉದ್ದಿಮೆಗಳು ಬೆಳವಣಿಗೆ ಸಾಧಿಸುವ ಉತ್ತಮ ಸಾಮರ್ಥ್ಯ ಹೊಂದಿವೆ. ಈ ಮಾದರಿಯು ಬೆಳವಣಿಗೆಗೆ ಸಹಜವಾದ ಮಾರ್ಗ ನೀಡುವ ಜೊತೆಗೆ ಷೇರುದಾರರ ಮೌಲ್ಯವನ್ನೂ ಹೆಚ್ಚಿಸಲಿವೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಸಮೂಹದ ಪುನರ್ ರಚನೆಗೆ ಇರುವ ಆಯ್ಕೆಗಳ ಪರಿಶೀಲನೆ ನಡೆಸಲು ಮತ್ತು ಆ ಕುರಿತು ಶಿಫಾರಸು ಮಾಡಲು ವೇದಾಂತ ಮಂಡಳಿಯು ನಿರ್ದೇಶಕರ ಸಮಿತಿಯೊಂದನ್ನು ರಚಿಸಿದೆ ಎಂದು ಅಗರ್ವಾಲ್ ಹೇಳಿದ್ದಾರೆ.

ಡಿಐಪಿಎಎಂ ಕಾರ್ಯದರ್ಶಿ ಪಾಂಡೆ ಮಾಹಿತಿ

ಮಾರ್ಚ್‌ಗೆ ಮುನ್ನ ಆರು ಕಂಪನಿಗಳ ಖಾಸಗೀಕರಣ

ನವದೆಹಲಿ (ಪಿಟಿಐ): ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ (ಬಿಪಿಸಿಎಲ್), ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್ (ಬಿಇಎಂಎಲ್), ಶಿಪ್ಪಿಂಗ್ ಕಾರ್ಪೊರೇಷನ್ ಸೇರಿದಂತೆ ತನ್ನ ಮಾಲೀಕತ್ವದ ಆರು ಕಂಪನಿಗಳ ಖಾಸಗೀಕರಣಕ್ಕೆ ಹಣಕಾಸಿನ ಬಿಡ್‌ಗಳನ್ನು ಜನವರಿಗೂ ಮೊದಲೇ ಆಹ್ವಾನಿಸಲು ಕೇಂದ್ರ ಸರ್ಕಾರವು ಮುಂದಾಗಿದೆ.

‘ಈ ಹಣಕಾಸು ವರ್ಷದಲ್ಲಿ ಐದರಿಂದ ಆರು ಕಂಪನಿಗಳನ್ನು ಖಾಸಗಿಯವರಿಗೆ ಮಾರಾಟ ಮಾಡಲಾಗುವುದು. 19 ವರ್ಷಗಳ ನಂತರದಲ್ಲಿ ಇದು ಸಾಧ್ಯವಾಗುತ್ತಿದೆ. ಬಿಇಎಂಎಲ್, ಶಿಪ್ಪಿಂಗ್ ಕಾರ್ಪೊರೇಷನ್, ಪವನ್ ಹನ್ಸ್, ಸೆಂಟ್ರಲ್ ಎಲೆಕ್ಟ್ರಾನಿಕ್ಸ್, ಎನ್‌ಐಎನ್‌ಎಲ್ ಕಂಪನಿಗಳ ಖಾಸಗೀಕರಣಕ್ಕೆ ಹಣಕಾಸಿನ ಬಿಡ್‌ಗಳನ್ನು ಡಿಸೆಂಬರ್, ಜನವರಿ ಸಮಯದಲ್ಲಿ ಆಹ್ವಾನಿಸಲಾಗುತ್ತದೆ. ಆಗ ನಮಗೆ ಖಾಸಗೀಕರಣ ಪ್ರಕ್ರಿಯೆಯನ್ನು ಪ್ರಸಕ್ತ ಹಣಕಾಸು ವರ್ಷದಲ್ಲಿಯೇ ಪೂರ್ಣಗೊಳಿಸಲು ಸಾಧ್ಯವಾಗುತ್ತದೆ’ ಎಂದು ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆಯ (ಡಿಐಪಿಎಎಂ) ಕಾರ್ಯದರ್ಶಿ ತುಹಿನ್ ಕಾಂತ ಪಾಂಡೆ ಹೇಳಿದ್ದಾರೆ.

ಭಾರತೀಯ ಕೈಗಾರಿಕಾ ಒಕ್ಕೂಟ ಆಯೋಜಿಸಿರುವ ಜಾಗತಿಕ ಆರ್ಥಿಕ ನೀತಿ ಶೃಂಗಸಭೆಯಲ್ಲಿ ಮಾತನಾಡಿದ ಅವರು, ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಐಪಿಒ (ಆರಂಭಿಕ ಸಾರ್ವಜನಿಕ ಹೂಡಿಕೆ) ಜನವರಿ–ಮಾರ್ಚ್ ತ್ರೈಮಾಸಿಕದಲ್ಲಿ ನಡೆಯುವ ನಿರೀಕ್ಷೆ ಇದೆ ಎಂದು ತಿಳಿಸಿದ್ದಾರೆ. ಏರ್ ಇಂಡಿಯಾ ಕಂಪನಿಯನ್ನು ಟಾಟಾ ಸಮೂಹಕ್ಕೆ ಹಸ್ತಾಂತರ ಮಾಡುವ ಪ್ರಕ್ರಿಯೆಯನ್ನು ಡಿಸೆಂಬರ್‌ಗೆ ಕೊನೆಯೊಳಗೆ ಪೂರ್ಣಗೊಳಿಸುವ ಗುರಿಯನ್ನು ಸರ್ಕಾರ ಹೊಂದಿದೆ ಎಂದಿದ್ದಾರೆ.

ಏರ್ ಇಂಡಿಯಾ ಮಾರಾಟದ ಅನುಭವ ಸರ್ಕಾರಕ್ಕೆ ಇರುವ ಕಾರಣದಿಂದಾಗಿ, ಮುಂದಿನ ದಿನಗಳಲ್ಲಿ ಸರ್ಕಾರಿ ಸ್ವಾಮ್ಯದ ಕಂಪನಿಗಳ ಖಾಸಗೀಕರಣವು ತ್ವರಿತವಾಗಿ ಆಗಬಹುದು ಎಂದೂ ಅವರು ಹೇಳಿದ್ದಾರೆ. ‘ಇದಕ್ಕೆ ಖಾಸಗಿ ವಲಯದ ಸಹಕಾರ ಕೂಡ ಬೇಕಿದೆ. ಮಾರಾಟಕ್ಕೆ ಇರುವ ಸರ್ಕಾರಿ ಕಂಪನಿಗಳ ಖರೀದಿಗೆ ಅವರು ಬಿಡ್ ಸಲ್ಲಿಸಬೇಕು. ಖಾಸಗೀಕರಣ ಎಂಬುದು ಸರ್ಕಾರದ ನೀತಿ ಮಾತ್ರವೇ ಆಗಿರದೆ, ಅದು ಕಾರ್ಯರೂಪದಲ್ಲಿ ಕೂಡ ಬರುವ ಸ್ಥಿತಿಯತ್ತ ನಾವು ಹೋಗುತ್ತಿದ್ದೇವೆ’ ಎಂದು ಪಾಂಡೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಯಾವ ಕಂಪನಿಗಳ ಮಾರಾಟ?

- ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್
- ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್
- ಶಿಪ್ಪಿಂಗ್ ಕಾರ್ಪೊರೇಷನ್
- ಪವನ್ ಹನ್ಸ್
- ಸೆಂಟ್ರಲ್ ಎಲೆಕ್ಟ್ರಾನಿಕ್ಸ್
- ಎನ್‌ಐಎನ್‌ಎಲ್



ಎಲ್‌ಎಸಿಯಲ್ಲಿರುವ ಯೋಧರಿಗೆ ಅಗತ್ಯ ಸಾಮಗ್ರಿ ಪೂರೈಕೆಗೆ ಯುದ್ಧವಿಮಾನ ನಿಯೋಜನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಚೀನಾದೊಂದಿಗಿನ ಸಂಘರ್ಷ ಈ ಚಳಿಗಾಲದಲ್ಲೂ ಮುಂದುವರಿಯುವ ಸಾಧ್ಯತೆಗಳಿವೆ. ಈ ಹಿನ್ನೆಲೆಯಲ್ಲಿ ಪೂರ್ವ ಲಡಾಖ್‌ನ ವಾಸ್ತವ ನಿಯಂತ್ರಣ ರೇಖೆ (ಎಲ್‌ಎಸಿ) ಬಳಿ ಕರ್ತವ್ಯದಲ್ಲಿರುವ ಯೋಧರಿಗೆ ಅಗತ್ಯವಿರುವ ಸಾಮಗ್ರಿಗಳ ಪೂರೈಕೆಗಾಗಿ ಭಾರತ ಮಿಲಿಟರಿ ವಿಮಾನಗಳನ್ನು ನಿಯೋಜಿಸಿದೆ.

ಈ ಕಾರ್ಯಾಚರಣೆಗೆ ‘ಆಪರೇಷನ್ ಹರ್ಕ್ಯುಲಸ್’ ಎಂದು ಹೆಸರಿಡಲಾಗಿದೆ. ವಾಯುಪಡೆಯ ಸಿ–17, ಐಎಲ್–76 ಹಾಗೂ ಎಎನ್–32 ಯುದ್ಧವಿಮಾನಗಳನ್ನು ಮಂಗಳವಾರ ಈ ಕಾರ್ಯಾಚರಣೆಗೆ ಅಣಿಗೊಳಿಸಲಾಯಿತು.

‘ಆಹಾರ, ಉಡುಪುಗಳು, ಇಂಧನ ಸೇರಿದಂತೆ ಯೋಧರಿಗೆ ಬೇಕಾದ ಅಗತ್ಯ ವಸ್ತುಗಳನ್ನು ಈ ಯುದ್ಧವಿಮಾನಗಳು ಸಾಗಾಟ ಮಾಡಲಿವೆ’ ಎಂದು ರಕ್ಷಣಾ ಇಲಾಖೆ ಬಿಡುಗಡೆ ಮಾಡಿರುವ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಐಸಿಸಿ ಕ್ರಿಕೆಟ್ ಸಮಿತಿಗೆ ಗಂಗೂಲಿ ಅಧ್ಯಕ್ಷ

ದುಬೈ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಅಧ್ಯಕ್ಷ ಸೌರವ್ ಗಂಗೂಲಿ ಅವರು ಐಸಿಸಿಯ ಪುರುಷರ ಕ್ರಿಕೆಟ್ ಸಮಿತಿ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ.

ಮಾಜಿ ಕ್ರಿಕೆಟಿಗ, ಲೆಗ್ ಸ್ಪಿನ್ನರ್ ಅನಿಲ್ ಕುಂಬ್ಳೆ ಅವರ ಸ್ಥಾನಕ್ಕೆ ಗಂಗೂಲಿ ನೇಮಕಗೊಂಡಿದ್ದಾರೆ. 2012ರಿಂದ ಈ ಸ್ಥಾನದಲ್ಲಿದ್ದ ಕುಂಬ್ಳೆ ತಲಾ ಮೂರು ವರ್ಷಗಳ ಗರಿಷ್ಠ ಮೂರು ಅವಧಿಗಳನ್ನು ಪೂರೈಸಿದ್ದಾರೆ.

‘ಗಂಗೂಲಿ ಅವರನ್ನು ಐಸಿಸಿಯ ಪುರುಷರ ಕ್ರಿಕೆಟ್ ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ಸ್ವಾಗತಿಸಲು ಸಂತಸ ಎನಿಸುತ್ತಿದೆ. ವಿಶ್ವದ ಶ್ರೇಷ್ಠ ಆಟಗಾರರಲ್ಲಿ ಒಬ್ಬರಾಗಿ, ನಂತರ ಆಡಳಿತಗಾರರಾಗಿ ಗಂಗೂಲಿ ಹೊಂದಿರುವ ಅನುಭವ ಕ್ರಿಕೆಟ್‌ಗೆ ಸಂಬಂಧಿಸಿದ ಉತ್ತಮ ನಿರ್ಧಾರಗಳನ್ನು ತೆಗೆದುಕೊಳ್ಳಲು ನೆರವಾಗಲಿದೆ’ ಎಂದು ಐಸಿಸಿ ಅಧ್ಯಕ್ಷ ಗ್ರೆಗ್ ಬಾರ್ಕ್ಲೆ ಹೇಳಿದ್ದಾರೆ.

‘ಒಂಬತ್ತು ವರ್ಷಗಳಿಂದ ಅತ್ಯುತ್ತಮ ರೀತಿ ಮುನ್ನಡೆಸಿದ ಅನಿಲ್ ಕುಂಬ್ಳೆ ಅವರಿಗೂ ಧನ್ಯವಾದ ಹೇಳಲು


ಸೌರವ್ ಗಂಗೂಲಿ

ಬಯಸುತ್ತೇನೆ. ಅವರ ಅವಧಿಯಲ್ಲಿ ಡಿಆರ್‌ಎಸ್ ಮತ್ತು ಅನುಮಾನಾಸ್ಪದ ಬೌಲಿಂಗ್ ಶೈಲಿಗೆ ಸಂಬಂಧಿಸಿ ಸುಧಾರಿತ ತಂತ್ರಜ್ಞಾನಗಳ ಬಳಕೆಯಾಗಿರುವುದು ಶ್ಲಾಘನೀಯ’ ಎಂದೂ ಅವರು ತಿಳಿಸಿದ್ದಾರೆ.

ಕ್ರಿಕೆಟ್ ವೆಸ್ಟ್ ಇಂಡೀಸ್‌ನ ಸಿಇಒ ಜಾನಿ ಗ್ರೇವ್ ಅವರನ್ನು ಐಸಿಸಿ ಮಹಿಳಾ ಕ್ರಿಕೆಟ್ ಸಮಿತಿಗೆ ನೇಮಕ ಮಾಡಲಾಗಿದೆ.

ಅಫ್ಗಾನ್ ಕ್ರಿಕೆಟ್: ಗುಂಪು ರಚನೆ

ಮುಂಬೈ (ರಾಯಿಟರ್ಸ್): ತಾಲಿಬಾನ್ ಆಡಳಿತ ಆರಂಭವಾದ ನಂತರ ಅತಂತ್ರವಾಗಿರುವ ಅಫ್ಗಾನಿಸ್ತಾನ ಕ್ರಿಕೆಟ್‌ನ ಭವಿಷ್ಯ ನಿರ್ಧಾರಕ್ಕೆ ಸಂಬಂಧಿಸಿದ ನಿರ್ಧಾರಗಳನ್ನು ತೆಗೆದುಕೊಳ್ಳಲು ಕಾರ್ಯನಿರ್ವಾಹಕ ಗುಂಪೊಂದನ್ನು ಸ್ಥಾಪಿಸಲು ಐಸಿಸಿ ನಿರ್ಧರಿಸಿದೆ. ಪಾಕಿಸ್ತಾನ ಕ್ರಿಕೆಟ್ ಮಂಡಳಿಯ ಅಧ್ಯಕ್ಷ ರಮೀಜ್ ರಝಾ ಅವರು ಗುಂಪಿನ ಸದಸ್ಯರಲ್ಲಿ ಒಬ್ಬರಾಗಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ಅಫ್ಗಾನಿಸ್ತಾನ ಕ್ರಿಕೆಟ್ ಬೆಳೆದಿರುವ ಬಗೆ ಅಚ್ಚರಿ ಮೂಡಿಸುವಂಥಾದ್ದು. ಆದರೆ ತಾಲಿಬಾನ್ ಆಡಳಿತದಲ್ಲಿ ಅಲ್ಲಿನ ಕ್ರಿಕೆಟ್ ಸವಾಲಿನಲ್ಲಿದೆ. ಈ ತಿಂಗಳ ಅಂತ್ಯದಲ್ಲಿ ಅಫ್ಗಾನಿಸ್ತಾನ ಎದುರು ಹೋಬರ್ಟ್‌ನಲ್ಲಿ ನಡೆಯಬೇಕಾಗಿದ್ದ ಏಕೈಕ ಟೆಸ್ಟ್ ಪಂದ್ಯವನ್ನು ಆಸ್ಟ್ರೇಲಿಯಾ ಮುಂದೂಡಿದೆ.

ಮಹಿಳೆಯರ ಶಿಕ್ಷಣ ಮತ್ತು ಹೊರಾಂಗಣ ವಿಹಾರಕ್ಕೆ ಅಡ್ಡಿಪಡಿಸಿದ್ದ ಹಿಂದಿನ ತಾಲಿಬಾನ್ ಸರ್ಕಾರದಂತೆ ಈ ಸರ್ಕಾರ ವರ್ತಿಸುವುದಿಲ್ಲ ಎಂದು ಅಲ್ಲಿನ ಅಧಿಕಾರಿಗಳು ತಿಳಿಸಿದ್ದಾರೆ. ಇದೇ ವೇಳೆ ಅಫ್ಗಾನ್ ಕ್ರಿಕೆಟ್ ಮಂಡಳಿಯ ಅಧ್ಯಕ್ಷ ಮಿರ್ವೈಸ್ ಅಶ್ರಫ್ ’ದೇಶದ ಲಕ್ಷಾಂತರ ಮಂದಿಯನ್ನು ಬೆಸೆಯುವ ಕ್ರೀಡೆ ಕ್ರಿಕೆಟ್‌ನ ಅಭಿವೃದ್ಧಿಗೆ ಸಂಬಂಧಿಸಿ ಸರ್ಕಾರದ ಜೊತೆ ಮಾತುಕತೆ ನಡೆಸಲಾಗುವುದು. ಐಸಿಸಿ ಮತ್ತು ಕ್ರಿಕೆಟ್ ಆಡುವ ರಾಷ್ಟ್ರಗಳ ಜೊತೆ ಉತ್ತಮ ಸಂಬಂಧ ಹೊಂದುವುದಕ್ಕೂ ಪ್ರಯತ್ನಿಸಲಾಗುವುದು‘ ಎಂದು ಹೇಳಿದ್ದಾರೆ.

ಜೈಪುರದಲ್ಲಿ ಟಿ20 ಕ್ರಿಕೆಟ್: ಬೆಳಗಿದ ಸೂರ್ಯ; ಭುವನೇಶ್ವರ್ ಕುಮಾರ್, ರವಿಚಂದ್ರನ್ ಅಶ್ವಿನ್ ಮಿಂಚು

ರೋಹಿತ್ ಶರ್ಮಾ ಬಳಗದ ಜಯಭೇರಿ

ಜೈಪುರ (ಪಿಟಿಐ): ರೋಹಿತ್ ಶರ್ಮಾ ನಾಯಕತ್ವದ ಮೊದಲ ಟಿ20 ಪಂದ್ಯದಲ್ಲಿ ಭಾರತ ತಂಡವು ರೋಚಕ ಜಯ ದಾಖಲಿಸಿತು.

ಸವಾಯ್ ಮಾನಸಿಂಗ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಆತಿಥೇಯ ತಂಡವು 5 ವಿಕೆಟ್‌ಗಳಿಂದ ಜಯಿಸಿತು. ಇದರೊಂದಿಗೆ ಮೂರು ಪಂದ್ಯಗಳ ಸರಣಿಯಲ್ಲಿ 1-0 ಮುನ್ನಡೆ ಸಾಧಿಸಿತು.

ಟಾಸ್ ಗೆದ್ದ ಭಾರತ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಭುವನೇಶ್ವರ್ ಕುಮಾರ್ ಹಾಕಿದ ಇನಿಂಗ್ಸ್‌ನ ಮೂರನೇ ಎಸೆತದಲ್ಲಿಯೇ ಡೆರಿಲ್ ಮಿಚೆಲ್ ಕ್ಲೀನ್‌ಬೌಲ್ಡ್ ಆದರು. ಆದರೆ ಈ ಹಂತದಲ್ಲಿ ಜೊತೆಗೂಡಿದ ಗಪ್ಟಿಲ್ (70; 42ಎಸೆತ) ಮತ್ತು ಮಾರ್ಕ್ ಚಾಪ್‌ಮನ್ (63; 50ಎಸೆತ) ಅವರ ಶತಕದ ಜೊತೆಯಾಟದಿಂದಾಗಿ ಕಿವೀಸ್ ಬಳಗವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 164 ರನ್ ಗಳಿಸಿತು.

ಅದಕ್ಕುತ್ತರವಾಗಿ ಭಾರತ ತಂಡವು19.4 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 166 ರನ್ ಗಳಿಸಿ ಜಯಿಸಿತು. ಕೆ.ಎಲ್. ರಾಹುಲ್ (15; 14ಎ) ಮತ್ತು ರೋಹಿತ್ (48;36ಎ) ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 50 ರನ್ ಸೇರಿಸಿದರು.

ಆರನೇ ಓವರ್‌ನಲ್ಲಿ ರಾಹುಲ್ ಔಟಾದಾಗ ಕ್ರೀಸ್‌ಗೆ ಬಂದ ಸೂರ್ಯ ಕುಮಾರ್ ಯಾದವ್ ಇನಿಂಗ್ಸ್‌ನ ರೂಪವನ್ನೇ ಬದಲಿಸಿದರು.

ಮುಂಬೈ ಜೋಡಿ ರೋಹಿತ್ ಮತ್ತು ಸೂರ್ಯ ಎರಡನೇ ವಿಕೆಟ್ ಜೊತೆಯಾಟದಲ್ಲಿ 50 ರನ್ ಸೇರಿಸಿದರು. ಸೂರ್ಯ (62; 40ಎ) ತಮ್ಮ ನಾಯಕನಿಗಿಂತಲೂ ಹೆಚ್ಚು ಬೀಸಾಟವಾಡಿದರು. ಆರು ಬೌಂಡರಿ ಮತ್ತು ಮೂರು ಅಮೋಘ ಸಿಕ್ಸರ್‌ಗಳನ್ನು ಸಿಡಿಸಿದರು. ಈ ಹಂತದಲ್ಲಿ ಜಯ ಸುಲಭವಾಗಿ ಒಲಿಯುವ ಆಶಾಭಾವ ಮೂಡಿತ್ತು.

ಆದರೆ, ಕಿವೀಸ್ ತಂಡದ ವೇಗಿ ಟ್ರೆಂಟ್ ಬೌಲ್ಟ್, 14ನೇ ಓವರ್‌ನಲ್ಲಿ ರೋಹಿತ್ ಮತ್ತು 17ನ ಓವರ್‌ನಲ್ಲಿ ಸೂರ್ಯಕುಮಾರ್ ವಿಕೆಟ್ ಗಳಿಸಿದರು. ಇದರಿಂದಾಗಿ ಭಾರತಕ್ಕೆ ಗೆಲುವು ಸುಲಭವಾಗಿ ಒಲಿಯುವುದು ತಪ್ಪಿತು.

ರಿಷಭ್ ಪಂತ್ (ಔಟಾಗದೇ 17) ತಂಡವನ್ನು ಗೆಲುವಿನತ್ತ ಕೊಂಡೊಯ್ದರು.

ಇನ್ನೊಂದೆಡೆ ಶ್ರೇಯಸ್ ಅಯ್ಯರ್ (5 ರನ್) ಮತ್ತು ಪದಾರ್ಪಣೆ ಪಂದ್ಯವಾಡಿದ ವೆಂಕಟೇಶ್ ಅಯ್ಯರ್ (4; 2 ಎಸೆತ) ಬೇಗ ಔಟಾದರು. ಇದರಿಂದಾಗಿ ಕೊನೆಯ ಓವರ್‌ನವರೆಗೂ ಪಂದ್ಯ ಬೆಳೆಯಿತು. ಕೊನೆಯ ಮೂರು ಎಸೆತಗಳಲ್ಲಿ ತಂಡದ ಜಯಕ್ಕೆ ಮೂರು ರನ್‌ಗಳ ಅವಶ್ಯಕತೆ ಇದ್ದಾಗ ಪಂತ್ ಬೌಂಡರಿ ಹೊಡೆಯುವ ಮೂಲಕ ಗೆಲುವಿನ ಕಾಣಿಕೆ ನೀಡಿದರು.

ಗಪ್ಟಿಲ್-ಚಾಪ್‌ಮನ್ ಶತಕದ ಜೊತೆಯಾಟ: ಮೊದಲು ಬ್ಯಾಟಿಂಗ್ ಮಾಡಿದ ಕಿವೀಸ್ ತಂಡದ ಗಪ್ಟಿಲ್ ಮತ್ತು ಚಾಪ್‌ಮನ್ ಎರಡನೇ ವಿಕೆಟ್ ಜೊತೆಯಾಟದಲ್ಲಿ 109 ರನ್‌ಗಳನ್ನು ಸೇರಿಸಿದರು.

ಮೊದಲ ಓವರ್‌ನಲ್ಲಿಯೇ ಡೆರಿಲ್ ಮಿಚೆಲ್ ಔಟಾದರು. ಇದರಿಂದಾಗಿ ತಂಡವು ಕುಸಿಯುವ ಆತಂಕವನ್ನು ಗಪ್ಟಿಲ್ ಮತ್ತು ಚಾಪ್‌ಮನ್ ದೂರಮಾಡಿದರು. 14ನೇ ಓವರ್‌ನವರೆಗೂ ಇವರಿಬ್ಬರು ಇನಿಂಗ್ಸ್‌ಗೆ ಸ್ಥಿರತೆ ಒದಗಿಸಿದ್ದರು.

ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಎಸೆತದ ತಿರುವು ಗುರುತಿಸುವಲ್ಲಿ ಎಡವಿದ ಚಾಪ್‌ಮನ್ ಕ್ಲೀನ್‌ಬೌಲ್ಡ್ ಆದರು. ಇದರೊಂದಿಗೆ ಜೊತೆಯಾಟ ಮುರಿದುಬಿತ್ತು. ಅದೇ ಓವರ್‌ನಲ್ಲಿ ಅಶ್ವಿನ್ ಅವರು ಗ್ಲೆನ್ ಫಿಲಿಪ್ಸ್ ವಿಕೆಟ್ ಕೂಡ ಗಳಿಸಿದರು.

ಈ ಅವಕಾಶವನ್ನು ಬಳಸಿಕೊಂಡು ಬ್ಯಾಟ್ಸ್‌ಮನ್‌ಗಳನ್ನು ನಿಯಂತ್ರಿಸಲು ಬೌಲರ್‌ಗಳು ಪ್ರಯತ್ನಿಸಿದರು. ಆದರೂ ಗಪ್ಟಿಲ್ ಮತ್ತು ಟಿಮ್ ಸೀಫರ್ಟ್ (12; 11ಎ) 40 ರನ್‌ಗಳನ್ನು ಸೇರಿಸಿದರು. ಮಧ್ಯಮವೇಗಿ ದೀಪಕ್ ಚಾಹರ್ 18ನೇ ಓವರ್‌ನಲ್ಲಿ ಗಪ್ಟಿಲ್ ವಿಕೆಟ್ ಪಡೆಯುವುದರೊಂದಿಗೆ ಅಬ್ಬರದ ಆಟಕ್ಕೆ ತಡೆಯೊಡ್ಡಿದರು. ನಂತರದ ಓವರ್‌ನಲ್ಲಿ ಭುವಿ ಎಸೆತದಲ್ಲಿ ಸೀಫರ್ಟ್ ಔಟಾದರು.


ಸೂರ್ಯಕುಮಾರ್ ಯಾದವ್ ಬ್ಯಾಟಿಂಗ್ ಸೊಬಗು—ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ನ್ಯೂಜಿಲೆಂಡ್ 6ಕ್ಕೆ 164 (20 ಓವರ್)
ಗಪ್ಟಿಲ್ ಸಿ ಶ್ರೇಯಸ್ ಬಿ ಚಾಹರ್ 70 (42 ಎ, 4x3, 6x4), ಮಿಚೆಲ್ ಬಿ ಕುಮಾರ್ 0 (1 ಎ), ಚಾಪ್‌ಮನ್ ಬಿ ಅಶ್ವಿನ್ 63 (50 ಎ, 4x6 , 6x2), ಫಿಲಿಪ್ಸ್ ಎಲ್‌ಬಿಡಬ್ಲ್ಯು ಅಶ್ವಿನ್ 0 (3 ಎ), ಸೀಫರ್ಟ್ ಸಿ ಯಾದವ್ ಬಿ ಕುಮಾರ್ 12 (11 ಎ, 4x2), ರವೀಂದ್ರ ಬಿ ಸಿರಾಜ್ 7 (8 ಎ, 4x1), ಸ್ಯಾಂಟ್ನರ್ ಔಟಾಗದೆ 4 (4 ಎ), ಸೌಥಿ ಔಟಾಗದೆ 0 (1 ಎ)
ಇತರೆ (ಬೈ 2, ಲೆಗ್‌ಬೈ 3, ವೈಡ್ 3) 8
ವಿಕೆಟ್ ಪತನ: 1-1 (ಡ್ಯಾರಿಲ್ ಮಿಚೆಲ್, 0.3), 2-110 (ಮಾರ್ಕ್ ಚಾಪ್‌ಮನ್, 13.2), 3-110 (ಗ್ಲೆನ್ ಫಿಲಿಪ್ಸ್, 13.5), 4-150 (ಮಾರ್ಟಿನ್ ಗಪ್ಟಿಲ್ 17.2), 5-153 (ಟಿಮ್ ಸೀಫರ್ಟ್, 18.2), 6-162 (ರಚಿನ್ ರವೀಂದ್ರ, 19.5)
ಬೌಲಿಂಗ್: ಭುವನೇಶ್ವರ್ ಕುಮಾರ್ 4-0-24-2, ದೀಪಕ್ ಚಾಹರ್ 4-0-42-1, ಮೊಹಮ್ಮದ್ ಸಿರಾಜ್ 4-0-39-1, ರವಿಚಂದ್ರನ್ ಅಶ್ವಿನ್ 4-0-23-2, ಅಕ್ಷರ್ ಪಟೇಲ್ 4-0-31-0

ಭಾರತ 5ಕ್ಕೆ 166 (19.4 ಓವರ್)
ರಾಹುಲ್ ಸಿ ಚಾಪ್‌ಮನ್ ಬಿ ಸ್ಯಾಂಟ್ನರ್ 15 (14 ಎ, 4x1, 6x1), ರೋಹಿತ್ ಸಿ ರವೀಂದ್ರ ಬಿ ಬೌಲ್ಟ್ 48 (36 ಎ, 4x5, 6x2), ಸೂರ್ಯಕುಮಾರ್ ಬಿ ಬೌಲ್ಟ್ 62 (40 ಎ, 4x6, 6x3), ಪಂತ್ ಔಟಾಗದೆ 17 (17 ಎ, 4x2), ಶ್ರೇಯಸ್ ಸಿ ಬೌಲ್ಟ್ ಬಿ ಸೌಥಿ 5 (8 ಎ), ವೆಂಕಟೇಶ್ ಸಿ ರವೀಂದ್ರ ಬಿ ಮಿಚೆಲ್ 4 (2 ಎ, 4x1), ಅಕ್ಷರ್ ಔಟಾಗದೆ 1 (1 ಎ)
ಇತರೆ (ಲೆಗ್‌ಬೈ 7, ವೈಡ್ 7) 14
ವಿಕೆಟ್ ಪತನ: 1-50 (ಕೆ.ಎಲ್. ರಾಹುಲ್, 5.1), 2-109 (ರೋಹಿತ್ ಶರ್ಮಾ, 13.2), 3-144 (ಸೂರ್ಯಕುಮಾರ್ ಯಾದವ್, 16.4), 4-155 (ಶ್ರೇಯಸ್ ಅಯ್ಯರ್, 18.6), 5-160 (ವೆಂಕಟೇಶ್ ಅಯ್ಯರ್, 19.2)
ಬೌಲಿಂಗ್: ಟಿಮ್ ಸೌಥಿ 4-0-40-1, ಟ್ರೆಂಟ್ ಬೌಲ್ಟ್ 4-0-31-2, ಲಾಕಿ ಫರ್ಗ್ಯುಸನ್ 4-0-24-0, ಮಿಚೆಲ್ ಸ್ಯಾಂಟ್ನರ್ 4-0-19-1, ಟಾಡ್ ಆ್ಯಸಲ್ 3-0-34-0, ಡ್ಯಾರಿಲ್ ಮಿಚೆಲ್ 0.4-0-11-1

ಫಲಿತಾಂಶ: ಭಾರತಕ್ಕೆ 5 ವಿಕೆಟ್‌ಗಳ ಜಯ; 3 ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ

ಕೋವಿಡ್ ನಿಯಮ ಉಲ್ಲಂಘನೆ

ಎಂಟು ವರ್ಷಗಳ ನಂತರ ಸವಾಯ್ ಮಾನಸಿಂಗ್ ಕ್ರೀಡಾಂಗಣದಲ್ಲಿ ನಡೆದ ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯವನ್ನು ವೀಕ್ಷಿಸಲು ಕ್ರಿಕೆಟ್‌ಪ್ರಿಯರು ಮುಗಿಬಿದ್ದರು. ಆದರೆ, ಕೋವಿಡ್ ತಡೆ ನಿಯಮಗಳನ್ನು ಗಾಳಿಗೆ ತೂರಿದರು. ಪಂದ್ಯ ವೀಕ್ಷಣೆಗೆ ಬಂದ ಜನರಲ್ಲಿ ಬಹುತೇಕರು ಮಾಸ್ಕ್ ಧರಿಸಿರಲಿಲ್ಲ. ಪಂದ್ಯ ವೀಕ್ಷಣೆಗೆ ಕ್ರೀಡಾಂಗಣದ ಆಸನ ಸಾಮರ್ಥ್ಯದ (25ಸಾವಿರ) ಅರ್ಧದಷ್ಟು ಜನರಿಗೆ ಪ್ರವೇಶ ಕೊಡಲು ರಾಜಸ್ಥಾನ ಕ್ರಿಕೆಟ್ ಮಂಡಳಿ ನಿರ್ಧರಿಸಿತ್ತು. ಅದಕ್ಕಾಗಿ ಕೋವಿಡ್ ಲಸಿಕೆಯ ಎರಡು ಡೋಸ್ ಪಡೆದ ಪ್ರಮಾಣಪತ್ರ ಅಥವಾ ಆರ್‌ಟಿ ಪಿಸಿಆರ್ ಟೆಸ್ಟ್‌ನ ನೆಗೆಟಿವ್ ವರದಿಯೊಂದಿಗೆ ಬರುವುದು ಕಡ್ಡಾಯ ಎಂದೂ ಹೇಳಿತ್ತು. ಭದ್ರತೆಯ ಕರ್ತವ್ಯ ನಿರ್ವಹಿಸುತ್ತಿದ್ದ ಪೊಲೀಸರಲ್ಲಿಯೂ ಹಲವರು ಮಾಸ್ಕ್ ಧರಿಸಿರಲಿಲ್ಲ. ಜನರಿಗೆ ತಿಳಿವಳಿಕೆ ಕೊಡಲು ಆಯೋಜಕರು ಪರದಾಡಬೇಕಾಯಿತು.

ವೆಂಕಟೇಶ್ ಪದಾರ್ಪಣೆ

ಈಚೆಗೆ ನಡೆದ ಐಪಿಎಲ್‌ನಲ್ಲಿ ಮಿಂಚಿದ್ದ ಆಲ್‌ರೌಂಡರ್ ವೆಂಕಟೇಶ್ ಅಯ್ಯರ್ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದರು.
26 ವರ್ಷದ ವೆಂಕಟೇಶ್ ಮಧ್ಯಪ್ರದೇಶದ ಇಂದೋರ್‌ನವರು. ಈಚೆಗೆ ಐಪಿಎಲ್‌ನಲ್ಲಿ ಅವರು ಕೋಲ್ಕತ್ತ ನೈಟ್ ರೈಡರ್ಸ್ ತಂಡದಲ್ಲಿ ಆಡಿದ್ದರು.
10 ಪಂದ್ಯಗಳಿಂದ 370 ರನ್‌ಗಳನ್ನು ಸೇರಿಸಿದ್ದರು. ವೆಂಕಟೇಶ್ ಎಡಗೈ ಬ್ಯಾಟ್ಸ್‌ಮನ್ ಮತ್ತು ಬಲಗೈ ಮಧ್ಯಮವೇಗಿಯಾಗಿದ್ದಾರೆ.

ಎನ್‌ಸಿಎಗೆ ಟ್ರಾಯ್ ಕೂಲಿ ವೇಗದ ಬೌಲಿಂಗ್ ಕೋಚ್

ನವದೆಹಲಿ (ಪಿಟಿಐ): ಆಸ್ಟ್ರೇಲಿಯಾದ ಖ್ಯಾತನಾಮ ಕೋಚ್ ಟ್ರಾಯ್ ಕೂಲಿ ಅವರನ್ನು ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿ ವೇಗದ ಬೌಲಿಂಗ್ ಕೋಚ್ ಆಗಿ ನೇಮಕ ಮಾಡಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಸಿದ್ಧತೆ ನಡೆಸಿದೆ.

ವಿಶ್ವ ಕ್ರಿಕೆಟ್‌ನಲ್ಲಿ ಶ್ರೇಷ್ಠ ವೇಗದ ಬೌಲಿಂಗ್ ಕೋಚ್ ಆಗಿರುವ ಟ್ರಾಯ್ 2005ರಲ್ಲಿ ಇಂಗ್ಲೆಂಡ್ ತಂಡದ ಕೋಚ್ ಆಗಿದ್ದರು. ಆ ಟೂರ್ನಿಯಲ್ಲಿ ಇಂಗ್ಲೆಂಡ್‌ನ ಮ್ಯಾಥ್ಯೂ ಹೊಗಾರ್ಡ್, ಆ್ಯಂಡ್ರ್ಯೂ ಫ್ಲಿಂಟಾಫ್, ಸೈಮನ್ ಜೋನ್ಸ್ ಮತ್ತು ಸ್ಟೀವ್ ಹಾರ್ಮಿಸನ್ ಅವರ ದಾಳಿಗೆ ಆಸ್ಟ್ರೇಲಿಯಾ ತಂಡ ಕುಸಿದಿತ್ತು.

‘ಟ್ರಾಯ್ ಕೂಲಿ ಅವರ ಮನವೊಲಿಸಿ ಭಾರತಕ್ಕೆ ಕೋಚ್ ಆಗಿ ಕರೆತರುವಲ್ಲಿ ಸೌರವ್ ಗಂಗೂಲಿ ಮತ್ತು ಜಯ್ ಶಾ ಅವರು ಯಶಸ್ವಿಯಾಗಿರುವುದು ದೊಡ್ಡ ಸಾಧನೆಯೇ ಸರಿ. ಇದರಿಂದಾಗಿ ಭಾರತ ಕ್ರಿಕೆಟ್‌ನಲ್ಲಿ ಭವಿಷ್ಯದ ವೇಗಿಗಳನ್ನು ರೂಪಿಸಲು ಸಾಧ್ಯವಾಗಲಿದೆ’ ಎಂದು ಬಿಸಿಸಿಐ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವಿಶ್ವ ಟೆನಿಸ್ ಟೂರ್: ನಿಕ್ಷೇಪ್‌ಗೆ ಸೋಲು

ಬೆಂಗಳೂರು: ಕರ್ನಾಟಕದ ಬಿ.ಆರ್. ನಿಕ್ಷೇಪ್ ಅವರು ನವದೆಹಲಿಯಲ್ಲಿ ನಡೆಯುತ್ತಿರುವ ಐಟಿಎಫ್ ವಿಶ್ವ ಟೆನಿಸ್ ಟೂರ್ ಟೂರ್ನಿಯ ಮುಖ್ಯ ಸುತ್ತಿನಲ್ಲಿ ಸೋತು ಹೊರಬಿದ್ದಿದ್ದಾರೆ.

ಬುಧವಾರ ನಡೆದ ಪಂದ್ಯದಲ್ಲಿ ಸ್ಥಳೀಯ ಆಟಗಾರ ರಿಷಭ್ ಅಗರವಾಲ್ ಎದುರು ನಿಕ್ಷೇಪ್ 0-6, 0-6ರಲ್ಲಿ ಸೋತರು.

ಬೆಂಗಳೂರಿನ ಸುರಾನ ಕಾಲೇಜು ವಿದ್ಯಾರ್ಥಿ ನಿಕ್ಷೇಪ್, ಅರ್ಹತಾ ಸುತ್ತಿನ ಕೊನೆಯ ಪಂದ್ಯದಲ್ಲಿ 6-4, 3-6, 10-3ರಲ್ಲಿ ದೆಹಲಿಯ ರೋಹನ್ ಮೆಹ್ರಾ ವಿರುದ್ಧ ಗೆದ್ದು ಮುಖ್ಯ ಸುತ್ತು ಪ್ರವೇಶಿಸಿದ್ದರು.

ಬಂಗಾಳದ ಸವಾಲು ಮೀರುವ ಛಲ

ಸೈಯದ್ ಮುಷ್ತಾಕ್ ಅಲಿ ಟಿ20 ಟೂರ್ನಿ: ಕರ್ನಾಟಕದ ಪಂದ್ಯ ಇಂದು

ನವದೆಹಲಿ (ಪಿಟಿಐ): ಮನೀಷ್ ಪಾಂಡೆ ನಾಯಕತ್ವದ ಕರ್ನಾಟಕ ಬಳಗದ ಮುಂದೆ ಈಗ ಮತ್ತೆ ಬಂಗಾಳ ತಂಡದ ಸವಾಲಿದೆ. ಗುರುವಾರ ನಡೆಯಲಿರುವ ಎಂಟರ ಘಟ್ಟದ ಪಂದ್ಯದಲ್ಲಿ ಎರಡೂ ತಂಡಗಳು ಮುಖಾಮುಖಿಯಾಗಲಿವೆ.

ಗುಂಪು ಹಂತದ ಕೊನೆಯ ಪಂದ್ಯದಲ್ಲಿ ಬಂಗಾಳ ವಿರುದ್ಧ ಸೋತಿದ್ದ ಕರ್ನಾಟಕ ತಂಡವು ಪ್ರೀಕ್ವಾರ್ಟರ್‌ಫೈನಲ್ ಪ್ರವೇಶಿಸಿತ್ತು. ಸುದೀಪ್ ಚಟರ್ಜಿ ನಾಯಕತ್ವದ ಬಂಗಾಳವು ನೇರವಾಗಿ ಎಂಟರ ಘಟ್ಟ ಪ್ರವೇಶಿಸಿತ್ತು.

ಮಂಗಳವಾರ ಸೌರಾಷ್ಟ್ರದ ಎದುರಿನ ಪ್ರೀಕ್ವಾರ್ಟರ್‌ನಲ್ಲಿ ಕರ್ನಾಟಕದ ಬ್ಯಾಟಿಂಗ್ ವೈಫಲ್ಯ ಸೋಲಿನ ಆತಂಕ ಮೂಡಿಸಿತ್ತು.

ಆದರೆ, ಪದಾರ್ಪಣೆ ಪಂದ್ಯದಲ್ಲಿಯೇ ಮಿಂಚಿದ ಅಭಿನವ್ ಮನೋಹರ್ ಅಬ್ಬರದ ಬ್ಯಾಟಿಂಗ್‌ನಿಂದಾಗಿ ತಂಡವು ಗೆದ್ದಿತು. ಅನುಭವಿ ಆಟಗಾರರಾದ ಮನೀಷ್, ಕರುಣ್ ವೈಫಲ್ಯ ಅನುಭವಿಸಿದ್ದರು. ಎಂಟರ ಘಟ್ಟದ ಪಂದ್ಯದಲ್ಲಿ ದೇವದತ್ತ ಪಡಿಕ್ಕಲ್ ಅವರಿಗೆ ಸ್ಥಾನ ನೀಡುವ ಸಾಧ್ಯತೆ ಇದೆ. ವಿ.ಕೌಶಿಕ್, ವಿದ್ಯಾಧರ ಪಾಟೀಲ, ಸ್ಪಿನ್ನರ್‌ಗಳಾದ ಸುಚಿತ್ ಮತ್ತು ಕಾರ್ಯಪ್ಪ ಅವರ ಮುಂದೆ ಬಂಗಾಳದ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕುವ ಸವಾಲು ಇದೆ.

ಆದರೆ, ಬಂಗಾಳ ತಂಡದಲ್ಲಿ ಅಭಿಮನ್ಯು ಈಶ್ವರನ್ ಅವರಿಲ್ಲ. ಅದರಿಂದಾಗಿ ಉಳಿದ ಬ್ಯಾಟರ್‌ಗಳ ಹೊಣೆ ಹೆಚ್ಚಿದೆ.

ಇದು ಕರ್ನಾಟಕ ತಂಡಕ್ಕೆ ಅನುಕೂಲಕರ ಅಂಶವಾಗಬಹುದು. ಆದರೆ, ತಂಡದ ಅಗ್ರಕ್ರಮಾಂಕದ ಬ್ಯಾಟರ್‌ಗಳು ಲಯಕ್ಕೆ ಮರಳಿದರೆ ದೊಡ್ಡ ಮೊತ್ತ ಕಲೆಹಾಕಲು ಸಾಧ್ಯ.

ತಂಡಗಳು: ಕರ್ನಾಟಕ: ಮನೀಷ್ ಪಾಂಡೆ (ನಾಯಕ), ರೋಹನ್ ಕದಂ, ಬಿ.ಆರ್. ಶರತ್, ದೇವದತ್ತ ಪಡಿಕ್ಕಲ್, ಕರುಣ್ ನಾಯರ್, ಅಭಿನವ್ ಮನೋಹರ್, ಆರ್. ಸಮರ್ಥ್, ಅನಿರುದ್ಧ ಜೋಶಿ, ಜೆ. ಸುಚಿತ್, ವಿಜಯಕುಮಾರ್ ವೈಶಾಖ, ಕೆ.ಸಿ. ಕಾರ್ಯಪ್ಪ, ವಿದ್ಯಾಧರ ಪಾಟೀಲ, ವಿ. ಕೌಶಿಕ್.

ಬಂಗಾಳ: ಸುದೀಪ್ ಚಟರ್ಜಿ (ನಾಯಕ), ಋತಿಕ್ ಚಟರ್ಜಿ, ವೃದ್ಧಿಮಾನ್ ಸಹಾ(ವಿಕೆಟ್‌ಕೀಪರ್), ಕೈಫ್ ಅಹಮದ್, ಶಹಬಾಜ್ ಅಹಮದ್, ಸುಜೀತ್‌ಕುಮಾರ್ ಯಾದವ್, ಪ್ರದಿಪ್ತ್ ಪ್ರಾಮಾಣಿಕ್, ಅಭಿಷೇಕ್ ದಾಸ್, ಮುಖೇಶಕುಮಾರ್, ಆಕಾಶದೀಪ್.


ಜೆ.ಸುಚಿತ್ ಮತ್ತು ಮನೀಷ್ ಪಾಂಡೆ

ಪಂದ್ಯಗಳು

ರಾಜಸ್ಥಾನ–ವಿದರ್ಭ
(ಏರ್‌ಫೋರ್ಸ್ ಮೈದಾನ, ಪಾಲಂ)
- ಆರಂಭ: ಬೆಳಿಗ್ಗೆ 8.30

ತಮಿಳುನಾಡು–ಕೇರಳ
(ಅರುಣ್ ಜೇಟ್ಲಿ ಕ್ರೀಡಾಂಗಣ)
- ಆರಂಭ: ಬೆಳಿಗ್ಗೆ 8.30

ಕರ್ನಾಟಕ–ಬಂಗಾಳ
(ಅರುಣ್ ಜೇಟ್ಲಿ ಕ್ರೀಡಾಂಗಣ)
- ಆರಂಭ: ಮಧ್ಯಾಹ್ನ 1.00

ಗುಜರಾತ್–ಹೈದರಾಬಾದ್
(ಏರ್‌ಫೋರ್ಸ್ ಕ್ರೀಡಾಂಗಣ. ಪಾಲಂ)
- ಆರಂಭ: ಮಧ್ಯಾಹ್ನ 1.00

ಫಿಫಾ ವಿಶ್ವಕಪ್ ಮುಖ್ಯ ಸುತ್ತಿಗೆ ನೆದರ್ಲೆಂಡ್ಸ್ ಲಗ್ಗೆ

ಪ್ಯಾರಿಸ್ (ಎಎಫ್‌ಪಿ): ಸ್ಟೀವನ್ ಬರ್ಗ್‌ವಿನ್ ಮತ್ತು ಮೆಂಫಿಸ್ ಡಿಪೇ ಅವರು ಹೊಡೆದ ಗೋಲುಗಳ ಬಲದಿಂದ ನೆದರ್ಲೆಂಡ್ಸ್ ತಂಡವು ಮುಂದಿನ ವರ್ಷ ನಡೆಯುವ ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಗೆ ಅರ್ಹತೆ ಗಳಿಸಿತು.

ಯುರೋಪಿಯನ್ ಕ್ವಾಲಿಫೈಯಿಂಗ್‌ನಲ್ಲಿ ಲಭ್ಯವಿದ್ದ ಕೊನೆಯ ಒಂದು ಕೋಟಾ ಗಿಟ್ಟಿಸುವಲ್ಲಿ ನೆದರ್ಲೆಂಡ್ಸ್ ಸಫಲವಾಗಿತು.

ಮಂಗಳವಾರ ನಡೆದ ಪಂದ್ಯದಲ್ಲಿ ತಂಡವು 2–0 ಗೋಲು ಗಳಿಂದ ನಾರ್ವೆ ವಿರುದ್ಧ ಜಯಿಸಿತು. ಬರ್ಗ್‌ವಿನ್ (84ನೇ ನಿ) ಮತ್ತು ಡಿಪೆ (90+1) ಗೋಲು ಹೊಡೆದರು.

ನೆದರ್ಲೆಂಡ್ಸ್ ತಂಡವು 2018ರ ವಿಶ್ವಕಪ್ ಟೂರ್ನಿಯಲ್ಲಿ ಅರ್ಹತೆ ಗಳಿಸಿರಲಿಲ್ಲ. ಈಗ ಮತ್ತೆ ಮರಳಿದಂತಾಗಿದೆ. ಟರ್ಕಿ, ಉಕ್ರೇನ್ ತಂಡಗಳು ಪ್ಲೇ ಆಫ್‌ನಲ್ಲಿ ಸ್ಥಾನ ಗಳಿಸಿವೆ.


ನೆದರ್ಲೆಂಡ್ಸ್ ತಂಡದ ಆಟಗಾರರ ಸಂಭ್ರಮ —ಎಎಫ್‌ಪಿ ಚಿತ್ರ

ಸೆಮಿಫೈನಲ್‌ಗೆ ಸೆಹಜ್

ಕೆಎಸ್‌ಎಲ್‌ಟಿಎ ಆಶ್ರಯದ ಎಐಟಿಎ ಚಾಂಪಿಯನ್‌ಷಿಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೋಘ ಆಟ ಮುಂದುವರಿಸಿರುವ ಸೆಹಜ್ ಸಿಂಗ್ ಪವಾರ್ ಇಲ್ಲಿನ ಫಾರ್ಚೂನ್ ಸ್ಪೋರ್ಟ್ಸ್ ಆಕಾಡೆಮಿಯ ಆವರಣದಲ್ಲಿ ನಡೆಯುತ್ತಿರುವ ರಾಜ್ಯ ಟೆನಿಸ್ ಸಂಸ್ಥೆಯ ಎಫ್‌ಎಸ್‌ಎ ಎಐಟಿಎ 18 ವರ್ಷದೊಳಗಿನವರ ಚಾಂಪಿಯನ್‌ಷಿಪ್‌ನ ಸೆಮಿಫೈನಲ್ ಪ್ರವೇಶಿಸಿದರು.

ಬುಧವಾರ ನಡೆದ ಪಂದ್ಯದಲ್ಲಿ ಸೆಹಜ್ 6-3, 6-2ರಲ್ಲಿ ಅರ್ಜುನ್ ಪ್ರೇಮ್ ಕುಮಾರ್ ವಿರುದ್ಧ ಜಯ ಸಾಧಿಸಿದರು. ಪ್ರಮುಖ ಆಟಗಾರರು ಸೋತು ಹೊರಬಿದ್ದರು. ಪ್ರೀ ಕ್ವಾರ್ಟ್ ಫೈನಲ್‌ನಲ್ಲಿ ಐದನೇ ಶ್ರೇಯಾಂಕದ ತೆಲಂಗಾಣದ ಶಿವ ಶಂಕರ್ ಅವರನ್ನು ಮಣಿಸಿದ ಚರಣ್ ವರ್ಧಮ್ ಕ್ವಾರ್ಟರ್ ಫೈನಲ್‌ನಲ್ಲಿ ಶುಶಾಂಕ ಬುಡ್ಲ ಎದುರು 7-5, 3-6, 10-7ರಲ್ಲಿ ಜಯ ಸಾಧಿಸಿದರು.

ವೇದಾಂತ್ ರೆಡ್ಡಿಯಾ ೯6-2, 6-2ರಲ್ಲಿ ಆದಿತ್ಯ ಅನಿರುದ್ಧ ವಿರುದ್ಧ ಮತ್ತು ಅರಿಹಂತ್ ಕೌಲ್ 6-4, 6-2ರಲ್ಲಿ ಸಿದ್ಧಾಂತ್ ಶಾಸ್ತ್ರಿ ವಿರುದ್ಧ ಗೆದ್ದರು. ಬಾಲಕಿಯರ ವಿಭಾಗದಲ್ಲಿ ಎರಡನೇ ಶ್ರೇಯಾಂಕದ ಸಂಜಿತಾ ರಮೇಶ್ ವಿರುದ್ಧ ಗುರ್ಲೀನ್ 4-6, 5-7ರಲ್ಲಿ ಗೆದ್ದು ನಾಲ್ಕರ ಘಟ್ಟಕ್ಕೆ ಪ್ರವೇಶ ಪಡೆದರು. ಮಹಾರಾಷ್ಟ್ರದ ಯಶ್ ಅಜಿತ್ ದೇಸಾಯಿ ಮೂರನೇ ಶ್ರೇಯಾಂಕದ ಆತ್ಮಿಕ ಶ್ರೀನಿವಾಸ್ ಅವರನ್ನು 3-6, 7-5, 12-10ರಲ್ಲಿ ಮಣಿಸಿದರು. ಅಗ್ರಶ್ರೇಯಾಂಕದ ಚಾರ್ಮಿ ಗೋಪಿನಾಥ್ 2-6, 6-2, 10-3ರಲ್ಲಿ ಹೃತಿ ಆಹುಜಾ ಎದುರು ಜಯ ಗಳಿಸಿದರು.


ಗುರ್ಲೀನ್ ಕೌರ್ ವಿನೂಜ ಅವರು ಚೆಂಡನ್ನು ರಿಟರ್ನ್ ಮಾಡಿದ ರೀತಿ


ಐಎಸ್‌ಎಲ್

ಜೆಎಫ್‌ಸಿಗೆ ಎಸ್‌ಬಿಐ ಪ್ರಾಯೋಜಕತ್ವ

ಜೆಮ್ಷೆಡ್‌ಪುರ (ಪಿಟಿಐ): ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಆಡುವ ಜೆಮ್ಷೆಡ್‌ಪುರ ಎಫ್‌ಸಿ ತಂಡದೊಂದಿಗೆ ಕಾರ್ಯತಂತ್ರಕ್ಕೆ ಸಂಬಂಧಿಸಿದ ಒಪ್ಪಂದಕ್ಕೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಒಪ್ಪಿಕೊಂಡಿದೆ ಎಂದು ಟಾಟಾ ಸ್ಟೀಲ್ ತಿಳಿಸಿದೆ.

ಇದು ಫುಟ್‌ಬಾಲ್‌ನಲ್ಲಿ ಎಸ್‌ಬಿಐ ಮೊದಲ ಪಾಲುದಾರಿಕೆಯಾಗಿದ್ದು ಜೆಎಫ್‌ಸಿ ಆಟಗಾರರು ತೊಡುವ ಜೆರ್ಸಿಯಲ್ಲಿ ಬ್ಯಾಂಕಿನ ಲೋಗೊ ಇರಲಿದೆ ಎಂದು ಎಸ್‌ಬಿಐ ವ್ಯವಸ್ಥಾಪಕ ನಿರ್ದೇಶಕಿ ಅಶ್ವನಿ ಭಾಟಿಯಾ ಮತ್ತು ಟಾಟಾ ಸ್ಟೀಲ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಟಿವಿ ನರೇಂದ್ರನ್ ತಿಳಿಸಿದ್ದಾರೆ.


ನೊವಾಕ್ ಜೊಕೊವಿಚ್

ಎಟಿಪಿ ಫೈನಲ್ಸ್ ಸೆಮಿಫೈನಲ್‌ಗೆ ಜೋಕೊವಿಚ್

ಟುರಿನ್ (ರಾಯಿಟರ್ಸ್): ನೊವಾಕ್ ಜೊಕೊವಿಚ್ ಎಟಿಪಿ ಫೈನಲ್ಸ್ ಟೆನಿಸ್ ಟೂರ್ನಿಯ ಸೆಮಿಫೈನಲ್‌ಗೆ ಲಗ್ಗೆ ಇಟ್ಟರು.

ಬುಧವಾರ ನಡೆದ ಪಂದ್ಯದಲ್ಲಿ ಸರ್ಬಿಯಾದ ಜೊಕೊವಿಚ್ 6–3, 6–2ರಿಂದ ರಷ್ಯಾದ ಆಂಡ್ರೆ ರುಬ್ಲೊವ್ ವಿರುದ್ಧ ಜಯ ಗಳಿಸಿದರು. 68 ನಿಮಿಷ ನಡೆದ ಪಂದ್ಯದಲ್ಲಿ ನೊವಾಕ್ ಮೇಲುಗೈ ಸಾಧಿಸಿದರು.

ಸೋಮವಾರ ನಡೆದಿದ್ದ ಮೊದಲ ಪಂದ್ಯದಲ್ಲಿ ಜೊಕೊವಿಚ್ ಕ್ಯಾಸ್ಪರ್ ರುಡ್ ವಿರುದ್ಧ ಜಯಗಳಿಸಿದ್ದರು.

ಇನ್ನೊಂದು ಸುತ್ತಿನಲ್ಲಿ ಆಡಬೇಕಿದ್ದ ಗ್ರೀಕ್ ತಂಡದ ಸ್ಟೆಫಾನೊಸ್ ಸಿಟ್ಸಿಪಾಸ್ ಮೊಣಕೈ ಗಾಯದಿಂದಾಗಿ ಟೂರ್ನಿಯಿಂದ ಹಿಂದೆ ಸರಿದರು.